ಲಾಂಗೂಲಾಚಾರ್ಯ

# ವಿಪರೀತ



ನಗೆ ಬರಹಗಳು

ನಗೆ ಬರಹಗಳು

ಡಿ. ವಿ. ಕೆ. ಮೂರ್ತಿ : : ಮೈಸೂರು-೪

ರೂ. 5

# ವಿಪರೀತ

ಲಾಂಗೂಲಾಚಾರ್ಯ

ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ : ಮೈಸೂರು ೪

*VIPAREETHA* by Langoolacharya (P. V. Acharya) Published by D. V. K. Murthy, Krishnamurthipuram, Mysore-4. First Edition : 1977

© ಪಾಡಿಗಾರು ವೆಂಕಟರಮಣಾಚಾರ್ಯ

**ಬೆಲೆ : ಐದು ರೂಪಾಯಿ**

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

# ಅರಿಕೆ

ಇದು ನನ್ನ ನಗೆಬರಹಗಳ ಮೂರನೇ ಸಂಗ್ರಹ. ಅದರ ಪ್ರಸವ ವೇದನೆಯ ಬಗ್ಗೆ ನಾನು ಹೇಳಿಕೊಳ್ಳತಕ್ಕದ್ದೇನೂ ಇಲ್ಲ; ಯಾಕಂದರೆ ಅದನ್ನು ಅನುಭವಿಸಿದವರು ನನ್ನ ಮಿತ್ರ ಜಿ. ಟಿ. ನಾರಾಯಣರಾಯರು, ಪ್ರಕಾಶಕ ಡಿ. ವಿ. ಕೆ. ಮೂರ್ತಿಯವರು, ಕರಡು ತಿದ್ದಿದ ಆರ್. ಕೆ. ರೋಹಿಡೇಕರರು. ಇವುಗಳನ್ನು ಮೊದಲು ಪ್ರಕಟಿಸಿದ ಕರ್ಮವೀರ, ಕಸ್ತೂರಿ, ತುಷಾರ ಪತ್ರಿಕೆಗಳವರು ಬರವಣಿಗೆಗೆ ಹುರಿದುಂಬಿಸಿದವರು. ಓದುಗರು ನನ್ನ ಬರಹಗಳನ್ನು ಮೆಚ್ಚುವರೆಂಬುದು ನಮ್ಮೆಲ್ಲರ ನಂಬಿಕೆ. ಇವರೆಲ್ಲರಿಗೂ ನಾನು ಕೃತಜ್ಞ. ಯಾಕಂದರೆ ಲೋಕವನ್ನು ಕಂಡು ನಗುವವರಿಗೆ ತಮ್ಮೊಡನೆ ನಗುವವರಿಗಿಂತ ದೊಡ್ಡ ಉಪಕಾರಿಗಳಿಲ್ಲ.

ಹುಬ್ಬಳ್ಳಿ
ಆಗಸ್ಟ ೨೦, ೧೯೭೭

ಲಾಂಗೂಲಾಚಾರ್ಯ

# 'ವಿಪರೀತ'ದ ಅಂತರಂಗ


| | | | |
|---|---|---|---|
| ಕೋಟ್ಯಧಿಪತಿಯ ಕೋಟಲೆಗಳು | ... | ... | ೭ |
| ನರಿ, ಹಾವು ಮತ್ತು ಹೇಡಿ ... | ... | ... | ೧೬ |
| ರಾತ್ರಿ ಸಮಸ್ಯೆ ... | ... | ... | ೧೯ |
| ಕವಿಶೌರ್ಯ ಪ್ರಕರಣಂ ... | ... | ... | ೨೦ |
| ವರ್ಗರಹಿತ ವಿಶ್ವವಿದ್ಯಾಲಯ | ... | ... | ೨೩ |
| ನಿಂದಕರಿರಬೇಕಿರಬೇಕು ... | ... | ... | ೨೬ |
| ನಾನು ಪವಾಡಗಳನ್ನು ನಂಬುತ್ತೇನೆ | ... | ... | ೩೧ |
| ಕಳಾಪ್ರಪೂರ್ಣ ಆಯುಷ್ಕರ್ಮಶಾಲಾ | ... | ... | ೩೮ |
| ಯದ್ವಾತದ್ವಾ ಯೆಂಕಣ್ಣಯ್ಯನವರು | ... | ... | ೪೮ |
| ಹಾಲು ಮತ್ತು ಕೋಲು ... | ... | ... | ೫೯ |
| ಈರುಳ್ಳೀ ಮಹಿಮೆ ... | ... | ... | ೬೫ |
| ಹಳೇದಾದರೂ ಹೊಸದು ... | ... | ... | ೬೯ |
| ದೇವಾಸ್ತ್ರಪ್ತ್ಯಂತು ... | ... | ... | ೭೭ |
| ಸಲಹೆಗಳು ಅನ್-ಲಿಮಿಟೆಡ್ | ... | ... | ೮೫ |
| ನಗ್ನಾಪರಾಧ ... | ... | ... | ೯೨ |
| ಆತ್ಮಸಾಕ್ಷಿಗೆ ಕೈಪಿಡಿ ... | ... | ... | ೯೬ |
| ದ್ರೌಪದೀವಸ್ತ್ರಾಪಹರಣಂ ... | ... | ... | ೧೦೧ |
| ಮಂತ್ರಿಗಳ ದಿನಚರಿ ... | ... | ... | ೧೦೫ |
| ಸೇವಕರೇ ಎಲ್ಲಾ ... | ... | ... | ೧೧೨ |
| ಮನುಷ್ಯ ನಗದಿದ್ದರೆ ... | ... | ... | ೧೨೦ |
| ನಶ್ಯಂ ವಶ್ಯಕರಂ ... | ... | ... | ೧೨೬ |
| ಕ್ಯೂ ವಿಚಾರಲಹರಿ ... | ... | ... | ೧೩೨ |

ದೇವಚರ್ಚೆ ... ... ... ೧೩೭
ರಾಜಕೀಯ ಜಾಡ್ಯಗಳು ... ... ... ೧೪೩
ಬೆಳಗ್ಗೆ ಏಳುವುದು ... ... ... ೧೪೬
ಮದುವೆಯಾದರೂ ಸುಖಪಡುವುದು ಹೇಗೆ ... ... ೧೫೪

# ಕೋಟ್ಯಧಿಪತಿಯ ಕೋಟಲೆಗಳು

ನನ್ನ ಜೀವಮಾನದಲ್ಲಿ ನಾನು ಬ್ಯಾಂಕುಗಳಲ್ಲಿ ದುಡಿದಿದ್ದೇನೆ; ಹೋಟೆಲುಗಳಲ್ಲಿ ಕ್ಯಾಶಿಯರ್ ಕೆಲಸಮಾಡಿದ್ದೇನೆ; ಅಂಗಡಿಗಳಲ್ಲಿ ಲೆಕ್ಕ ಬರೆದಿದ್ದೇನೆ; ಪ್ರೆಸ್ಸಿಗಳ ಮೆನೇಜರನಾಗಿದ್ದೇನೆ; ಇನ್ನೇನೇನೋ ಆಗಿದ್ದೂ ಇದೆ. ಸಾಲದ್ದಕ್ಕೆ ಅರ್ಥಶಾಸ್ತ್ರವನ್ನೂ ಓದದೆ ಇಲ್ಲ. ಈ ಎಲ್ಲ ಕಾರಭಾರಗಳಲ್ಲಿ ನನ್ನ ಕೈ ಮೂಲಕ ಏನಿಲ್ಲೆಂದರೂ ಒಂದು ಕೋಟಿ ರೂಪಾಯಿಗಳು ಸಾಗಿ ಹೋಗಿರಬೇಕು. ನಾನು ಲೆಕ್ಕ ಬರೆದದ್ದಂತೂ ಹಲವು ಕೋಟಿ ರೂಪಾಯಿಗಳನ್ನು ಮೀರಿದೆ. ನನ್ನ ಮಿತ್ರರಲ್ಲಿ ಲಕ್ಷಾಧಿಪತಿಗಳು ಇದ್ದಾರೆ. ಹೀಗಾಗಿ ನನಗೆ ಹಣದಿಂದ ಹಣ ಹೇಗೆ ಹುಟ್ಟುತ್ತದೆ ಅಂತ ಗೊತ್ತಾಗಿದೆ; ಹಣದಿಂದ ಹಣವನ್ನು ಹೇಗೆ ಹುಟ್ಟಿಸಬೇಕು ಅನ್ನುವ ಗುಟ್ಟು ಕೂಡ ಗೊತ್ತು. ನನ್ನ ಪುಕ್ಕಟೆ ಸಲಹೆ ಕೇಳಿ ಕೋಟ್ಯಧೀಶರಾದವರನ್ನು ನಾನು ತೋರಿಸಬಲ್ಲೆ. “ಎಲ್ಲಾ ಸರಿ, ಆದರೆ ನೀನು ಯಾಕೆ ಕೋಟಿಪತಿಯಾಗಿಲ್ಲ? ನೀನು ಕೊಡುವ ಸಲಹೆಯನ್ನ ನೀನೇ ಯಾಕೆ ತೆಗೆದುಕೊಳ್ಳಲಿಲ್ಲ?” ಅಂತ ನನ್ನ ಮಿತ್ರರು ಕೇಳುತ್ತಿರುತ್ತಾರೆ. ಹಿತಶತ್ರುಗಳು ಬೆನ್ನ ಹಿಂದೆ ಲೇವಡಿ ಮಾಡುತ್ತಿರುತ್ತಾರೆ ಅಂತಲೂ ನಾ ಬಲ್ಲೆ. ಅಂಥವರಿಗೆಲ್ಲ ಇಲ್ಲಿ ಬಹಿರಂಗವಾಗಿ ನನ್ನ ವಿವರಣೆ ಕೊಡಬೇಕೆಂದಿದ್ದೇನೆ.

“ಸೂಜಿಯ ಕಣ್ಣಿನಲ್ಲಿ ಒಂಟೆಯನ್ನಾದರೂ ಹೊಗಿಸಬಹುದು, ಶ್ರೀಮಂತನನ್ನ ಸ್ವರ್ಗದ ಬಾಗಿಲಲ್ಲಿ ಹೊಗಿಸುವುದು ಸಲ್ಲ” ಅಂತ ಪವಿತ್ರ ಬೈಬಲ್ ಹೇಳುತ್ತದೆ. ಬೇರೆ ಧರ್ಮಾಚಾರ್ಯರೂ ಇದನ್ನೇ ಹೇಳಿದ್ದಾರೆ. ಆದರೆ ಸ್ವರ್ಗಕ್ಕೆ ಹೋಗುವ ಆತುರ ನನಗೆ ಯಾವಾಗಲೂ ಇರಲಿಲ್ಲ; ಈಗ ಕೂಡ ಇಲ್ಲ. ಬೇರೆ ಬೇರೆ ಧರ್ಮಗಳ ಸ್ವರ್ಗಗಳನ್ನೆಲ್ಲ ತುಲನಾತ್ಮಕವಾಗಿ ಅಭ್ಯಸಿಸಿದ ಮೇಲೆ, ನನಗೆ ಯಾವ ಸ್ವರ್ಗವೂ ಆಕರ್ಷಕವಾಗಿ ಕಾಣಿಸಿಲ್ಲ. “ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ.” ಸ್ವರ್ಗವನ್ನಾಗಲಿ ನರಕವನ್ನಾಗಲಿ ಸುಟ್ಟು ಹಾಕಬೇಕೆನ್ನುವಷ್ಟು ಹಿಂಸಾಬುದ್ಧಿ ನನಗಿಲ್ಲದಿದ್ದರೂ ಈ ಭೂಮಿಯಲ್ಲಿ ಬಾಡಿಗೆಗೆ ಮನೆ ಸಿಗುವುದೇ ಇಲ್ಲ ಅಂತಾಗುವವರೆಗೂ ಸ್ವರ್ಗದಲ್ಲಿ ಮನೆ ಹಿಡಿಯುವ ಇಷ್ಟ ನನಗೆ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ನನ್ನ ಅರೆಸ್ಟ್ ಮಾಡಿ ಒಯ್ದ ಹೊರತು ನಾನು ಸ್ವರ್ಗಕ್ಕೆ ಹೋಗುವುದಕ್ಕೆ ತಯಾರಿಲ್ಲ.

ಮತ್ತೆ ಶ್ರೀಮಂತರನ್ನ—ಸ್ವರ್ಗದ ಮುಂಬಾಗಿಲ ಮೂಲಕ ಒಳಗೆ ಬಿಡದಿದ್ದರೂ —ಹಿಂಬಾಗಿಲ ಮೂಲಕ ಅವರಿಗೆ ಸುಲಭವಾಗಿ ಪ್ರವೇಶ ಕೊಡಿಸುವ ಏರ್ಪಾಡು ಇದೆ ಅಂತ ನನಗೆ ಸಂಶಯ ಇದೆ.

ಹಾಗಾದರೆ ಯಾಕಪ್ಪಾ ನೀನು ಶಕ್ತಿ ಇದ್ದೂ ನವಕೋಟಿ ನಾರಾಯಣ ಆಗುವುದಿಲ್ಲ ? ಅಂತ ನೀವು ಕೇಳುತ್ತೀರಿ. ನನ್ನ ಕಾರಣಗಳು ಆಮುಷ್ಮಿಕವಲ್ಲ ; ಪೂರ್ತಿಯಾಗಿ ಐಹಿಕ—ಇಂಗ್ಲೀಷಿನಲ್ಲಿ ಮ್ಯುಂಡೇನ್ ರೀಜನ್ಸ್ ಅನ್ನುತ್ತಾರಲ್ಲಾ—ಅವು. ಆ ಲೋಕದಲ್ಲಿ ಅಲ್ಲ, ಈ ಲೋಕದಲ್ಲಿ ಬರುವ ಕೋಟಲೆಗಳಿಗೆ ಅಂಜಿ ನಾನು ಕೋಟ್ಯಧಿಪತಿಯಾಗಲಿಲ್ಲ.

ನನಗೆ ಲಕ್ಷಾಧಿಪತಿ ಮಿತ್ರರು ಇದ್ದಾರೆಂತ ಹೇಳಿದೆನಲ್ಲ. ಅವರ ಕಷ್ಟಗಳನ್ನು ಅವರ ಬಾಯಿಂದ ಕೇಳಿದ್ದೇನೆ ; ಕಣ್ಣಿಂದ ನೋಡಿದ್ದೇನೆ. ಅಷ್ಟರಿಂದಲೇ ನನಗೆ ಹಣದ ಮೇಲೆ ಒಂದು ಸಾತ್ವಿಕ ಭಯ ಹುಟ್ಟಿಬಿಟ್ಟಿದೆ. ಆ ಕೋಟಲೆಗಳನ್ನು ನಿಮಗೆ ಸ್ವಲ್ಪ ಬಣ್ಣಿಸುತ್ತೇನೆ. ಕೋಟಿಪತಿಯ ಕಷ್ಟಗಳ ಅಂದಾಜು ನಿಮಗೆ ಬೇಕಾದರೆ ಲಕ್ಷಾಧಿಪತಿಗಳ ಕೋಟಲೆಗಳನ್ನು ೧೦೦ರಿಂದ ಗುಣಿಸಿಕೊಳ್ಳಿ. ಆಗ ನಿಮಗೆ ತಿಳಿಯುವುದು. ಅದು ಸರಳ ಅಂಕಗಣಿತದ ಲೆಕ್ಕಾಚಾರ.

ಮೊದಲನೆಯದಾಗಿ, ನಮ್ಮ ಆತ್ಮಸಾಕ್ಷಿಯ ಪ್ರಶ್ನೆ. ಆತ್ಮಸಾಕ್ಷಿಗೆ ಬಿಡುವು ಕೊಟ್ಟು ತೌರುಮನೆಗೆ ಕಳಿಸಿದ ಹೊರತು ಲಕ್ಷಾಧೀಶ ಆಗುವುದು ಅಸಾಧ್ಯ ಅಂತ ನನ್ನ ಮಿತ್ರರು ಹೇಳುತ್ತಾರೆ. ಹಣವನ್ನು ದೊಡ್ಡ ಪ್ರಮಾಣದಲ್ಲಿ ಮಾಡುವ ಕೆಲವು ಸಂಭಾವ್ಯತೆಗಳನ್ನು ದೃಷ್ಟಾಂತಕ್ಕೆ ತೆಗೆದುಕೊಳ್ಳೋಣ. ಮುಂಬಯಿ ಶೇರ್ ಬಜಾರಿನಲ್ಲಿ ಬುದ್ಧಿವಂತಿಕೆಯಿಂದ ಹಣ ತೊಡಗಿಸಿ ನಾನು ಲಕ್ಷಾಧೀಶನಾಗಬಹುದು. ದಲಾಲ್ ರಸ್ತೆಯ ಸಂದಿಗೊಂದಿಗಳೆಲ್ಲ ನನಗೆ ಗೊತ್ತು. ಆದರೆ ದಲಾಲ್ ರಸ್ತೆಯಲ್ಲಿ ಹಣ ಗಳಿಸುವುದು ಅಂದರೆ ಅದು ಶುದ್ಧ ಸಟ್ಟಾ. ಸಟ್ಟಾ ಅಂದರೆ ಜುಗಾರಿ ವ್ಯಾಪಾರ. ಯಾರೋ ಎಲ್ಲಿಯೋ ಸ್ಥಾಪಿಸಿದ ಕಂಪನಿ, ಅದರಲ್ಲಿ ಯಾರು ಯಾರೋ ಸಾವಿರಾರು ಜನ ಬಡಬಗ್ಗರು ಬೆವರು, ಅಪಘಾತಗಳಾದರೆ ರಕ್ತ ಸುರಿಸಿ ದುಡಿಯುವರು, ಅದಕ್ಕೆ ನಾನು ಒಂದು ಬಿಂದು ಬೆವರು ಕೂಡ ಸುರಿಸದೆನೇ ಅದರ ಸ್ಟಾಕಿನ ಖರೀದಿ ಮಾರಾಟದ ಕಾಲ್ಪನಿಕ ಆಟ ಆಡಿ ರೊಕ್ಕ ಹೊಡೆಯುವುದು ಅಂದರೆ ಅದು ಜುಗಾರಿ

ಅಲ್ಲವೇ ಸ್ವಾಮಿ? Production ಅಂದರೆ ಉತ್ಪಾದನೆಗೆ ನಾನು ಏನೊಂದೂ contribute ಅಂದರೆ ಸಂದಾಯ ಮಾಡದೆ ಇಂಥ ಹಣವನ್ನು ಯಾವ ಕೈಯಿಂದ ಮುಟ್ಟಲಿ, ಸಾರ್? ನನಗಿರುವ ಎರಡು ಕೈಲಿ ಯಾವುದೂ ಇಂಥ ಹಣ ಮುಟ್ಟುವುದಕ್ಕೆ ಮುಂದೆ ಬರುವುದಿಲ್ಲ ನೋಡಿ! ಇನ್ನು ವ್ಯಾಪಾರ ಅಂದರೆ ಹಗಲು ದರೋಡೆ ಅನ್ನೋದು ನಿಮಗೆಲ್ಲಾ ಗೊತ್ತು. ನಿಮಗೆ ಲಕ್ಷ ಗಟ್ಟಳೆ ಲಾಭ ಬೇಕು ಅಂತಾದರೆ ನೀವು ಒಂದು ಕಡೆ ನಿಮ್ಮ ಗಿರಾಕಿಗಳಿಗೆ ಸುಳ್ಳಂಬಳ್ಳಿ ಹೇಳಿ ಅವರ ಚರ್ಮ ಸುಲಿಯಬೇಕು. ಇನ್ನೊಂದು ಕಡೆ ನಿಮ್ಮ ಸಪ್ಲೈಯರ್ಸಿಗೆ ನ್ಯಾಯವಾದ ಬೆಲೆ ಕೊಡದೆ ಅವರ ಬೋಳು ಕೆತ್ತಬೇಕು. ನನ್ನ ಒಬ್ಬ ಮಿತ್ರರು ಯುದ್ಧಕಾಲದಲ್ಲಿ ಕಾಫಿಪುಡೀಲಿ ಹುಣಿಸೇಬೀಜದ ಪುಡಿ ಸೇರಿಸಿ ಮಿಲಿಟ್ರಿಯವರಿಗೆ ಸಪ್ಲೈ ಮಾಡಿ ಲಕ್ಷಾಂತರ—ಅಂದರೆ ಈಗಿನ ಕೋಟ್ಯಂತರ—ಲಾಭ ಹೊಡೆದರು. ಈ ವ್ಯವಹಾರ ಆದಾಗ ಅವರು ತಮ್ಮ ಆತ್ಮಸಾಕ್ಷಿಯನ್ನು ಉಪಾಯವಾಗಿ ಹೊರಗೆ ಕಳಿಸಿದ್ದರು. ಅದು ವಾಪಸ್ಸು ಬಂದನಂತರ ಆದ ರಾದ್ಧಾಂತ ಏನು ಹೇಳಲಿ! ತಿಂಗಳುಗಟ್ಟಲೆ ಅವರು ನಿದ್ದೆ ಕಾಣಲಿಲ್ಲ. ಸ್ವಲ್ಪ ಜೋಂಪು ಹತ್ತಿತೋ ಆತ್ಮಸಾಕ್ಷಿ ಅವರನ್ನ ಕುಲುಕಿ ಎಬ್ಬಿಸಬೇಕು. ಗಟ್ಟಿ ಜೀವ ಅವರು. ಹೇಗೋ ಹುಚ್ಚು ಹಿಡಿಯದೆ ಉಳಿದುಕೊಂಡರು. ನನಗಾದರೆ ಒಂದು ರಾತ್ರಿ ನಿದ್ದೆ ಕೆಟ್ಟರೆ ಮರುದಿನ ಹುಚ್ಚು ಹಿಡಿದ ಹಾಗಾಗುತ್ತದೆ. ನನ್ನ ಆತ್ಮಸಾಕ್ಷಿ ಒಪ್ಪೊತ್ತು ರಜಾ ತೆಗೆದುಕೊಳ್ಳದೆ ನನ್ನ ಕಾವಲು ಮಾಡುತ್ತಿದೆ. ಅದರ ಕೈಯಿಂದ ನಾನು ಪಾರಾಗುವುದು ಕನಸಿನಲ್ಲಿ ಕೂಡ ಆಗುವುದಿಲ್ಲ. ಮೊನ್ನೆ ಒಂದಿನ ಬಸ್ಸಲ್ಲಿ ಚಿಲ್ಲರೆ ತೆಗೆದುಕೊಳ್ಳುವಾಗ ಒಂದು ರೂಪಾಯಿ ಹೆಚ್ಚು ಸಿಕ್ಕಿದ್ದನ್ನ ಹಾಗೇ ಜೇಬಿಗೆ ಇಳಿಸಿ ಮನೆಗೆ ಬಂದು ಮಲಗಿದರೆ ಆತ್ಮಸಾಕ್ಷಿಯ ಕೈಲಿ ನಾ ಪಟ್ಟ ಪಾಡು ದೇವರಿಗೇ ಗೋಚರ. ಒಂದು ರೂಪಾಯಿಗೇ ಇಷ್ಟಾಗಿರುವಾಗ ಲಕ್ಷ ರೂಪಾಯಿ ಲಾಭ ಹೊಡೆದವರಿಗೆ ಏನು ಯಾತನೆ ಆಗಬೇಡ—ನೀವೇ ಯೋಚಿಸಿ! ಅವರು ಯಾತ್ರೆ ಮಾಡುತ್ತಾರೆ, ಛತ್ರ ಕಟ್ಟಿಸುತ್ತಾರೆ, ಆಸ್ಪತ್ರೆಗೆ ದಾನ ಮಾಡುತ್ತಾರೆ, ಶಾಲೆ ಕಾಲೇಜು ತೆರೆಯುತ್ತಾರೆ, ಸಂತರಿಗೆ ಸ್ವಾಮಿಗಳಿಗೆ ಭಗವಾನುಗಳಿಗೆ ಕೊಡುತ್ತಾರೆ—ಏನು ಮಾಡಿದರೂ ಅವರ ಆತ್ಮಸಾಕ್ಷಿ ಅವರ ಪಕ್ಕೆಯಲ್ಲಿ ಚುಚ್ಚುತ್ತಾ ಇರುತ್ತದೆ.

ಇದು "ವಿತ್ತೇ ಆತ್ಮಭಯಂ" ಮಾತಾಯಿತು. ಇದಕ್ಕಿಂತ ಮಿಗಿಲಾದದ್ದು ಹಿಂದಿನವರು ಹೇಳಿದ "ವಿತ್ತೇ ರಾಜಭಯಂ." Nothing is certain but death and taxes ಅಂತ ಇದನ್ನೇ ಆಧುನಿಕ ಭಾಷೆಯಲ್ಲಿ ಅನುವಾದಿಸಿದ್ದಾರೆ. ವಿಜ್ಞಾನಿಗಳು death ಅನ್ನು—ಅಂದರೆ ಸಾವನ್ನು ಗೆಲ್ಲುತ್ತ ಇದ್ದಾರೆ—ಆದರೆ taxನ್ನು ಗೆಲ್ಲುವುದು ಯಾರಿಗೂ ಸಾಧ್ಯವಾಗಿಲ್ಲ. ಸಾವಿನ ಭಯ ಕಮ್ಮಿಯಾಗುತ್ತಿದೆ, taxನ ಭಯ ಹೆಚ್ಚಾಗುತ್ತ ಇದೆ. ನಿಜ ಕೇಳಿದರೆ, tax ಕೊಟ್ಟು ಯಾರಿಗಾದರೂ ಕೋಟ್ಯಧೀಶ ಆಗೋದು ಹೇಗೆ ಸಾಧ್ಯ ಅಂತ ನನಗೆ ತಿಳಿಯುವುದಿಲ್ಲ. "ಒಂದು ಲಕ್ಷ ಗಳಿಸಿದರೆ ೫೦ ಸಾವಿರ ಮೇಲೆ ಇನ್‌ಕಂ ಟ್ಯಾಕ್ಸ್ ಹೋಗಿಬಿಡುತ್ತೆ. ಎರಡನೇ ಲಕ್ಷಕ್ಕೆ ಅದಕ್ಕೂ ಜಾಸ್ತಿ ಹೋಗುತ್ತೆ. ಮೂರು ಲಕ್ಷದ ಮೇಲೆ ನಮಗೆ ಉಳಿಯೋದು ಕೆಲ ಸಾವಿರ ಮಾತ್ರ. ಹೀಗಾದರೆ ಯಾವಾಗ ಆಚಾರ್ರೆ ನಾನು ಲಕ್ಷಾಧೀಶ ಆಗೋದು?" ಅಂತೊಬ್ಬರು ನನ್ನ ಕೇಳಿದರು.

ನನಗೆ ನಿಜ ಅನ್ನಿಸಿತು. ನಿಮ್ಮ ಆತ್ಮಸಾಕ್ಷಿಯ ಪ್ರೈವೇಟ್ ಕಾಟವನ್ನು ನೀವು ಹೇಗಾದರೂ ಸಹಿಸಿಕೊಳ್ಳಬಹುದು. ಆದರೆ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳು ಆತ್ಮಸಾಕ್ಷಿಗಿಂತ ಅಪಾಯಕರ ಸಾಕ್ಷಿಗಳು. ಅವರು ಕಾನೂನು ಭೀರು ಅಥವಾ ದೈವಭೀರುಗಳಾದ ವ್ಯಾಪಾರಿಗಳಿಗೆ ಮಾತ್ರವಲ್ಲ, ಕಾನೂನಿಗೆ ಹೆದರದ ಕಳ್ಳಕಾಕ ಸುಳ್ಳುಪೋಕರ ಮೇಲೆ ಮತ್ತು ಸ್ವತಃ ದೇವರ ಮೇಲೆ ಕೂಡ ಟ್ಯಾಕ್ಸ್ ಹೊರಿಸುತ್ತೇವೆ ಅಂತ ಹೇಳುತ್ತಾರೆ. ನೀವು ಒಳ್ಳೇ ಮಾತಿನಿಂದ ಅವರ ಯಜ್ಞಭಾಗವನ್ನು ಅವರಿಗೆ ಸಲ್ಲಿಸಿ ಕೈಮುಗಿದಿರೋ ಚೆನ್ನಾಯಿತು; ಇಲ್ಲದಿದ್ದರೆ ಕಾನೂನಿನ ಬಲು ಉದ್ದವಾದ ಕೈಗಳು ನಿಮ್ಮನ್ನು ಆಕ್ರಮಿಸುತ್ತವೆ. ಇಲ್ಲಿ ಬರುತ್ತದೆ ಮಹಾ ಉಭಯಸಂಕಟ. ತೆರಿಗೆ ಸರಿಯಾಗಿ ಕೊಟ್ಟರೆ ನಿಮಗೆ ಲಕ್ಷಾಧೀಶತ್ವದಿಂದ ಕೋಟಿಪತಿತ್ವಕ್ಕೆ ಉತ್ಕ್ರಮಣ ಮಾಡಲಿಕ್ಕೇ ಸಾಧ್ಯವಿಲ್ಲ; ಕೊಡದಿದ್ದರೆ....ಒಳ್ಳೇದು, ನಿಮಗೆ ಬಿಚ್ಚಿ ಹೇಳಬೇಕಿಲ್ಲ.

ಹೋಗಲಿ, ಟ್ಯಾಕ್ಸು ಕೊಟ್ಟು ಮುಕ್ತರಾಗಿಬಿಡುವಾ, ಅನ್ನಲೇ? ಮತ್ತೆ ನನ್ನ ಆತ್ಮಸಾಕ್ಷಿ ಸಂಕಟಪಡುತ್ತದೆ. ಈ ಹಣವನ್ನು ಸರಕಾರ ಖರ್ಚುಮಾಡೋ ರೀತಿಗಳು ನನ್ನ ತತ್ತ್ವಗಳಿಗೆ ಸರಿಹೊಂದುವುದಿಲ್ಲ. ಸರಕಾರ ಹೇಳುತ್ತೆ ನದಿಗಳಿಗೆ ಅಣೆಕಟ್ಟು ಕಟ್ಟಿಸುತ್ತೇವೆ, ಹಳ್ಳಿಗಳಿಗೆ ವಿದ್ಯುತ್ ತಂತಿ ಹಾಕುತ್ತೇವೆ,

ಆಸ್ಪತ್ರೆ ಕಟ್ಟಿಸುತ್ತೇವೆ ಇತ್ಯಾದಿ. ಆದರೆ ಅಣೆಕಟ್ಟು ಕಟ್ಟುವುದರಿಂದ ನೀರು ಶೇಖರವಾಗುತ್ತದೆ, ನೀರು ಒಂದು ಕಡೆ ಶೇಖರವಾದರೆ ಭೂಕಂಪ ಆಗುತ್ತದೆ ಅಂತ ಈಗ ಕೆಲವು ಭೂಗರ್ಭಶಾಸ್ತ್ರಿಗಳು ಹೇಳುತ್ತಾರೆ. ಭೂಕಂಪ ಆಯಿತು ಅಂತ ಎಲ್ಲಾದರೂ ಸುದ್ದಿ ಕೇಳಿದರೆ ನನ್ನ ಆತ್ಮಸಾಕ್ಷಿ ಜರೆಯುತ್ತೆ— "ನೋಡು, ಈ ಅಣೆಕಟ್ಟಿನಲ್ಲಿ ನೀನು ಕೊಟ್ಟ ತೆರಿಗೆಯ ಒಂದೂವರೆ ನಯಾ ಪೈಸೆ ಇದೆ. ಹೀಗೆ ಈ ಅನಾಹುತದಲ್ಲಿ ನಿನ್ನ ಅಂಗ ಇದೆ"—ಅಂತ. ಇನ್ನು ವಿದ್ಯುತ್ತಂತ್ರಿಗಳು ಹಳ್ಳಿಗಾಡಿನ ಮುಕ್ತವಾತಾವರಣದಲ್ಲಿ ವಿಕಾರವನ್ನುಂಟು ಮಾಡುತ್ತವೆ. ವಿದ್ಯುತ್ ಅಪಘಾತಗಳನ್ನು ಉಂಟುಮಾಡಬಹುದು. ಈ ಎಲ್ಲಾ ಭಯಗಳಿಂದ ಕೋಟಿಪತಿಯ ಮಾನಸಿಕ ಕೋಟಲೆ ಹೆಚ್ಚಿ ಅವನು ಬ್ಲಡ್‌ಪ್ರೆಶರಿಗೆ ಬಲಿಯಾಗುತ್ತಾನೆ.

ಬ್ಲಡ್‌ಪ್ರೆಶರ್ ಅಂದರೆ ಕೋಟಿಪತಿಯ ಶಾರೀರಿಕ ಕೋಟಲೆಗಳ ನೆನಪು ಆಗುತ್ತದೆ. ಅವು ಒಂದಲ್ಲ ಎರಡಲ್ಲ, ಹಿಂಡುಹಿಂಡಾಗಿಯೇ ಭಿಕ್ಷುಕರ ಹಾಗೆ ಅವನಿಗೆ ಗಂಟುಬೀಳುತ್ತವೆ. ಹೈಬ್ಲಡ್‌ಪ್ರೆಶರ್, ಡಯಾಬೆಟಿಸ್, ಹಾರ್ಟ್ ಕಂಡೀಶನ್, ಕ್ಯಾನ್ಸರ್ ಮೊದಲಾದ ರೋಗಗಳು ಬ್ಯಾಂಕ್ ಬ್ಯಾಲೆನ್ಸ್ ಒಂದು ಲಕ್ಷ ಮೀರಿದ ಕೂಡಲೆ ನನ್ನನ್ನ ಅಟ್ಟಿಕೊಂಡು ಹೊರಡುತ್ತವೆ ಮತ್ತು ಒಂದಲ್ಲ ಒಂದು ದಿನ ಹಿಡಿದೇಬಿಡುತ್ತವೆ ಅನ್ನುವ ಅಂಜಿಕೆಯಿಂದ ನಾನು ತತ್ತರಿಸುತ್ತೇನೆ. ಇವು ಲಕ್ಷಾಧೀಶರಿಗೆ ಮಾತ್ರ ಬರುವ ರೋಗಗಳು ಅಂತ ನನ್ನ ಸಾಧನೆ ಅಲ್ಲ. ಆದರೆ ಬಡವರಿಗೆ ಬಂದಾಗ ಅವುಗಳಿಗೆ ಹೆಸರುಗಳೇ ಇರುವುದಿಲ್ಲವಾದ್ದರಿಂದ ಅವು ಅಷ್ಟು ಭಯಂಕರವಾಗಿ ಕಾಣುವುದಿಲ್ಲ. ನಾನು ಲಕ್ಷಾಧೀಶ ಅಂತ ತಿಳಿದ ಕೂಡಲೆ ಅವು ಹಿಂದಿನ ಕಾಲದ ರಾಜರ ಹಾಗೆ ಭರ್ಜರಿ ಹೆಸರುಗಳನ್ನು ಧರಿಸಿಕೊಂಡು ಅತ್ಯಂತ ಕರಾಳವಾಗಿ ಕಾಣಿಸುತ್ತವೆ.

ಡಾಕ್ಟರರ ಹತ್ತಿರ ಹೋದರೆ ಅವರು ಎಕ್ಸ್‌ರೇ, ಈಸೀಜಿ, ಈಈಜಿ, ಡಯಾಲಿಸಿಸ್, ಬ್ಲಡ್‌ಟೆಸ್ಟ್, ಬಯಾಪ್ಸಿ ಮತ್ತು ಇನ್ನೂ ಏನೇನೋ ಅಂತ ಪ್ರಯೋಗಗಳನ್ನು ಮಾಡಿ ಕಡೆಗೆ ನನ್ನ ರೋಗಕ್ಕೆ ವಿಧಿಪೂರ್ವಕವಾಗಿ ನಾಮಕರಣ ಮಾಡುತ್ತಾರೆ. ಆಮೇಲೆ ನನ್ನ ಆದಾಯ ತೆರಿಗೆ ರಿಟರ್ನುಗಳ ಆಧಾರದಿಂದ ನನ್ನ ರೋಗಕ್ಕೆ ತಕ್ಕ ಔಷಧವನ್ನಲ್ಲ, ನನ್ನ ಅಂತಸ್ತಿಗೆ ಸರಿಯಾದ ಬೆಲೆಯುಳ್ಳ ಔಷಧ, ಇಂಜಕ್ಷನ್ ವಗೈರೆಯನ್ನು ಪ್ರಿಸ್ಕ್ರೈಬ್ ಮಾಡುತ್ತಾರೆ.

ಇಷ್ಟಾದಮೇಲೆ ನನಗೆ, ನನ್ನ ಹೆಂಡತಿಗೆ ಹೆಚ್ಚು ಹೆಚ್ಚು ಬೆಲೆಯ ಔಷಧಗಳ ಅಗತ್ಯ ಉಂಟೆಂತ ಅವರು ನಮಗೆ ಮನವರಿಕೆ ಮಾಡುತ್ತಾರೆ. ಒಳ್ಳೇದು, ಇಷ್ಟೆಲ್ಲ ಖರ್ಚು ಮಾಡಿದ್ದಕ್ಕೆ ಇನ್‌ಕಂ ಟ್ಯಾಕ್ಸಿನಲ್ಲಿ ವಜಾ ಆದರೂ ಕೊಡು ತ್ತಾರೆಯೇ? ಕೇಳಬೇಡಿ. ನೋಡಿ, ಲಕ್ಷ ಅಥವಾ ಕೋಟಿಪತಿಗಳಾದದ್ದರಿಂದಲೇ ಅವರಿಗೆ ಈ ರೋಗಗಳು ಬಂದಿವೆ. ಆದ್ದರಿಂದ ಈ ಔಷಧ ಖರ್ಚುಗಳು ಬಿಸಿನೆಸ್ ಎಕ್ಸ್‌ಪೆನ್ಸ್ ಅಂತ ಅವರಿಗೆ ವಜಾ ಸಿಕ್ಕಬೇಕು ಅಂತ ನಾನು ಒಬ್ಬ ಇನ್‌ಕಂ ಟ್ಯಾಕ್ಸ್ ಆಫೀಸರ್ ಕೈಲಿ ಒಂದು ಸಲ ವಾದ ಹೂಡಿದೆ. ಅವರು ನನ್ನ ಪೈಂಟ್ ಒಪ್ಪಿದರು. ಆದರೆ ವಜಾ ಕೊಡುವುದಕ್ಕೆ ರೂಲ್ಸುಗಳಲ್ಲಿ ಪ್ರೊವಿಜನ್ ಇಲ್ಲ ಅಂತ ತಮ್ಮ ಅಸಹಾಯತೆಯನ್ನು ವಿಷಾದಪೂರ್ವಕ ವ್ಯಕ್ತಪಡಿಸಿದರು. ಅದೀಗ ಕಷ್ಟ. ನಮ್ಮನ್ನಾಳುವುದು ವ್ಯಕ್ತಿಗಳಲ್ಲ, ರೂಲ್ಸುಗಳು. "ರೂಲ್ಸು ರೂಲ್ಸು ಅಂತ ಹಲುಬುತ್ತ ರೂಲ್ಸ್ ಪ್ರಕಾರ ನಾವು ವ್ಯಾಪಾರ ಮಾಡಿದ್ದರೆ ಎಂದಾ ದರೂ ಹಣ ಸಂಪಾದಿಸುತ್ತಿದ್ದೆವೋ ಇವರಿಗೆ ಟ್ಯಾಕ್ಸ್ ಕೊಡುತ್ತಿದ್ದೆವೋ ಅಂತ ಅವರಿಗೆ ಕೇಳಿ" ಅಂತ ನನ್ನ ಮಿತ್ರರು ನಾನೇ ಆಫೀಸರೇನೋ ಅನ್ನುವಂತೆ ಸಿಟ್ಟಿನಲ್ಲಿ ನನಗೆ ಜೋರು ಮಾಡಿದರು.

ರೋಗಗಳ ವಿಷಯ ಇನ್ನೂ ಒಂದು ಸಂಕಟ ಇದೆ. ಶ್ರೀಮಂತರ ಮೇಲೆ ಹಣ ಗಳಿಸುವುದಕ್ಕೆ ಮಾನಸಿಕ ಸ್ಟ್ರೆಸ್-ಒತ್ತಾಯ—ಇರುವ ಹಾಗೆ ರೋಗ ಗಳನ್ನು ಸಂಪಾದಿಸಲಿಕ್ಕೂ ಸೋಶಿಯಲ್ ಪ್ರೆಶರ್ಸ್ ಇರುತ್ತೆ ಅನ್ನುವುದು ನಿಮಗೆ ಗೊತ್ತಿರಲಿಕ್ಕಿಲ್ಲ. ನನ್ನದೇ ಉದಾಹರಣೆ ಹೇಳುತ್ತೇನೆ. ನಮ್ಮ ಆಫೀಸಿ ನಲ್ಲಿ ಸಾವಿರ ರೂಪಾಯಿ ಮೀರಿ ಸಂಬಳ ಇರುವರಿಗೆಲ್ಲ ಒಂದಲ್ಲ ಒಂದು ಪ್ರೆಸ್ಟಿಜ್ ರೋಗ ಇದೆ. ಒಬ್ಬರಿಗೆ ಬ್ಲಡ್‌ಪ್ರೆಶರ್, ಒಬ್ಬರಿಗೆ ಡಯಾಬೆಟಿಸ್, ಇನ್ನೊ ಬ್ಬರಿಗೆ ಅಲ್ಸರ್ಸ್....ಹೀಗೇ ಏನೇನೋ. ಒಂದೂವರೆ ಸಾವಿರ ಮೀರುವಾಗ ಅವರಿಗೆ ಒಂದೊಂದಲ್ಲ ಜೋಡಿಜೋಡಿ ಪ್ರೆಸ್ಟಿಜ್ ರೋಗಗಳು ಹಿಡಕೊಳ್ಳು ತ್ತವೆ. ಅವರು ಒಟ್ಟುಕೂಡಿದಾಗೆಲ್ಲ ತಮ್ಮ ರೋಗಗಳ ಮತ್ತು ಅವುಗಳ ಬಗ್ಗೆ ತಾವು ಕಂಡ ಡಾಕ್ಟರರ ಬಗ್ಗೆ ಮತ್ತು ತೆಗೆದುಕೊಂಡ ಔಷಧಗಳ ಬಗ್ಗೆ ನೋಟ್ಸ್ ಎಕ್ಸ್‌ಚೇಂಜ್ ಮಾಡಿಕೊಳ್ಳುತ್ತಾ ಇರತಾರೆ. ಅವರ ಹೆಂಡಂದಿರಿಗೆ ತಮ್ಮ ಗಂಡಂದಿರ ಸಂಬಳಗಳು ಮತ್ತು ಅವರ ರೋಗಗಳು ಒಂದಿಷ್ಟು ಹೆಮ್ಮೆಯ ಸಂಭಾಷಣಾ ಪೈಂಟುಗಳಾಗುತ್ತವೆ. ಕಡೆಗೆ ಒಂದು ದಿನ ನನಗೂ

ಪ್ರೊಮೋಶನ್ ಆಗಿ ಸಂಬಳ ಸಾವಿರದ ಒಂದು ರೂಪಾಯಿಗೆ ಬಂತು ಮತ್ತು ನಾನೂ ಆಫೀಸರ್ ಕ್ಲಬ್ಬಿಗೆ ಅಡ್ಮಿಶನ್ ಪಡೆದೆ. ಅವರು ಕಾಲಕಾಲಕ್ಕೆ ತಮ್ಮ ರೋಗಗಳ ಬಗ್ಗೆ ಮಾತಾಡುವಾಗ ನಾನು ಮಾತ್ರ ಸುಮ್ಮನೆ ಇರುವುದು ನೋಡಿ ಅವರು "ಏನಯ್ಯಾ, ನಿನಗೆ ಇನ್ನೂ ಡಯಾಬೆಟಿಸ್ ಆಗಿಲ್ಲವೆ?" ಇತ್ಯಾದಿಯಾಗಿ ಕೇಳುವರು. ನಾನು ಇಲ್ಲ ಅಂದರೆ ಬಿಳೀ ಕುರಿಗಳ ಮುಂದೇಲಿ ಕಪ್ಪು ಕುರೀನ ಕಾಣುವ ಹಾಗೆ ನನ್ನ ಒಂದು ತರಹ ನೋಡುವರು. ಇವನಿಗೆ ಒಂದೂ ಆಫೀಸರ್ ರೋಗ ಇಲ್ಲ, ಶುದ್ಧ ಆರೋಗ್ಯ. ಇವನಿಗೆ ಪ್ರೊಮೋಶನ್ ಕೊಟ್ಟವರಿಗೆ ಬುದ್ಧಿ ಇಲ್ಲ ಅನ್ನುವ ಹಾಗೆ. ನನ್ನ ಹೆಂಡತಿಯಂತೂ ನನಗಾಗಲಿ ತನಗಾಗಲಿ ಒಂದು ಒಳ್ಳೇ ಅಂತಸ್ತಿನ ರೋಗ ಇಲ್ಲ ಅಂತ ಗೆಳತಿಯರ ಕೈಲಿ ಅಪಮಾನ ಮಾಡಿಸಿಕೊಂಡು ಒಂದು ದಿನ ಕ್ಲಬ್ಬಿನಿಂದ ಬಂದವಳು ಅತ್ತೇ ಬಿಟ್ಟಳು. ಈ ಎಲ್ಲ ಪ್ರೆಶರ್‌ಗಳ ಒತ್ತಡದಿಂದ ಕಡೆಗೆ ನನಗೆ ಅಲ್ಸರ್ ಆಯಿತು, ಅವಳಿಗೆ ಬ್ಲಡ್ ಪ್ರೆಶರ್ ಬಂತು. ಸಾವಿರ ಸಂಬಳ ಬರುವ ಪುಡಿ ಜನರ ಅವಸ್ಥೆಯೇ ಹೀಗೆ ಅಂದಮೇಲೆ ನವಕೋಟಿ ನಾರಾಯಣರ ಮೇಲೆ ಎಂಥ ಒತ್ತಡ ಬರುತ್ತಿರಬಹುದು ಯೋಚನೆಮಾಡಿ. ಅವರಿಗೆ ಸ್ವಿಜರ್ಲಂಡ್, ಲಂಡನ್, ನ್ಯೂಯಾರ್ಕ್ ಅಥವಾ ಪ್ಯಾರಿಸ್ಸಿಗೆ ಹೋಗದೆ ಯಾವ ರೋಗಕ್ಕೂ ಟ್ರೀಟ್‌ಮೆಂಟ್ ಬಿಡಿ, ಡಯಾಗ್ನಾಸಿಸ್ ಕೂಡ ಆಗುವುದು ಸಾಧ್ಯ ಇಲ್ಲ. ಕಷ್ಟಪಟ್ಟು ಲಕ್ಷಾಧೀಶ ಆಗಬೇಕು, ಕಷ್ಟಪಟ್ಟು ರೋಗಗಳನ್ನು ಅಂಟಿಸಿಕೋಬೇಕು, ಅವುಗಳನ್ನು ಹಿಡಕೊಂಡು ದೇಶದೇಶ ಹಾರಾಡಬೇಕು, ಬಿಳೀ ಮುಸುಡಿ ಡಾಕ್ಟರು ಸರ್ಜನ್ನರ ಜೇಬು ತುಂಬಬೇಕು. ಯಾರಿಗೆ ಬೇಕು ಈ ಕೋಟಲೆ? ಅದಕ್ಕೇ ನಾನು ಲಕ್ಷಾಧೀಶ ಆಗುವುದನ್ನು ಅಲಕ್ಷಮಾಡಿದ್ದು.

ದೇವರು ಪೃಥ್ವಿಯನ್ನು ಸುಂದರವಾಗಿ ನಿರ್ಮಿಸಿದ್ದಾನೆ. ಮರಗಳನ್ನು ಸುಂದರ ಪಕ್ಷಿಗಳಿಂದ ತುಂಬಿದ್ದಾನೆ. ಆಕಾಶವನ್ನು ಚಂಚಲವಾದ ಮೋಡಗಳಿಂದ ತುಂಬಿದ್ದಾನೆ. ರಸ್ತೆಗಳನ್ನು ನುಣ್ಣಗಾದ ಧೂಳಿನಿಂದ ಮುಚ್ಚಿದ್ದಾನೆ. ನಾನು ಕೋಟಿಪತಿಯಾದರೆ ನನಗೆ ಈ ಪೃಥ್ವಿಯ ಸೌಂದರ್ಯವನ್ನು, ಪಕ್ಷಿಗಳ ಇನಿದನಿಯನ್ನು, ಆಕಾಶದ ವರ್ಣವಿಲಾಸವನ್ನು, ರಸ್ತೆಗಳ ಮೆದು ಧೂಳನ್ನು ನೋಡುತ್ತ, ಆಲಿಸುತ್ತ, ಮೆಟ್ಟುತ್ತ ನಡೆದು ಆನಂದಿಸುವ ಸ್ವಾತಂತ್ರ್ಯ ಉಳಿಯುವುದಿಲ್ಲ. ಆಮೇಲೆ ನಾನಾಗಲಿ ನನ್ನ ಹೆಂಡತಿಯಾಗಲಿ ಮಕ್ಕಳಾಗಲಿ

ನೆಲ ಮುಟ್ಟಬಾರದು ಅಂತ ಸಮಾಜ ನಮ್ಮ ಮೇಲೆ ಅವ್ಯಕ್ತ ಒತ್ತಾಯ ತರುತ್ತದೆ. ನಾವು ಕಾರಿನಲ್ಲೇ—ಫಾರೀನ್ ಕಾರಿನಲ್ಲೇ—ಸರ್ರಂತ ಓಡಾಡ ಬೇಕಾಗುತ್ತೆ, ವಿಮಾನಗಳಲ್ಲೇ ಹಾರಾಡಬೇಕಾಗುತ್ತೆ. ನಮ್ಮ ಸುತ್ತಲ ನಿಸರ್ಗಸೌಂಧರ್ಯದ ಅನುಭೂತಿ ನಮಗೆ ಅಲಭ್ಯವಾಗುತ್ತೆ. ಕನ್ನಡ ನಾಡಿನ ಮರವಂತೆ ಬೀಚಿನ ಸೌಂದರ್ಯವನ್ನು ಕೈಬಿಟ್ಟು ಫ್ರಾನ್ಸಿನ ರಿವಿಯೇರಾಗಳಲ್ಲಿ ವಿಹರಿಸಬೇಕಾಗುತ್ತೆ. ನಮ್ಮ ಜೋಗವೋ ನೀಲಗಿರಿಯೋ ಬಿಟ್ಟು ನಾವು ಸ್ವಿಜರ್ಲೆಂಡಿಗೇ ಹೋಗಬೇಕಾಗುತ್ತೆ. ನಮ್ಮ ಮಕ್ಕಳನ್ನು ವಿದೇಶಗಳಲ್ಲಿ ಶಾಲೆಗೆ ಹಾಕಬೇಕಾಗುತ್ತೆ. ನಾವು ಜೀವಂತ ಇದ್ದ ಹಾಗೇ ನಮ್ಮ ಮಕ್ಕಳನ್ನು ಪರದೇಶಿ ಮಾಡಬೇಕಾಗುತ್ತೆ.

ಇಷ್ಟಕ್ಕೇ ಮುಗಿಯಲ್ಲ. ನಾವು ಡಾಕ್ಟರರ ಹತ್ತಿರ ಹೋದಾಗ ಅವರು, "ನೀವು ಓವ್ಹರ್‌ವೆಯ್ಟ್ ಆಗಿದ್ದೀರಿ. ನಿಮ್ಮ ಮಿಸೆಸ್ ಕೂಡ. ಕಾರಿನಲ್ಲಿ ತಿರುಗಾಡೋದು ಕಮ್ಮಿ ಮಾಡಿ ಸ್ವಲ್ಪ ವಾಕಿಂಗ್ ಮಾಡಿ!" ಅನ್ನುತ್ತಾರೆ. ಹೇಳೋಕೇನು ಹೇಳ್ತಾರೆ. ಆದರೆ ಅವರ ಮಾತು ಕೇಳಿ ನಾಳೆ ನಾನು ಮುಂಜಾನೆದ್ದು ವಾಕಿಂಗ್ ಹೊರಟೆನೋ, ಜನ ನಮ್ಮ ಮುಖವನ್ನೇ ತಿರುಗಿ ತಿರುಗಿ ನೋಡುತ್ತ ಹೋಗುತ್ತಾರೆ. ಪರಿಚಿತ ಸಮಾನಸ್ಕಂಧರು ಕಾರು ನಿಲ್ಲಿಸಿ, "ಏನಾಚಾರ್‍ರೆ, ಕಾರು ಕೆಟ್ಟಿದೆಯೆ?" ಅಂತಾಗಲಿ, "ಕಾರು ಮಾರಿದಿರಾ?" ಅಂತಾಗಲಿ, "ಏನು, ಪೆಟ್ರೋಲ್ ರೇಟು ಜಾಸ್ತಿ ಆಯಿತು ಅಂತ ರಸ್ತೇಪಾಲಾದಿರ್‍ಯಾ?" ಅಂತಾಗಲಿ ಕೇಳಿ ಉತ್ತರಕ್ಕೆ ಕಾಯದೆ ಮುಂದೆ ಹೋಗಿಬಿಡುತ್ತಾರೆ. ಬೆಳಗಾಗುವ್ರದರೊಳಗೆ ಆಚಾರ್‍ರು ಹಣಕಾಸಿನ ತೊಂದರೇಲಿದ್ದಾರೆ ಅಂತ, ಆಚಾರ್‍ರು ದಿವಾಳಿ ಆದರಂತೆ ಅಂತ ಗಾಳಿಸುದ್ದಿ ಹಬ್ಬುತ್ತೆ. ಅದು ಸುಳ್ಳು ಅಂತ ತೋರಿಸುವುದಕ್ಕೆ ನಾವು ಮತ್ತೊಂದು ಕ್ಯಾಡಿಲಾಕ್ಕೇ ತರಿಸಬೇಕಾಗುತ್ತೆ.

ಕೋಟಿಪತಿಗಳಿಗೆ ಯಾವಾಗಲೂ ಚೋರಭಯ ಜೋರು. ಕಳ್ಳರು ನನ್ನ ಮಕ್ಕಳನ್ನು ಅಪಹರಿಸಿ ರ್‍ಯಾನ್‌ಸಂ ಕೊಡು ಇಲ್ಲದಿದ್ದರೆ ಮಗೂನ ಕೊಲ್ಲುತ್ತೇವೆ ಅಂತಾರೆ. ಭಯಕ್ಕೆ ಒಳಗಾಗಿ ಯಾರಿಗಾದರೂ ಹಣ ಕೊಡೋ ಹೇಡಿತನ ಮಾಡುವುದಕ್ಕೆ ನಾನು ತಯಾರಿಲ್ಲ. ಅಮೇರಿಕದಲ್ಲಿ ನವಕೋಟಿ ನಾರಾಯಣ ಕಾರ್ನೆಜೀನ್ನೋ ಫೋರ್ಡನ್ನೋ ಕಾರಿನಲ್ಲಿ ಹೋಗುತಾ ಇದ್ದಾಗ ತಡೆದು

ನಿಲ್ಲಿಸಿ, ಒಬ್ಬ ಕಳ್ಳ, ಬಂದೂಕು ತೋರಿಸಿ, "ನಿನ್ನ ಕೈಲಿದ್ದದ್ದೆಲ್ಲ ಇತ್ತ ಕೊಡು, ದೇಶದ ಬಡವರನ್ನ ಸುಲಿಗೆ ಮಾಡಿ ಹಣ ಕೂಡಿಹಾಕಿದ್ದಿ" ಅಂದನಂತೆ. ಈತ ಹೆದರದೆ, "ಆಗಲಪ್ಪಾ, ಈ ದೇಶದಲ್ಲಿ ಎಷ್ಟು ಜನ ಇದ್ದಾರೆ?" ಅಂತ ಕಳ್ಳನ್ನ ಕೇಳಿದ. "ಹದಿನೈದು ಕೋಟಿ" ಅಂದ ಕಳ್ಳ. "ನನ್ನ ಹತ್ತಿರ ಎಷ್ಟು ಹಣ ಇದೆ?" ಅಂತ ಮತ್ತೆ ಇವನ ಪ್ರಶ್ನೆ. "ಹದಿನೈದು ಕೋಟಿ" ಅಂದ ಕಳ್ಳ. "ಹಾಗಾದರೆ ಒಬ್ಬರಿಗೆ ಎಷ್ಟು ಬಂತು?" ಅಂತ ಕಾರ್ನೆಜಿ. "ಒಂದು ಡಾಲರ್ !" ಅಂತ ಕಳ್ಳ ಗಣಿತಶಾಸ್ತ್ರದ ಅಪ್ರತಿಹತ ನಿಯಮಕ್ಕೆ ಒಳಪಟ್ಟು ಒಪ್ಪಿದ. "ಹಾಗಾದರೆ ಸುಲಿಗೆಯ ನಿನ್ನ ಪಾಲು ಒಂದು ಡಾಲರ್ ನೀನು ತಕೋ" ಅಂತ ಒಂದು ಡಾಲರ್ ಕೈಲಿಟ್ಟು ಭರ್ರನೆ ಕಾರು ಮುಂದೆ ಹೊಡೆದನಂತೆ. ಆದರೆ ಕಳ್ಳರು ಯಾವಾಗಲೂ ಇಷ್ಟು ರೀಜನೇಬಲ್ ಅಥವಾ ಪೆದ್ದು ಇರುತ್ತಾರೆ ಅಂತ ನಂಬುವುದಕ್ಕಾಗುವುದಿಲ್ಲ. "ನಾನೇ ಪಾಲು ಮಾಡಿಕೊಡತ್ತೇನೆ, ಎಲ್ಲಾ ಇಲ್ಲಿ ಕೊಡು" ಅಂತ ಹೇಳಬಹುದು. ಒಪ್ಪ ದಿದ್ದರೆ ಗುಂಡು ಹಾರಿಸಿಯೇ ಬಿಡಬಹುದು.

ಕೊನೆಯದಾಗಿ, ಲಕ್ಷಾಧೀಶ ಕೋಟ್ಯಧೀಶರಿಗೆ ಹ್ಯೂಮನ್ ರಿಲೇಶನ್ಸ್ ಎಲ್ಲಾ ಅಸ್ತವ್ಯಸ್ತ ಆಗಿಹೋಗುತ್ತೆ. ಯಾವುದೋ ಆಫೀಸಿನಲ್ಲಿ ಕ್ಲರ್ಕ್ ಆಗಿದ್ದ ನನ್ನ ಮಿತ್ರನಿಗೆ ಲಾಟ್ರೀಲಿ ಹತ್ತು ಲಕ್ಷ ಎದ್ದುಬಿಡ್ತು ಒಂದು ದಿನ. ಸುದ್ದಿ ಕಾಳ್ಗಿಚ್ಚಿನ ಹಾಗೆ ಹಬ್ಬಿತು. ಆದರೆ ಆತ ಬಹಳ ಪ್ರಿನ್ಸಿಪಲ್ಡ್ ಮನುಷ್ಯ. ಒಂದೇ ಪೆಟ್ಟಿಗೆ ಶ್ರೀಮಂತ ಆದೆ ಅಂತ ಕೆಲಸ ಬಿಡಬಾರದು, ಸ್ನೇಹಿತರನ್ನು ಉಳಿಸಿಕೋಬೇಕು, ಅಹಂಕಾರ ಬೇಡ—ಅಂತ ಮರುದಿನ ಹನ್ನೊಂದು ಗಂಟೆಗೆ ಯಥಾಪ್ರಕಾರ ಎಂದಿನ ಹಾಗೆ ಐದು ಮಿನಿಟು ತಡ ವಾಗಿಯೆ ಆಫೀಸಿಗೆ ಬಂದ. ಬಾಗಿಲು ಕಾಯುವವ ಎಂದೂ ಇವನ ಕಡೆ ಕಟಾಕ್ಷ ಬೀರದೆ ಇದ್ದವ ಈಪೊತ್ತು ದಿಗ್ಗನೆ ಎದ್ದು ಸ್ಮಾರ್ಟ್ ಆಗಿ ಸೆಲ್ಯೂಟ್ ಹೊಡೆದ. ಆಫೀಸಿನ ಒಳಗೆ ಕಾಲಿಟ್ಟು ತನ್ನ ಕುರ್ಚೀ ಕಡೆ ಕಾಲು ಹಾಕು ತ್ತಲೇ ಪಿಯೋನ್ ಬಂದು ಕುರ್ಚಿಯನ್ನು ಮುತುವರ್ಜಿಯಿಂದ ಒರೆಸಿದ. ಆದರೆ ಅವನ ಕ್ಲರ್ಕ್-ಮಿತ್ರರು ಯಾರೂ ಪಿಟ್ಟೆನ್ನಲಿಲ್ಲ. ಸ್ನೇಹಹೀನ ದೃಷ್ಟಿ ಯಿಂದ ಅವನನ್ನು ನೋಡಿ ಸುಮ್ಮಗಾದರು. ಸೆಕ್ಷನ್ ಹೆಡ್ ತಡಮಾಡಿ ಬಂದಾಗೆಲ್ಲ ಕರೆದು ಕೂಗಾಡ್ತಾ ಇದ್ದವ ಈಪೊತ್ತು ಯಾವುದೋ ಮಂತ್ರಕ್ಕೆ

ಗುರಿಯಾದವನ ಹಾಗೆ ಈತನನ್ನು ಕಾಣುತ್ತಲೇ ಎದ್ದು ನಿಂತು ಮಧುರ ಹಾಸದಿಂದ ಬರಮಾಡಿಕೊಂಡ. ಸಮಾನಸ್ಕಂಧ ಮಿತ್ರರ ಉಪೇಕ್ಷೆ, ಈವರೆಗೆ ತುಚ್ಛೀಕರಿಸುತ್ತಿದ್ದ ಮೇಲು ಕೆಳಗಿನವರ ಅತ್ಯಾದರ ಇವುಗಳಿಂದ ಒಪ್ಪೊತ್ತಿನೊಳಗೆ ಉಸಿರುಗಟ್ಟಿದಂತಾಗಿ ರಜಾ ಹಾಕಿ ಮನೆಗೆ ಬಂದ. ಮನೆಯಲ್ಲಿಯೂ ಸುಖ ಉಳಿಯಲಿಲ್ಲ. ಅವನ ಅನುಕೂಲವಂತ ಸಂಬಂಧಿಕರಿಗೆ ಯಾವುದೋ ಮಾಯಕದಿಂದ ಈತ ತಮ್ಮ ಬಳಗದವ ಅಂತ ಈವೊತ್ತು ನೆನಪಾಗಿ ಅವರು ಕಾರುಗಳಲ್ಲಿ ಬಂದು ಅವನ ಯೋಗಕ್ಷೇಮ ವಿಚಾರಿಸತೊಡಗಿದರು. ಹಾಗೇ ಅತಿ ಬಡ ಬಂಧುಗಳು ಬಂದು ವಿನಯಪೂರ್ವಕವಾಗಿ ಹಾಜರಿ ಕೊಟ್ಟು ಹೋದರು. ಆದರೆ ಮಿತ್ರರು ಯಾರೂ ಬರಲಿಲ್ಲ. ಬಡಪಾಯಿ ಪ್ರಾಮಾಣಿಕ ಜಂತು. ಅವನಿಗೆ ಈ ಅಸ್ತವ್ಯಸ್ತ ಸಂಬಂಧವನ್ನು ಸಹಿಸುವುದಾಗದೆ ರಾಜೀನಾಮೆ ಕೊಟ್ಟು ಊರೇ ಬಿಟ್ಟ, ಪಾಪ.

ಇಷ್ಟೆಲ್ಲಾ ಹೇಳಿದಮೇಲೆ ನಾನು ನವಕೋಟಿ ನಾರಾಯಣ ಆಗದೆ ಇದ್ದದ್ದು ಜಾಣತನ ಅಂತ ನೀವು ಒಪ್ಪದೇ ಇರಲಿಕ್ಕಿಲ್ಲ ಅಂತ ಆಶಿಸಲೆ?

## ನರಿ, ಹಾವು ಮತ್ತು ಹೇಡಿ

ನಿಮ್ಮ ಮೇಲಧಿಕಾರಿ ನಿಮ್ಮನ್ನು "ನರಿ, ಹಾವು ಮತ್ತು ಹೇಡಿ" ಎಂದು ಕರೆಯಬಲ್ಲನೆ?

"ಆಹಾ! ಕರೆಯಬಲ್ಲ! ಅವನನ್ನು ತಡೆಯುವವರಾರು?" ಎಂದು, ನೀವು ಅನುಭವಶಾಲಿ ಕಿಂಕರರಾಗಿದ್ದರೆ ಹೇಳುವಿರಿ. ಅಷ್ಟೇ ಏಕೆ? ಅವನು ಅದಕ್ಕಿಂತಲೂ ಸುಂದರವಾದ ಬಿರುದುಗಳನ್ನು ನಿಮಗೆ ಕೊಡಬಲ್ಲನೆಂದೂ ನಿಮಗೆ ಗೊತ್ತಿದೆ.

ಆದರೆ ದಿಲ್ಲಿಯ ಒಂದು ಶಾಲೆಯ ಅಧ್ಯಾಪಕನೊಬ್ಬನು ಮೇಲಧಿಕಾರಿಯ ಈ ಮೂಲಭೂತ ಹಕ್ಕಿನ ಬಗ್ಗೆ ಖಾತ್ರಿ ಮಾಡಿಕೊಳ್ಳಬಯಸಿದನು. ತನಗೆ ಮೇಲಿನ ಮೂರು ಅಮೂಲ್ಯ ಬಿರುದುಗಳನ್ನು, ಕೆಲ ಗ್ರಂಥಕರ್ತರು ಕೆಲ ಹಿರಿಯರಿಗೆ ಕೆಲವೇಳೆ ಅರ್ಪಿಸುವಂತೆ, ಅನುಮತಿಯಿಲ್ಲದೆ ಅರ್ಪಿಸುವ ಹಕ್ಕು

ತನ್ನ ಮೇಲಧಿಕಾರಿಗೆ ಇತ್ತೋ ಇಲ್ಲವೋ ಎಂದು ಕೇಳಲು ಅವನು ನ್ಯಾಯ ಸ್ಥಾನದ ಕಟ್ಟೆ ಹತ್ತಿದನು.

ಈ ಪ್ರಶ್ನೆಯ ತೀರ್ಪು ಎಲ್ಲ ಕಿಂಕರರಿಗೂ—ಯಜಮಾನರಿಗಲ್ಲದಿದ್ದರೆ—ಅತ್ಯಂತ ಮಹತ್ವದ್ದಾಗಬಹುದಿತ್ತು. ಇಂಥ ತೀರ್ಪು ಯಜಮಾನರಿಗೆ ಪ್ರತಿಕೂಲವಾಗಿ ಬಂದಿದ್ದರೂ ಅದರ ಫಲವಾಗಿ ನಿಮ್ಮ ಯಜಮಾನರುಗಳು ನಿಮ್ಮನ್ನು ನಿಮ್ಮ ತಂದೆತಾಯಿಗಳು ಇಡದೇ ಇದ್ದ ತಾಜಾತಾಜಾ ಹೆಸರುಗಳಿಂದ ಕರೆಯುವುದು ನಿಂತುಹೋಗುತ್ತಿತ್ತು ಎಂದೇನಲ್ಲ. ನ್ಯಾಯಾಧೀಶರು ಏನೇ ತೀರ್ಪು ನೀಡಿದ್ದರೂ ಅವನು ನಿಮ್ಮನ್ನು ತನಗಿಷ್ಟವಾದ ಜಂತುಗಳ ಹೆಸರುಗಳಿಂದ ಕರೆಯುತ್ತಲೇ ಹೋಗುತ್ತಿದ್ದನು. ಆದರೆ ಅವನಿಗೆ ಹಾಗೆ ಕರೆಯಲು ಹಕ್ಕು ಇಲ್ಲವೆಂದು ತೀರ್ಮಾನವಾಗಿದ್ದರೆ, ನಿಮಗೆ ನಿಮ್ಮ ಯಜಮಾನನನ್ನು ಮತ್ತೊಮ್ಮೆ ಕ್ಷಮಿಸಿದ ಸಮಾಧಾನವಾದರೂ ಸಿಗಬಹುದಾಗಿತ್ತು. "ನಾನು ಅವನನ್ನು ಕೋರ್ಟಿಗೆಳೆಯಬಹುದಾಗಿತ್ತು, ಆದರೆ ಪಾಪ, ಸಾಯಲಿ! ಅಂತ ಬಿಟ್ಟೆ!" ಎಂದು ನೀವು (ನಿಮ್ಮಷ್ಟಕ್ಕೆ) ಅಂದುಕೊಳ್ಳಬಹುದಾಗಿತ್ತು. ಆದರೆ ಅನ್ಯಾಯವಾಗಿ ಈ ಪ್ರಶ್ನೆ ತೀರ್ಮಾನವಾಗದೆ ಉಳಿದಿದೆ, ಮತ್ತು ಆ ಅನ್ಯಾಯ ನ್ಯಾಯಾಲಯದಿಂದಾಗಲಿ, ಆರೋಪಿಯಿಂದಾಗಲಿ ಆಗದೆ, ನ್ಯಾಯ ಕೇಳಲು ಹೋದ ಉಪಾಧ್ಯಾಯನಿಂದಲೇ ಆಯಿತು. ಮಾನಹಾನಿಯ ಘಟನೆ ನಡೆದು ನಾಲ್ಕು ವರ್ಷಗಳನಂತರ ಅವನು ವ್ಯಾಜ್ಯವನ್ನು ತಂದದ್ದರಿಂದ ಅದು ಗಡುವು ಮೀರಿದ ದೂರೆಂದು ಮ್ಯಾಜಿಸ್ಟ್ರೇಟರು ಅದನ್ನು ಕಿತ್ತು ಹಾಕಿ ಕೈತೊಳೆದುಕೊಂಡು, ನಿಟ್ಟುಸಿರು ಬಿಟ್ಟು ಸುಮ್ಮನಾದರು. ಅದೇ ಈಗ! ಕಿಂಕರರಿಗೆ ತಮಗೆ ಮಾನಹಾನಿಯಾಗಿದೆಯೆಂದು ಗೊತ್ತಾಗುವುದಕ್ಕೇ ನಾಲ್ಕು ವರ್ಷ ಹಿಡಿಯುತ್ತದೆ ಅಷ್ಟು ಜಡ್ಡುಕಟ್ಟಿಹೋಗಿರುತ್ತದೆ ಅವರ ಚರ್ಮ.

ಖಾಸಗಿಯಾಗಿ, ನನಗೆ ಈ ಪ್ರಿನ್ಸಿಪಾಲನು ತನ್ನ ಸಹಕಾರಿಗಿಟ್ಟ ಹೆಸರುಗಳು ಸ್ವಲ್ಪ ಅಸಂಬದ್ಧವಾಗಿ ಕಾಣಿಸುತ್ತವೆ. ಉದಾಹರಣೆಗೆ, ಒಬ್ಬನು ಏಕ ಕಾಲದಲ್ಲಿ ಹಾವೂ ಹೇಡಿಯೂ ಹೇಗೆ ಆಗಬಲ್ಲ? ಅಥವಾ ನರಿಯೂ ಹಾವೂ ಹೇಗೆ ಆಗಬಲ್ಲ? ಆದರೂ ಈ ನಸೆಯಾದ ಪ್ರಶ್ನೆಯನ್ನು ತೀರ್ಮಾನಿಸುವುದಕ್ಕೆ ಬೇಕಾದ ಮಾನಸಿಕ ಉದ್ಯಮವನ್ನು ಮಾಡುವುದಕ್ಕಿಂತ ರಾಜೀ

ನಾಮ ಕೊಡುವುದೇ ಲೇಸೆಂದು ನಾನು ಬಗೆಯುತ್ತಿದ್ದೆ. ನಿಮ್ಮನ್ನು ನರಿ, ಹಾವು ಮತ್ತು ಹೇಡಿಯೆಂದು ಕರೆಯುವುದರಿಂದ ನಿಮ್ಮ ಮಾನದ ಹಾನಿಯಾಗುತ್ತಿತ್ತೋ ಮಾನ ವೃದ್ಧಿಯಾಗುತ್ತಿತ್ತೋ ಎಂದು ಎದೆತಟ್ಟಿ ಹೇಳುವುದಕ್ಕೆ ನನಗೆ ಧೈರ್ಯ ಬರುತ್ತಿರಲಿಲ್ಲ.

ಸಮಸ್ಯೆಯ ಜಟಿಲತನವನ್ನು ನೋಡಿ! ನಿಮ್ಮನ್ನು ಸಿಂಹ ಎಂದು ಕರೆಯುವುದು ಮಾನಹಾನಿಯಲ್ಲವಿದ್ದರೆ ನರಿಯೆಂದು ಕರೆಯುವುದು ಮಾನಹಾನಿಯಾಕಾಗಬೇಕು? ಸಿಂಹಕ್ಕಿಂತ ನರಿಯೇ ಬುದ್ಧಿಶಾಲಿಯೆಂದು ಪಂಚತಂತ್ರ ನಮಗೆ ಹೇಳುವುದಿಲ್ಲವೆ? ಕಾಲಿಗೆ ನಟ್ಟ ಮುಳ್ಳು ತೆಗೆಯುವುದಕ್ಕೆ ಕೊಡಲಿ ತರುವುದೇ ಶೌರ್ಯವೆಂದು ತಿಳಿದುಕೊಂಡಿದ್ದ ಹಿಂದಿನ ಕಾಲದಲ್ಲಿ ನರಿ ತುಸು ನಿಂದ್ಯ ಪ್ರಾಣಿಯಾಗಿ ಕಾಣಿಸಿರಬಹುದು. ಆದರೆ ಮನುಷ್ಯ ಮುಳ್ಳನ್ನು ಮುಳ್ಳಿನಿಂದ ತೆಗೆಯಲು ಕಲಿತಮೇಲೆ, ಅವನು ಸಿಂಹಮಾರ್ಗವನ್ನು ಬಿಟ್ಟು ಜಂಬುಕ ಮಾರ್ಗ ಹಿಡಿಯುವುದೇ ಸೂಕ್ತವೆಂದು ಒಪ್ಪಿದ್ದಾನೆ. ಆಂಧ್ರ ಕೇಸರಿಗೆ—ಕಾಶ್ಮೀರ ಕೇಸರಿಯ ಸಂಗತಿ ಈಗ ಬೇಡ—ಆಂಧ್ರ ಜಂಬುಕಗಳ ಕೈಲಿ ಬಂದ ಪೇಚನ್ನು ನೋಡಿವರೆ, ನರಿಗಳು ಅಭಿಮಾನ ತಾಳಲು ಬೇಕಾದಷ್ಟು ನ್ಯಾಯವಿದೆ.

ಮತ್ತೆ ಹಾವು? ಹಾವಿಗೇನಾಗಿದೆ ಅದರ ರಕ್ತ ತಂಪಾಗಿರುವುದರ ಹೊರತು? ವಿಷ್ಣುವಿಗೆ, ಶಿವನಿಗೆ, ಗಣೇಶನಿಗೆ ಅದು ಮೆಚ್ಚಿಕೆಯಾಗಿರುವಾಗ ಅದನ್ನು ನಿಂದಿಸಲಿಕ್ಕೆ ನೀವಾರು ನಾನಾರು? ಕೆಣಕಿದರೆ ಎಂಥಾ ಹಾವಾದರೂ ನಿಮ್ಮನ್ನು ಹೆಡೆಯೆತ್ತಿ ಎದುರಿಸುವುದಿಲ್ಲವೆ?

ಮತ್ತೆ ಪ್ರಿನ್ಸಿಪಾಲನ ವಕೀಲರು ಹೀಗೂ ಒಂದು ವಾದ ಮುಂದೊಡ್ಡಬಹುದಿತ್ತು. ನರಿ, ಹಾವು, ಹೇಡಿ ಎಂದು ಒಂದೇ ಉಸಿರಲ್ಲಿ ಹೇಳಲಾಗಿದೆ. ಹಾವು ಧೈರ್ಯಶಾಲಿ ಮತ್ತು ಶೂರ. ಆದ್ದರಿಂದ, ಹೇಡಿಯೆಂದು ಕರೆದ ಅವಮಾನ ಹಾವು ಎಂದು ಕರೆದದ್ದರ ಸನ್ಮಾನದಿಂದ ವಜಾ ಆಗಿಹೋಯಿತು. ಆಮೇಲೆ ಉಳಿದದ್ದು ನರಿ. ಅದು ಹೇಡಿಯೂ ಅಲ್ಲ, ಶೂರನೂ ಅಲ್ಲ; ಬರೇ ಬುದ್ಧಿವಂತ. ಕಾಲೇಜು ಅಧ್ಯಾಪಕನಾದವನಿಗೆ ಬುದ್ಧಿವಂತ ಅನ್ನುವುದು ಒಂದು ಮಾನವೇ ಹೊರತು ಮಾನಹಾನಿಯಲ್ಲ.

ಇನ್ನು ಹೇಡಿಯೊ? ಇದು ಮಾನಹಾನಿಕರ ಗುಣವಾಚಕವೆಂದು ನಿಮಗೆ

ತೋರಬಹುದು. ನಿಮ್ಮ ಅಭಿಪ್ರಾಯದ ಹಕ್ಕು ನಿಮಗಿದೆ; ನನ್ನದೂ ನನಗಿದೆ. ನನಗೆ ಹೇಡಿ ಎನ್ನುವುದು ಮಾನಹಾನಿಕರವಾಗಿ ಕಾಣುವುದಿಲ್ಲ. ಬರ್ನಾರ್ಡ್ ಷಾ, "ನಾನು ಹುಟ್ಟಾ ಹೇಡಿ, ಆದ್ದರಿಂದ ನನಗೆ ಯುದ್ಧ ಸೇರುವುದಿಲ್ಲ" ಎನ್ನುತ್ತಾನೆ. ಬರ್ನಾರ್ಡ್ ಷಾ ಸಾಲಿನಲ್ಲಿ ಸೇರುವುದು ಯಾರಿಗೆ ಅಭಿಮಾನಾಸ್ಪದವಾಗದು?

ನೀವು (ಎರಡು ಕಾಲಿನ) ನರಿಯಾಗಿದ್ದರೆ, ಅಥವಾ—ಕಾಲೇ ಇಲ್ಲದ ಹಾವಾಗಿದ್ದರೆ, ಅಥವಾ ಬೆನ್ನೆಲುಬಿಲ್ಲದ ಹೇಡಿಯಾಗಿದ್ದರೆ ಯಾರು ನಿಮ್ಮ ಪಕ್ಷದಲ್ಲಿ ಇಲ್ಲದಿದ್ದರೂ ಕಾಲ ನಿಮ್ಮ ಪಕ್ಷದಲ್ಲಿದೆ. (೧೯೫೬)

## ರಾತ್ರಿ ಸಮಸ್ಯೆ

ಹೆಂಗಸರನ್ನು ಮೆಚ್ಚಿಸಬೇಕೆಂಬವರಿಗೆ ಬರುವ ಕಷ್ಟವೆಂದರೆ, ಅವರಿಗೆ (ಹೆಂಗಸರಿಗೆ) ಯಾವಾಗ ಯಾವುದು ಮೆಚ್ಚಿಕೆಯಾಗುತ್ತದೆಂದು ಹೇಳಲಾಗುವುದಿಲ್ಲ. ಹಗಲಿಗೆ ಅವರಿಗೆ ಯಾವುದು ಪ್ರಿಯವಾಗುತ್ತದೋ ಅದು ರಾತ್ರಿಯಲ್ಲಿ ಹೇಯವಾಗಿ ಕಾಣಿಸಬಹುದು. ಮೊನ್ನೆ ನಮ್ಮ ಪಾರ್ಲಿಮೆಂಟಿನಲ್ಲಿ ಇದೇ ಪ್ರಶ್ನೆ ಬಂದಿತ್ತು. ಮಹಿಳಾ ಸದಸ್ಯರೊಬ್ಬರು, ವಿಮಾನಗಳಲ್ಲಿ ರಾತ್ರಿ ಕಾಲದಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಬೇಕೆಂದು ಬೇಡಿಕೆ ಒಡ್ಡಿದರು. ರಾತ್ರಿಕಾಲದಲ್ಲಿ ಪರಪುರುಷರೊಡನೆ ಒಂದೇ ಆಸನದಲ್ಲಿ ಕೂರುವುದಕ್ಕೆ ಅವರಿಗೆ ಒಪ್ಪಿಗೆ ಇಲ್ಲವಂತೆ. ಪುರುಷವಾಲಿನಲ್ಲಿ ಅವರು, ಹಗಲು ಹೊತ್ತಿನಲ್ಲಿ (ಪರ)ಪುರುಷರ ಸಾಮೀಪ್ಯ ತಮಗೆ ಇಷ್ಟವೇ ಎಂದೊಪ್ಪಿದರು. ರಾತ್ರಿ ಬಂದೊಡನೆ ಪರಪುರುಷಪ್ರಾಣಿ ಅವರಿಗೆ ಯಾಕೆ ಅನಿಷ್ಟ, ಅಸ್ಪೃಶ್ಯನಾಗುತ್ತಾನೆ ಎಂದು ಅವರು ಹೇಳಲಿಲ್ಲ. ಆದರೆ ಒಂದು ವಿಷಯ ಮಾತ್ರ ಅವರಿಗೆ ಖಂಡಿತವಾಗಿ ಗೊತ್ತಿದೆ. ರಾತ್ರಿಕಾಲದಲ್ಲಿ ಸ್ತ್ರೀಪ್ರವಾಸಿಗೆ, ವಿಮಾನದಲ್ಲಿ, ಒಬ್ಬ ಗಂಡಸಿಗಿಂತ ಒಂದು ಲಗೇಜು ಗಂಟೇ ಹತ್ತಿರ ಇರುವುದು ಸುಖವೆನಿಸುತ್ತದೆ.

ಲಾಂಗೂಲಾಚಾರ್ಯರು ಈ ಬಗ್ಗೆ ಬಹಳ ವಿಚಾರಮಾಡಿದರು. "ದೇವ

ದತ್ತೋ ದಿವಾ ನ ಭುಂಕ್ತೇ"—ದೇವದತ್ತ ಹಗಲಲ್ಲಿ ಉಣ್ಣುವುದಿಲ್ಲ ಎಂಬಂತೆ ಏನಾದರೂ ಇದ್ದೀತೆ? ಅಥವಾ ಕೆಲ ಗಂಡಸರು ರಾತ್ರಿಯಲ್ಲಿ ತೂಕಡಿಸುತ್ತ ಬಾಯಿ ತೆರೆದು ಗೊರಕೆ ಹೊಡೆಯುವುದಕ್ಕೆ ಅವರ ಆಕ್ಷೇಪ ಇರಬಹುದೆ? ಇರಲಿಕ್ಕಿಲ್ಲ. ಗೊರಕೆ ಅವರಿಗೆ ಸೇರುವುದಿಲ್ಲವೆಂದಾದರೆ ವಿಮಾನದಲ್ಲಿ ಪರ ಪುರುಷನ ಗೊರಕೆಯೊಂದೇ ಅಸಹ್ಯವೆನಿಸಬೇಕೆ? ಮನೆಯಲ್ಲಿ ಸ್ವಪುರುಷನ ಗೊರಕೆಯೂ ಅಷ್ಟೇ ಹೇಸಿಕೆ ಅನಿಸಬೇಕಲ್ಲವೆ? ಅಥವಾ ಮನೆಯಲ್ಲಿ ಸ್ವಪುರುಷರ ಗೊರಕೆಯಿಂದ ತಪ್ಪಿಸಿಕೊಳ್ಳಲೆಂದೇ ಕೆಲ ಮಹಿಳೆಯರು ರಾತ್ರಿಯ ವಿಮಾನ ಹಿಡಿಯುತ್ತಾರೆಯೆ? ಮತ್ತು ರಾತ್ರಿ ವಿಮಾನ ಹತ್ತಿದರೂ ಮಗ್ಗು ಲಲ್ಲಿ ಗೊರಕನಾಥನ ಪೀಡೆ ತಪ್ಪಲಿಲ್ಲವೆಂದು ಅವರು ರೊಚ್ಚಿಗೆದ್ದಿರಬಹುದೆ? ಇಲ್ಲದಿದ್ದರೆ ಪರಪುರುಷನ ಮಗ್ಗುಲಲ್ಲಿರುವಾಗ ತಮಗೆ (ಮಹಿಳಾ ನಿಶಾಚರ ರಿಗೆ) ಗೊರಕೆ ಸ್ವಾತಂತ್ರ್ಯವನ್ನು ಬಜಾಯಿಸಲು ಸಂಕೋಚವಾಗುವುದರಿಂದ ರಾತ್ರಿ ಮಾತ್ರ ಪರಪುರುಷರು ಹತ್ತಿರ ಬೇಡವೆಂದು ಅವರ ಅಂತರ್ಯವೋ? ಇಲ್ಲವೇ ಪರಪುರುಷರು ಹಗಲು ಮಾತ್ರ ವಿಶ್ವಸನೀಯರಾಗಿದ್ದು ರಾತ್ರಿ ಅವಿಶ್ವಸನೀಯರಾಗುವರೆ? ಅಥವಾ ಮಹಿಳೆಯರಿಗೇ ರಾತ್ರಿ ಆತ್ಮವಿಶ್ವಾಸ ಕಡಿಮೆಯಾಗುತ್ತಿರಬಹುದೆ? ಈ ರಹಸ್ಯ ಲಾಂಗೂಲಾಚಾರ್ಯರಂಥ ಭೋಳೇ ಮನಸ್ಸಿನ ಹುಲುಪುರುಷರಿಗೆ ಬಿಡಿಸಬರುವಂಥಾದ್ದಲ್ಲ. ಪುರುಷರ ಮೆಚ್ಚಿಕೆ ರೋಸಿಕೆಗಳು ಹೆಚ್ಚು ಸರಳವಾದವುಗಳು. ಅವರು ಪರಸ್ತ್ರೀಯರನ್ನು ಮೆಚ್ಚುವುದಾದರೆ ಹಗಲೂ ರಾತ್ರಿಯೂ ಸಮಾನವಾಗಿಯೇ ಮೆಚ್ಚುತ್ತಾರೆ. ಮೆಚ್ಚದಿದ್ದರೆ ಹಗಲೂ ಮೆಚ್ಚುವುದಿಲ್ಲ ರಾತ್ರಿಯೂ ಮೆಚ್ಚುವುದಿಲ್ಲ.

(೧೯೫೬)

## ಕವಿಶೌರ್ಯ ಪ್ರಕರಣಂ

ಇತರರು ಏನೇ ಹೇಳಲಿ ಹೇಳದಿರಲಿ, ಕವಿಗಳು ತಮ್ಮ ಜಾತಿಯ ಮೇಲೆ ಬೇಕು ಬೇಕಾದ ಕಿರೀಟಗಳನ್ನು ಏರಿಸಿಕೊಳ್ಳುವುದರಲ್ಲಿ ಎಂದೂ ಹಿಂದುಳಿದವರಲ್ಲ. ನೇಮಿಚಂದ್ರನಿಗೆ ಕವಿಗಳು "ಅಘಟಿತಘಟನಾ ನೂತನ ಬ್ರಹ್ಮರಲ್ತೆ?" ಶೆಲ್ಲಿಗೆ ಕವಿಗಳು "ಪ್ರಪಂಚದ ಅನಧಿಕೃತ ಶಾಸನಕರ್ತರು." ಕೀಟ್ಸನಿಗೆ

"ಸ್ವರ್ಗದಲ್ಲೊಂದು ಭೂಮಿಯಲ್ಲೊಂದು" ಹೀಗೆ ದುಪ್ಪಟ್ಟು ಆತ್ಮವುಳ್ಳ ವಿಚಿತ್ರ ಜಂತುಗಳೇ ಕವಿಗಳು. ಹಳೇ ಲ್ಯಾಟಿನ್ ಗಾದೆಯಂತೆ "ಕವಿಗಳು ಹುಟ್ಟುತ್ತಾರೆ ಹೊರತು ಆಗುವುದಿಲ್ಲ"—ಭಾರತದ ಬ್ರಾಹ್ಮಣರಿಗಿಂತಲೂ ಬಿಗಿಬಾಗಿಲ ಜಾತಿ! (ಅಥವಾ ಕವಿತ್ವ ಜನ್ಮಕ್ಕೆ ಅಂಟಿಕೊಂಡು ಬಾರದಿದ್ದರೆ ಯಾವನೂ ಸ್ವೇಚ್ಛೆಯಿಂದ ಕವಿಯಾಗುವಷ್ಟು ಹೆಡ್ಡನಾಗಲಾರ ಎಂದೊ?) ನಿಮಗಾರಿಗೂ ಕವಿಯ ಕೃತಿಗಳನ್ನು ಒರೆಗೆ ಹಚ್ಚಿ ನೋಡುವ ಅಧಿಕಾರವಿಲ್ಲ. "ಫಣಿಪತಿಯ ಫಣಾರತ್ನಮುಮಂ ರನ್ನನ ಕೃತಿರತ್ನಮುಮಂ, ಪೇಳ್, ಪರೀಕ್ಷಿಪಂಗೆ ಎಂಟೆರ್ದೆಯೆ?" ಎಂದು ರನ್ನ ನಿಮ್ಮನ್ನು ಹೆದರಿಸುತ್ತಾನೆ. ಬ್ರಾಹ್ಮಣರಲ್ಲಿ ವೈದಿಕ-ಗೃಹಸ್ಥ, ಲಿಂಗವಂತರಲ್ಲಿ ಅಯ್ಯ-ಅಪ್ಪ ಭೇದವಿರುವಂತೆ ಕವಿಗಳಲ್ಲಿಯೂ ಒಳಪಂಗಡಗಳಿವೆ: "ವರಕವಿಗಳ ಮುಂದೆ ನರಕವಿಗಳ ವಿದ್ಯೆ ತೋರಬಾರದು" ಎಂದು ಕನಕದಾಸ ವರಕವಿಗಳೆಂಬ ಬ್ರಹ್ಮರ್ಷಿಗಳ ಪದವಿಗೆ ನೀವು ಏರುವುದಕ್ಕೆ ಪ್ರತಿಬಂಧ ಹೇರುತ್ತಾನೆ. ನಮ್ಮ ಕಾಲದಲ್ಲಿ ಒಬ್ಬರೇ ವರಕವಿಗಳಿದ್ದಾರೆ—ಉಳಿದವರೆಲ್ಲ ನರಕವಿಗಳು—ಅಥವಾ ನರಸತ್ತ ಕವಿಗಳು ಇದ್ದಾರೆ. "ಅರಸುಗಳ ಅಮೃತಶಿಲೆಯಲಿ ಕಡೆದ ಮೂರ್ತಿಗಳೊ, ಹೊನ್ನ ರೇಕುಗಳ ಹೊಚ್ಚಿದ ಸ್ಮಾರಕಂಗಳೋ, ಕವಿಯ ಕಾವ್ಯದ ಸತ್ವದಂತೆ ಶಾಶ್ವತವಲ್ಲ" ಎಂದು ಶೇಕ್‌ಸ್ಪಿಯರ್ ಕೊಚ್ಚುತ್ತಾನೆ. ಇಷ್ಟೆಲ್ಲ ಹೆಗ್ಗಳಿಕೆ ಹೇಳಿಕೊಂಡರೂ ಈ ಸ್ವ-ಭಟ್ಟಂಗಿಗಳಲ್ಲಿ ಯಾರೂ ಕಾವ್ಯ ಬರೆಯುವವನು ಶೂರ ಎಂಬ ಪೌರುಷ ಕೊಚ್ಚಿಕೊಂಡಿಲ್ಲ. ಅಮೆರಿಕನ್ ಕವಿಯೊಬ್ಬನು ಈಗ ಆ ಹೆಗ್ಗಳಿಕೆಗೂ ಕೈಯೊಡ್ಡಿದ್ದಾನೆ.

ಪುಲಿಟ್ಸರ್ ಬಹುಮಾನ ಪಡೆದ ಕವಿ ರಾಬರ್ಟ್ ಫ್ರಾಸ್ಟ್. (ಕವಿಯಾದವನಿಗೆ ಫ್ರಾಸ್ಟ್ ಎಂಬುದು ತುಸು ವಿಪರೀತ ಹೆಸರಲ್ಲವೆ? ಫ್ರಾಸ್ಟ್ ಅಂದರೆ ಹಿಮ. ಆದರೆ ಕವಿಗಳ ಬುದ್ಧಿ ಕೊತಕೊತ ಕುದಿಯುವ ಕಾವಲಿಯೆಂದು ಶೇಕ್‌ಸ್ಪಿಯರನಂಥವರ ಸಾಕ್ಷ್ಯ ನಮಗಿದೆ. ಫ್ರಾಸ್ಟ್‌ಗಿಂತ ಫಾಸ್ಟ್ ಅನ್ವರ್ಥಕವಾದೀತೆಂದು ನನ್ನ ಭಾವನೆ. ಫಾಸ್ಟ್ (ಉಪವಾಸ) ಮಾಡಬಲ್ಲವನೇ ಕವಿಯಾಗಬೇಕು.) "ತರುಣರು ತಮ್ಮ ಶೌರ್ಯಪ್ರದರ್ಶನಕ್ಕೆ ಯಾಕೆ ಕವಿತೆ ಬರೆಯತೊಡಗಬಾರದು?" ಎಂದು ಫ್ರಾಸ್ಟ್ ಕೇಳುತ್ತಾನೆ. "ಅರಸುಗಳಿಗಿದು ವೀರ"ಎಂದು ಕವಿತೆಯನ್ನು ಶೌರ್ಯಕ್ಕೆ ಪೋಷಕವಾಗಿ ಹೇಳಿದ ಕವಿಗಳುಂಟು.

ಹಿಂದಿನ ಕಾಲದಲ್ಲಿ ಯುದ್ಧರಂಗದಲ್ಲಿ ಯೋಧರ ಉತ್ಸಾಹಕ್ಕೆ ಕಿಡಿ ಹಚ್ಚಲು ಕವಿಗಳೂ ಹೋಗುತ್ತಿದ್ದರಂತೆ. ಪಂಪನಂಥ ಕೆಲವರು ಒಂದು ಕೈಲಿ ಖಡ್ಗ ಇನ್ನೊಂದರಲ್ಲಿ ಕಂಟವ ಹಿಡಿದದ್ದೂ ಇರಬಹುದು. ಆದರೆ ಕಾವ್ಯಲೇಖನವೇ ಒಂದು ಶೌರ್ಯ ಎಂದವರಲ್ಲಿ ಫ್ರಾಸ್ಟನೇ ಮೊದಲಿಗ. ಇದರ ರಹಸ್ಯವೇನಿರ ಬೇಕೆಂದು ಧೇನಿಸುತ್ತಿರಲು ಲಾಂಗೂಲಾಚಾರ್ಯರಿಗೆ ಒಮ್ಮೆಲೇ ಹೊಳೆಯಿತು —ಕವಿಗಳ ಎಲ್ಲ ಹೆಗ್ಗಳಿಕೆಗಳಲ್ಲಿ ಇದೇ ಮೊತ್ತಮೊದಲನೇ ಸತ್ಯವಾಕ್ಯ ಅಂತ. ಕವಿತೆ ಬರೆಯುವ ವೃತ್ತಿ ಕೈಕೊಳ್ಳುವವನಿಗೆ ಇಂದಿನ ದಿನದಲ್ಲಿ ಅಪಾರ ಧೈರ್ಯ ಬೇಕಾಗುತ್ತದಲ್ಲವೇ? ಕವಿಗಳು ಕಬ್ಬಿಣದಂಗಡಿಯೊಳಗಿನ ನೊಣಗಳಷ್ಟೇ ಶ್ರೀಮಂತರಾಗಿರುತ್ತಾರೆಂದೂ ಶಿವರಾಮ ಕಾರಂತರಂಥ ಸಾಹಿತಿಗಳೇ ಸಂಪಾ ದಕರಾಗಿದ್ದಾಗ ಲೇಖನದ ಕೊನೆಯಲ್ಲಿ ಉಳಿದ ಸ್ಥಳಕ್ಕೆ ಜಾಹೀರಾತು ಇಲ್ಲ ದಿದ್ದರೆ ಅಲ್ಲಿ ಕವಿತೆ ಹಾಕುತ್ತಿದ್ದರೆಂದೂ ಯಾರಿಗೆ ಗೊತ್ತಿಲ್ಲ? ಪತ್ರಿಕಾ ಕಚೇರಿ ಗಳಿಗೆ ಕವಿತೆಗಳನ್ನು ಕಳಿಸುವ ಎಷ್ಟೋ ನವಕರ್ಣರು ಅವುಗಳನ್ನು ಪ್ರಕಟಿಸಲು ಎಷ್ಟು ಛಾರ್ಜು ಬೀಳುತ್ತದೆಂದು ಕೇಳುತ್ತಿರುತ್ತಾರೆ. ಆದರೆ ಸಂಪಾದಕರು, ಸಖೇದ ನಿರಾಶಾಭಾವದಿಂದ ಹೇಳುತ್ತಾರೆ, ಪತ್ರಿಕೆಯ ಜಾಹೀರಾತು ದರಗಳು ಕವಿಗಳಿಗೆ ನಿಲುಕಲಾರದಷ್ಟಿವೆಯಾದ್ದರಿಂದ ಈ ಬಗ್ಗೆ ಏನೂ ಮಾಡುವ ಸ್ಥಿತಿ ಯಲ್ಲಿ ತಾವು ಇಲ್ಲ—ಎಂದು.

ಹೀಗೆ ಭಾರತಮಾತೆಯ ವೀರಪುತ್ರರೆಂದು ತೋರಿಸಿಕೊಳ್ಳಲು ಯುವಕ ರಿಗೆ ಇದೊಂದು ಅತ್ಯುತ್ತಮ ಸುಸಂಧಿಯೆಂದು ಶಿಫಾರಸು ಮಾಡಬಹುದಾಗಿದೆ. ಭಾರತವೀರರೆನಿಸಲು ನಮ್ಮ ಕಾಲೇಜು ತರುಣರು ಮುಷ್ಕರಗಳನ್ನು ಸಂಘಟಿ ಸುವ ಕಷ್ಟವಹಿಸಬೇಕಾಗಿಲ್ಲ. ರೈಲು ಬಸ್ಸುಗಳಲ್ಲಿ ತಿಕೀಟಿಲ್ಲದೆ ಪ್ರವಾಸ ಮಾಡುವ ಪ್ರಯಾಸ ತೆಗೆದುಕೊಂಡು ಕಂಡಕ್ಟರ್ ಅಥವಾ ಪೋಲೀಸರೊಡನೆ ಕುಸ್ತಿಹಿಡಿದು ಸಂಶಯಾಸ್ಪದವಾದ ಶೂರಪಟ್ಟಕ್ಕೆ ಕೈತುಡುಕಬೇಕಿಲ್ಲ. ಕಾಗದದ ಚಂಡುಗಳನ್ನು ಕ್ಲಾಸಿನ ಅಬಲಾನೀಕದ ಮೇಲೆ ಎಸೆದು ತಮ್ಮದು ಗುರಿಬದ್ಧ ಜೀವನವೆಂದು ತೋರಿಸುವ ಮೂಲಕ ಜೇನುಹುಟ್ಟನ್ನು ಕೆದಕ ಬೇಕಾಗಿಲ್ಲ. ಇಳಿಜಾರು ರಸ್ತೆಯಲ್ಲಿ ಎರಡೂ ಕೈಬಿಟ್ಟು ಸಾಯೋಕಲ್ಲು ಸವಾರಿಮಾಡಿ, ಗಟಾರಶಯನಕ್ಕಾಗಲಿ ಮೈಲುಕಲ್ಲಿನೊಡನೆ ಸಂಘರ್ಷಕ್ಕಾಗಲಿ ಎಳಸುವ ಅಗತ್ಯವಿಲ್ಲ. ಲೇಖನಿ ಖಡ್ಗಕ್ಕಿಂತಲೂ ಬಲವಾದದ್ದೆಂಬ ವಾಕ್ಯದಲ್ಲಿ

ಶ್ರದ್ಧೆಯಿಟ್ಟು ಕವಿತೆಗಳನ್ನು ಬರೆಯತೊಡಗಿರಿ. ನೀವು ಯಾರ ಮೇಲೆ ಕಾಗದದ ಚೆಂಡು ಒಗೆಯಬೇಕೆಂದಿದ್ದಿರೋ ಅವರ ಮೇಲೆ ಕವಿತೆ ಬರೆಯಿರಿ. ಯಾರ ಮುಂದೆ ನಿಮ್ಮ ಶೌರ್ಯಪ್ರದರ್ಶನ ಮಾಡಬೇಕೆನ್ನುತ್ತೀರೋ ಅವರ ಮುಂದೆ ನಿಮ್ಮ ಕವಿತೆಗಳನ್ನೋದಿರಿ. ಕಾಗೆಗಳ ಹಿಂಡಿನ ಬಳಿ ಗುಂಡು ಹಾರಿಸಿದಂತೆ ಅವರ ಪರಿಣಾಮ ಕ್ಷಣಾರ್ಧ ಕಂಡುಬರುವುದು. ನಿಮಗೆ ಯಾರನ್ನು ಕಂಡರೆ ಆಗುವುದಿಲ್ಲವೋ ಅಂಥಾ ಸಂಪಾದಕರಿಗೆ ಅವುಗಳನ್ನು ಕಳಿಸುತ್ತ ಬನ್ನಿರಿ. ಇದರಂಥ ಅಹಿಂಸಾತ್ಮಕ ಅಸ್ತ್ರ ಬೇರೊಂದಿಲ್ಲ. ನಿಮ್ಮ ಕಡುಶತ್ರು ಕೂಡ ನಿಮಗೆ ಕವಿತೆ ಬರೆಯುವುದರಲ್ಲಿ ಸ್ವಾರ್ಥವಿದೆಯೆಂದು ಆರೋಪಿಸಲಾರ. ನಿಃಸ್ಪೃಹ ಆತ್ಮಯಜ್ಞದ ಶೌರ್ಯವೆಂದರೆ ಇದೇ. (೧೯೫೬)

## ವರ್ಗರಹಿತ ವಿಶ್ವವಿದ್ಯಾಲಯ

ಲಾಂಗೂಲಾಚಾರ್ಯರಿಂದ ಆವತ್ತಿನ ಪೇಪರನ್ನು ಇಸಿದುಕೊಂಡು ಓದಿದ ಒಬ್ಬ ತರುಣ ಗೆಳೆಯ ಮೊನ್ನೆ, "ನಮ್ಮ ವಿಶ್ವವಿದ್ಯಾಲಯಗಳು ಪ್ರತಿಗಾಮಿತನದ ರೌರವಗಳಾಗುತ್ತಿವೆ" ಎಂದು ಉದ್ರೇಕದಿಂದ ನುಡಿದು ಪೇಪರಿನಲ್ಲಿನ ಎಫ್.ವೈ. ಪರೀಕ್ಷೆಯ ಫಲಿತಾಂಶವನ್ನು ಆಚಾರ್ಯರ ಮುಖಕ್ಕೆ ತಿವಿದನು.

"ನಾನೆಂದೂ ವಿಶ್ವವಿದ್ಯಾಲಯದ ಮೆಟ್ಟಿಲು ಕೂಡ ಹತ್ತಿರದ ನಿರಪರಾಧಿ" ಎಂದು ಆಚಾರ್ಯರು ಆಶ್ವಾಸನವಿತ್ತ ಬಳಿಕ ಆತ, ಸುಮಾರು ಒಂದು ಡಿಗ್ರಿಯಷ್ಟು ಕಾವಿಳಿದರೂ ಇನ್ನೂ ಕುದಿಯುತ್ತಲೇ ಮುಂದುವರಿಸಿದನು :

"ನೋಡಿ ಇಲ್ಲಿ, ನಮ್ಮ ಸರಕಾರವೂ ಮಂತ್ರಿಗಳೂ ವರ್ಗರಹಿತ ಸಮಾಜ ವರ್ಗರಹಿತ ಸಮಾಜ ಅಂತ ಮೊದಲನೇ ಮಳೆಗೆ ಎಚ್ಚತ್ತ ಕಪ್ಪೆಗಳ ಹಾಗೆ ಕಂಠಶೋಷಣೆ ಮಾಡಿಕೊಳ್ಳುತ್ತಿದ್ದಾರೆ. ಪೈಲುಗಳಲ್ಲಿ ಕೂಡ ಕಾಲಕಾಲಕ್ಕೆ ವರ್ಗಗಳನ್ನು ಕಮ್ಮಿ ಮಾಡಿ ದರಗಳನ್ನು ಮಾತ್ರ ಹೆಚ್ಚು ಮಾಡುತ್ತಿದ್ದಾರೆ. ಆದರೆ ಈ ವಿಶ್ವವಿದ್ಯಾಲಯಗಳು ಪಾಸಾದ ವಿದ್ಯಾರ್ಥಿಗಳಲ್ಲಿ ಮೊದಲನೇ ವರ್ಗ, ಎರಡನೇ ವರ್ಗ, ಮೂರನೇ ವರ್ಗ ಅಂತ ವರ್ಗಭೇದವನ್ನ ಶಾಶ್ವತಗೊಳಿಸುತ್ತಿವೆ."

"ಆದರೆ—" ಆಚಾರ್ಯರು ಪ್ರಾರಂಭಿಸಿದರು.

"ನನಗೆ ಗೊತ್ತಿದೆ ನಿಮ್ಮ ಆದರೆ ಗೀದರೆ" ಎಂದು ತರುಬಿದನಾ ವಿದ್ಯಾರ್ಥಿ. "ಹೆಚ್ಚು ನಂಬರು ಪಡೆದವರಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದಲ್ಲವೇ ನೀವು ಹೇಳುವುದು ? ಇದು ಹುರುಳಿಲ್ಲದ, ಅನ್ಯಾಯದ ವಾದ. ಇದು ರೈತ-ಜಮೀನ್ದಾರ, ಕೂಲಿ-ಬಂಡವಾಳಗಾರ ಭೇದದಷ್ಟೇ ಅನ್ಯಾಯ ಮತ್ತು ಅಪಾಯಕರ ವಾದದ್ದು. ಕೆಲವರಿಗೆ ಹೆಚ್ಚು ಗುಣ ಕೆಲವರಿಗೆ ಕಮ್ಮಿ ಹೇಗೆ ಬೀಳುತ್ತದೆ ಹೇಳಬಲ್ಲಿರಾ ?"

"ಕೆಲವರು ಹೆಚ್ಚು ಬುದ್ಧಿವಂತರಾಗಿರುವುದರಿಂದ—"

"ಹಾಂ, ನಿಲ್ಲಿ ನಿಲ್ಲಿ! ನನ್ನೀ ಬುರುಡೆಯೊಳಗಿನ ಮಿದುಳನ್ನು ನಾನು ಮಾಡಿದೆನೆ ? ಅಂದಮೇಲೆ ನಾನು ಬುದ್ಧಿವಂತನಾಗಿರದಿದ್ದರೆ ನನ್ನ ತಪ್ಪೇನು ? ನಾನು ಮಾಡಿಕೊಳ್ಳದೆ ಇದ್ದ ನನ್ನ ಮಿದುಳಿಗಾಗಿ ನನ್ನನ್ನು ನೀವು ಶಿಕ್ಷಿಸಬಲ್ಲಿರಾದರೆ ನೀಗ್ರೋಗಳ ಕಪ್ಪು ಚರ್ಮಕ್ಕಾಗಿ ಅವರನ್ನು ಬಿಳಿಯರು ಶಿಕ್ಷಿಸುವುದೇನು ತಪ್ಪು ?"

ಆಚಾರ್ಯರಿಗೆ ಈ ವಾದದ ಬಲವನ್ನು ಎದುರಿಸುವುದು ಸುಲಭವಲ್ಲೆಂದು ಅನಿಸಿತು. ಆದರೂ ಹಟದಿಂದ ಅವರು, "ಮತ್ತು ಕೆಲವರು ಪ್ರಯತ್ನಪಟ್ಟು ಅಭ್ಯಾಸಮಾಡಿ—" ಎಂದು ಹೊಸ ವಾದ ತೆಗೆದರು.

ಅವರ ವಿದ್ಯಾರ್ಥಿಮಿತ್ರ ವ್ಯಂಗ್ಯವಾಗಿ ನಕ್ಕ. "ಪ್ರಯತ್ನ ? ಉದ್ಯಮ ? ಫೋ ! ಫೋ ! ಇದು ಬಹಳ ಹಳೇ ಸವಕಲು ನಾಣ್ಯ, ಸ್ವಾಮಿ ! ಡಾಲ್ಮಿಯಾ ಅವರೂ ಉದ್ಯಮದಿಂದಲೇ ತಾವು ಶ್ರೀಮಂತರಾದೆವೆನ್ನುತ್ತಾರಲ್ಲ, ಅವರನ್ನು, ಯಾಕೆ ಸ್ವಾಮಿ, ಟ್ಯಾಕ್ಸ್ ತಪ್ಪಿಸಿದರೆಂದು ಶಿಕ್ಷಿಸಿದಿರಿ ? ಅದು ಹೋಗಲಿ, ಕೆಲವರು ತಾವೇ ಯಾವ ಉದ್ಯಮ ಮಾಡಿರದಿದ್ದರೂ ಪೂರ್ವಪುಣ್ಯದ ಬಲದಿಂದ ತಾವು ಶ್ರೀಮಂತರ ಹೊಟ್ಟೆಯಲ್ಲಿ ಹುಟ್ಟಿದ್ದೇವೆನ್ನುತ್ತಾರೆ. ಅವರಿಂದ ವಾರಸಾಕರ ಯಾಕಯ್ಯಾ ವಸೂಲು ಮಾಡುತ್ತೀರಿ ? ಉದ್ಯಮಶೀಲರೆಂದು ನೀವು ಹೇಳುವ ಬುದ್ಧಿಯ ಬಂಡವಾಳಗಾರರೂ ಅಷ್ಟೇ. ಅವರಲ್ಲಿ ಕೆಲವರು ಎರಡನೇ ಇಯತ್ತೆಯಿಂದ ಖಾಸಗೀ ಟ್ಯೂಶನ್ನಿನ ವಿಟಾಮಿನ್ ಗುಳಿಗೆ ನುಂಗುತ್ತ ಬಂದವರು. ಇನ್ನು ಕೆಲವರು ನಟ್ಟಿರುಳ ಎಣ್ಣೆ ಸುಟ್ಟು ಎಸ್.ಎಸ್.ಎಲ್.ಸಿ.ಗೆ ಓದಿದವರು. ನಾವು ಮಾಡಲಿಲ್ಲ. ಆದರೆ ನೀವು ನಮ್ಮನ್ನು ಇದಕ್ಕಾಗಿ ಶಿಕ್ಷಿಸಿ ತುಚ್ಛೀಕರಿಸುವುದು ಸಿವಿಲ್-ಕ್ರಿಮಿನಲ್ ಎರಡೂ ಕಾನೂನು

ಗಳಿಗೆ ವಿರುದ್ಧ. ಯಾಕಂದರೆ ಎಸ್.ಎಸ್.ಎಲ್.ಸಿ.ಗೆ ಓದುವಾಗ ಅಥವಾ ಓದದಿರುವಾಗ ನಮಗೆ ಇನ್ನೂ ಪ್ರಾಯ ಬಂದಿರಲಿಲ್ಲ. ಪ್ರಾಯಕ್ಕೆ ಬರುವ ಮುಂಚೆ ಮಾಡಿದ ತಪ್ಪುಗಳಿಗೆ ನಾವು ಜವಾಬ್ದಾರರಲ್ಲ."

ಆಚಾರ್ಯರು ತಲೆ ಹಾಕಲೇಬೇಕಾಯಿತು. ಆತ ಮುಂದುವರಿಸಿದ:

"ನನ್ನ ಕೇಳಿದರೆ ಆರ್ಥಿಕ ರಂಗದಲ್ಲಿ ಜಾರಿಗೆ ತರುತ್ತಿರುವ ಸಮಾಜವಾದ ತತ್ತ್ವಗಳನ್ನು ಬೌದ್ಧಿಕ ರಂಗದಲ್ಲಿ ಅದಕ್ಕಿಂತ ಬಿಗಿಯಾಗಿ ಜಾರಿಗೆ ತರಬೇಕು."

"ಅದು ಹೇಗಾದೀತು?"

"ನನಗೆ ಮಾತು ಮುಗಿಸುವುದಕ್ಕೆ ಬಿಡಿ, ಆಚಾರ್ಯರೇ" ಎಂದನಾ ವಿದ್ಯಾರ್ಥಿ. "ಸೇಕಡಾ ೬೦ಕ್ಕಿಂತ ಹೆಚ್ಚು ಗುಣ ಗಳಿಸಿದವರ ಮೇಲೆಲ್ಲ ಉತ್ತರೋತ್ತರವಾಗಿ ಅಧಿಕ ಗುಣ ತೆರಿಗೆ ಅಂದರೆ ಅವರ ಮಾರ್ಕುಗಳಿಗೆ ಕತ್ತರಿ ಹಾಕಿ ಅವರಿಂದ ಕತ್ತರಿಸಿದ ಗುಣಗಳನ್ನು ಏಣಿಯ ಕೆಳಗಿರುವವರಿಗೆ ಹಂಚಬೇಕು. ಬೌದ್ಧಿಕ ರಂಗದಲ್ಲಿ ನೀವು ಸಮಾಜವಾದ ತಾರದಿದ್ದರೆ ಆರ್ಥಿಕ ಸಮಾಜವಾದ ಎಂದಿಗೂ ಯಶಸ್ವಿ ಆಗಲಾರದು."

ಆಚಾರ್ಯರು ಈ ವಾದಸರಣಿಯ ಮುಂದೆ ಹತಬುದ್ಧರಾಗುತ್ತಿದ್ದಂತೆ ಅವರ ವಿದ್ಯಾರ್ಥಿಮಿತ್ರ ಪ್ರವಾದಸದೃಶವಾದ ಎಚ್ಚರಿಕೆಯನ್ನು ಉಚ್ಚರಿಸಿದನು.

"ಶಿಕ್ಷಣ ಮತ್ತು ಬೌದ್ಧಿಕ ಪ್ರಪಂಚದ ಭೀಕರ ಬಿಕ್ಕಟ್ಟು ಕುರುಡರಾದ ನಿಮಗಿನ್ನೂ ಕಾಣಿಸುತ್ತ ಇಲ್ಲ. ಬುದ್ಧಿವಂತರು ಹೆಚ್ಚು ಹೆಚ್ಚು ಬುದ್ಧಿವಂತರಾಗುತ್ತ ಹೋಗುತ್ತಿದ್ದಾರೆ, ಹೆಡ್ಡರು ಹೆಡ್ಡತರರಾಗುತ್ತಿದ್ದಾರೆ. ಇದು ಅನಂತ ಕಾಲದವರೆಗೆ ಹೀಗೇ ಸಾಗಲಾರದು. ಬುದ್ಧಿವಂತರ ಮುಂದೋಟಕ್ಕೆ ಏನಾದರೂ ಬ್ರೇಕ್ ಬೀಳಲೇಬೇಕು. ಕುರುಡು ವೀರಪೂಜೆಯಲ್ಲಿ ಮಗ್ನರಾದ ನಿಮಗೆ ಈ ಪ್ರಪಂಚದ ಎಲ್ಲ ವಿಪತ್ತುಗಳೂ ಒಟ್ಟಿನಲ್ಲಿ ಒಬ್ಬ ಬುದ್ಧಿವಂತನ ಕಡೆಗೆ ಒಯ್ದು ಮುಟ್ಟಿಸುತ್ತವೆಯೆಂದು ಇನ್ನೂ ತಿಳಿಯುವುದಿಲ್ಲ. ಮಾನವನ ಇತಿಹಾಸದಲ್ಲಿ ಹೆಡ್ಡನು ಮಾಡಿದ ಒಂದಾದರೂ ಅನರ್ಥವನ್ನು ನೀವು ತೋರಿಸಲಾರಿರಿ. ಇಂದಿನ ಪರಮಾಣು ಯುಗದಲ್ಲಿ ಬುದ್ಧಿವಂತರು ಸರ್ವನಾಶದ ಸೂತ್ರಧಾರರಾಗುವ ನಿಜವಾದ ಅಂಜಿಕೆ ನಮ್ಮನ್ನೆದುರಿಸಿದೆ. ಈ ವಿನಾಶದಲ್ಲಿ ಬುದ್ಧಿವಂತರು ಮಾತ್ರವಲ್ಲ, ನಿರಪರಾಧಿಗಳಾದ ಬುದ್ಧಿಹೀನರು ಕೂಡ ಅನ್ಯಾಯವಾಗಿ ಹಾಳಾಗಿ ಹೋಗಬಹುದು!"

ಆಚಾರ್ಯರು ಅಪ್ರತಿಭರಾದರೂ ಈ ವಾದಿಮತ್ತೇಭವನ್ನು ಉಪಾಯವಾಗಿ ಖೆಡ್ಡದಲ್ಲಿ ಕೆಡಹುವ ಆಲೋಚನೆಯಿಂದ ಮೆಲ್ಲನೆ ಕೇಳಿದರು: "ಅಲ್ಲರೀ, ನೀವೇನು ದಡ್ಡರ ಹಾಗೆ ಕಾಣಿಸುವುದಿಲ್ಲ. ಮತ್ತೇಕೆ ಹೀಗೆ ವಾದಿಸುತ್ತೀರಿ? ನಿಮಗೇನಾದರೂ ಈ ಸಲ ಎಫ್.ವೈ.ಯಲ್ಲಿ ಮೂರನೇ ವರ್ಗ ಬಂದಿದೆಯೆ?"

ಇದಕ್ಕೆ ಅವನ ಉತ್ತರ ಕಡಿಮೆ ಪ್ರಚಂಡವಾಗಿರಲಿಲ್ಲ. "ಮೂರನೇ ವರ್ಗ?" ಅವನು ಹೀಯಾಳಿಸಿದನು. "ಸರ್ವಥಾ ಇಲ್ಲ. ಎಂದಿನವರೆಗೆ ಕಾಲೇಜುಗಳಲ್ಲಿ ವರ್ಗಭೇದ ಹೋಗುವುದಿಲ್ಲವೋ ಅಂದಿನವರೆಗೆ ನಾನು ಯಾವುದೇ ವರ್ಗದಲ್ಲಿ ಬರಬಾರದೆಂದು ಪ್ರತಿಜ್ಞೆ ಮಾಡಿದ್ದೇನೆ. ಆದ್ದರಿಂದ ನೀವು ನನ್ನ ಹೆಸರನ್ನು ಇಲ್ಲಿ ಯಾವ ವರ್ಗದಲ್ಲಿಯೂ ಕಾಣಲಾರಿರಿ. ನಿಮಗೆ ಇಲ್ಲಿ ಯಾರ ಹೆಸರುಗಳೂ ನಂಬರುಗಳೂ ಕಾಣುವುದಿಲ್ಲವೋ ಅಂಥಾ ವರ್ಗರಹಿತ ವಿದ್ಯಾರ್ಥಿಗಳ ಮಧ್ಯದಲ್ಲಿ ನಾನು ಸ್ವೇಚ್ಛೆಯಿಂದ ಮೂರು ವರ್ಷಗಳಿಂದ ಇದ್ದೇನೆ. ನಮ್ಮ ಗುಂಪಿನ ಸಂಖ್ಯೆಯನ್ನು ವರ್ಷೇ ವರ್ಷೇ ಹೆಚ್ಚಿಸುವುದಕ್ಕೆ ದುಡಿಯುತ್ತಿದ್ದೇನೆ. ಈಗಾಗಲೇ ನನಗೆ ತಕ್ಕಷ್ಟು ಯಶಸ್ಸು ಸಿಕ್ಕಿದೆ. ದೇವರ ದಯವಿದ್ದರೆ, ಶೀಘ್ರದಲ್ಲೇ ಕಾಲೇಜುಗಳಲ್ಲಿನ ವರ್ಗಭೇದವನ್ನು, ಸಾಧ್ಯವಾಗದಿದ್ದರೆ ಕಾಲೇಜುಗಳನ್ನೇ ಕಿತ್ತುಹಾಕಲು ನಮಗೆ ಸಾಧ್ಯವಾದೀತು." (೧೯೫೬)

## ನಿಂದಕರಿರಬೇಕಿರಬೇಕು

ಮನುಷ್ಯನ ಅತಿ ಪ್ರಾಚೀನ ಖಾಸಗಿ ಉದ್ಯೋಗ ಯಾವುದು? ಅಂತ ಮೊನ್ನೆ ಒಬ್ಬರು ಸವಾಲು ಹಾಕಿದರು. "ಬೇರೆ ಕೆಲವೂ ಇರಬಹುದು. ಆದರೆ ನಿಂದೆ ಎಂಬುದು ಅತಿ ಪ್ರಾಚೀನ ಉದ್ಯೋಗಗಳಲ್ಲಿ ಒಂದು ಅನ್ನುವುದರಲ್ಲಿ ನನಗೆ ಸಂದೇಹವಿಲ್ಲ" ಅಂತ ನಾನು ವೈಜ್ಞಾನಿಕ ಜಾಗರೂಕತೆಯಿಂದ ಉತ್ತರ ಕೊಟ್ಟೆ. ಹೋರಾಟ, ಬೇಟೆ ಇವು ಅತ್ಯಂತ ಪ್ರಾಚೀನ ಅಂತ ಅವರು ಅಭಿಪ್ರಾಯಪಟ್ಟರು. ಹೋರಾಟ, ಬೇಟೆ ಇವೆರಡೂ ಮನುಷ್ಯನಿಗೆ ಸೀಮಿತವಾದವುಗಳಲ್ಲ. ಪ್ರಾಣಿಗಳೂ ಅವರಲ್ಲಿ ಆಸಕ್ತವಾಗುತ್ತವೆ ಅಂತ ನಾನು ಅವರ ಗಮನಕ್ಕೆ ತಂದೆ. ನಿಂದೆ ಎಂಬುದು ಮನುಷ್ಯನಿಗೇ ವಿಶೇಷವಾದದ್ದು.

ದ್ವಾಪರ, ತ್ರೇತಾ, ಕೃತಯುಗಗಳಲ್ಲಿ ಅದು ಇತ್ತು ಅನ್ನುವುದಕ್ಕೆ ಪುರಾಣಗಳು ಸಾಕ್ಷಿ ಹೇಳುತ್ತವೆ. ಆದಿಮಾನವ-ಮಾನವಿಯರ ಮುಂದೆ ಸೈತಾನ ದೇವರನ್ನು ನಿಂದಿಸಿದ ಅಂತ ಬೈಬಲ್ ಹೇಳುತ್ತದೆ. ಮನುಷ್ಯನ ಇತಿಹಾಸದಲ್ಲಿ ಅದಕ್ಕಿಂತ ಹಿಂದಿನ ಘಟನೆಗಳಿಗೆ ದಾಖಲೆಗಳಿಲ್ಲ. ಸೈತಾನ ಮನುಷ್ಯನಲ್ಲ ಅಂತ ನೀವು ಆಕ್ಷೇಪಿಸಬಹುದು. ಅದು ಒಪ್ಪತಕ್ಕ ಮಾತು. ಆದರೆ ಮನುಷ್ಯ ಸೈತಾನನಿಂದ ಅದನ್ನು ಕಲಿತುಕೊಳ್ಳುವುದಕ್ಕೆ ತಡ ಮಾಡಿರಲಿಕ್ಕಿಲ್ಲ ಅಂತ ನಂಬಬಹುದು.

ಪುರಾಣ, ಪುಣ್ಯಕಥೆ ಮತ್ತು ಅಷ್ಟು ಪುಣ್ಯವಲ್ಲದ ಕಥೆಗಳನ್ನು ಬದಿಗಿಟ್ಟು, ನಮ್ಮ ಪ್ರಾಗೈತಿಹಾಸಿಕ ಜ್ಞಾನವನ್ನು ತುಸು ಬಳಸಿಕೊಂಡರೆ, ಮನುಷ್ಯರು ತಮ್ಮ ಶ್ರಮದಾಯಕ ಬೇಟೆಯನ್ನು ಮುಗಿಸಿಕೊಂಡು ಸಂಜೆ ತಮ್ಮ ಗುಹೆಗಳಿಗೆ ಮರಳಿದಮೇಲೆ ಆಚೇ ಗುಹೆಯ ಮನುಷ್ಯ ಮತ್ತು ಮಾನುಷಿಯನ್ನು ನಿಂದಿಸುವ ಉದ್ಯೋಗ ಮಾಡುವ ಕಲ್ಪನೆಯನ್ನು ಸುಲಭವಾಗಿ ತಂದುಕೊಳ್ಳಬಹುದು. ಭಾಷೆಯ ಉದ್ಭವ ಹೇಗಾಯಿತೆಂಬ ಬಗ್ಗೆ ಅನೇಕ ಥಿಯರಿಗಳಿವೆ. ಆದರೆ ನಿಂದಿಸುವ ಸಲುವಾಗಿಯೇ ಮನುಷ್ಯ ಭಾಷೆಯನ್ನು ಸೃಷ್ಟಿಸಿದ ಅನ್ನುವ ನನ್ನ ಥಿಯರಿ ಇತರ ಥಿಯರಿಗಳಿಗಿಂತ ಕಡಿಮೆ ಸಾಧಾರವಾಗಿಲ್ಲ.

ನಿಂದೆಯ ಪ್ರಾಚೀನತೆ ನಿರ್ವಿವಾದವಾಗಿದೆಯೆಂದು ತೋರುತ್ತದೆ. ಆದರೆ ಅದನ್ನು ನಿಮಗೆ ಹೇಳುವದು ನನ್ನ ಉದ್ದೇಶವಲ್ಲ. ನಾನು ಅದರ ಗುಣಗಳನ್ನು ವಿಶ್ಲೇಷಿಸ ಹೊರಟಿದ್ದೇನೆ. ಬೇರೆ ಯಾವ ಉದ್ಯೋಗವಾದರೂ ಕಾಲಾಂತರದಲ್ಲಿ ಬೇಸರ ತರಬಹುದು; ಶ್ರಮ ಉಂಟುಮಾಡಬಹುದು. ನಿಂದೋದ್ಯೋಗದಲ್ಲಿ ಎಂದೆಂದೂ ಬೇಸರವಿಲ್ಲ. ಅದು ಅತ್ಯಂತ ಉತ್ಸಾಹದಾಯಕವಾದ ಟಾನಿಕ್. ಬೇರೆ ಉದ್ಯೋಗದಿಂದ ಬರುವ ಶ್ರಮ ಬೇಸರಗಳನ್ನೆಲ್ಲ ಕಳೆಯುವ ಉದ್ಯೋಗ ಅದು. ನಿಂದೆಯ ಉದ್ಯೋಗಕ್ಕೆ ವಯಸ್ಸಿನ, ಆರೋಗ್ಯದ ನಿರ್ಬಂಧವೂ ಇಲ್ಲ. ನಾಲಿಗೆ ಬೀಳದಿರುವವರೆಗೆ ನಾವು ಅದನ್ನು ಮಾಡುತ್ತಲೇ ಹೋಗಬಹುದು. ಅಷ್ಟೇ ಏಕೆ, ಇತರ ಉದ್ಯೋಗಗಳಲ್ಲಿ ಸೋತ ಅಥವಾ ನಿವೃತ್ತರಾದ ಮೇಲೆ ಈ ಉದ್ಯೋಗದಲ್ಲಿ ಹುಮ್ಮಸ್ಸು ಹೆಚ್ಚುತ್ತದೆ ಎಂಬುದನ್ನು ನೀವು ಗಮನಿಸಿರಲೇಬೇಕು.

ನಾಲಿಗೆ ಬೀಳದಿರುವ ವರೆಗೆ ಅಂತ ಹೇಳಿದೆನಲ್ಲ—ಅದನ್ನು ಸ್ವಲ್ಪ ತಿದ್ದಿ

ಕೊಳ್ಳಬೇಕೆಂದು ಈಗ ಅನಿಸುತ್ತಿದೆ. ನಮ್ಮ ಮನೆಯಲ್ಲಿ ಕೆಲಸಕ್ಕೆ ಬರುವ ಮೂಕಿಯೊಬ್ಬಳು ಇದೇ ಈಗ ನಮ್ಮ ನೆರೆಮನೆಯವರನ್ನು ನನ್ನೆದುರು ಬರೇ ಮೂಕಾಭಿನಯದ ಮೂಲಕ ನಿಂದಿಸಿದ ವೈಖರಿಯನ್ನು ನೋಡಿದಮೇಲೆ ನಿಂದೆಗೆ ಭಾಷಾಮಾಧ್ಯಮ ಅನಿವಾರ್ಯವಲ್ಲ ಎಂಬುದಾಗಿ ನನಗೆ ಮನವರಿಕೆ ಯಾಗುತ್ತಿದೆ. ಅವಳ ಅಭಿನಯ ಅಭಿವ್ಯಕ್ತಿಯಲ್ಲಿ ಅಷ್ಟು ಖಚಿತ ಮತ್ತು ಪರಿಣಾಮಕಾರಿಯಾಗಿತ್ತು.

ನಿಂದೆಗೆ ಏನೂ ಬಂಡವಾಳ ಬೇಕಿಲ್ಲ ಅನ್ನುವುದು ಅದರ ಸಾರ್ವಕಾಲಿಕ ಜನಪ್ರಿಯತೆ ಮತ್ತು ಅಭಿವೃದ್ಧಿಗೆ ಕಾರಣವೆಂದು ತೋರುತ್ತದೆ. ಬಂಡವಾಳ ಅಗತ್ಯವಿಲ್ಲದಿದ್ದರೂ ಅದಕ್ಕೆ ಜನಶಕ್ತಿ ಸ್ವಲ್ಪ ಬೇಕು. ಕನಿಷ್ಠ ಮಾನದಲ್ಲಿ ನಿಂದೆಗೆ ಮೂರು ಜನರು ಅವಶ್ಯ. ಒಂದು ನಿಂದಕ, ಎರಡು ನಿಂದಾಶ್ರೋತೃ, ಮೂರು ನಿಂದಾಭಾಜನ ವ್ಯಕ್ತಿ. ಸ್ಟ್ರಿಕ್ಟಾಗಿ ಹೇಳುವುದಾದರೆ ಮೊದಲನೇ ಮತ್ತು ಮೂರನೆಯವರಿದ್ದರೂ ನಿಂದಾ ಉದ್ಯೋಗ ಸಾಧ್ಯವಿದೆ. ಆಗ ಮೂರನೆಯವನೇ ಎರಡನೆಯವನ—ಅಂದರೆ ನಿಂದೆಯನ್ನು ಕೇಳುವ ಪಾತ್ರ ವನ್ನೂ ನಿರ್ವಹಿಸಬಹುದು. ಆದರೆ ಈ ದ್ವಿಪಾತ್ರ ನಿಂದಾ ವ್ಯವಸಾಯದಲ್ಲಿ ಸ್ವಾರಸ್ಯವಿಲ್ಲ. ನಿಂದೆಯನ್ನು ಕೇಳಿಸಿಕೊಳ್ಳುವವನು ಬೇರೆಯೇ ವ್ಯಕ್ತಿಯಾಗಿ ದ್ದರೆ ಮಾತ್ರ ನಿಂದೆಯಲ್ಲಿ ನಮಗೆ ನಿಜವಾದ ಆನಂದ ದೊರಕುವುದು. ದ್ವಿಪಾತ್ರನಿಂದೆ ಉಪದೇಶದ ಸ್ವರೂಪಕ್ಕೆ ಇಳಿದುಬಿಡುವ ಸಂಭವ ಇದೆ; ಅಥವಾ ಜಗಳದ ಸ್ವರೂಪಕ್ಕೆ ಕಾವೇರುವ ಭಯವೂ ಇದೆ. ಹಾಗಾದರೆ ಮಾರಾ ಮಾರಿ ತಪ್ಪಿಸುವುದು ಕಷ್ಟ. ಹೇಗಾದರೂ ಅದು ರಸಾಸ್ವಾದನೆಗೆ ಆತಂಕವೇ.

ನಿಜವಾಗಿ, ನಿಂದಾ ವ್ಯವಸಾಯಕ್ಕೆ ನಿಂದೆಗೆ ಪಾತ್ರನಾದವನು/ಳು ಪ್ರತ್ಯಕ್ಷದಲ್ಲಿರುವ ಅಗತ್ಯವಿಲ್ಲ. ಅದು ಇಷ್ಟವೂ ಅಲ್ಲವೆಂದು ಹೇಳಬಹುದು. ಅವನ/ಳ ಪರೋಕ್ಷದಲ್ಲಿ ನಡೆಯುವ ನಿಂದೆ ಗರಿಗೆದರಿ ಹಾರಬಲ್ಲದು. ಪ್ರತಿ ಭಟನೆ ಅಥವಾ ನಿರಾಕರಣೆಯ ಭಯವಿಲ್ಲದೆ ಅದು ಮುಕ್ತವಾಗಿ ಹರಿಯುತ್ತದೆ ಹೇಳುವವರಿಗೂ ಕೇಳುವವರಿಗೂ ಅದು ಪರಮಾವಧಿ ಸಂತುಷ್ಟಿ ನೀಡುತ್ತದೆ. ಶ್ರೋತೃಗಳ ಸಂಖ್ಯೆ ಹೆಚ್ಚಾಗಿದ್ದಷ್ಟೂ ಅದರ ಸತ್ವ ಹೆಚ್ಚುತ್ತದೆ.

ನಿಂದೆಗೆ ಬೇಕಾದ ಜನಶಕ್ತಿಯನ್ನು ಸಂಕ್ಷೇಪವಾಗಿ ವರ್ಣಿಸಿದ್ದಾಯಿತು. ಬಂಡವಾಳ ಬೇಡವಾದರೂ ಅದಕ್ಕೆ ಸ್ವಲ್ಪ ಕಚ್ಚಾ ಸಾಮಗ್ರಿ ಬೇಕಾಗುತ್ತದೆ.

ನಿಂದಾಭಾಜನನಾದ ವ್ಯಕ್ತಿಯಲ್ಲಿ ಯಾವುದಾದರೊಂದು ವಾಸ್ತವಿಕ ಇಲ್ಲವೇ ಊಹಿಸಿದ ಇಲ್ಲವೇ ಕಲ್ಪಿತ ದೋಷ, ಅನೀತಿ ಅಥವಾ ಪ್ರಮಾದ ಇರಬೇಕು. ತೀರ ಕಪೋಲಕಲ್ಪಿತವಾದ ದೋಷವನ್ನು ಆಧರಿಸಿ ನಿಂದಿಸುವುದು ಅಸಾಧ್ಯ ವಲ್ಲದಿದ್ದರೂ ಸ್ವಲ್ಪ ಅಸಾಧುವಾಗುತ್ತದೆ. ಕಚ್ಚಾ ಸರಕಿನಲ್ಲಿ ಸ್ವಲ್ಪವಾದರೂ ಗಟ್ಟಿ ತಿರುಳು ಇದ್ದರೆ ಒಳ್ಳೇದು.

ಯಾಕೆ ಅಂತ ವಿವರಿಸುತ್ತೇನೆ. ನಾವು ನಿಂದೆ ಮಾಡುತ್ತಿರುವುದು ನಿಂದಿತನ ಬೆನ್ನ ಹಿಂದೆಯೇ ಆದರೂ ಹೆಚ್ಚಾಗಿ ಅದು ಅವನ ಕಿವಿಯವರೆಗೆ ತಲುಪಬೇಕೆಂದು ಅಪೇಕ್ಷಿಸುತ್ತೇವೆ. ಹೀಗೆ ತಲುಪಿದಾಗ ಅದು ತೀರ ನಿರಾ ಧಾರವೆಂದಾದರೆ ಅವನು ನಕ್ಕುಬಿಡಬಹುದು. ನಾವು ಮಾಡದಿರುವ ತಪ್ಪು ಅಥವಾ ಪಾಪವನ್ನು ಕುರಿತು ಯಾರಾದರೂ ಆಡಿಕೊಂಡರೆ ನಮಗೆ ಅಷ್ಟು ನೋವಾಗಲಾರದು. ನಿಮ್ಮ ವಿಚಾರ ನಾನರಿಯೆ; ನನಗಂತೂ ತೀರ ಮಿಥ್ಯಾಪವಾದದಿಂದ ಏನೇನೂ ದುಃಖವಾಗುವುದಿಲ್ಲ. ತದ್ವಿರುದ್ಧವಾಗಿ ನಿಂದಕರ ಹೇಳಿಕೆಗಳಲ್ಲಿ ಏನಾದರೂ ತಥ್ಯಾಂಶವಿದ್ದರೆ ಆಣಿಯಾದ ಪಾದಕ್ಕೆ ಕಲ್ಲು ಒತ್ತಿದಾಗ ಆಗುವಂತೆ ನೋವಾಗುತ್ತದೆ. ಈ ನೋವು ನಿಂದಕನಿಗೆ ದೊರೆಯುವ ಅತಿರಿಕ್ತ ಆದಾಯ. ಪರನಿಂದೆ ಮಾಡುವುದರಿಂದಲೇ ನಮಗೆ ಒಂದು ಅನಿರ್ವಚನೀಯ ಸಂತೋಷ ಲಭಿಸುತ್ತದೆ ಎಂಬುದು ನಿಜ. ಇದನ್ನು ನಿಂದೆಯ ಡಿವಿಡೆಂಡು ಎನ್ನಬಹುದು. ಆದರೆ ನಮ್ಮ ನಿಂದೆ ಕೈಕಾಲು ಹುಟ್ಟಿಸಿ ಕೊಂಡು ನಮ್ಮ ನಿಂದಾಪಾತ್ರನ ಕಿವಿಗೆ ತಲುಪಿದಾಗ ಅವನಿಗೆ ಆಗಬಹು ದಾದ ನೋವು ಬೋನಸ್ಸು, ಡಿವಿಡೆಂಡಿಗಿಂತ ಈ ಬೋನಸ್ಸಿನಲ್ಲೇ ಜಾಸ್ತಿ ಸವಿ. ನಿಂದೆಯ ರಸಸ್ಥಾನವನ್ನು ಬಲ್ಲವರು ಎಂದೂ ಈ ನಾಜೂಕಾದ ಬೋನಸ್ಸಿನ ಆನಂದವನ್ನು ಕಳೆದುಕೊಳ್ಳಲಾರರ. ಈ ಆನಂದಕ್ಕೆ ನಮ್ಮ ನಿಂದೆ ಯಲ್ಲಿ ಒಂದಂಶ ಸತ್ಯ ಇರುವುದು ಆಗತ್ಯವೆಂಬುವೇ ನನ್ನ ವಾದ.

ನಿಂದೆಯಿಂದ ನಮಗೆ ದೊರೆಯುವ ನವಿರಾದ ಆನಂದಾನುಭೂತಿಗೆ ಕಾರಣ ವೇನು ? ಸ್ವತಃ ನಮ್ಮಲ್ಲಿ ಕೊರತೆಗಳು ಇದ್ದಿಲ್ಲವಾದರೆ ಪರನಿಂದೆಯಿಂದ ನಮಗೆ ಆನಂದ ಆಗಲಾರದೆಂದು ನೀವು ಗಮನಿಸಿದ್ದೀರಾ ? ತದ್ವಿರುದ್ಧವಾಗಿ ನಮಗೆ ಪರರ ಕೊರತೆಗಳನ್ನು ನೋಡಿ ದುಃಖವೇ ಆದೀತು. ಅವುಗಳನ್ನು ಆಡಿ ತೋರಿಸುವಾಗ ನಾವು ನೋವನ್ನೇ ಅನುಭವಿಸಿಯೇವು. ನಮ್ಮಲ್ಲಿರುವ

ದೋಷಗಳ ಪ್ರಜ್ಞೆಯ ಗಾಯದ ಮೇಲೆ ಪರನಿಂದೆಯ ಮುಲಾಮು ಅತ್ಯಂತ ಹಿತವಾದ ಪರಿಣಾಮ ಮಾಡುತ್ತದೆ. ತುರಿ ಕಜ್ಜಿಯ ಮೇಲೆ ಉಗುರು ಬೆಚ್ಚನ್ನ ನೀರು ಸುರಿದಾಗ ಆಗುವ ಆನಂದಕ್ಕೆ ನಿಂದಾನಂದವನ್ನು ಹೋಲಿಸ ಬಹುದು.

ನೀವು ಯಾರನ್ನು ಹೆಚ್ಚಾಗಿ ನಿಂದಿಸುತ್ತೀರಿ ಎಂಬುದರಿಂದ ನಿಮ್ಮ ಹಿರಿಮೆ ಯನ್ನು ಗುರುತಿಸಬಹುದು. ಸುತ್ತಮುತ್ತಲಿನ ಚಿಲ್ಲರೆ ಜನರನ್ನು ನಿಂದಿಸು ವವರು ಚಿಲ್ಲರೆ ಜನರೇ. ನಿಮ್ಮ ನಿಂದೆಗೆ ಪಾತ್ರನಾದವನು ದೊಡ್ಡವನಾದಷ್ಟೂ ನಿಮ್ಮ ದೊಡ್ಡಸ್ತಿಕೆ ಜಾಸ್ತಿ. ರಾಮಾಯಣದ ಆ ಅಗಸನನ್ನು ನೋಡಿ. ಊರ ವರ ಕೊಳಕು ಬಟ್ಟೆ ಒಗೆದು ಹೊಟ್ಟೆಹೊರೆದುಕೊಳ್ಳುತ್ತಿದ್ದ ಅವನು ಸಮಾಜ ದಲ್ಲಿ ಅಲ್ಪವ್ಯಕ್ತಿಯಾಗಿದ್ದಿರಬಹುದು. ಆದರೆ ತನ್ನ ಹೆಂಡತಿ ಹೇಳದೆ ಕೇಳದೆ ಓಡಿಹೋಗಿ ತಿರುಗಿ ಬಂದಾಗ ಅವಳನ್ನು ಜರೆಯುವುದಕ್ಕೆ ಅಂತಿಂಥ ಜನ ರೊಡನೆ ಹೋಲಿಸಲಿಲ್ಲ. ಮರ್ಯಾದಾ ಪುರುಷೋತ್ತಮನಾದ ರಾಮನನ್ನೂ ಸೀತಾಮಾತೆಯನ್ನೂ ಬಳಸಿಕೊಂಡ. ಈ ಅಗಸ ಅತ್ಯಂತ ಮರ್ಮಜ್ಞನೆಂದು ನಾನು ಭಾವಿಸುತ್ತೇನೆ. ಒಂದೇ ಮಾತಿನಿಂದ ಅವನು ತನ್ನನ್ನು ರಾಮನ ಅಂತಸ್ತಿಗೆ ಏರಿಸಿಕೊಂಡ. ಹೆಂಡತಿಯನ್ನು ಸೀತೆಯ ಸಮಾನ ಪೀಠದಲ್ಲಿ ಕುಳ್ಳಿರಿಸಿದ. ಹೆಂಡತಿಯನ್ನು ಮನೆಯಲ್ಲಿ ಉಳಿಸಿಕೊಳ್ಳಲಾರದ ನಪುಂಸಕರಲ್ಲಿ ತಾನು ಮೊದಲನೆಯವನಲ್ಲ, ದೇಶವನ್ನು ಆಳುವವನೇ ತನ್ನ ಸಮಾನಧರ್ಮ ನಾಗಿದ್ದಾನೆಂದು ತನ್ನ ನೊಂದ ಅಹಂಕಾರಕ್ಕೆ ಸಮಾಧಾನ ಹೇಳಿದ. ಅದೇ ಪ್ರಕಾರ ಸುತ್ತಮುತ್ತಲಿನವರಿಗೂ ತಾನು ದೊಡ್ಡವರ ಕಂಪೆನಿಯಲ್ಲಿದ್ದೇನೆ ಅಂತ ಜಾಹೀರು ಮಾಡಿದ.

ಇದಕ್ಕಾಗಿ ಅವನಿಗೆ ಧಾರಾಳವಾದ ಪ್ರತಿಫಲ ಸಿಕ್ಕಿತು. ಅವನು ಶ್ರೀರಾಮ ನೊಡನೆ ತನ್ನನ್ನು ಅಮರನಾಗಿ ಮಾಡಿಕೊಂಡ. ಇಲ್ಲದಿದ್ದರೆ ಅಯೋಧ್ಯೆ ಯಲ್ಲಿ ಇಂಥ ಒಬ್ಬ ಅಗಸ ಇದ್ದ ಅಂತ ನಿಮಗೆ ತಿಳಿಯುತ್ತಲೇ ಇರಲಿಲ್ಲ. ಅಷ್ಟೇ ಏಕೆ, ರಾಮಾಯಣ ಕಾಲದಲ್ಲಿಯೂ ಅಗಸರು ಇದ್ದರೆಂದು ನಮಗೆ ತಿಳಿಯುತ್ತಿರಲಿಲ್ಲ. ಈ ಅಗಸನನ್ನು ನೆನೆದಷ್ಟೂ ಅವನ ಮೇಲೆ ನನ್ನ ಗೌರವ ಹೆಚ್ಚಾಗುತ್ತದೆ. ಅಗಸರಂತೂ ಅವನಿಗೆ ಸದಾಕಾಲವೂ ಋಣಿಗಳಾಗಿರಬೇಕು. ಅಲ್ಪನಾದರೂ ಅವನ ಮನಸ್ಸು ದೊಡ್ಡದು. ಆದ್ದರಿಂದ ಎಲ್ಲೈ ನಿಂದಾಪ್ರೇಮಿ

ಗಳಿರಾ! ನಿಂದಿಸಲೇ ಬೇಕಾಗಿದ್ದರೆ (ಯಾರಿಗೆ ಬೇಡ!) ದೊಡ್ಡವರನ್ನು ನಿಮ್ಮ ಗುರಿಯಾಗಿ ಆರಿಸಿಕೊಳ್ಳಿ ಮತ್ತು ನಿಮ್ಮ ನಿಂದೆಯಲ್ಲಿ ಒಂದೆರಡು ಸೂಕ್ಷ್ಮವಾದ ಸತ್ಯದ ಬೈಗಳು ಇರುವಂತೆ ನೋಡಿಕೊಳ್ಳಿ.

"ಪರರ ನಿಂದಿಸಬೇಡ" ಅಂತ ಶಿವಶರಣರು ಹೇಳಿದರು; "ಮಾಡಿದವರ ಪಾಪ ಆಡಿದವರ ತಲೇ ಮೇಲೆ" ಅಂತ ಜಾಣರು ಗಾದೆ ಕಟ್ಟಿದರು. ಆದರೆ "ಉಭೌ ತೌ ನ ವಿಜಾನೀ ತೌ"—ಇವರಿಬ್ಬರಿಗೂ ಗೊತ್ತಿಲ್ಲ. "ಇರಬೇಕು ನಿಂದಕರು ಸಜ್ಜನರಿಗೆ"—ಅಂದ ಪುರಂದರದಾಸರು ನಿಜವಾದ ಜ್ಞಾನಿಗಳು. ಮಹಾಪುರುಷರ ಹಿರಿಮೆಯನ್ನು ಪ್ರಶಂಸಕರಿಗಿಂತಲೂ ಹೆಚ್ಚಾಗಿ ನಿಂದಕರು ಪ್ರಚಾರ ಮಾಡುತ್ತಾರೆ. ನಿಮ್ಮ ಜನಪ್ರಿಯತೆಯನ್ನು ನಿಮಗೆ ಎಷ್ಟು ಜನ ಅನುಯಾಯಿಗಳಿದ್ದಾರೆಂಬುದರಿಂದ ನಿರ್ಧರಿಸಬೇಡಿ. ನಿಮ್ಮನ್ನು ನಿಂದಿಸುವವರು ಎಷ್ಟಿದ್ದಾರೆ ಎಂಬುದರಿಂದ ಅಳೆದುಕೊಳ್ಳಿ. ನಿಮ್ಮನ್ನು ಆಡಿಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ ಅನ್ನಿಸಿದರೆ ಅದು ಹೆಚ್ಚಾಗುವಂತೆ ಏನಾದರೊಂದು ಮಾಡಿ. ಸಿನೆಮಾ ನಟನಟಿಯರು ಈ ಗುಟ್ಟು ಬಲ್ಲರು. ಅವರು ತಮ್ಮ ವಿಷಯದಲ್ಲಿ ನಿರಂತರವಾಗಿ ಅಪವಾದಗಳ ಸಪ್ಲೈ ಇರುವಂತೆ ನೋಡಿಕೊಳ್ಳುತ್ತಾರೆ. ನಿಮಗೆ ನಿಂದಕರಿರುವುದು ನಿಮ್ಮ ಜೀವಂತತೆಯ ಲಕ್ಷಣ. ಸತ್ತವರನ್ನು ಯಾರೂ ನಿಂದಿಸುವುದಿಲ್ಲ. Call no man good, until he is dead—ಸಾಯುವವರೆಗೂ ಯಾರನ್ನೂ ಒಳ್ಳೆಯವನೆನ್ನಬೇಡಿ ಅನ್ನೋದು ಇದಕ್ಕೇ. (೧೯೭೬)

# ನಾನು ಪವಾಡಗಳನ್ನು ನಂಬುತ್ತೇನೆ

ಮೊನ್ನೆ ನಾನು ಬೀದಿಯಲ್ಲಿ ಹೋಗುತ್ತಿದ್ದಾಗ್ಗೆ ಎತ್ತರನ್ನ ವ್ಯಕ್ತಿಯೊಬ್ಬರು ನನ್ನ ಸ್ವೆಟರಿನ ಬಟನನ್ನು ಹಿಡಿದು ತಮ್ಮ ತಪ್ತ ಕಣ್ಣುಗಳನ್ನು ನನ್ನ ಮುಖದ ಮೇಲೆ ಕೀಲಿಸಿ, "ನೀವು ಲಾಂಗೂಲಾಚಾರ್ಯ ಅಲ್ಲವೇ ?" ಎಂದು ಕೇಳಿದರು.

ನಾನು ಅನುಮಾನಿಸುತ್ತ, "ನನ್ನ ಖಾಸಗಿ ಹೆಸರು ಅದಲ್ಲ, ಆ ಹೆಸರಲ್ಲಿ ಬರೆಯುತ್ತೇನೆ ಮಾತ್ರ" ಅಂದೆ.

"ಚಾಲಾಕಿ ಬೇಡ, ಹೌದೋ ಅಲ್ಲವೋ ಹೇಳಿ!" ಎಂದು ಅವರು ಬಟನನ್ನು ಜಗ್ಗಿ ತಮ್ಮ ಪ್ರಶ್ನೆಗೆ ಒತ್ತು ಕೊಟ್ಟರು. ಪೋಲೀಸು ಕಚೇರಿಯಲ್ಲಿ ಛಡಿಯೇಟಿನ ಭರವಸೆಯನ್ನು ತೋರಿಸಿದ ಕೂಡಲೇ ಕೈದಿ ಸತ್ಯ-ಸುಳ್ಳು ಎಲ್ಲವನ್ನೂ ಒಪ್ಪಿಕೊಳ್ಳುವ ಹಾಗೆ, ನಾನೂ ಲಗುಬಗೆಯಿಂದ "ಹೌದು!" ಅಂದೆ.

"ಗುಡ್! ನೀವು ಪವಾಡಗಳನ್ನು ನಂಬುತ್ತೀರಾ?" ಎಂದು ಇನ್ನೊಮ್ಮೆ ಬಟನನ್ನು ಜಗ್ಗಿದರು.

ಅವರ ಕಣ್ಣುಗಳು ಉಗ್ರವಾಗಿದ್ದವು; ಸುತ್ತಮುತ್ತ ಯಾರೂ ಇರಲಿಲ್ಲ; ಮತ್ತು ಅವರಿಗೆ "ಹೌದು" ಅನ್ನುವ ಉತ್ತರ ಬೇಕಾಗಿತ್ತೋ "ಇಲ್ಲ" ಎನ್ನುವುದೋ ನನಗೆ ತಿಳಿಯುವ ಬಗೆ ಇರಲಿಲ್ಲ. ಯಾಕೆಂದರೆ, ಶ್ರದ್ಧಾವಾದಿಗಳಷ್ಟೇ ವಿಕರಾಳ ಕಣ್ಣುಗಳುಳ್ಳ ವಿಚಾರವಾದಿಗಳನ್ನೂ ವಿಚಾರವಾದಿಗಳಷ್ಟೇ ಹುಚ್ಚು ಗಟ್ಟಿದ ಕಣ್ಣುಗಳುಳ್ಳ ಶ್ರದ್ಧಾವಾದಿಗಳನ್ನೂ ನಾನು ಬಲ್ಲೆ. ನಾನು ಮನಸ್ಸಿನಲ್ಲೇ ಕಣ್ಣುಗಳನ್ನು ಮುಚ್ಚಿ ದೇವರನ್ನು ಪ್ರಾರ್ಥಿಸಿ, ಒಂದು ಮಾನಸಿಕ ಲಾಟರಿ ಎತ್ತಿ, "ಹೌದು!" ಎಂದು ಹೇಳಿಬಿಟ್ಟೆ.

ಅವರು ಇನ್ನೊಮ್ಮೆ ನನ್ನ ಬಟನ್ ಜಗ್ಗಿ "ಭೇಶ್! ಹಾಗಾದರೆ ಆ ಬಗ್ಗೆ ಒಂದು ಲೇಖನ ಬರೆಯಿರಿ!" ಎಂದು ಆಜ್ಞಾಪಿಸಿ ಭರಭರನೆ ಮುಂದೆ ನಡೆದು ಹೋದರು.

ನನ್ನ ಜೀವನದಲ್ಲಿ ನಡೆದ ಲೇಟೆಸ್ಟ್ ಪವಾಡ ಇದು: ಆ ಹುಚ್ಚುಗಣ್ಣಿನ ವ್ಯಕ್ತಿ ಮೂರು ಮೂರು ಸಲ ಜಗ್ಗಿದಾಗ್ಯೂ, ಮೊದಲೇ ಕಿತ್ತುಬೀಳುತ್ತೇನೆ ಎಂದು ಹೆದರಿಸುತ್ತಿದ್ದ ನನ್ನ ಸ್ವೆಟರ್ ಬಟನ್ನು ಕಿತ್ತುಬಾರದೆ ಇದ್ದದ್ದು!

ಹೌದು, ನಾನು ಪವಾಡಗಳನ್ನು ನಂಬುತ್ತೇನೆ. "ಪವಾಡಗಳ ಕಾಲ ಮುಗಿದುಹೋಗಿದೆಯಂತೆ!" ಎಂದು ಶೇಕ್ಸ್ಪಿಯರ್ ಹೇಳಿ ನಾಲ್ಕು ಶತಮಾನ ಆಗುತ್ತಾ ಬಂತು. ಆದರೆ ಪವಾಡಗಳು ಹಿಂದೆ ಸರಿಯಲಿಲ್ಲ. ೧೯೫೦ರಲ್ಲಿ ಹೆನ್ರಿಕ್ ಹೇನ್ "ಭೌತವಿಜ್ಞಾನ ಪರಿಪೂರ್ಣವಾಗಿರುವುದರಿಂದ ಇನ್ನು ಪವಾಡಗಳಿಗೆ ಎಡೆಯಿಲ್ಲ" ಎಂದು ಮತ್ತೆ ಹೇಳಬೇಕಾಯಿತು. ಆದರೂ ಪವಾಡಗಳು ಜರಗುತ್ತಲೇ ಇವೆ; ಅವುಗಳನ್ನು ನಂಬುವವರೂ ಇದ್ದಾರೆ. ನಾನೂ ನಂಬುತ್ತೇನೆ. "ನಂಬಿ ಕೆಟ್ಟವರಿಲ್ಲವೋ!" ನನಗೂ ಗೊತ್ತು— ಪುರಂದರದಾಸರ ಹಾಗೆ.

ಪವಾಡ ಅಂದರೇನು? ಜಗತ್ತಿನ ಸ್ವಾಭಾವಿಕ ನಿಯಮಗಳ ಪ್ರಕಾರ ನಡೆಯಲು ಸಾಧ್ಯವಿಲ್ಲದ್ದು ನಡೆದರೆ ಅದೇ ಪವಾಡ. ಎರಡಕ್ಕೆ ಎರಡು ಕೂಡಿಸಿದರೆ ನಾಲ್ಕು ಅನ್ನುವುದು ಜಗತ್ತಿನ ಸ್ವಾಭಾವಿಕ ನಿಯಮ. ಅದು ಮೂರೋ ಐದೋ ಆದರೆ ಅದು ಪವಾಡವಾಗುತ್ತದೆ. ಕುರುಡನಿಗೆ ಕಣ್ಣು ಕಾಣಿಸುವುದಿಲ್ಲ ಅನ್ನುವುದು ಸ್ವಾಭಾವಿಕ ನಿಯಮ. ಅವನಿಗೆ ಒಂದು ದಿನ ನಿಷ್ಕಾರಣವಾಗಿ ಕಣ್ಣು ಕಾಣಿಸಿದರೆ ಅದು ಪವಾಡ. ತಿರುಗಿಸಿ ಹೇಳುವುದಾದರೆ, ನಿಮ್ಮ ಕಣ್ಣುಗಳು ಸ್ವಚ್ಛವಾಗಿದ್ದರೆ ಮತ್ತು ಅವುಗಳು ತೆರೆದಿದ್ದರೆ ನಿಮ್ಮೆದುರಿಗಿದ್ದದ್ದು ಕಾಣಿಸುತ್ತದೆ ಎನ್ನುವುದು ಸ್ವಾಭಾವಿಕ ನಿಯಮ. ಕಣ್ಣಿದ್ದೂ ಅವು ತೆರೆದಿದ್ದೂ ನಿಮಗೆ ಕಾಣಿಸದೆ ಇದ್ದರೆ ಅದೂ ಪವಾಡವೇ ಸೈ.

ಇಂಥಾ ಪವಾಡಗಳನ್ನು ನಾನು ನೋಡಿದ್ದೇನೆ. ಒಂದು ಸಲ ಒಬ್ಬರಿಗೆ ನಾನು ನಾಲ್ಕು ರೂಪಾಯಿ ಸಾಲ ಕೊಟ್ಟಿದ್ದೆ. ಆದರ ಗಡುವು ದಾಟಿದಮೇಲೆ ಅವರು ರಸ್ತೆಯಲ್ಲಿ ಎದುರು ಸಿಕ್ಕಿದರೂ ಅವರ ಕಣ್ಣು ದೇವತೆಗಳ ಕಣ್ಣುಗಳಂತೆ ತೆರೆದೇ ಇದ್ದರೂ ನಾನು ಅವರಿಗೆ ಕಾಣಿಸುತ್ತಲೇ ಇರಲಿಲ್ಲ. ಈ ಪವಾಡದಲ್ಲಿ ಪವಾಡಪುರುಷ ಅವರೆಂದು ಮಾತ್ರ ಭ್ರಮಿಸಬೇಡಿ. ಪವಾಡ ಪುರುಷನಾಗಿದ್ದು ನಾನು. ಯಾಕೆಂದರೆ ನಾನು ಅವರಿಗೆ ಅದೃಶ್ಯನಾಗಿದ್ದೆ. ನಿಮ್ಮ ಕೈಲಿ ಕೆಲ ಅನಗತ್ಯ ರೂಪಾಯಿಗಳಿದ್ದರೆ ನೀವೂ ನನ್ನ ಹಾಗೆ ಪವಾಡ ಪುರುಷರಾಗಬಹುದು.

ಎರಡೂ ಎರಡು ನಾಲ್ಕು ಎನ್ನುವುದು ಸೃಷ್ಟಿಯ ಅಕಾಟ್ಯ ನಿಯಮ ಅಂತ ವಿಜ್ಞಾನಿಗಳು ತಮ್ಮ ಅಜ್ಞಾನದಲ್ಲಿ ಹೇಳುತ್ತಾರೆ. ದೇವರು ಇದ್ದಾನೆ ಅಥವಾ ಇರಬಹುದು ಎಂದು ಒಪ್ಪುವ ವಿಜ್ಞಾನಿ ಅಥವಾ ವಿಚಾರವಾದಿಗಳು ಕೂಡ ಅವನು ಈ ಪ್ರಪಂಚವನ್ನು ಸೃಷ್ಟಿಸುವಾಗ್ಗೆ ಎರಡೂ ಎರಡು ನಾಲ್ಕು ಅನ್ನುವ ನಿಯಮ ಮಾಡಿಬಿಟ್ಟಿದ್ದಾನೆ; ಆದ್ದರಿಂದ ನೀವು ಏನೇ ಮಾಡಿದರೂ ಎಷ್ಟೇ ಪ್ರಾರ್ಥಿಸಿದರೂ ಎರಡೂ ಎರಡು ಐದೋ ಮೂರೋ ಆಗುವುದು ಸಾಧ್ಯವೇ ಇಲ್ಲ; ಹಾಗೆ ಯಾರಾದರೂ ಮಾಡಿ ತೋರಿಸಿದರೆ ಅದು ಮೋಸವೇ ಸೈ ಅನ್ನುತ್ತಾರೆ. ದೇವರು ನಮ್ಮ ಸಲುವಾಗಿ ತನ್ನ ನಿಯಮಗಳನ್ನು ಬದಲಿಸುವುದಿಲ್ಲ ಎನ್ನುವುದು ಅವರ ವಾದ. "ದೇವರು ಯಾವಾಗ ನಿಮಗೆ ತನ್ನ ಈ ದೃಢನಿರ್ಧಾರವನ್ನು ತಿಳಿಸಿದ?" ಅಂತ ನಾನೊಬ್ಬ ವಿಚಾರವಾದಿಗೆ ಕೇಳಿದೆ.

"ದೇವರು ನನಗೇನೂ ತಿಳಿಸಲಿಲ್ಲ. ಆದರೆ ಅವನ ಪ್ರಪಂಚವನ್ನು ನೋಡಿದರೆ ಈ ನಿಯಮ ಅಕಾಟ್ಯ ಅನಿಸುತ್ತೆ" ಅಂತ ಅವರು ಸ್ವಲ್ಪ ನರಂ ಆಗಿ ಒಪ್ಪಿದರು. "ಹಾಗಾದರೆ, ತನಗೆ ಬೇಕೆನಿಸಿದರೆ ಅವನು ಅಪರೂಪವಾಗಿ ಎರಡೂ ಎರಡನ್ನು ಮೂರೋ ಐದೋ ಆಗಿ ಮಾಡುತ್ತಾನೆ ಅಂತ ನನಗೆ ಅನಿಸುತ್ತೆ" ಅಂದೆ ನಾನು. ದೇವರು ತನ್ನ ನಿರ್ಧಾರವನ್ನು ಅವರಿಗೆ ಪ್ರತ್ಯಕ್ಷ ತಿಳಿಸಿಲ್ಲ, ನನಗೂ ತಿಳಿಸಿಲ್ಲ—ಅನ್ನಿ. ಅವರದೂ ನಂಬಿಕೆ, ನನ್ನದೂ ನಂಬಿಕೆ. ನಾನೂ ಮನುಷ್ಯ, ಅವರೂ ಮನುಷ್ಯ. ನನಗೂ ಒಂದೇ ವೋಟು, ಅವರಿಗೂ ಅಷ್ಟೇ. ನನ್ನ ನಂಬಿಕೆ ಅವರದಕ್ಕಿಂತ ಏನು ಕಮ್ಮಿ?

ಇಷ್ಟೇ ಅಲ್ಲ, ನನ್ನ ನಂಬಿಕೆಯೇ ಹೆಚ್ಚು ಯುಕ್ತಿಯುಕ್ತ. ದೇವರ ನಿಯಮಗಳು ನಮ್ಮ ಸಂವಿಧಾನ ಇದ್ದ ಹಾಗೆ ಅಂದುಕೊಳ್ಳಿ. ಅದು ಅಕಾಟ್ಯವೆಂದೇ ಕೆಲ ಪಂಡಿತರು ಹೇಳುತ್ತಾ ಬಂದಿದ್ದರು. ನಾವೂ ಹಾಗೇ ನಂಬಿದ್ದೆವು. ಆದರೆ ಬಡವರ ಹಿತಾರ್ಥವಾಗಿ ನಾವು ಸಂವಿಧಾನವನ್ನು ಬದಲುಮಾಡಿ, ಬದಲಾವಣೆಯನ್ನು ಹಿಂದಿನ ಘಟನೆಗಳಿಗೂ ಅನ್ವಯಿಸಿಲ್ಲವೆ? ಮನುಷ್ಯರಾದ ನಮಗೇ ಇದು ಸಾಧ್ಯವಾಗಿರುವಾಗ ಭಕ್ತರ ಹಿತಾರ್ಥವಾಗಿ ತನ್ನ ನಿಯಮಗಳನ್ನು ಅಗತ್ಯ ಪ್ರಸಂಗಗಳಲ್ಲಿ ಬದಲಾಯಿಸುವುದಕ್ಕೆ ದೇವರಿಗೆ ಶಕ್ತಿ ಇಲ್ಲವೆಂದಾದರೆ ಅವನು ಸರ್ವಶಕ್ತ ಹೇಗಾದಾನು? ದೇವರೇನು ಮನುಷ್ಯನಿಗಿಂತ ನಿತ್ರಾಣಕೆಟ್ಟುಹೋದನೆ? "ಇಲ್ಲಾ! ದೇವರು ಹೀಗೆ ನನಗಾಗಿ ಅಥವಾ ನಿಮಗಾಗಿ ಎರಡೂ ಎರಡು ಐದು ಅಂತ ಮಾಡಿದರೆ ಅದರಿಂದ ಬಂದ ತಫಾವತ್ತಿನಿಂದಾಗಿ ಅವನ ವಿಶ್ವವೇ ಅವ್ಯವಸ್ಥೆಗೆ ಗುರಿಯಾಗುವುದಿಲ್ಲವೆ?" ಅನ್ನುತ್ತೀರಾ? ಹೆಡ್ಡ ಪ್ರಶ್ನೆ. ನಿಮ್ಮ ಸಲುವಾಗಿ ಎರಡೂ ಎರಡು ಐದು ಮಾಡಿದ್ದನ್ನ ಇನ್ನೊಬ್ಬನ ಲೆಕ್ಕದಲ್ಲಿ ಎರಡೂ ಎರಡು ಮೂರು ಮಾಡಿ ಕಾಲಂ ಟೋಟಲ್ ಸರಿಮಾಡಬಹುದೆಂಬುದಾಗಿ ಜಮಾಬಂದಿ ಶಾನುಭೋಗರಿಗೂ ಗೊತ್ತಿರುವಾಗ ದೇವರಿಗೆ ಅಷ್ಟೂ ತಿಳಿಯದೆ? ಆಫ್-ದ-ರಿಕಾರ್ಡ್ ಆಗಿ ಹೇಳುವುದಾದರೆ ಇನ್ನೊಂದು ಪ್ರಶ್ನೆ ಕೇಳುತ್ತೇನೆ. ದೇವರ ಪ್ರಪಂಚ ನೋಡಿದರೆ ಅದರಲ್ಲಿ ಉಚ್ಚ್ಯಮಟ್ಟದ ವ್ಯವಸ್ಥೆ ಉಂಟು ಅಂತ ನಿಮಗೆ ಪ್ರಾಮಾಣಿಕವಾಗಿ ಅನಿಸುತ್ತೆಯೆ? ಇದ್ದರೆ ಜೂನ್ ಒಂದರೊಳಗೇನೇ ಈ ಸಲ ಮಳೆಗಾಲ ಹೇಗೆ ಬಂತು?

ನಾ ಹೀಗೆ ಕೇಳಿದೆ ಅಂತ ದೇವರಿಗೆ ಮಾತ್ರ ಹೇಳಬೇಡಿ ದಯವಿಟ್ಟು.
ಅಂಕೆಗಳ ಪ್ರಕರಣದಲ್ಲಿ ದೇವರು ನನಗಾಗಿ ಒಂದು ಪವಾಡ ಮಾಡಿದ ನೆನಪು
ನನಗುಂಟು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗಣಿತ ಪೇಪರಿನಲ್ಲಿ
ನಾನೊಂದು ಕಡೆ ಎಲ್ಲಿಯೋ ತಪ್ಪಿ ಎಂಟೂ ಎಂಟು ಹದಿನೆಂಟು ಅಂತ
ಕೂಡಿಸಿ ಉತ್ತರ ಬರೆದಿದ್ದೆ. ಮನೆಗೆ ಬಂದು ಪ್ರಶ್ನೆಗಳ ಉತ್ತರ ವೆರಿಫೈ
ಮಾಡುವಾಗ ತಪ್ಪು ನನಗೆ ತಿಳಿಯಿತು. ನಾನು ಅನನ್ಯ ಭಕ್ತಿಯಿಂದ
"ದೇವರೇ! ಇದೊಂದು ಸಲ ಎಂಟೂ ಎಂಟು ಹದಿನೆಂಟೇ ಸರಿ ಅಂತ ಮಾಡಿ
ಬಿಡಪ್ಪಾ ನಮ್ಮಪ್ಪಾ" ಅಂತ ಪ್ರಾರ್ಥನೆಮಾಡಿದೆ. ಪವಾಡ ಆಗಿಹೋಯಿತು.
ರಿಜಲ್ಟ್ ನೋಡುವಾಗ ನನಗೆ ಆ ಪ್ರಶ್ನೆಗೆ ಫುಲ್ ಮಾರ್ಕ್ಸ್ ಬಿದ್ದಿತ್ತು.

ದೇವರು ತನ್ನ ಭಕ್ತರಿಗಾಗಿ ಇಷ್ಟೂ ಒಬ್ಲೈಜ್ ಮಾಡದೆ ಇದ್ದರೆ
ಯಾರಯ್ಯಾ ಅವನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ? ಸರಕಾರಿ ಅಧಿಕಾರಿಗಳ
ಹಾಗೆಯೇ ಅವನೂ ಎಲ್ಲರಿಗೂ ಒಬ್ಲೈಜು ಮಾಡುವುದಿಲ್ಲ ಅನ್ನಿ. ಕೆಲವರಿ
ಗಾದರೂ ಒಬ್ಲೈಜು ಮಾಡಿದರೆ ಎಲ್ಲರೂ ತನ್ನನ್ನು ಓಲೈಸುತ್ತಾರೆ ಅನ್ನುವು
ದನ್ನು ತಿಳಿದುಕೊಳ್ಳುವಷ್ಟು ಬುದ್ಧಿ ಅವನಿಗೂ ಉಂಟು. ಆಗಲೇ ಪವಾಡ
ಗಳು ಆಗುವುದು.

ಇಷ್ಟೆಲ್ಲ ಹೇಳಿದ್ದು ದೇವರನ್ನು ಒಪ್ಪಿ ರ್ಯಾಶನಲಿಸಂ ಮಾತಾಡುವವರಿಗೆ
ಆಯಿತು. ಇನ್ನು ದೇವರನ್ನೇ ಒಪ್ಪದಿದ್ದ ಡಾ. ಕೋವೂರ್ ಅಂಥವರಿಗೆ
ದೇವರೇ ಇಲ್ಲದಿದ್ದಮೇಲೆ ನಿಯಮ ಮಾಡುವವರು ಯಾರು? ಜಗತ್ತೆಲ್ಲ
ತನ್ನ ಸ್ವಯಂ ನಿರ್ಮಿತ ಅವ್ಯವಸ್ಥೆಯಲ್ಲೇ ಸಾಗುತ್ತದೆ ಎಂದು ಅವರು ಒಪ್ಪ
ಬೇಕಾಗುತ್ತದೆ. ತೀವ್ರವಾದ ಅವ್ಯವಸ್ಥೆಯೇ ಪವಾಡ!

ಪಟಗಳಿಂದ ಭಸ್ಮ ತಂತಾನೇ ಉದುರುವ ಪವಾಡವನ್ನು ನೀವು
ನೋಡಿದ್ದೀರಾ? ನಾನೂ ನೋಡಿಲ್ಲ. ಅಂಗೈಯಲ್ಲಿ ಮಂತ್ರಾಕ್ಷತೆ ಮೂಡುವ
ಪವಾಡ ಮಾಡುವವರನ್ನು ಒಮ್ಮೆ ನಾನು ನೋಡಿದ್ದೆ. ಅಂದರೆ ನನ್ನ ಸ್ನೇಹಿತ
ರಿಗೆ ಅವರು ಶೂನ್ಯಾಕಾಶದಿಂದ ಮಂತ್ರಾಕ್ಷತೆಯನ್ನು ತೆಗೆದುಕೊಟ್ಟಿದ್ದರು.
ಆ ಮಂತ್ರಾಕ್ಷತೆಯನ್ನು ನಾನು ಕಣ್ಣಾರೆ ನೋಡಿದ್ದೇನೆ. ನನಗೆ ಆ ಸಾಧು
ಗಳು ಮಂತ್ರಾಕ್ಷತೆ ಸೃಷ್ಟಿಸಿ ತೋರಿಸಲು ಬಂದಾಗ ಮಾತ್ರ ಮಂತ್ರಾಕ್ಷತೆ
ಇದ್ದಕ್ಕಿದ್ದಂತೆ ಮಾಯವಾಗಿಬಿಟ್ಟಿತು—ಅಂದರೆ ನನ್ನ ಪಾಲಿಗೆ ಅದು ಕಾಣಿಸ

ಲಿಲ್ಲ. ಆದರೆ ನನ್ನ ಹತ್ತಿರವೇ ಕುಳಿತಿದ್ದ ನನ್ನ ಮಿತ್ರರಿಗೆ ಅದು ನಿಚ್ಚಳವಾಗಿ ಕಾಣಿಸುತ್ತಿತ್ತಂತೆ! ಇದೀಗ ನೋಡಿ ಡಬಲ್ ಪವಾಡ: ಅವರಿಗೆ ಕಾಣಿಸುತ್ತೆ, ನನಗೆ ಕಾಣಿಸುವುದಿಲ್ಲ! ಇತ್ತೀಚೆಗೆ ಬಾಯಿಯಿಂದಲೇ ಬೂದಿ (ಮಂಕು ಬೂದಿ ಅಂತ ನನ್ನ ಕೊಂಕುಬುದ್ಧಿಯ ಮಿತ್ರನೊಬ್ಬನ ಹೇಳಿಕೆ) ಉಗುಳುವ ಮಹಿಳೆಯೊಬ್ಬಳನ್ನು ಕುರಿತು ಪೇಪರುಗಳ ಕಾಲಂ ತುಂಬಿತ್ತು. ಕಟ್ಟಿಗೆ ಅಥವಾ ಇದ್ದಲಿ ಸುಂಗಿ ಹೊಟ್ಟೆಕಿಚ್ಚಿನಿಂದ ಅದನ್ನು ಸುಟ್ಟು ಅವಳು ಬೂದಿ ಉಗುಳುತ್ತಿರಬಹುದೇ? ಅನ್ನುವ ಯೋಚನೆ ನನಗೆ ಬಂತು, ಆದರೆ ಹೊಟ್ಟೆ ಕಿಚ್ಚಿನಿಂದ ಜಠರ ಕೋಶ ಸುಡಬಹುದೇ ಹೊರತು ಕಟ್ಟಿಗೆ ಹೊತ್ತಿಕೊಳ್ಳ ಲಾರದೆಂದು ನನ್ನ ಡಾಕ್ಟರ್ ಮಿತ್ರರು ಭರವಸೆ ಕೊಡುತ್ತಾರೆ. ಅಂದಮೇಲೆ ಈ ಬೂದೀಪವಾಡ ನಿಜವೆಂದೇ ಆಯಿತು. ಇನ್ನೊಬ್ಬ ಸರ್ಜನ್ನರು ಕಠಿಣ ಆಪರೇಶನ್ನುಗಳನ್ನು ಮಾಡುವಾಗ ಒಬ್ಬ ಪವಾಡಕರ್ತ ಗುರು ಅವರ ಕೈಹಿಡಿದು ರೋಗಿಯ ಚರ್ಮ ಸೀಳಿಸುತ್ತಾನಂತೆ. ಡಾಕ್ಟರುಗಳು ತಮ್ಮ ಪ್ರೊಫೆಶನಲ್ ಚಾತುರ್ಯದ ಕ್ರೆಡಿಟ್ಟನ್ನು ಇತರರಿಗೆ ಸಹಸಾ ಬಿಟ್ಟುಕೊಡಲು ಒಪ್ಪುವುದಿಲ್ಲ ವಾದ್ದರಿಂದ ಈ "ಗುರು-ಸ್ಕಾಲ್‌ಪೆಲ್ ಇಫೆಕ್ಟಿನ" ಪವಾಡವನ್ನು ನಾವೂ ಒಪ್ಪಲೇಬೇಕಾಗುತ್ತದೆ.

ವಿಚಾರವಾದಿ ಅಥವಾ ರ್‍ಯಾಶನಲಿಸ್ಟ ಸಂಘದ ಡಾ. ಕೋವೂರರು ಈ ಪವಾಡಗಳೆಲ್ಲ ಬರೀ ಬುಡಬುಡಿಕೆ, ಕಣ್ಣುಕಟ್ಟು ಎನ್ನುತ್ತಾರೆ. ಪವಾಡಗಳ ವರದಿಗಳನ್ನೆಲ್ಲಾ ವೈಜ್ಞಾನಿಕ ಪರೀಕ್ಷೆಗಳಿಗೆ ಒಳಪಡಿಸಬೇಕೆಂದು ಅವರ ಒತ್ತಾಯ. ಮತ್ತೆ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳು ಡಾ. ನರಸಿಂಹಯ್ಯನವರು ಪವಾಡಗಳ ವರದಿಗಳ ಸತ್ಯಾಸತ್ಯ ವಿಮರ್ಶೆ ಮಾಡು ವುದಕ್ಕೆ ಒಂದು ವೈಜ್ಞಾನಿಕ ಸಮಿತಿಯನ್ನೇ ನೇಮಿಸಿಬಿಟ್ಟಿದ್ದಾರೆ.

ಉತ್ತರ ಕರ್ನಾಟಕದ ಭಾಷೆಯಲ್ಲಿ ಹೇಳುವುದಾದರೆ ಇದೆಲ್ಲ ಕೆಲಸಕ್ಕೆ ಬಾರದ "ಉಪದ್ವ್ಯಾಪ" ಎನ್ನುವುದು ನನ್ನ ದೃಢಾಭಿಪ್ರಾಯ. ಇಬ್ಬರು ಒಂದೇ ಪವಾಡವನ್ನು ನೋಡುತ್ತಿದ್ದರೆ ಒಬ್ಬರಿಗೆ ಕಾಣಿಸುತ್ತೆ ಇನ್ನೊಬ್ಬರಿಗೆ ಕಾಣಿಸುವುದಿಲ್ಲ ಅಂತ ನಿಮಗೆ ನಾನು ಮೊದಲೇ ಹೇಳಿದ್ದೇನೆ. ಪವಾಡಗಳನ್ನು ಪರೀಕ್ಷಿಸುವಾಗ ವಿಜ್ಞಾನಿಗಳಿಗೆ ಅವು ಕಾಣಿಸದಿದ್ದರೆ ಪವಾಡಗಳು ಸುಳ್ಳು ಎಂದಾಗುವುದೇ? ಪರೀಕ್ಷಕರ ಕಣ್ಣು ಪರೀಕ್ಷೆ ಮಾಡಿಸಬೇಕೆಂದು ಎಂದೂ

ಅದರ ಅರ್ಥವಾಗಲಿಕ್ಕಿಲ್ಲವೆ? ಕೋಣಗಳಿಗೆ ಬಣ್ಣ ಕಾಣಿಸುವುದಿಲ್ಲವಂತೆ; ಮನುಷ್ಯರಿಗೆ ಕಾಣಿಸುತ್ತದೆ. ಕೋಣಗಳ ಟೀಂ ಒಂದನ್ನು ತಂದು ಬಣ್ಣಗಳ ಅಸ್ತಿತ್ವವನ್ನು ಪರೀಕ್ಷಿಸಲು ಹೇಳಿದರೆ ಅವು ಬಣ್ಣಗಳಿಲ್ಲ ಅಂತಲೇ ತೀರ್ಪು ಕೊಟ್ಟಾವು. ಅವುಗಳ ತೀರ್ಪಿನಿಂದ ಬಣ್ಣಗಳ ನಾಸ್ತಿತ್ವ ಸಿದ್ಧವಾಯಿತೆಂದು ಮನುಷ್ಯರು ಒಪ್ಪಬಹುದೇ? ಪವಾಡಗಳನ್ನು ಕಾಣುವುದಕ್ಕೆ ಕಣ್ಣು ಬೇಕು. ಅದನ್ನು ಬೇಕಾದರೆ ಕೋವೂರರು ಅಜ್ಞಾನ ದೃಷ್ಟಿ ಅಂತ ಕರೆಯಲಿ.

ಡಾಕ್ಟರ್ ಕೋವೂರರು ಸಾಧು ಸಂತ ಬಾವಾ ಭಗವಾನರ ಪವಾಡಗಳ ಬಗ್ಗೆ ಮಾತ್ರ ಯಾಕೆ ತಲೆಕೆಡಿಸಿಕೊಳ್ಳುತ್ತಾರೆ ಅನ್ನುವುದು ನನಗೆ ಅರ್ಥವಾಗುವುದಿಲ್ಲ. ಅವರು ರಾಜಕೀಯ, ಸಾಮಾಜಿಕ, ಆರ್ಥಿಕ ಪವಾಡಗಳ ಪರೀಕ್ಷೆಗೆ ಯಾಕೆ ಹೊರಡುವುದಿಲ್ಲ? ಜಪಾನಿನಲ್ಲಿ, ಪಶ್ಚಿಮ ಜರ್ಮನಿಯಲ್ಲಿ, ಆರ್ಥಿಕ ಪವಾಡ ಆಯಿತು—ಎರಡನೇ ಮಹಾಯುದ್ಧ ಮುಗಿದಮೇಲೆ—ಅನ್ನುವ ವರದಿಗಳನ್ನು ನೀವು ಪೇಪರುಗಳಲ್ಲಿ ಓದಿಲ್ಲವೆ?

ಕಮ್ಯುನಿಸ್ಟರು, ಸೋಶಲಿಸ್ಟರು, ಫ್ಯಾಸಿಸ್ಟರು ಎಲ್ಲರೂ ಪವಾಡಪುರುಷರೇ. ಆಕಾಶದಿಂದ ಮಂತ್ರಾಕ್ಷತೆ ತೆಗೆಯುವ ಚಿಲ್ಲರೆ ಪವಾಡಗಳನ್ನು ಮಾಡುವವರಲ್ಲ. ಸ್ವರ್ಗವನ್ನೇ ಭೂಮಿಗೆ ತರುವ ಅಥವಾ ಭೂಮಿಯಲ್ಲಿದ್ದವರನ್ನೆಲ್ಲ ಸ್ವರ್ಗಕ್ಕೆ ಕಳಿಸುವ ಪವಾಡ ಮಾಡುತ್ತಾರೆ. ಪ್ರಜಾಸತ್ತೆಯ ಪವಾಡದ ಮಾತೇನು? ನೀವು ನಿಮ್ಮ ವೋಟನ್ನು ಹಾಕಿ ಬಂದುಬಿಟ್ಟರೆ ಬರೇ ಆ ಕಾಗದದ ಚೂರುಗಳೇ ಪವಾಡಗಳನ್ನು ಮಾಡುತ್ತವೆ. ಅವುಗಳು ಒಂದೇ ಹೊತ್ತಿಗೆ ಹುಲಿಗೂ ದನಕ್ಕೂ, ತೋಳಕ್ಕೂ ಕುರಿಮರಿಗೂ ಬೇಕಾದ್ದನ್ನೆಲ್ಲ ಕೊಡಿಸುವ ಪವಾಡಗಳನ್ನು ನಾವು ನಂಬುವುದಿಲ್ಲವೆ?

ಇವೆಲ್ಲ ಹಾಗಿರಲಿ, ಬೇರೆ ಕೆಲ ಆಥೆಂಟಿಕ್ ಪವಾಡಗಳನ್ನೂ ಡಾ. ಕೋವೂರರು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಲೇಬೇಕು. ಉದಾಹರಣೆಗೆ, ನಮ್ಮೂರಲ್ಲಿ ಒಬ್ಬರು ಒಂದೇ ವರ್ಷದ ಹಿಂದೆ ಬಡಬಗ್ಗರ ಸೇವೆಯಲ್ಲಿ ತನು ಮನಗಳನ್ನು (ಧನ ಅವರ ಕೈಲಿರಲಿಲ್ಲ) ಅರ್ಪಿಸಿದರು. ತಕೋ! ಈಗ ಅವರಿಗಾಗಿ ಮೂರಂತಸ್ತಿನ ಭವ್ಯ "ಕುಟೀರ"ವೊಂದು ಸೃಷ್ಟಿಯಾಗಿದೆ. ಅದಕ್ಕೆ "ದರಿದ್ರ ನಾರಾಯಣ ಪವಾಡ" ಅಂತಲೇ ಅವರು ಹೆಸರಿಟ್ಟಿದ್ದಾರೆ. ಇನ್ನೊಬ್ಬರು ಒಂದು ಸೊಸೈಟಿ ಪ್ರಾರಂಭಿಸಿದರು. ಇಪ್ಪತ್ತು ಲಕ್ಷ ಹಣ

ಕೂಡಿಸಿದರು. ಅದು ಸೊಸೈಟಿಯ ಟ್ರೆಜರಿಯಲ್ಲಿ ಭದ್ರವಾಗಿತ್ತು. ಮತ್ತೊಂದು ದಿನ ತೆರೆದು ನೋಡಿದಾಗ ಟ್ರೆಜರಿಯಲ್ಲಿ ಏನೂ ಇರಲಿಲ್ಲ—ಕಳ್ಳರು ಬಂದಿರಲಿಲ್ಲ, ಯಾರೂ ಅಫರಾ ತಫರಾ ಮಾಡಿರಲಿಲ್ಲ—ಅದು ಇದ್ದಕ್ಕಿದ್ದಂತೆ ಮಾಯವಾಗಿತ್ತು. ಕೆಲವು ದಿನಗಳನಂತರ ಅದು ಅಂಥದೇ ಪವಾಡದಿಂದ ಅವರ ಹೆಂಡತಿಯ ಬ್ಯಾಂಕ್ ಲೆಕ್ಕದಲ್ಲಿ ಕಾಣಿಸಿಕೊಂಡಿತ್ತು. ಇನ್ನೊಂದು ಕಡೆ ಜನತಾವಸತಿ ಸಹಕಾರ ಸಂಘ ಲಿಮಿಟೆಡ್‌ನವರು ಕೊಂಡುಕೊಂಡಿದ್ದ ಐದು ಎಕರೆ, ಇಪ್ಪತ್ತೊಂಬತ್ತು ಸೆಂಟ್ಸ್ ಜಮೀನೇ ಏಕಾಏಕಿ ಅದೃಶ್ಯವಾಯಿತು. ಮುಂಚಿನ ದಿನ ಅದು ಇದ್ದದ್ದನ್ನು ಕಂಡ ಅಥೆಂಟಿಕ್ ಸಾಕ್ಷಿಗಳಿದ್ದಾರೆ. ಮರುದಿನ ಅದು ಇರಲಿಲ್ಲ! ಇವುಗಳನ್ನೆಲ್ಲ ಪರೀಕ್ಷಿಸಿದರೆ ಡಾ. ಕೋವೂರರಿಗೆ ಪವಾಡಗಳ ಅಸ್ತಿತ್ವದಲ್ಲಿ ಖಂಡಿತ ವಿಶ್ವಾಸ ಮೂಡುವುದೆಂದು ನನಗೆ ವಿಶ್ವಾಸವಿದೆ.

ಡಾ. ಕೋವೂರರು ಏನೇ ಹೇಳಿಕೊಳ್ಳಲಿ ಅವರೂ ಒಂದು ಪವಾಡ ಮಾಡಲಿಕ್ಕೆ ಹೊರಟಿದ್ದಾರೆಂತ ನಾನು ಹೇಳುತ್ತೇನೆ. ಪವಾಡಗಳನ್ನು ವಿಜ್ಞಾನ ದ್ವಾರ ನಿರಾಕರಿಸುವುದರ ಮೂಲಕ ಜನತೆಗೆ ಅದರಲ್ಲಿರುವ ನಂಬಿಕೆಯನ್ನು ಹೋಗಲಾಡಿಸಲು ಅವರು ಕಂಕಣ ತೊಟ್ಟಿದ್ದಾರೆ. ಆದರಲ್ಲಿ ಅವರು ಯಶಸ್ವಿಯಾದರೆ ಅದು ಜಗತ್ತಿನಲ್ಲೇ ಅದ್ವಿತೀಯ ಪವಾಡವಾಗುವುದು. (೧೯೭೬)

## ಕಳಾಪ್ರಪೂರ್ಣ ಆಯುಷ್ಕರ್ಮಶಾಲಾ

"ಕಳಾಪ್ರಪೂರ್ಣ ಆಯುಷ್ಕರ್ಮಶಾಲಾ"ದ ಹೆಸರು ನೀವು ಕೇಳಿದ್ದೀರಾ? ಕೇಳಿದ್ದರೆ ಅಲ್ಲಿ ಆಯುಷ್ಕರ್ಮ ಮಾಡಿಸಿಕೊಂಡಿದ್ದೀರಾ? ಇಲ್ಲದಿದ್ದರೆ ನೀವು ಒಂದು ಅಮೂಲ್ಯವಾದ ಅನುಭವಕ್ಕೆ ಎರವಾಗಿದ್ದೀರಿ. ಇನ್ನು ಅದನ್ನು ಪಡೆಯುವ ಅವಕಾಶ ನಿಮಗೆ ದೊರೆಯಲಾರದು. ಯಾಕೆಂದರೆ, "ಕಳಾಪ್ರಪೂರ್ಣ ಆಯುಷ್ಕರ್ಮಶಾಲಾ" ಇಂದು ಉಳಿದಿಲ್ಲ. ಕಾಲಪ್ರವಾಹದ ಅಪ್ರತಿಭಟನೀಯವಾದ ಸೆಳವಿನಲ್ಲಿ ಅದು ಕೊಚ್ಚಿಕೊಂಡು ಹೋಗಿಬಿಟ್ಟಿದೆ.

ನಾನು "ಕಳಾಪ್ರಪೂರ್ಣ"ದ ಆಯುಷ್ಕರ್ಮಾನುಭವವನ್ನು ಕಳೆದುಕೊಳ್ಳ

ದಿದ್ದದ್ದು ಕೂಡ ದೈವಯೋಗದಿಂದಲೇ ಅನ್ನಬೇಕು. "ಕಳಾಪ್ರಪೂರ್ಣ" ಇದ್ದದ್ದು ನಮ್ಮೂರಿನ ಯಾವುದೊಂದು ರಾಜಾ ರೋಡಿನಲ್ಲಲ್ಲ. ಮನೆ ಆಫೀಸುಗಳ ನಡುವಣ ಅಂತರವನ್ನು ಒಂದು ಫರ್ಲಾಂಗಿನಷ್ಟು ಕಡಿಮೆ ಮಾಡು ವುದಕ್ಕಾಗಿ ನಾನು ರಾಜಾರೋಡುಗಳನ್ನು ತಪ್ಪಿಸಿ ಓಣಿಗಳ ಮೂಲಕ ಸಾಗು ತ್ತಿದ್ದುದರಿಂದಲೇ "ಕಳಾಪ್ರಪೂರ್ಣ"ದ ಬೋರ್ಡು ನನ್ನ ಕಣ್ಣಿಗೆ ಬಿದ್ದದ್ದು. ಆ ಬೋರ್ಡಿನ ಮುಂದೆಯೇ ನಾನು ನೂರು ವರ್ಷ ಕಾಲ ದಿನಾ ಸಾಗುತ್ತಿ ದ್ದರೂ ಅದರಲ್ಲಿ ಪ್ರವೇಶ ಪಡೆದು ಆಯುಷ್ಕರ್ಮ ಮಾಡಿಸಿಕೊಳ್ಳುವ ವಿಚಾರ ನನ್ನ ತಲೆಯಲ್ಲಿ ಹೊಕ್ಕಿರಲೇ ಇಲ್ಲ. ಬೋರ್ಡು ಬಹಳ ಮಜಬೂತಾಗಿತ್ತು. ಅಕ್ಷರಗಳು ತೆಲುಗನ್ನು ಹೋಲುತ್ತಿದ್ದರೂ ಕಳಾಪ್ರಪೂರ್ಣವೇ ಆಗಿದ್ದವು. ಅದರ ಮೇಲೆ ಧೂಳು ನಿಂತದ್ದನ್ನು ನಾನೆಂದೂ ನೋಡಿರಲಿಲ್ಲ. ಆಯುಷ್ಕರ್ಮ ಎಂಬ ಸಂಸ್ಕೃತ ಶಬ್ದದ ಅರ್ಥ ನಿಮಗೆ ತಿಳಿದಿರದಿದ್ದರೂ ಬೋರ್ಡಿನ ಮೇಲೆ ನಾಜೂಕಾಗಿ ಚಿತ್ರಿಸಿದ ಒಂದು ಕತ್ತರಿ ಮತ್ತು ಒಂದು ಕ್ಷೌರದ ಕತ್ತಿ ಒಳಗೆ ನಡೆಯುವ ಕರ್ಮದ ಸ್ವರೂಪವನ್ನು ನಿಮಗೆ ಬೋಧಿಸುತ್ತಿದ್ದವು. ಆದರೂ ನಾನು ಅದರೊಳಗೆ ತಲೆ ಹಾಕದಿರಲು ಕಾರಣವೆಂದರೆ, ಅದರ ಬಾಯಿ ತುಂಬುವ ಹೆಸರಿಂದ ಉದ್ಭವಿಸಿದ ಹೆದರಿಕೆ ಮತ್ತು ಅದರ ಬೋರ್ಡಿನ ನಿಷ್ಕಲ್ಮಷ ಸ್ವರೂಪವೇ ಆಗಿರಬೇಕು. ತೀರ ಒಪ್ಪ-ಓರಣವಾದ ಯಾವುದರ ಮುಂದೆಯೂ ನನಗೆ ಒಂದು ತರಹದ ಸಂಕೋಚ ಹುಟ್ಟುತ್ತದೆ. ಸ್ವಲ್ಪ ಅವ್ಯವಸ್ಥೆಯನ್ನು ನಾನು ಮೆಚ್ಚುತ್ತೇನೆ.

ಕೊನೆಗೊಂದು ದಿವಸ ನಾನು ಅಲ್ಲಿ ಪ್ರವೇಶಿಸಿದ್ದು ಒಂದು ಅನಿವಾರ್ಯ ದಿಂದಾಗಿ. ನನಗೆ ಅಂದು ಒಂದು ಹೇರ್‌ಕಟ್ ಆಗಲೇಬೇಕಿತ್ತು. ನನ್ನ ತಲೆ ಕೂದಲು ಎಷ್ಟು ಬೆಳೆದುಬಿಟ್ಟಿತ್ತೆಂದರೆ ನನ್ನ ಸಹೋದ್ಯೋಗಿಗಳು ನನಗೆ "ಅರಣ್ಯಕೇಶಿ" ಎಂಬ ಬಿರುದು ಕೊಡುವ ಬಹಿರಂಗ ಸೂಚನೆ ತಂದಿದ್ದರು. ನಾನು ಶುದ್ಧ ಡೆಮಾಕ್ರೆಟನಾಗಿರುವುದರಿಂದ ಬಿರುದುಗಳಿಗೆ ವಿರೋಧಿಯಾಗಿ ದ್ದೇನೆ ಮತ್ತು ನಿಜವಾದ ಡೆಮಾಕ್ರಸಿಯಲ್ಲಿ ಒಬ್ಬರ ಕೈಲಿ ಇತರರಿಗಿಂತ ಬಹಳ ಹೆಚ್ಚು ಹಣ ಇರುವುದು ಆ ಇತರರಿಗೆ ಹೇಗೆ ಇಷ್ಟವೆನಿಸುವುದಿಲ್ಲವೋ ಹಾಗೆ ಒಬ್ಬರ ತಲೆಯಲ್ಲಿ ಇತರರಿಗಿಂತ ಹೆಚ್ಚು ಉದ್ದ ಕೂದಲುಗಳಿರುವುದೂ ಸಹ್ಯವಾಗುವುದಿಲ್ಲ ಎಂಬ ತಥ್ಯವನ್ನು ನಾನು ಒಪ್ಪಿಕೊಳ್ಳಬೇಕಾಯಿತು.

ಆದ್ದರಿಂದ ಮರುದಿನವೇ (ಅಂದು ಆದಿತ್ಯವಾರ) ಬೆಳಗ್ಗೆ ನಾನು ನನ್ನ ತಲೆ ಕಡಿಸಿಕೊಳ್ಳುವುದಕ್ಕಾಗಿ ಆಯುಷ್ಕರ್ಮಶಾಲೆಗಳನ್ನು ಶೋಧಿಸುತ್ತ ಹೊರಟೆ. "ಲಾರ್ಡ್ಸ್ ಹೇರ್ ಡ್ರೆಸಿಂಗ್ ಸೆಲೂನ್", "ಮಹಾಲಕ್ಷ್ಮೀ ಹೇರ್ ಕಟಿಂಗ್ ಸೆಲೂನ್", "ಸರಸ್ವತೀ ಕೇಶಕರ್ತನಾಲಯ", "ವಿದ್ಯುತ್ ಶೇವಿಂಗ್ ಸೆಲೂನ್" ಮೊದಲಾದವುಗಳಲ್ಲಿ ಒಂದೊಂದಾಗಿ ಹಣಕಿದೆ. ಪ್ರತಿಯೊಂದ ರಲ್ಲಿಯೂ ಬೆಲ್ಲದ ಡಬ್ಬಿಯಲ್ಲಿ ಗೊದ್ದಗಳು ತುಂಬಿದಂತೆ ತಲೆಭಾರ ಇಳಿಸಿ ಕೊಳ್ಳುವವರ ಸಂದಣಿ ಇತ್ತು. ಇವುಗಳಲ್ಲಿ ಹೊಕ್ಕರೆ ತಿರುಗಿ ಹೊರಬಂದೇ ನೆಂಬ ವಿಶ್ವಾಸ ನನಗಾಗಲಿಲ್ಲ. ಈ ವಿಫಲ ಅನ್ವೇಷಣೆಯ ಕೊನೆಯಲ್ಲೇ ನಾನು ನಮ್ಮೀ "ಕಳಾಪ್ರಪೂರ್ಣ ಆಯುಷ್ಕರ್ಮಶಾಲಾ"ದ ಬಾಗಿಲಲ್ಲಿ ತಲೆ ಯನ್ನು ತುರುಕಿದ್ದು. ಆಹಾ! ಇಲ್ಲಿ ಇಬ್ಬರು ಮಾತ್ರ ಇದ್ದರು. ಒಬ್ಬನದು ತಲೆ ಮುಗಿದು ಮೋರೆಯ ಮೇಲೆ ಕೆಲಸ ಪ್ರಾರಂಭವಾಗಿತ್ತು. ಇನ್ನೊಬ್ಬ ಕಾಯುತ್ತಿದ್ದ. ಇಲ್ಲಿ ನನ್ನ ಬಿಡುಗಡೆ ಬೇಗ ಆಗಬಹುದೆಂಬ ನಿರೀಕ್ಷೆಯಿಂದ ನಾನು ಬಾಗಿಲು ತಳ್ಳಿ ಒಳಹೊಕ್ಕೆ. "ಬನ್ನೀ ಸಾರ್" ಎಂದು ನನಗೆ ಸ್ವಾಗತ ಸಿಕ್ಕಿತು.

ನಾಲ್ಕು ಜನರು ಕೂರಬಹುದಾದ ಒಂದು ಒರಗು ಬೆಂಚು ಕಾಯುವ ಗಿರಾಕಿಗಳಿಗಾಗಿ ಇತ್ತು. ಅದು ಎಷ್ಟು ಲಕಲಕ ಹೊಳೆಯುತ್ತಿತ್ತೆಂದರೆ ನಾನು ನನ್ನ ಅಂಗಿಯ ಹಿಂಭಾಗದ ಅಂಚನ್ನು ಝಾಡಿಸಿಕೊಂಡೇ ಅದರ ಮೇಲೆ ಕೂತೆ. ಎದುರುಗಡೆ ಒಂದು ಸಣ್ಣ ಟೀಪಾಯ್. ಅದರ ಮೇಲೆ ಅಂದಿನ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆ ಇದ್ದವು. ಅಲ್ಲದೆ ತೆಲುಗಿನ ಪ್ರಸಿದ್ಧ ಸಾಹಿತ್ಯಿಕ ಪತ್ರಿಕೆ "ಭಾರತಿ"ಯೂ ಇತ್ತು. ಸೆಲೂನಿನಲ್ಲಿ ಸಾಹಿತ್ಯ ಪತ್ರಿಕೆ ಗೇನು ಕೆಲಸ ಅಂತ ಮನಸ್ಸಿನಲ್ಲೇ ಸೋಜಿಗಪಟ್ಟೆ; ಕೇಳಲಿಲ್ಲ. ಸೋಮಾರಿ ತನದಿಂದ ಸುತ್ತಲೂ ಕಣ್ಣು ಹಾಯಿಸಿದೆ.

ಆಯುಷ್ಕರ್ಮಶಾಲೆಯ ಗೋಡೆಗಳಲ್ಲಿ ನಟನಟಿಯರ ಅಥವಾ ದೇವ ದೇವಿಯರ ಅಸಹ್ಯ ಚಿತ್ರಗಳಾಗಲಿ ಕ್ಯಾಲೆಂಡರುಗಳಾಗಲೀ ಇರಲಿಲ್ಲ. ಬುದ್ಧ ಮಾತೆ ಮಾಯಾದೇವಿ ಎಡಗಾಲು ಮಡಚಿ ನಿಂತ ಅಜಂತದ ವರ್ಣಚಿತ್ರದ ಅತ್ಯುತ್ತಮ ಪ್ರತಿಕೃತಿಯೊಂದು ಎದುರು ಗೋಡೆಯಿಂದ ತೂಗುತ್ತಿತ್ತು. ಇನ್ನೊಂದು ಕಡೆ ಅಜಂತದ ಸ್ತ್ರೀಕೇಶಕಲಾಪ ಮಾದರಿಗಳ ರೇಖಾಚಿತ್ರ

ವೊಂದನ್ನು ನೋಡಿ ಮನಸ್ಸಿನಲ್ಲೇ ನಕ್ಕೆ. ಮತ್ತೊಂದೆಡೆ ತಿಂಗಳು ತಾರೀಕು ಗಳನ್ನು ಮಾತ್ರ ತೋರಿಸುವ ಕ್ಯಾಲೆಂಡರ್. "ಕಳಾಪ್ರಪೂರ್ಣ ಆಯುಷ್ಕರ್ಮ ಶಾಲಾ : ಪ್ರೊ : ಎನ್. ವೆಂಕಟೇಶ್ವರುಡು" ಎಂಬ ಚಿಕ್ಕ ಬೋರ್ಡು "ಕಳಾ ಪ್ರಪೂರ್ಣ"ದ ಒಡೆತನವನ್ನು ನಿರ್ಘೋಷಿಸುತ್ತಿತ್ತು. ಒಂದೇ ಒಂದು ಕ್ಷೌರದ ಕುರ್ಚಿ. ಅದರ ಮುಂದೆ ದೊಡ್ಡ ಕನ್ನಡಿ. ಪಕ್ಕದಲ್ಲೇ ಮತ್ತೊಂದು ನಿಲುವು ಗನ್ನಡಿ. ಒಂದೇ ಧೂಳೀ ಕಣ, ಸಾಬೂನಿನ ನೊರೆಯ ಕಲೆ ಅಥವಾ ಬೆರಳ ಮುದ್ರೆ ಕನ್ನಡಿಗಳ ಮೇಲಿಲ್ಲ. ನಿಲುವುಗನ್ನಡಿಯ ಮುಂದೆ ನಿಂತು ನಾನು ಮುಖ ವನ್ನು ಅತ್ತ ಇತ್ತ ತಿರುಗಿಸಿ ನೋಡಿಕೊಂಡೆ. ನನ್ನ ಮುಖವನ್ನು ಬೇರೆ ಸೆಲೂನು ಗಳ ಕನ್ನಡಿಗಳ ಹಾಗೆ ಇದು ಇದ್ದದ್ದಕ್ಕಿಂತ ಹೆಚ್ಚು ಸೊಟ್ಟಗೆ ಮಾಡಿ ತೋರಿಸಲಿಲ್ಲ.

ನನ್ನ ಈ ಪ್ರಾಥಮಿಕ ಸರ್ವೆ ಮುಗಿಯುತ್ತಿದ್ದಂತೆ ಕುರ್ಚಿಯಲ್ಲಿ ಕುಳಿತಿ ದ್ದವನ ಕ್ಷೌರಕರ್ಮ ಮುಗಿಯಿತು. ಕೈಗನ್ನಡಿಯನ್ನು ಹಿಡಿದು ಪ್ರೊ. ಎನ್. ವೆಂಕಟೇಶ್ವರುಡು ಎಲ್ಲ ದಿಕ್ಕುಗಳಿಂದಲೂ ತೋರಿಸಿ, ಗಿರಾಕಿಯ ತಲೆ ಸರಿ ಯಾಗಿದೆಯೆಂದು ಖಾತ್ರಿ ಮಾಡಿಕೊಟ್ಟು ಅವನ ಗಲ್ಲವನ್ನು ಮೆದುವಾಗಿ ಕೈಯಿಂದ ನೀವಿ ಎಲ್ಲಿಯೂ ಒರಟು ಭಾಗ ಉಳಿದಿಲ್ಲವೆಂಬುದು ತನಗೆ ಖಾತ್ರಿ ಮಾಡಿಕೊಂಡ. ಅದಾಗಿ ಐದು ನಿಮಿಷ ಕಾಲ ಶಾಂಪೂ ಕಾರ್ಯಕ್ರಮ ವಾಯಿತು. ಶಾಂಪೂ ಕೊಡುವಾಗಿನ ಅವನ ಅಂಗೈಗಳ ಆಘಾತ ಯಾವುದೋ ಲಯಕ್ಕನುಗುಣವಾಗಿ ಸಾಗುತ್ತಿದ್ದಂತೆ ನನಗನಿಸಿತು. ಆದರೆ ತಾಳವನ್ನು ಗುರುತಿಸಲು ಸಾಧ್ಯವಾಗಲಿಲ್ಲ. ವೆಂಕಟೇಶ್ವರುಡುವಿನ ಕೈಗಳ ಚಲನೆಯಲ್ಲಿ ನೃತ್ಯಾಭ್ಯಾಸ ಮಾಡಿದವನ ಕೈಯಾಟದ ಒಂದು ಲಾವಣ್ಯಮಯತೆ ಇತ್ತು. ಅದನ್ನು ನಾನು ಮನಸಾ ಅಭಿನಂದಿಸುತ್ತಿದ್ದಂತೆ ವೆಂಕಟೇಶ್ವರುಡು ಗಿರಾಕಿಯ ರುಂಡವನ್ನು ಎರಡೂ ಕೈಗಳಿಂದ ವೈಸಿನಲ್ಲಿ ಹಿಡಿದ ಹಾಗೆ ಹಿಡಿದು ಮೂರೋ ನಾಲ್ಕೋ ಸಲ ಜರುಗಿಸಿದ ರಭಸಕ್ಕೆ ಮೂರು ನಾಲ್ಕು ಲಟಿಕೆಗಳು ಹೊರಟವು. ಗಿರಾಕಿಯ ಗೋಣು ಮುರಿದೇ ಹೋಯಿತು ಅಂತ ನನಗೆ ಭಯವಾಯಿತು, ಹಾಗೇನೂ ಆಗಲಿಲ್ಲ. ಸ್ವಚ್ಛವಾದ ಟವಲಿನಿಂದ ಗಿರಾಕಿಯ ಮುಖ ಒರೆಸಿ, ಹೆಜಲೀನ್ ಸ್ನೋವನ್ನು ಮೃದುವಾಗಿ ತೊಡೆದು, ಅವನಿಂದ ಆರಾಣೆ ಕಾಸು ತೆಗೆದುಕೊಂಡು, ನಮಸ್ಕಾರ ಹೇಳಿ ಬೀಳ್ಕೊಟ್ಟು ಇನ್ನೊಬ್ಬ ಗಿರಾಕಿಯನ್ನು

ವೆಂಕಟೇಶ್ವರುಡು ಕುರ್ಚಿಗೆ ಆಮಂತ್ರಿಸಿದ.

ಅವನ ಕತ್ತರಿ ಬಾಚಣಿಕೆಗಳ ಆಟವನ್ನು ನಾನು ಕೆಲವು ನಿಮಿಷ ಮಂತ್ರ ಮುಗ್ಧನಂತೆ ನೋಡುತ್ತ ಕುಳಿತೆ. ಅವನ ಹತ್ತಿರ ಬೇರೆ ಬೇರೆ ಗಾತ್ರದ ಕತ್ತರಿಗಳಿದ್ದವು ; ಬೇರೆ ಬೇರೆ ತರಹದ ಹಲ್ಲುಗಳ ರಚನೆಯುಳ್ಳ ಬಾಚಣಿಕೆಗಳಿದ್ದವು. ಆದರೆ ಕೂದಲು ಕೊಯ್ಯುವ ಮೆಶೀನು ಮಾತ್ರ ಇರಲಿಲ್ಲವೆಂದು ಗಮನಿಸಿ ನಾನು ಸೋಜಿಗಪಟ್ಟೆ ; ಮತ್ತು ಬರಿ ಕತ್ತರಿಗಳಿಂದ ಇವನ ಕಟಿಂಗ್ ಯಾವಾಗ ಮುಗಿಯಬೇಕು ಅಂತ ಭಯವನ್ನೂ ಪಟ್ಟೆ. ಬೇರೇನೂ ಕೆಲಸ ವಿಲ್ಲದ್ದರಿಂದ ವೆಂಕಟೇಶ್ವರುಡುವನ್ನು ಇನ್‌ಸ್ಪೆಕ್ಟ್ ಮಾಡತೊಡಗಿದೆ. ಅನೇಕ ಆಂಧ್ರರ ಹಾಗೆ ಇವನೂ ಕಪ್ಪೇ. ವಯಸ್ಸು ೩೦ ಇರಬಹುದು. ನಿಲುವು ಎತ್ತರ, ಎದೆ ಅಗಲ. ಆದರೆ ಅಂಥ ಸುಂದರನಲ್ಲ. ಎಡದ ಕಾಲಿಗೆ ಬಿಗಿಯಾಗಿ ಕಚ್ಚೆ ಹಾಕಿದ್ದ. ಬಟ್ಟೆಬರೆ ನಿಷ್ಕಲ್ಮಷವಾಗಿತ್ತು. ಎದುರಿಗೊಂದು ಏಪ್ರನ್ ತೊಟ್ಟಿದ್ದ. ಸ್ವಚ್ಛತೆಯ ಬಗ್ಗೆ ಅಕ್ಷೌರಿಕೀಯವಾದ ಆಸಕ್ತಿ ಅವನಿಗಿದ್ದಂತೆ ಕಂಡಿತು. ಶೇವ್ ಮಾಡುವಾಗ ಗಡ್ಡ ಕೆರೆದ ಸಾಬೂನನ್ನು ಅವನೆಂದೂ ಮುಂಗೈಗೆ ಒರೆಸುತ್ತಿರಲಿಲ್ಲ.

ಅಕ್ಷೌರಿಕೀಯವಾದ ಮಿತಭಾಷಣವೂ ಅವನ ಗುಣ(ಅಥವಾ ಅವಗುಣ) ವಾಗಿತ್ತು. ಒಮ್ಮೆ ಗಿರಾಕಿ ನಡುವೆ ಏನೋ ಸೂಚನೆ ಕೊಟ್ಟ. ವೆಂಕಟೇಶ್ವರುಡು ಅವನನ್ನು ಅರ್ಧದಲ್ಲೇ ಸವಿನಯವಾಗಿ ತರುಬಿ, “ಬಿಡಿ ಸಾರ್ ! ನನ್ನ ವೃತ್ತಿ ನಂಗೊತ್ತು. ನೀವೇನೂ ಹೇಳಬೇಡಿ. ಮುಗಿದ ಮೇಲೆ ಇಫೆಕ್ಟ್ ನೋಡಿ ಆಮೇಲೆ ಹೇಳಿ !” ಎಂದುಬಿಟ್ಟ.

ಆಗಲೇ ಇಪ್ಪತ್ತು ನಿಮಿಷ ದಾಟಿತ್ತು. ಮಿತಭಾಷಿ ಕ್ಷೌರಿಕನಿಗೆ ಅವಗುಣ ಅಂತ ನನಗೆ ಬೇಗ ಅನುಭವಕ್ಕೆ ಬಂತು. ನನಗೆ ಬೋರಾಗಿ ಒಂದು ಆಕಳಿಕೆ ಯನ್ನು ಬಿಡುಗಡೆ ಮಾಡಿ ಅದಕ್ಕೆ ಚಿಟಿಕೆ ಶಾಸ್ತ್ರ ಮಾಡಿದೆ. ವೆಂಕಟೇಶ್ವರುಡು ಕತ್ತರಿ ಕ್ಷಣಕಾಲ ಗಕ್ಕನೆ ನಿಂತಿತು. ನಾನು ತುಸು ಬೆಚ್ಚಿ ಅವನ ಮುಖ ನೋಡಿದೆ. ಅದರ ಮೇಲೆ ಅಸಹನೆಯ ಛಾಯೆ ಹಾಯ್ದು ಹೋದದ್ದನ್ನು ಕಂಡೆ. “ಬೋರಾಗುತ್ತಿದ್ದರೆ ಸ್ವಲ್ಪ ಹೊರಗೆ ಹೋಗಿಬನ್ನಿ, ಸಾರ್. ನನಗೆ ಇವರನ್ನ ಮುಗಿಸೋಕೆ ಇನ್ನು ಇಪ್ಪತ್ತು ನಿಮಿಷ ಬೇಕು. ಅಷ್ಟರೊಳಗೆ ಬನ್ನಿ. ನಿಮ್ಮ ಸರದಿ ರಿಜರ್ವ್ ಇಟ್ಟಿರುತ್ತೇನೆ. ಇಪ್ಪತ್ತು ನಿಮಿಷ ಮೀರಿದರೆ ಮಾತ್ರ

ಬಂದ ಬೇರೆ ಗಿರಾಕಿಗೆ ಮೊದಲು ಅವಕಾಶ ಕೊಡಬೇಕಾಗುತ್ತೆ" ಅಂದ.

ನಾನು ಈ "ಆಮಂತ್ರಣ" ಸ್ವೀಕರಿಸಿ ಹೊರಹೊರಟೆ. ಈ ಉಡಾಫೆ ಕ್ಷೌರಿಕನ ಹಂಗೇಕೆ ಅಂತ ಬೇರೆ ಕೆಲ ಸೆಲೂನುಗಳಲ್ಲಿ ತಲೆ ಹಾಕಿದೆ. ಎಲ್ಲಿಯೂ ಕಡಿಮೆ ಗದ್ದಲ ಕಾಣಿಸಲಿಲ್ಲ. ಉಪಾಯ ಕಾಣದೆ ಮತ್ತೆ "ಕಳಾ ಪ್ರಪೂರ್ಣ"ಕ್ಕೇ ಹಿಂತಿರುಗಿದೆ. ಎರಡನೇ ಗಿರಾಕಿಯ ಶಾಂಪೂ ನಡೆದಿತ್ತು. ವೆಂಕಟೇಶ್ವರುಡು, "ಬನ್ನೀ ಸಾರ್, ಸಕಾಲಕ್ಕೆ ಬಂದಿರಿ. ಇದೇ ಇನ್ನೊಬ್ಬರು ಬಂದು ಹೋದರು. ನಿಮಗೆ ರಿಜರ್ವೇಶನ್ ಇದ್ದದ್ದರಿಂದ ಅವರಿಗೆ ಐದು ನಿಮಿಷ ತಡೆದು ಬರ್ರೋಕೆ ಹೇಳಿವೆ" ಅಂದ. ಇನ್ನು ಐದು ನಿಮಿಷ ತಡ ಮಾಡಿದರೆ ನಿಮ್ಮ ಸರದಿ ಹಾರಿಹೋಗುತ್ತಿತ್ತು ಅನ್ನೋದನ್ನ ಬಾಯಿಬಿಟ್ಟು ಹೇಳದೆ ಇದ್ದ ಅವನ ವಾಕ್‌ಸಂಯಮವನ್ನು ಮೆಚ್ಚಿದೆ.

ಮುಗಿಸಿದ ಗಿರಾಕಿಯನ್ನು ಬೀಳ್ಕೊಟ್ಟು ವೆಂಕಟೇಶ್ವರುಡು ಒರಸರಿವೆ ಯಿಂದ ಕುರ್ಚಿಯನ್ನು ಝಾಡಿಸದೆ ಮೆತ್ತಗೆ ಒರೆಸಿ ನನ್ನನ್ನು "ಹಸೆಗೆ" ಕರೆದ. ಆ ಇನ್ನೊಬ್ಬ ಗಿರಾಕಿ ಬಂದು ಹಣಕಿದಾಗ, "ನಲುವತ್ತು ನಿಮಿಷ ಬಿಟ್ಟು ಬನ್ನಿ, ಸಾರ್" ಎಂದಷ್ಟು ಹೇಳಿ ತನ್ನ ಕ್ಷೌರಕತ್ತಿಯನ್ನು ಮಸೆದಿಟ್ಟು ಕತ್ತರಿ ಬಾಚಣಿಗೆ ಕೈಗೆ ತೆಗೆದುಕೊಂಡ. ಅವನ ಕರ್ತನ ಕ್ರಮ ಮೌನವಾಗಿ ಮೂರು ನಿಮಿಷ ಸಾಗುವಷ್ಟರಲ್ಲಿ ನಾನು ನನ್ನ ಸ್ವಾಭಾವಿಕ ವಾಚಾಳಿತನ ವನ್ನು ಹತ್ತಿಕ್ಕಲಾರದೆ ಮಾತು ತೆಗೆದೆ.

"ನೀವು ಈ ಕಾಲದಲ್ಲಿಯೂ ಬರೇ ಕತ್ತರೀನೆ ಉಪಯೋಗಿಸ್ತೀರಲ್ಲ. ಕೆಲಸ ಕಮ್ಮಿ ಮಾಡೋ ಉತ್ತಮ ಮೆಶೀನ್ ಪೇಟೆಯಲ್ಲಿ ಬೇಕಾದಷ್ಟು ಇವೆ. ಯಾಕೆ ಅವನ್ನ—"

"ಸಾರ್, ನೀವು ಕೇಳೋದು ಸರಿ. ಆದರೆ ನನಗೆ ಈ ಯಂತ್ರಗಳು ಸೇರಲ್ಲ. ಯಂತ್ರಗಳೇನು, ಬಿಳೀ ಆಫೀಸರುಗಳ ಮನೇ ಲಾನ್‌ನ ಹುಲ್ಲು ಕತ್ತರಿಸುವ ತೋಟವರ್‌ಗಳ ಹಾಗೆ ನಿಮ್ಮ ತಲೆಕೂದಲನ್ನ ಸಪಾಟಾಗಿ ಕತ್ತ ರಿಸಿಬಿಡ್ತಾವೆ. ನಿಜವಾದ ಕಲಾವಿದ ತನ್ನ ಕಲಾಸಾಮರ್ಥ್ಯ ತೋರಿಸೋಕೆ ಯಂತ್ರ ಮುಟ್ಟದೆ ಕತ್ತರೀನೇ ಬಳಸುತ್ತಾನೆ."

"ಆದರೆ ಯಂತ್ರಗಳು ಬೇಗಬೇಗ, ತುಂಬಾ ಚೆನ್ನಾಗಿ ಕತ್ತರಿಸ್ತಾವಲ್ಲ. ಮೆಶೀನ್ ಕಟ್ಟನಲ್ಲಿ ಏರು ತಗ್ಗು ಉಳಿಯಲ್ಲ ಅಂತ ನನ್ನ ತಿಳಿವಳಿಕೆ",

ಅವನನ್ನ ಮಾತಿಗೆ ಎಳೆದ ಸಂತೋಷದಿಂದ ಮುಂದುವರಿಸಿದೆ.

"ಸಪಾಟಾಗಿ ಕತ್ತರಿಸ್ತವೆ ಅಂತ ಒಪ್ಪಿದೆನಲ್ಲ, ಸಾರ್? ಆದರೆ ಕಲಾತ್ಮಕ ವಾಗಿ ಕತ್ತರಿಸಲ್ಲ. ನಾನು ಮೆಶೀನ್ ಉಪಯೋಗ ಮಾಡಿ ನೋಡಿ ಆಮೇಲೆ 'ಕಳಾಪ್ರಪೂರ್ಣ'ದಲ್ಲಿ ಅದಕ್ಕೆ ಬಹಿಷ್ಕಾರ ಹಾಕಿದ್ದೇನೆ."

"ಏನಾಯಿತು?" ಅಂದೆ.

"ಸಾರ್, ನೀವು ಕೇಳ್ತೀರಿ ಅಂತ ಹೇಳ್ತೀನಿ. ಬೇರೆ ಗಿರಾಕಿಗಳ ಹತ್ತಿರ ನನ್ನದು ಎಷ್ಟು ಬೇಕೋ ಅಷ್ಟೇ. ರಿಸ್ಪೆಕ್ಟ್ ಕೊಟ್ಟು ಮಾತಾಡೋಕೆ ಹೆಚ್ಚು ಜನಕ್ಕೆ ಬರಲ್ಲ. ನಾವು ಕ್ಷೌರಿಕರು ಅಂತ ಏಕವಚನದಲ್ಲಿ ಮಾತಾಡ್ತಾರೆ. ನಿಮಗೆ ರಿಸ್ಪೆಕ್ಟ್ ಕೊಡೋದು ಗೊತ್ತು ಅಂತ ನಿಮ್ಮ ಹತ್ತಿರ ಮಾತಿಗೆ ಇಳಿದೆ ನೋಡಿ, ಸಾರ್. ಮೆಶೀನ್ ಏನು ಮಾಡುತ್ತೆ? ಎಲ್ಲಾ ತಲೇನೂ ಒಂದೇ ತರಹ ಕಟ್ಮಾಡುತ್ತೆ. ಆದರೆ ಎಲ್ಲಾ ತಲೇನೂ ಒಂದೇ ತರಹ ಇರಲ್ಲ ಅನ್ನೋದೀಗ ಕಷ್ಟ."

"ಹೇಗೇ!" ಅಂತ ಮೋಘಂ ಆಗಿ ನಾನು ಪ್ರತಿಕ್ರಿಯೆ ತೋರಿಸಿದೆ.

"ಅಂದರೆ, ಸಾರ್, ತಲೆಗಳ ಶೇಪ್ ಬೇರೆ ಬೇರೆ ಇರುತ್ತೆ. ಆಯಾ ಶೇಪಿಗೆ ಸರಿಯಾಗಿ ಅವರವರಿಗೆ ಕಟಿಂಗ್ ಕೊಡಬೇಕಾಗುತ್ತೆ."

"ಹೇಳಿ!"

ವೆಂಕಟೇಶ್ವರುಡುಗೆ ಉತ್ಸಾಹ ಬಂದ ಹಾಗೆ ತೋರಿತು. "ಕೆಲವರ ತಲೆ ಆಕಾರ ಉದ್ದ ಇರುತ್ತೆ, ಕೆಲವರದ್ದು ದುಂಡಗಿರುತ್ತೆ, ಕೆಲವರದ್ದು ಅಗಲ. ಎಲ್ಲಾ ತಲೆಗೆ ಒಂದೇ ತರಹ ಫ್ಯಾಶನ್ ಒಪ್ಪಲ್ಲ. ಬಹಳ ವಿಚಾರ ಮಾಡಿ ನಾನು ಶೇಪಿಗೆ ಸರಿಯಾದ ತಂತ್ರವನ್ನ ಅಳವಡಿಸಿಕೊಂಡಿದ್ದೇನೆ. ಅದನ್ನ ಎಕ್ಸಿಕ್ಯೂಟ್ ಮಾಡಕ್ಕೆ ಮೆಶೀನ್ ಪ್ರಶಸ್ತ ಆಗಲ್ಲ."

"ಹಂ!" ಅಂದೆ ನನ್ನ ಅಜ್ಞಾನ ಮುಚ್ಚಿಕೊಳ್ಳುತ್ತ.

"ನೋಡಿ ಸಾರ್, ಈಗ ಹೊರಗೆ ಹೋದರಲ್ಲ, ಆ ಗಿರಾಕಿ ತಲೆ ಶೇಪಿಗೆ ಕೆನ್ನೆ ಮತ್ತು ತಲೆ ಹಿಂಭಾಗ ತೆಳ್ಳಗೆ ಹೇರ್‌ಕಟ್ ಮಾಡಿದರೆ ಚೆನ್ನಾಗಿ ಕಾಣುತ್ತೆ. ಅವರ ತಲೆ ದುಂಡಾಗಿ, ಮಾಟವಾಗಿದೆ. ಮೊದಲು ಕಟ್ ಮಾಡಿಸಿಕೊಂಡು ಹೋದರಲ್ಲ, ಅವರ ಮುಖಕ್ಕೆ ಕೆನ್ನೆ ಕಡೆ ಸ್ವಲ್ಪ ದಪ್ಪ ಕೂದಲು ಬಿಟ್ಟು ಸ್ವಲ್ಪ ಲೋ-ಕಟ್ ಮಾಡಿದರೆ ಚೆನ್ನಾಗಿರುತ್ತೆ."

"ಆದರೆ ಫ್ಯಾಶನ್‌ಗಳು ಇರುತ್ತಾವಲ್ಲ ಮಿ. ವೆಂಕಟೇಶ್ವರುಡು. ಯಾವಾಗ ಯಾವ ಫ್ಯಾಶನ್ ಚಲಾವಣೆಯಲ್ಲಿರುತ್ತೋ ಆವಾಗ ಅದನ್ನ ಬೇಕು ಅನ್ನೋಲ್ಲವೆ ಗಿರಾಕಿಗಳು?"

"ಅಂತಾರೆ ಸಾರ್, ಫ್ಯಾಶನ್ ಬೇರೆ ಬ್ಯೂಟಿ ಬೇರೆ ಅನ್ನೋದು ಜನಕ್ಕೆ ತಿಳಿಯಲ್ಲ, ಸಾರ್. ಆದರೆ ನಾನು ಕಲಾಧರ್ಮ ಮರೆಯಲ್ಲ. ತಲೆಗೆ ಸರಿಯಾದ ಕ್ಷೌರಾನೇ ಮಾಡ್ತೇನೆ."

"ಗಿರಾಕಿ ಒಪ್ಪುತ್ತಾರೆಯೆ? ತಲೆಗಳು ಗಿರಾಕಿಗಳದ್ದು, ಅವರು ಹೇಳಿದ ಹಾಗೆ ಮಾಡಬೇಕಲ್ಲವೆ?"

"ಸಾರ್, ನೀವು ಡಾಕ್ಟರುಗಳ ಕಡೆ ಹೋದರೆ ನಿಮ್ಮ ರೋಗಕ್ಕೆ ತಕ್ಕ ಮದ್ದು ಇಂಥಾದ್ದು ಅಂತ ನಿರ್ಧಾರ ಮಾಡೋವರು ನೀವೋ ಡಾಕ್ಟರೋ?" ಅಂದ ವೆಂಕಟೇಶ್ವರುಡು.

"ಡಾಕ್ಟ್ರು" ಅಂತ ನಾನು ಒಪ್ಪಲೇಬೇಕಾಯಿತು.

"ವಕೀಲರ ಹತ್ತಿರ ಹೋದರೆ ಯಾವ ಪಾಯಿಂಟಿನ ಮೇಲೆ ಕೇಸ್ ವಾದಿಸಬೇಕು ಅಂತ ನೀವೇ ಹೇಳ್ತೀರೋ ವಕೀಲರೊ?"

"ವಕೀಲರು."

"ಮತ್ತೆ ಕ್ಷೌರಿಕರಿಗೆ ಮಾತ್ರ ನೀವೇ ಡಿಕ್ಟೇಟ್ ಮಾಡಬೇಕು ಅಂತ ಯಾಕೆ ಹಟ?"

ಇದಕ್ಕೆ ಉತ್ತರ ನನ್ನ ಹತ್ತಿರ ಇರಲಿಲ್ಲ. "ಆದರೆ ಗಿರಾಕಿ ಇಚ್ಛೆ ಅನ್ನೋದು ಒಂದು ಉಂಟಲ್ಲ?" ನಾನು ಕುಂಟಿದೆ.

"ಗಿರಾಕಿ ಇಂಥಾದ್ದೇ ಔಷಧ ಕೊಡಿ ಅಂದರೆ ಸಂಭಾವಿತ ಡಾಕ್ಟ್ರು ಬೇರೆ ಕಡೆ ಹೋಗು ಅಂತಾರೆ. ವಕೀಲರೂ ಹಾಗೇನೆ. ನಾನೂ ಅದೇ ಮಾಡ್ತೇನೆ. ಈ ತಲೆಗೆ ಯಾವ್ದು ತಕ್ಕ ಕ್ಷೌರ ಅಂತ ನಿರ್ಣಯಿಸುವವನು ನಾನು. ನನ್ನ ಮೇಲೆ ವಿಶ್ವಾಸ ಇದ್ದರೆ ಒಪ್ಪಿಕೊಂಡು ಬನ್ನಿ ಅಂತೇನೆ."

ರವಿವಾರ ದಿನವೂ ಕಳಾಪ್ರಪೂರ್ಣದಲ್ಲಿ ಗಿರಾಕಿ ಯಾಕೆ ಕಮ್ಮಿ ಅಂತ ನನಗೀಗ ಹೊಳೆಯಿತು.

"ಮೊದಲು ಮಾಡಿಸಿಕೊಂಡು ಹೋದರಲ್ಲ, ಅವರ ನೆತ್ತಿ ಬಹಳ ಚಪ್ಪಟೆ. ಅವರಿಗೆ ನೆತ್ತೀಲಿ ಕೂದಲು ಸ್ವಲ್ಪ ದಪ್ಪ ಇಟ್ಟು ಆಕಾರಾನ ಸ್ವಲ್ಪ ತಿದ್ದೋಕೆ ಬರುತ್ತೆ."

ದೇವರು ಮಾಡಿದ್ದನ್ನ ತಿದ್ದುತ್ತೀನೆ ಅನ್ನುವ ಇವನ ಬಗ್ಗೆ ಕುತೂಹಲ ಹೆಚ್ಚಿ ನಾನು, "ನನ್ನ ತಲೇ ಬಗ್ಗೆ ನಿಮ್ಮ ಅಭಿಪ್ರಾಯ ಏನು?" ಎಂದು ಕೇಳಿದೆ.

"ಕೋಪ ಮಾಡಿಕೋಬೇಡಿ, ಸಾರ್. ನಿಮ್ಮ ತಲೆ ಹಿಂಭಾಗದಲ್ಲಿ ಬಲಗಡೆ ಸ್ವಲ್ಪ ಗುಳಿ ಇದೆ; ಎಡಗಡೆ ಸ್ವಲ್ಪ ದಿಬ್ಬ. ಈ ಗುಳಿ ಅದಷ್ಟು ಮುಚ್ಚೋ ಹಾಗೆ ಮಾಡಬೇಕಾಗುತ್ತೆ. ನಿಮ್ಮ ಹಿಂದಲೆಯ ಕಟಿಂಗ್ ಬಗ್ಗೆ ಮಾಡ ಬೇಕಾದ ಬೇಸಿಕ್ ನಿರ್ಣಯ ಇದು, ಸಾರ್. ಒಂದು ಸಲ ಈ ನಿರ್ಣಯ ಮಾಡಿದನಂತರ, ಅದಕ್ಕೆ ಅಸಂಗತವಾಗದ ಹಾಗೆ ಕುತ್ತಿಗೇ ಹಿಂಭಾಗದಲ್ಲಿ ಕೆನ್ನೆಗಳಲ್ಲಿ ನೆತ್ತಿಯಲ್ಲಿ ಎಷ್ಟೆಷ್ಟು ದಪ್ಪ ಕೂದಲು ಇಡಬೇಕು ಅಂತ ನಿರ್ಧಾರ ಮಾಡಬೇಕಾಗುತ್ತೆ. ಅದಕ್ಕೇ ನಾನು ಹೇಳೋದು, ನಿರ್ಣಯ ನನಗೆ ಬಿಡಿ, ಅಂತ."

ವೆಂಕಟೇಶ್ವರುಡು ಮಾತಾಡುತ್ತಿದ್ದ ಹಾಗೆ ಅವನ ಕತ್ತರಿಗಳು ಬದಲಾಗು ತ್ತಿದ್ದವು; ಬಾಚಣಿಗೆಗಳೂ ಬದಲಾಗುತ್ತಿದ್ದವು. ಕತ್ತರಿಯ ಸಪ್ಪಳದಲ್ಲಿ ಒಂದು ಲಯ ಇತ್ತು ಅನ್ನೋ ನನ್ನ ಮೂಲ ಭಾವನೆ ದೃಢಪಡುತ್ತಾ ಇತ್ತು. ನನ್ನ ಮನಸ್ಸು ಓದಿದವನ ಹಾಗೆ ವೆಂಕಟೇಶ್ವರುಡು ಹೇಳಿದ: "ನಿಮಗ್ಗೊತ್ತೇ ಸಾರ್, ಪ್ರತಿ ಕತ್ತರಿ ಆರಿಸೋವಾಗ ನಾನು ಎಷ್ಟು ಜಾಗ್ರತೆ ವಹಿಸ್ತೀನೆ ಅಂತ? ಕೆಲವು ಕತ್ತರಿಗಳ ಧ್ವನಿ ಕಿವಿಗೆ ಕರ್ಕಶವಾಗಿರುತ್ತೆ. ಕೆಲವು ಕತ್ತರಿ ಗಳು ಗಿರಾಕೀ ಕೂದಲನ್ನ ಎಳೆದು ನೋಯಿಸ್ತವೆ."

ತಜ್ಞರೆನಿಸುವವರ ಮುಂದೆ ನಾನು ಯಾವಾಗಲೂ ತಬ್ಬಿಬ್ಬಾಗುತ್ತೇನೆ. ಅವನ ಕತ್ತರಿಗಳ ಧ್ವನಿಯಲ್ಲಿ ಒಂದು ವಿಶೇಷ ಇತ್ತೆಂದು ನಾನು ಒಪ್ಪಿಕೊಂಡೆ.

ವೆಂಕಟೇಶ್ವರುಡು ನನ್ನ ತಲೆಯನ್ನು ಅವನ ಕಲ್ಪನೆಗೆ ಸರಿಯಾಗಿ ಪುನಃ ರಚಿಸುವ ಕೆಲಸದ ಕೊನೆಯ ಹಂತ ತಲುಪಿದ್ದ. ಮೂವತ್ತು ನಿಮಿಷ ದಾಟಿತ್ತು. ಇಷ್ಟು ದೀರ್ಘಕಾಲ ನಾನೆಂದೂ ಕ್ಷೌರಿಕನ ಕೈಲಿ ನನ್ನ ತಲೆ ಕೊಟ್ಟಿರಲಿಲ್ಲ. ಕುರ್ಚಿಯಲ್ಲಿ ಮಿಡುಕುತ್ತ ನಾನು ಮತ್ತೊಂದು ಪ್ರಶ್ನೆ ಎರಚಿದೆ.

"ನೀವು ಮೆಶೀನ್ ಉಪಯೋಗಿಸದೆ ಇರೋದರಿಂದ ಕ್ಷೌರಕ್ಕೆ ಎಲ್ಲರಿಗಿಂತ ಡಬಲ್ ಟೈಂ ತಗೋತೀರಿ. ಇದು ನಿಮಗೂ ಗಿರಾಕಿಗಳಿಗೂ ಟೈಂ ವೇಸ್ಟ್ ಅಲ್ಲವೆ?"

"ಅಲ್ಲಾ ಸಾರ್, ನೀವು ವರ್ಷದಲ್ಲಿ ಎಷ್ಟು ಸಲ ಹೇರ್‌ಕಟ್ ಮಾಡಿಸ್ಕೋ ತೀರಿ?" ಅಂತ ವೆಂಕಟೇಶ್ವರುಡು ಅರ್ಥಪೂರ್ಣವಾಗಿ ನನ್ನನ್ನು ನೋಡಿದ. ನಾಲ್ಕು ಸಾರಿಗಿಂತ ಹೆಚ್ಚು ಇಲ್ಲ ಅಂತ ನನಗೆ ಗೊತ್ತಿತ್ತು. ಬಹಳ ತಲೆ ಗಳನ್ನು ಕಂಡ ಆತನಿಗೂ ಅದು ಗೊತ್ತಾಗಿರಬೇಕು. ನನ್ನನ್ನ ಬಿಚ್ಚುಮಾತಿ ನಿಂದ ನೋಯಿಸದೇನೆ, ಉದಾರವಾಗಿ, "ವರ್ಷಕ್ಕೆ ಹನ್ನೆರಡು ಸಲ ಅಂತಿಟ್ಟು ಕೊಳ್ಳಿ. ಹನ್ನೆರಡು ಕ್ಷೌರಕ್ಕೆ ಒಟ್ಟು ನಾಲ್ಕು ಗಂಟೆ ನಾನು ಹೆಚ್ಚು ತೆಗೆದು ಕೊಂಡೆ ಅನ್ನಿ. ದಿನಕ್ಕೆ ನೂರು ಸೆಕೆಂಡ್ ಹೆಚ್ಚು ಖರ್ಚಾದ ಹಾಗಾಯಿತು. ಮನುಷ್ಯನಿಗೆ ತಲೆಯೇ ಶ್ರೇಷ್ಠ. ಅದನ್ನ ಸುವ್ಯವಸ್ಥಿತವಾಗಿ ಇಡೋಕೆ ದಿನಕ್ಕೆ ನೂರು ಸೆಕೆಂಡ್ ಸ್ಪೇರ್ ಮಾಡೋದು ಅತಿಯಾಗಿ ಹೋಯಿತೆ?" ಅಂತ ಕೇಳಿ, ಉತ್ತರಕ್ಕೆ ಕಾಯದೆ, "ಇನ್ನು ನನ್ನ ಟೈಂ ಮಾತು ಬಿಡಿ, ಸಾರ್. ನನಗೆ ನನ್ನ ಕೆಲಸದಲ್ಲಿ ಸ್ಯಾಟಿಸ್‌ಫ್ಯಾಕ್ಷನ್ ಮುಖ್ಯ. ಟೈಂ ಅನ್ನ ಉಳಿಸಿ ತಿನ್ನೋಕಾಗುತ್ತೆಯೆ, ಸಾರ್?" ಎಂದು ಸವಾಲು ಹಾಕಿದ.

ನಾನು ವಿಷಯ ಬದಲಾಯಿಸಿ, "ಅಲ್ಲಾ ಮಿ. ವೆಂಕಟೇಶ್ವರುಡು, ನೀವು ಗಂಡಸರ ಸೆಲೂನಿನಲ್ಲಿ ಹೆಂಗಸರ ಹೇರ್ ಸ್ಟೈಲ್ ಚಿತ್ರ ಹಾಕಿದ್ದೀರಲ್ಲ—ಏನೌಚಿತ್ಯ ಇದರಲ್ಲಿ?" ಎಂದು ಪ್ರಶ್ನಿಸಿದೆ.

"ಅದು ಸಿಂಬಾಲಿಕ್, ಸಾರ್. ಬೇಕಾದರೆ ಹೀಗೂ ಅರ್ಥ ಮಾಡಿಕೊಳ್ಳಿ —ಹೆಂಗಸರು ತಮ್ಮ ತಲೆ ಬಗ್ಗೆ ಅಜಂತಾ ಕಾಲದಲ್ಲಿ ಕೂಡ ಎಷ್ಟು ಕಾಳಜಿ ಮಾಡುತ್ತಿದ್ದರು, ಅವರ ಸಂಗಡ ಹೋಲಿಸಿದರೆ ಗಂಡಸರು ತೀರ ಅಸಡ್ಡೆ ಮಾಡತಾರೆ ಅಂತ ಜ್ಞಾಪಕ ಕೊಡೋದು ನನ್ನ ಇರಾದೆ ಅಂತ."

ಮುಖಕ್ಷೌರವೂ ಮುಗಿದಿತ್ತು ಇಷ್ಟರಲ್ಲಿ. "ಕನ್ನಡಿಯಂದದಿ ಪೊಳೆವ ಕಪೋಲ" ಆದಮೇಲೆ ಶಾಂಪೂ ಮಾಡಿ ನನ್ನ ತಲೇನ ಥಾಪುತಾಳದಲ್ಲಿ ಅಂತ ತೋರುತ್ತೆ—ತಟ್ಟಿ, ಒಳಗೇನಾದರೂ ಏರುತಗ್ಗು ಇದ್ದರೆ ಅದೂ ಸರಿಪಟ್ಟಿ ತೆಂದು ಖಾತ್ರಿಮಾಡಿಕೊಂಡು ವೆಂಕಟೇಶ್ವರುಡು ನನ್ನನ್ನು ಬಿಡುಗಡೆ ಮಾಡಿದ.

ನನ್ನ ತಲೆಯನ್ನ ಕಳಾಪ್ರಪೂರ್ಣವಾಗಿ ಇರಿಸೋದಕ್ಕೆ ಪ್ರತಿಸಲ ನಲುವತ್ತು ನಿಮಿಷ ಖರ್ಚು ಮಾಡೋದಕ್ಕೆ ನನಗೇನೂ ಆತುರವಿರಲಿಲ್ಲ. ನನ್ನ ತಲೆ ಈ ಸಲ ಕಲಾಪೂರ್ಣವಾಗಿದೆ ಅಂತ ಯಾರೂ ಕಮೆಂಟ್ ಮಾಡಲೂ ಇಲ್ಲ. ಆದರೆ ವೆಂಕಟೇಶ್ವರುಡು ಬಗ್ಗೆ ನನಗೆ ಅಪರೂಪವಾದ ಆಕರ್ಷಣೆ.

ನಾನು ಅವನ ಕಾಯಂ ಗಿರಾಕಿ ಆಗಿಬಿಟ್ಟೆ. ಪ್ರತಿಸಲ ಅವನು ಕ್ಷೌರಕಲೆಯ ಹೊಸ ಪದರೊಂದನ್ನು ನನಗೆ ಬಿಚ್ಚಿ ತೋರಿಸುತ್ತಿದ್ದ. ನಾಲ್ಕೈದು ವರ್ಷ ಕಾಲ ನಾನು ನನ್ನ ತಲೆಯನ್ನ ಅವನ ಕೈಯಲ್ಲಿ ಸಮರ್ಪಿಸಿ ನಿಶ್ಚಿಂತನಾಗಿದ್ದೆ.

ನಾನು ಅವನ ಗಿರಾಕಿಯಾದ ಆರನೇ ವರ್ಷ ಒಂದು ದಿನ ವೆಂಕಟೇಶ್ವರುಡು ನನ್ನ ಹಿಂದಲೆಗೆ ಕ್ಷೌರಕತ್ತಿಯಿಂದ 'ಕೀಸುಳಿ' ಹೊಡೆಯುತ್ತ ಕೊನೇ ಬಾರಿ ನನ್ನ ತಲೆಯನ್ನು ಸರಿ ಮಾಡುತ್ತಿದ್ದವನು, "ಸಾರ್, ಮುಂದಿನ ನಿಮ್ಮ ಹೇರ್ ಕಟ್ಟಿಗೆ ನಾನು ಇಲ್ಲಿರಲ್ಲ...." ಎಂದದ್ದು ನನಗೆ ಆಘಾತವುಂಟುಮಾಡಿತು.

"ಏನು, ಏನಾಯಿತು ?" ಎಂದು ಕೇಳಿದೆ.

"ಇಲ್ಲಾ ಸಾರ್, ಈ ಊರಿನಲ್ಲಿ ಜೀವನಕ್ಕೆ ಬೇಕಾದಷ್ಟು ಗಳಿಸೋದು ಸಾಧ್ಯ ಇಲ್ಲ ಅಂತಾಗಿದೆ. ಜನರಲ್ಲಿ ಕಲಾದೃಷ್ಟಿ ಏನೂ ಉಳಿದಿಲ್ಲ. ಎಲ್ಲರಿಗೂ ಫ್ಯಾಶನ್ ಬೇಕಾಗಿದೆ. ಫ್ಯಾಶನ್ ಬೆನ್ನಟ್ಟಿ ಓಡೋ ಇಷ್ಟ ನನಗೆ ಇಲ್ಲ. ನಾನು ನೆಲ್ಲೂರಿಗೆ ತಿರುಗಿ ಹೋಗುತ್ತೇನೆ, ಸಾರ್. ಹೋಗೋಕೆ ನನಗೆ ಬೇರೇನೂ ದುಃಖ ಇಲ್ಲ. ನಿಮ್ಮ ಸ್ನೇಹ ತಪ್ಪುತ್ತೆ ಅನ್ನೋದೊಂದೇ ಸಂಕಟ."

ನನಗೂ ಸ್ವಲ್ಪ ಸಂಕಟ ಆಗದೆ ಇರಲಿಲ್ಲ. (೧೯೭೬)

# ಯದ್ವಾತದ್ವಾ ಯೆಂಕಣ್ಣಯ್ಯನವರು

ನೀವು ಯದ್ವಾತದ್ವಾ ಯೆಂಕಣ್ಣಯ್ಯನವರನ್ನು ನೋಡಿರುವ ಸಂಭವ ಬಹಳ ಕಡಿಮೆ. ತಪ್ಪು ಅವರದಲ್ಲ. ನಿಮ್ಮಲ್ಲಿ ಹೆಚ್ಚಿನವರು ತೀರ ತಡವಾಗಿ ಹುಟ್ಟಿದ್ದೀರಿ. ಅವರೇ ತಡವಾಗಿ ಹುಟ್ಟಬೇಕಾಗಿತ್ತು ಅನ್ನಬೇಡಿ. ಮೊದಲನೆಯದಾಗಿ, ಅವರನ್ನು ನೋಡಬೇಕೆಂಬವರು ಅವರ ಸೌಕರ್ಯ ನೋಡಿಕೊಂಡು ಹುಟ್ಟಬೇಕೇ ಹೊರತು ಅವರೇ ನಿಮ್ಮ ಪುರುಸೊತ್ತು ನೋಡಿಕೊಂಡು ಅವತರಿಸಬೇಕೆಂದು ನಿರೀಕ್ಷಿಸುವುದು ಶಿಷ್ಟಾಚಾರವಲ್ಲ. ಎರಡನೆಯದಾಗಿ, ಯೆಂಕಣ್ಣಯ್ಯನವರು ನಿಮಗೋಸ್ಕರ ಎರಡೋ ಮೂರೋ ದಶಕ ತಡಮಾಡಿ ಹುಟ್ಟಿದ್ದರೆ ಅವರು "ಯದ್ವಾತದ್ವಾ" ಆಗಿ ರೂಪುಗೊಳ್ಳುವ ಸಂಭವ ಇರಲಿಲ್ಲ. ಪ್ರತಿಯೊಂದು ಜೀನಿಯಸ್ಸೂ ತನ್ನ ಕಾಲಕ್ಕೇ ಅವತರಿಸುತ್ತದೆ ; ಆ

ಕಾಲ ತಪ್ಪಿದರೆ ಆ ಜೀನಿಯಸ್ಸು ಆ ಸ್ವರೂಪ ಹೊಂದುವುದಿಲ್ಲ. ಜೀನಿಯಸ್ಸು ಕಾಲದ ಮಗು. ನೀವು ನಾವು ಮಾತ್ರ ಯಾವ ಕಾಲದಲ್ಲಿ ಹುಟ್ಟಿದರೂ ಅಷ್ಟೆ, "ಪುಟ್ಟವೇ ಸಾಯವೇ ಜಗದೊಳ್ ಅತ್ತಿಯಸಣ್ಣೊಳ್ ಎನಿತ್ತೊ ಜಂತುಗಳ್?"

ಎಲ್ಲ ಜೀನಿಯಸ್ಸುಗಳ ಹಾಗೆ ಯೆಂಕಣ್ಣಯ್ಯನವರೂ ಸರಿಯಾದ ಕಾಲ ನೋಡಿ ಮಾತ್ರವಲ್ಲ, ಸರಿಯಾದ ಅಜ್ಜನನ್ನು ನೋಡಿ ಹುಟ್ಟಿದ್ದರು. ಅವರ ಅಜ್ಜ—ಅಂದರೆ ತಾಯಿಯ ತಂದೆ—ವಿದ್ವಾಂಸರಾದರೂ ಹಣವನ್ನು ಹೇಗೆ ಮಾಡಬೇಕೆಂದಲ್ಲದೆ ಹೇಗೆ ಕೂಡಿಡಬೇಕೆಂದೂ ಬಲ್ಲವರು."ವೇದಾಂತದಿಗ್ಗಜ", "ತರ್ಕತ್ರಿಣೇತ್ರ", "ಮೀಮಾಂಸಾ ಲಕ್ಷಣಾರ್ಣವ" ಮೊದಲಾದ ಬಿರುದುಗಳಿಂದ ಭೂಷಿತರಾದ ಪ್ರದ್ಯುಮ್ನ ಭಟ್ಟೋಪಾಧ್ಯಾಯರು ಅರ್ಧ ಡಜನ್ ರಾಜಸಭೆಗಳಲ್ಲಿ ಸಭಾಭೂಷಣರಾಗಿ ಕನಕಾಭಿಷೇಕ ಮಾಡಿಸಿಕೊಂಡಿದ್ದವರು. ತಮ್ಮ ಎಂಬತ್ತು ವರ್ಷಗಳ ಜೀವಮಾನದಲ್ಲಿ ಸಾವಿರಾರು ಶಿಷ್ಯರಿಂದ ಅವರು ಪಡೆದಿದ್ದ ಗುರುದಕ್ಷಿಣೆ ಕೂಡ ಸ್ವಲ್ಪವಾಗಿರಲಿಲ್ಲ. ಅವರು ತಮ್ಮ ಮನೆಯಲ್ಲೇ ಉಂಡದ್ದನ್ನು ಯಾರೂ ನೋಡಿರಲಿಲ್ಲ. ಯಾವಾಗಲೂ ಅವರಿಗೆ ಭೋಜನ ಆಮಂತ್ರಣ ಇದ್ದೇ ಇರುತ್ತಿತ್ತು. ದಾನವಾಗಿ ಬಂದ ಒಂದು ಮಾವಿನಹಣ್ಣು, ಎಳನೀರನ್ನು ಕೂಡ ಮನೆಗೆ ಒಯ್ಯದೆ ಅಂಗಡಿಗೆ ಹಾಕಿ ಒಂದೆರಡು ಕಾಸು ತೆಗೆದುಕೊಂಡು ಕಿರುವಂಟಿಗೆ ಸೇರಿಸಿದವರಂತೆ. ಸಾಲವಾಗಿ ಹೊರತು ಯಾರಿಗೂ ಅವರು ಒಂದು ಕಾಸು ಕೊಟ್ಟದ್ದನ್ನೂ ನೋಡಿದವರಿರಲಿಲ್ಲ; ಚೊಕ್ಕ ಬಂಗಾರ ಒತ್ತೆ ಇಟ್ಟುಕೊಳ್ಳದೆ ಯಾರಿಗಾದರೂ ಸಾಲ ಕೊಟ್ಟದ್ದೂ ಇರಲಿಲ್ಲ ಅವರು. ಇಂದಿನಂತೆ ಸಾಲ ಮುಳುಗಿಸುವ ಕಾನೂನುಗಳು ಆಗ ಇರಲಿಲ್ಲವೆಂದು ನೀವು ನೆನಪಿಡಬೇಕು. ಆದಕ್ಕೇ ನಾನು ಹೇಳುವುದು—ಜೀನಿಯಸ್ಸು ಕಾಲದ ಮಗು ಅಂತ.

ಭಟ್ಟೋಪಾಧ್ಯಾಯರಿಗಿದ್ದವಳು ಒಬ್ಬಳೇ ಮಗಳು. ಅದೂ ತಡವಾಗಿ ಹುಟ್ಟಿದವಳು. ಅವಳಿಗೂ ತಡವಾಗಿ ಒಬ್ಬ ಮಗನಾದ ಕೂಡಲೆ ಓಲೆಭಾಗ್ಯ ಕಳೆದುಹೋಗಿತ್ತು. ಈ ಪುತ್ರೋತ್ತಮನಿಗೆ ಚಿಗುರುಮೀಸೆ ಒಡೆಯುವಾಗ ಪ್ರದ್ಯುಮ್ನ ಭಟ್ಟೋಪಾಧ್ಯಾಯರು ಇಹಲೋಕವ್ಯಾಪಾರವನ್ನು ಪರಿಸಮಾಪ್ತಿ ಮಾಡಿದರು. ಹೀಗೆ ಹದಿನೆಂಟನೇ ವಯಸ್ಸಿಗೆ ಒಂದು ಲಕ್ಷ ಮೇಲ್ಪಟ್ಟ ಸಂಪತ್ತಿಗೆ ಉತ್ತರಾಧಿಕಾರಿಯಾದವರೇ ನಮ್ಮ ಯೆಂಕಣ್ಣಯ್ಯನವರು. ಒಂದು

ಲಕ್ಷ್ಯ ಏನು ಮಹಾ? ಅಂತ ಅಲಕ್ಷ್ಯ ಮಾಡಬೇಡಿ. ಅದು ಈಗಿನ ಕಾಗದದ ಹಣವಲ್ಲ. ಬಂಗಾರದ ಆಧಾರವಿಲ್ಲದೆ ನೋಟುಗಳನ್ನು ಹ್ಯಾಂಡ್‌ಬಿಲ್ಲುಗಳ ಹಾಗೆ ಮುದ್ರಿಸಲು ಸಾಧ್ಯವುಂಟೆಂದು ತಿಳಿದುಕೊಳ್ಳುವಷ್ಟು ಬುದ್ಧಿವಂತಿಕೆ ಆಗಿನ ಸರಕಾರಗಳಿಗೆ ಇರಲಿಲ್ಲ. ಆಗಿನ ಒಂದು ಪೈ ಈಗಿನ ರೂಪಾಯಿಗೆ ಸಮವಾಗಿತ್ತು.

ಪ್ರದ್ಯುಮ್ನ ಭಟ್ಟೋಪಾಧ್ಯಾಯರು ಮೊಮ್ಮಗನಿಗೆ ಕಲಿಸಿದ ಮೊದಲನೇ ಶ್ಲೋಕವೆಂದರೆ, "ಕರಾಗ್ರೇ ವಸತೇ ಲಕ್ಷ್ಮೀ" ಅನ್ನುವುದು. "ಮಗಾ, ಲಕ್ಷ್ಮೀ ಅಂದರೆ ಹಣ. ಅದು ಕರಾಗ್ರೇ ಅಂದರೆ ಬೆರಳ ತುದಿಯಲ್ಲಿರುತ್ತೆ. ಸ್ವಲ್ಪ ಕೈ ಅಲುಗಿದರೆ ಅದು ಬಿದ್ದುಹೋಗುತ್ತೆ. ಆದ್ದರಿಂದ ಹಣವನ್ನು ಕೈಲಿ ಇಟ್ಟು ಕೊಳ್ಳೋದು ಜಾಣತನವಲ್ಲ. ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟು ತಿರುಗಾಡಲಿಕ್ಕೆ ಹೋಗೋದು ಕ್ಷೇಮ. ಆಗ ಖರ್ಚು ಮಾಡುವ ಚಪಲವನ್ನು ತಡಕೊಳ್ಳಲಿಕ್ಕೆ ಸುಲಭವಾಗುತ್ತೆ" ಎಂಬುದಾಗಿ ಶ್ಲೋಕಕ್ಕೆ ವ್ಯಾಖ್ಯಾನ ಕೂಡ ಮಾಡಿದ್ದರು. "ಆದರೆ ಅಜ್ಜಾ, ಖರ್ಚು ಮಾಡಬಾರದು ಅಂತಿದ್ದರೆ ಹಣ ಯಾಕೆ ಕೂಡಿ ಹಾಕಬೇಕು?" ಅಂತ ಬಾಲಕ ಯೆಂಕಣ್ಣಯ್ಯ ಬಾಲಮಾತ್ರಸುಲಭವಾದ ತರ್ಕದಿಂದ ಪ್ರಶ್ನಿಸಿದ್ದರಂತೆ. ತರ್ಕತ್ರಿಣೇತ್ರ ಪ್ರದ್ಯುಮ್ನ ಭಟ್ಟೋಪಾಧ್ಯಾಯರಿಗೆ ಈ ತರ್ಕಕ್ಕೆ ಸಮಾಧಾನ ಹೇಳುವುದು ಸಾಧ್ಯವಾಗಲಿಲ್ಲ. ಈ ಹುಡುಗನ ಭವಿಷ್ಯ ಹೇಗೋ ಅಂತ ಚಿಂತೆಯಾಗಿ ಯೆಂಕಣ್ಣಯ್ಯನ ಜಾತಕವನ್ನು ಊರಿನ ಪ್ರಮುಖ ಜ್ಯೋತಿಷಿಗೆ ತೋರಿಸಿದ್ದರಂತೆ. ಭಟ್ಟೋಪಾಧ್ಯಾಯರು ಕಾಸು ಬಿಚ್ಚುವವರಲ್ಲವೆಂದು ಗೊತ್ತಿದ್ದದ್ದರಿಂದಲೇ ಇರಬೇಕು, ಜೋಯಿಸರು ಜಾತಕವನ್ನು ಸರಿಯಾಗಿ ವಿಮರ್ಶಿಸದೆ ನಿಮ್ಮ ಮೊಮ್ಮಗನಿಗೆ ಕುಬೇರಯೋಗವುಂಟೆಂದು ಹೇಳಿಕಳಿಸಿದ್ದರು.

ಶ್ರೀಮಂತ ಮಾತಾಮಹನ ದೌಹಿತ್ರರಾದ ಬಾಲಕ ಯೆಂಕಣ್ಣಯ್ಯನವರ ಕೈಗೆ ಒಂದು ಕಾಸು ಕೂಡಾ ಖರ್ಚಿಗೆ ಸಿಗುತ್ತಿರಲಿಲ್ಲ. ಆದರಿಂದ ಖರ್ಚು ಮಾಡುವ ವಿಧಾನಗಳನ್ನು ಮನಸ್ಸಿನಲ್ಲೇ ಕಲ್ಪಿಸಿಕೊಳ್ಳುವುದಕ್ಕೆ ಮೊಮ್ಮಗನಿಗೆ ಏನೂ ಆತಂಕವಾಗಲಿಲ್ಲ. ಏಕಾದಶಿ ಉಪವಾಸ ಮಾಡುವವರಿಗೆ ಆ ರಾತ್ರಿ ಕನಸಿನಲ್ಲಿ ದೋಸೆ-ಬೆಣ್ಣೆ ತಿಂದ ಕನಸೇ ಬೀಳುತ್ತದಂತೆ. (ಅದಕ್ಕೇ ಏಕಾದಶಿ ಜಾಗರಣೆ ಮಾಡಬೇಕು ಅಂತ ಹೇಳುವುದು: ಕನಸಿನಲ್ಲಿ ವ್ರತ

ಭಂಗ ಆಗಬಾರದಲ್ಲವೆ?) ಯೆಂಕಣ್ಣಯ್ಯನವರು ಹಣ ಖರ್ಚು ಮಾಡುವ ಕನಸು ಕಂಡರು. ಅಜ್ಜ ಬೇಗ ಸಾಯಲಿ ಎಂಬುದಾಗಿ ಅವರು ಪ್ರಾರ್ಥಿಸುತ್ತಿದ್ದರು ಎಂದು ಯಾರೂ ಆರೋಪಿಸುವುದನ್ನು ನಾನು ಕೇಳಿಲ್ಲ. ಆದರೆ ಒಂದು ಅಮಾವಾಸ್ಯೆ ದಿನ ಅಜ್ಜ ಕೂತಲ್ಲೇ ಅನಾಯಾಸೇನ ಮರಣವನ್ನು ಅಪ್ಪಿದಾಗ ಮೊಮ್ಮಗನಿಗೆ ಅಸಹನೀಯ ದುಃಖವಾಯಿತೆಂದು ಹೇಳಿದರೆ ಮಾತ್ರ ಅತಿಶಯೋಕ್ತಿಯಾದೀತು ಮತ್ತು ಪ್ರದ್ಯುಮ್ನ ಭಟ್ಟೋಪಾಧ್ಯಾಯರ ವೈಕುಂಠ ಸಮಾರಾಧನೆಯ ದಿನಕ್ಕೆ ಸರಿಯಾಗಿ ಯೆಂಕಣ್ಣಯ್ಯನವರಿಗೆ ೧೮ ತುಂಬಿ ಅವರು ದೌಹಿತ್ರ ಸಂಬಂಧದಿಂದ ಅಜ್ಜನ ಸಕಲ ಸ್ಥಿರ-ಚರಾಸ್ತಿಗಳಿಗೆ ಏಕ ಮಾತ್ರ ಪ್ರಾಯಪ್ರಬುದ್ಧ ಉತ್ತರಾಧಿಕಾರಿಯಾದದ್ದು ಯೋಗಾಯೋಗವೇ ಆಗಿತ್ತು.

ವೈಕುಂಠ ಸಮಾರಾಧನೆಯ ಮರುದಿವಸವೇ ಯೆಂಕಣ್ಣಯ್ಯ ಅಜ್ಜನ ಸಂಪತ್ತಿನ ವಿನಿಯೋಗದಲ್ಲಿ ಸೀರಿಯಸ್ಸಾಗಿ ತೊಡಗಿದರು. ಸೇಠ್ ಕುಬೇರಮಲ್ ಕಾಂಚನಮಲ್ ವಿಶ್ವಾಸಿಯಾ ಅವರ ಜವಳಿ ಅಂಗಡಿಗೆ ತಮ್ಮ ಮೂವರು ಲಂಗೋಟಿ ಗೆಳೆಯರ ಸಂಗಡ ನುಗ್ಗಿದರು. (ಇವರ ಸಂಗಡ ತಾನೆ ಯೆಂಕಣ್ಣಯ್ಯನವರು ತಮ್ಮ ಧನ ವಿನಿಯೋಗ ಮಸೂದೆಯನ್ನು ಒಂದು ವರ್ಷ ಕಾಲದಿಂದ ಚರ್ಚಿಸುತ್ತ ಇದ್ದದ್ದು.) ಸೇಠ್ ಕುಬೇರಮಲ್ಲರು ಒಂದು ಮೈಲು ದೂರದಿಂದಲೇ ಬೇಟೆಯ ವಾಸನೆ ಹಿಡಿಯಬಲ್ಲವರು. ಯೆಂಕಣ್ಣಯ್ಯನವರು ಇನ್ನೂ ಅಜ್ಜ ಅವರಿಗಿತ್ತಿದ್ದ ದೊಡ್ಡ ಮಗ್ಗದ ಪಾಣಿಪಂಚೆಯಲ್ಲೆ ಇದ್ದರೂ ಸೇಠರು ಆದರದಿಂದ ಅವರನ್ನು ಕರೆದು ತಮ್ಮ ಗಾದಿಯ ಮೇಲೇ ಲೋಡಿಗೆ ಆನಿಸಿ ಕೂರಿಸಿಕೊಂಡು, "ಕ್ಯಾ ಸೇವಾ ಕರೂಂ ವೆಂಕಟಕೃಷ್ಣಯ್ಯ ಮಹಾರಾಜ್?" ಎಂದರು. ವೆಂಕಟಕೃಷ್ಣಯ್ಯ ಎನ್ನುವ ಪೂರ್ಣ ಹೆಸರಿನಿಂದ ಅವರನ್ನು ಯಾರಾದರೂ ಸಂಬೋಧಿಸಿದ್ದು ಅದೇ ಮೊದಲನೇ ಸಲವಾಗಿತ್ತು.

"ನಿಮ್ಮಲ್ಲಿರುವ ಅತಿ ಹೆಚ್ಚು ಬೆಲೆಯ ಮದ್ರಾಸ್ ಮಲ್ ತೋರಿಸಿ, ಕುಬೇರಮಲ್ಲಗೇ" ಎಂದರು ವೆಂಕಟಕೃಷ್ಣಯ್ಯ. ಮದ್ರಾಸು ಮಲ್ಲು ಆಗಿನ ಫ್ಯಾಶನೇಬಲ್ ಶ್ರೀಮಂತರ ಧೋತ್ರದ ಆದರ್ಶ ಫ್ಯಾಬ್ರಿಕ್ ಆಗಿತ್ತು.

ಸೇಠ್‌ಜಿ ಭಕ್ತಿಪೂರ್ವಕವಾಗಿ ಕಪಾಟಿನಿಂದ ಒಂದು ಥಾನ್ ಮದ್ರಾಸ್ ಮಲ್ ಹೊರತೆಗೆದು ಯೆಂಕಣ್ಣಯ್ಯನ ಮುಂದೆ ಹರವಿದರು. ಯೆಂಕಣ್ಣ-

ಯ್ಯನೂ ಅವರ ಮಿತ್ರರೂ ನಯವಾದ ಅದರ ಮೈಯನ್ನು ಕ್ಷಣಕಾಲ ಬೆರಳು ಗಳಿಂದ ಪರೀಕ್ಷಿಸಿ ತೃಪ್ತಿ ಸೂಚಿಸಿದರು.

"ಎಷ್ಟು ವಾರ್ ಕೊಡಲಿ, ಸ್ವಾಮಿ ?" ಸೇಠ್‌ಜಿ ಕೇಳಿದರು.

ಯೆಂಕಣ್ಣಯ್ಯ ಶಾಂತವಾಗಿ, "ನಿಮ್ಮಲ್ಲಿ ಎಷ್ಟು ಥಾನ್ ಇದೆ ?" ಎಂದು ಪ್ರಶ್ನಿಸಿದರು.

ಮನುಷ್ಯಸ್ವಭಾವವನ್ನು ಅಂಗೈನೆಲ್ಲಿಯಂತೆ ಬಲ್ಲ ಸೇಠ್ ಕುಬೇರಮಲ್ಲರಿಗೆ ಕೂಡ ಒಮ್ಮೆ ವಿಸ್ಮಯವಾಯಿತು. ಅವರು ಮೆಲ್ಲಗೆ ಎದ್ದು ಕಪಾಟು ತೆರೆದು ಎಣಿಸಿ, "ಐದು ಥಾನು ಇದೆ" ಎಂದು ಹೇಳಿದರು.

"ಅಷ್ಟೇ ತಾನೆ !" ಎಂದರು ಯೆಂಕಣ್ಣಯ್ಯ "ಎಲ್ಲವನ್ನೂ ತೆಗೆದು ಐದೈದು ವಾರಿನ ಧೋತ್ರದ ತುಂಡುಗಳಾಗಿ ಮಾಡಿ !"

ಸೇಠ್‌ಜಿ ಸ್ವಲ್ಪ ಅನುಮಾನಿಸಿದ್ದು ಕಂಡು ಯೆಂಕಣ್ಣಯ್ಯ ಮೀಸೆಯಲ್ಲೇ ನಕ್ಕು ಪಾಕೀಟಿನಿಂದ ಕೆಲ ನೋಟುಗಳನ್ನು ತೆಗೆದು ಸೇಠ್‌ಜಿಯ ಮುಂದೆ ಇಟ್ಟರು. ಮನುಷ್ಯರಿಗಿಂತ ಹಣ ಚೆನ್ನಾಗಿ ಮಾತಾಡುತ್ತದೆ. ಸೇಠ್‌ಜಿ ತತ್‌ಕ್ಷಣ ಆಜ್ಞಾಪಾಲನೆ ಮಾಡಿದರು. ಯೆಂಕಣ್ಣಯ್ಯ ಧೋತ್ರದ ತುಂಡುಗಳಲ್ಲಿ ಮೂರು ಮೂರನ್ನು ತಮ್ಮ ಮಿತ್ರರಿಗೆ ಬರೆದರು. ಉಳಿದದ್ದನ್ನು ಹಾಗೇ ಇರಲಿ ಎಂದು ಹೇಳಿ ಮುಂದಿನ ಖರೀದಿಯ ಮಾತೆತ್ತಿದರು.

ಸಂಕ್ಷೇಪವಾಗಿ ಹೇಳುವುದಾದರೆ ಯೆಂಕಣ್ಣಯ್ಯ ಸೇಠ್ ಮಳಿಗೆಯಿಂದ ಹೊರಬೀಳುವುದರೊಳಗೆ ಆ ಕಾಲದ ಐನೂರಾನಲುವತ್ತು ರೂಪಾಯಿಗಳ ಖರೀದಿ ಆಗಿತ್ತು. ಅದರಲ್ಲಿ ರೇಶ್ಮೆ ಶಲ್ಯಗಳು, ಶ್ರೇಷ್ಠ ಉಣ್ಣೆ ಶಾಲುಗಳು, ರೇಶ್ಮೆ ಸೀರೆಗಳು, ವಿಧವೆಯರು ಉಡುವ ಪಟ್ಟೆಮಡಿಗಳು ಇತ್ಯಾದಿ ಇದ್ದವು. ಅವುಗಳನ್ನೆಲ್ಲಾ ಗಂಟು ಕಟ್ಟಿಸಿ ಇಟ್ಟರು. ಆಳುಗಳ ತಲೆ ಮೇಲೆ ಹೊರಿಸಿ ಕೊಂಡು ಯೆಂಕಣ್ಣಯ್ಯ ಮನೆಯ ಕಡೆ ಹೊರಟರು. ಸೇಠ್‌ಜಿ ಮನಸ್ಸಿನಲ್ಲೇ ಆವೊತ್ತು ಬೆಳಗ್ಗೆ ಅಂಗಡಿಗೆ ಹೊರಟಾಗ ಮೊದಲು ಯಾರ ಮುಖ ನೋಡಿದೆ ಎಂದು ಯೋಚಿಸಿ, ಮನೇ ಬಾಗಿಲಲ್ಲೇ ಎದುರಾದ ಭಿಕ್ಷುಕನನ್ನು ನೆನೆದು ಕೊಂಡು, ಅವಲಕ್ಷಣ ಶನಿಮುಂಡೆಮಗ ಅಂತ ಬೈದದ್ದಕ್ಕೆ ಪಶ್ಚಾತ್ತಾಪಪಟ್ಟು, ಅವನಿಗೆ ಇನ್ನೊಂದು ಸಲ ಬಂದಾಗ ಎರಡು ಪೈ ಭಿಕ್ಷೆ ಹಾಕಬೇಕೆಂದು ಸಂಕಲ್ಪಿಸಿಕೊಂಡರು.

ಯೆಂಕಣ್ಣಯ್ಯನಿಗೆ ದಾರಿಯಲ್ಲಿ ಸಂಕಣ್ಣಭಟ್ಟರು ಎದುರಾದರು. ಎಂದಿನಂತೆಯೇ ಮಾತನಾಡದೆ ದಾಟಿಹೋದರು. ಯೆಂಕಣ್ಣಯ್ಯ ಒಂದು ಕ್ಷಣ ಕಾದು, "ಓ ಸಂಕಣ್ಣ ಭಟ್ರೇ! ಏನು, ಬಡವನ ಗುರ್ತೇ ಸಿಕ್ಕಲಿಲ್ಲವೇ?" ಕೂಗಿದರು.

"ಗುರ್ತು ಸಿಕ್ಕದೆ ಏನು, ಯೆಂಕಣ್ಣ! ಏನೂ ಜಂಬರ ಇರಲಿಲ್ಲ, ಮಾತಾಡಲಿಲ್ಲ" ಎಂದರು ಭಟ್ಟರು—ತಮಗೆ ಲಾಭವಿಲ್ಲ, ಹಾನಿಯೂ ಇಲ್ಲ ಎಂದಾಗ ಬಡವರು ತೋರಿಸುವ ಧಿಮಾಕಿನಿಂದ—ನಿಂತಲ್ಲಿಂದಲೇ.

"ಓಡಬೇಡಿ ಭಟ್ರೇ! ಏನು, ಕೆಸುವಿನ ಕಾಲಿಗೆ ಕರು ಕಟ್ಟಿ ಬಂದಿದ್ದೀರಾ? ನಿಲ್ಲಿ ಸ್ವಲ್ಪ!" ಎಂದು ಯೆಂಕಣ್ಣಯ್ಯ ತಾವೇ ಅವರಿದ್ದಲ್ಲಿಗೆ ನಡೆದು ಹೋಗಿ, "ತಕೊಳ್ಳಿ! ನಿನ್ನೆ ನೀವು ನಮ್ಮಲ್ಲಿಗೆ ವೈಕುಂಠಕ್ಕೆ ಬರಲಿಲ್ಲ. ಇಟ್ಟುಕೊಳ್ಳಿ!" ಎಂದು ಒಂದು ಬೆಳ್ಳಿ ರೂಪಾಯಿಯನ್ನು ಸಂಕಣ್ಣಭಟ್ಟರ ಕೈಯಲ್ಲಿಟ್ಟರು. ದುರ್ದಾನ ಹಿಡಿದು ಬದುಕುವ ಭಟ್ಟರು ಈ ಔದಾರ್ಯದಿಂದ ತಲೆ ತಿರುಗಿ ಮಾತ್ರ ಬೀಳಲಿಲ್ಲ. ಅವರಿಗಾದ ಶಾಕ್ ಇಳಿದು, "ಧನಿಗಳ ಮನಸ್ಸು ದೊಡ್ಡದು!" ಎಂದು ತೊದಲುವುದರೊಳಗೆ ಯೆಂಕಣ್ಣಯ್ಯನವರು ಮುಂದೆ ಸಾಗಿದ್ದರು.

ಯೆಂಕಣ್ಣಯ್ಯನವರಿಗೆ "ಯದ್ವಾತದ್ವಾ ಯೆಂಕಣ್ಣಯ್ಯ" ಎಂದು ಅಡ್ಡ ಹೆಸರು ಕೊಟ್ಟವರು ಈ ಸಂಕಣ್ಣಭಟ್ಟರೆ ಎಂದು ಹೇಳುತ್ತಾರೆ. ಸ್ವಲ್ಪ ಮುಂದೆ ಈ ತಂಡಕ್ಕೆ ಸೊಡಲೆಸೂರಪ್ಪ ಸಿಕ್ಕಿದ. ಅವನು ಕುಡಿತಕ್ಕೆ ಬಹಳ ಹೆಸರಾದವನು. ಯೆಂಕಣ್ಣಯ್ಯ ಅವನನ್ನು ಕರೆದು ಒಂದು ರೂಪಾಯಿ ಕೊಟ್ಟರು. ಅವನು ಕಣ್ಣುಕಣ್ಣು ಬಿಡುತ್ತಿದ್ದಂತೆ ಯೆಂಕಣ್ಣಯ್ಯನ ಒಬ್ಬ ತೈನಾತಿ ಸುಬ್ಬಪ್ಪಯ್ಯ, "ಏನು ನೋಡುತ್ತಿ, ಸೂರಪ್ಪ? ಧನಿಗಳ ಹೆಸರು ಹೇಳಿ ಹೆಂಡ ಕುಡಿ!" ಎಂದು ಸೂಚಿಸಿದ. "ಬಿದ್ದ ಬುದ್ದಿ!" ಎಂದು ಆತ ಬೀದಿಯಲ್ಲೇ ಸಾಷ್ಟಾಂಗ ಹಾಕಿದ.

ಮನೆ ಮುಟ್ಟುತ್ತಲೇ ಯೆಂಕಣ್ಣಯ್ಯ ಗಂಟು ಬಿಚ್ಚಿ ತಾಯಿಗೆ ರೇಶ್ಮೆ ಮಡಿಗಳನ್ನು ಕೊಟ್ಟು ಇನ್ನು ದಿನಾ ಇದನ್ನೇ ಉಟ್ಟುಕೊಳ್ಳಬೇಕು ಎಂದು ತಾಕೀತು ಮಾಡಿದರು. ಎಂದೂ ಅಂಥಾದ್ದನ್ನು ಕಾಣದ ಮಹಾತಾಯಿ "ನನಗೆ ಯಾಕೆ ಮಗಾ, ಇದೆಲ್ಲ!" ಎಂದರೆ, "ಉಟ್ಟುಕೋ ಅಮ್ಮಾ, ನೀನು

ಯಾವಾಗ ಸುಖಪಡುವುದು ಮತ್ತೆ!" ಎಂದರು ಪುಗ. "ಇದು ಅವಳಿಗೆ ಕೊಡು" ಎಂದು ಸೀರೆಗಳನ್ನು ಅವರ ಮುಂದಿಟ್ಟರು, ಇನ್ನೂ ಹನ್ನೆರಡು ವರ್ಷದ ಹೆಂಡತಿಯನ್ನು ನಿರ್ದೇಶಿಸಿ.

ಸಂಜೆ ಅವರು ನೂತನ ವಸ್ತ್ರಭೂಷಿತರಾಗಿ ಪೇಟೆಗೆ ಬರುವಷ್ಟರೊಳಗೆ ಪ್ರದ್ಯುಮ್ನ ಭಟ್ಟೋಪಾಧ್ಯಾಯರ ಪೊಮ್ಮಗನ ಯಜಮಾನಿಕೆಯ ಆರಂಭೋತ್ಸವ ಗಾಳಿಯು ಕೈಲಿ ಕೊಟ್ಟ ಇಂಗು ಆಗಿಬಿಟ್ಟಿತ್ತು. ಸೇಠ್ ಮಳಿಗೆಯಲ್ಲಿ ಅವರು ಕೊಂಡ ಜವಳಿಯ ಬೆಲೆ ಹತ್ತರಿಂದ ಗುಣಿಸಿಕೊಂಡು ಐದು ಸಾವಿರವಾಗಿತ್ತು; ಸೂರಪ್ಪನಿಗೆ ಹೆಂಡ ಕುಡಿಯುವುದಕ್ಕೆ ಕೊಟ್ಟ ಹಣ ಒಂದರ ಬದಲು ಹತ್ತು ರೂಪಾಯಿಯಾದದ್ದಕ್ಕೆ ಅವನು ಹೆಂಡ ಕುಡಿದ ಮೇಲೆ ಯೆಂಕಣ್ಣಯ್ಯನವರ ಔದಾರ್ಯವನ್ನು ಹತ್ತುಮಡಿ ಮಾಡಿ ಹೊಗಳಿದ್ದು ಕಾರಣವಾಗಿತ್ತು. ಅವರು ಕೊಂಡುಕೊಂಡಿದ್ದ ಕಾಶೀ ಪೀತಾಂಬರ ಊರಿನ ಟಾಪ್ ವೇಶ್ಯೆ ಉಪರಂಭೆಗೋಸ್ಕರ ಎಂದು ಸುದ್ದಿಯಾದದ್ದು ತತ್ಕಾಲಕ್ಕೆ ಶುದ್ಧ ಸುಳ್ಳಾಗಿದ್ದರೂ ಹನ್ನೆರಡು ವರ್ಷದ ಹುಡುಗಿಗೆ ಅಂಥಾ ಸೀರೆ ಯಾವ ರಸಿಕ ಕೊಂಡುಕೊಂಡಾನು? ಎಂಬ ತರ್ಕದ ಫಲವಾಗಿತ್ತು. ಜನ ಹೇಳಿ ಹೇಳಿ ಲೇವಡಿ ಮಾಡುತ್ತಿದ್ದರು. ಆದರೆ ಯೆಂಕಣ್ಣಯ್ಯನವರೂ ಅವರ ತೈನಾತಿಗಳೂ ಮದ್ರಾಸ್ ಮಲ್, ಸಿಲ್ಕ್ ಸೆಲ್ಲೆ ವೇಷಭೂಷಿತರಾಗಿ ಅಂಗಡಿ ಬೀದಿಯಲ್ಲಿ ಕಾಲಿಟ್ಟಾಗ ಮಾತ್ರ ಕುಣಿಯುವ ನಾಲಿಗೆಗಳು ಸ್ತಬ್ಧವಾಗಿ, ಅಭಿನಯಮಗ್ನವಾದ ಕೈಗಳು ನಮಸ್ಕಾರಮುದ್ರೆಯನ್ನು ಧರಿಸಿದವು. ತಾವು ಹೊಡೆದ ಛಾಪಿನಿಂದ ಯೆಂಕಣ್ಣಯ್ಯನವರಿಗೆ ಅತೃಪ್ತಿಯೇನೂ ಆಗಲಿಲ್ಲ.

ಯೆಂಕಣ್ಣಯ್ಯ—ಅಥವಾ ಈಗ ಎಲ್ಲರೂ ಅವರೆದುರು ಕರೆಯುತ್ತಿದ್ದ ಹಾಗೆ ವೆಂಕಟಕೃಷ್ಣಯ್ಯನವರು ಕೊಂಡುಕೊಂಡಿದ್ದ ಶರ್ಟಿಂಗ್ ಕೋಟಿಂಗ್ ಬಟ್ಟೆಯನ್ನು ಹೊಲಿಯುವ ಯೋಗ್ಯತೆಯುಳ್ಳವರು ನಮ್ಮೂರಿನಲ್ಲಿ ಇಲ್ಲವೆಂದು ಅವರ ಮಿತ್ರರ ಏಕಾಭಿಪ್ರಾಯವಾಗಿದ್ದುದರಿಂದ ಅವರು ಅನುಯಾಯಿ ಸಮೇತರಾಗಿ ಜಿಲ್ಲಾ ರಾಜಧಾನಿಗೆ ಸ್ಪೆಶಲ್ ಜಟಕಾಸವಾರಿ ಮಾಡಿ ಹೊರಟರು. ಬೊಂಬಾಯಿಯಿಂದ ತರಬೇತಾಗಿ ಬಂದಿದ್ದ ಬಸ್ತ್ಯಾಂ ಸೋಜಾ ಮಾಸ್ತರ್ ಟೇಲರ್ ಕೇವಲ ಭುಜದ ಅಳತೆ ಮಾತ್ರ ತೆಗೆದುಕೊಂಡು ನಿಮ್ಮ

ಶರ್ಟುಕೋಟುಗಳನ್ನು ದೇವರೇ ನಿಮ್ಮ ಮೈಗೆ ಸರಿಯಾಗುವಂತೆ ಸಿದ್ಧಪಡಿಸಿದ್ದನೊ ಎಂಬ ಹಾಗೆ ಹೊಲಿದು ಕೊಡುತ್ತಾನೆಂದು ಫ್ಯಾಶನ್ ಲೋಕದಲ್ಲಿ ಪ್ರತೀತಿ ಇತ್ತು. ವೆಂಕಟಕೃಷ್ಣಯ್ಯನವರು ಅವನಲ್ಲಿ ಶರ್ಟು ಕೋಟು ಹೊಲಿಯಲು ಹಾಕಿದರು. ತಮ್ಮ ಮಿತ್ರರನ್ನೂ ಮರೆಯಲಿಲ್ಲ ಎನ್ನಿ. ಸೋಜನಲ್ಲಿ ಯಾವಾಗಲೂ ಆರು ತಿಂಗಳ ಆರ್ಡರುಗಳು ರಿಜರ್ವಾಗಿರುತ್ತಿದ್ದುದರಿಂದ ಡಬಲ್ ಚಾರ್ಜು ಕೊಟ್ಟರೂ ತಿಂಗಳು ಕಾಲ ಕಾಯಲೇಬೇಕಾಗುತ್ತಿತ್ತು. ವೆಂಕಟಕೃಷ್ಣಯ್ಯ ಅವನಿಗೆ ಡಬಲ್ ಅಲ್ಲ, ಟ್ರಿಬಲ್ ಚಾರ್ಜು ಕೊಟ್ಟು ಬೆರಗುಗೊಳಿಸಿದರು. ಈ ಶರ್ಟು ಕೋಟು ಮೊದಲ ಸಲ ಧರಿಸಿದಾಗ ಅವರಿಗೆ ಜನ್ಮ ಸಾರ್ಥಕವೆನಿಸಿರಬೇಕು. ಅವರ ಅಜ್ಜನಾಗಲಿ ಅಪ್ಪನಾಗಲಿ ಅವರಾಗಲಿ ಹಿಂದೆ ಎಂದೂ ಅಂಗಿ ಹಾಕಿದವರಲ್ಲ.

ಅವರ ವೇಷ ವಿಲಾಸ ಪ್ರಕರಣವನ್ನು, ಮೂರು ತಿಂಗಳೊಳಗೆ ಬಗೆ ಬಗೆಯ ಎರಡೂವರೆ ಡಜನ್ ಶರ್ಟು ಕೋಟು ಧೋತ್ರ ವಲ್ಲಿ ಸೆಟ್ಟುಗಳು ಅವರಲ್ಲಿ ಸಂಗ್ರಹವಾಗಿದ್ದವೆಂದು ಸಂಕ್ಷೇಪವಾಗಿ ಹೇಳಿ ಮುಗಿಸಬೇಕಾಗಿದೆ. ಯಾಕೆಂದರೆ ಅಷ್ಟೇ ಮಹತ್ವದ ಇತರ ಸಂಗತಿಗಳಿಗೂ ಸ್ಥಾನ ಬೇಕಲ್ಲ.

ಅವರ ಅಜ್ಜ ಅಡವಿಟ್ಟುಕೊಂಡು ಸಾಲಗಾರರು ಬಿಡಿಸಲಾರದೆ ಬಿಟ್ಟಿದ್ದ ಕೆಲವು ಸೇರು ಚಿನ್ನ ಮನೆಯೊಳಗೆ ಕೊಳೆಯುವುದು ಅನ್ಯಾಯ ಅಂತೆನಿಸಿ ಯೆಂಕಣ್ಣಯ್ಯ ತಮ್ಮ ಎಲ್ಲಾ ಕೈಬೆರಳುಗಳಿಗೆ ನವರತ್ನಗಳಿಂದ ಖಚಿತವಾದ ಉಂಗುರಗಳನ್ನು ಮಾಡಿಸಿಕೊಂಡು ಮೆರೆಯತೊಡಗಿದಾಗ ಅದನ್ನು ಮಾಡಿ ಕೊಟ್ಟ ಅಕ್ಕಸಾಲಿಗ ಶಂಕರ ಶೆಟ್ಟರೇ "ಯದ್ವಾತದ್ವಾ ಯೆಂಕಣ್ಣಯ್ಯನಿಗೆ ಹತ್ತೇ ಕೈಬೆರಳು ಇರುವುದು ಮಹಾ ಅನ್ಯಾಯ" ಎಂದು ಬೆನ್ನ ಹಿಂದೆ ಲೇವಡಿ ಮಾಡಿದ್ದರಂತೆ. ಮೂರು ತಿಂಗಳ ಅವಧಿಯಲ್ಲಿ ಯೆಂಕಣ್ಣಯ್ಯ ಮೂರು ಸಲ ಅವರಲ್ಲಿಗೆ ಬಂದು ಎಲ್ಲಾ ಉಂಗುರಗಳನ್ನು ಮೂರು ಸಲ ಅಳಿಸಿ ಹೊಸ ತರಹದಲ್ಲಿ ಉಂಗುರಗಳನ್ನು ಮಾಡಿಸಿಕೊಂಡಮೇಲೆ ಶೆಟ್ಟರಿಗೆ ಹೊಸದಾಗಿ ಏನು ಲೇವಡಿ ಮಾಡಬೇಕೆಂದು ಬಗೆಹರಿಯದೆ, ಅವರು ಆ ಹವ್ಯಾಸವನ್ನೇ ಬಿಟ್ಟು, ಉಂಗುರ, ವಂಟಿ, ಸರ, ಅವರ ಹೆಂಡತಿಗೆ ಬಳೆಗಳು, ಮೂಗುಬೊಟ್ಟು, ಬೆಂಡೋಲೆ ಮೊದಲಾದುವುಗಳನ್ನು ಹೊಸಹೊಸದಾಗಿ ಮಾಡಿಕೊಡುವುದರಿಂದಲೇ ತೃಪ್ತಿ ಹೊಂದಬೇಕಾಯಿತು. ಹೊಸ ಹೊಸ

ಮಾದರಿಗಳನ್ನು ಕಲಿಯಲು ಅವರು ಬೆಂಗಳೂರು ಬೊಂಬಾಯಿವರೆಗೂ ಹೋಗಬೇಕಾಯಿತಂತೆ.

ದುರ್ದೈವದಿಂದ ಇನ್ನೂ ಇಂಡಿಯಕ್ಕೆ ಕಾರುಗಳು ಬಂದಿರಲಿಲ್ಲ. ಆದ್ದರಿಂದ ಯೆಂಕಣ್ಣಯ್ಯ ಕುಂಞ ಕೋಯಾಸಾಹೇಬನ ಜಟಕಾಕ್ಕೆ ಖಾಯಂ ಗಿರಾಕಿಯಾದರು. ಅವನು ಚಾರ್ಜು ಮಾಡುವುದರಲ್ಲಿ ಎತ್ತಿದ ಕೈ. ಅವರ ಮನೆಯಿಂದ ಅಂಗಡಿಪೇಟೆಗೆ ಬರೇ ಒಂದೇ ಒಂದು ಫರ್ಲಾಂಗು ದೂರ. ಆದರೆ ಬೆಳಗ್ಗೊಮ್ಮೆ ಸಂಜೆ ಒಮ್ಮೆ ಯೆಂಕಣ್ಣಯ್ಯ ಜಟಕಾದಲ್ಲಿಯೇ ಮಿತ್ರ ಸಮೇತ ಬಂದು ಇಳಿಯಬೇಕು. ಒಂದು ಫರ್ಲಾಂಗು ಯಾಕೆ? ಅವರಿದ್ದ ಮನೆಯಿಂದ ಐದನೆಯದು ಅವರ ಮಾವನ ಮನೆ. ಅಲ್ಲಿಗೆ ಹೆಂಡತಿಯೊಡನೆ ಹೋಗಬೇಕಾದರೂ ಜಟಕಾ ಸವಾರಿಯಲ್ಲೇ ಗಮನ. "ಯೆಂಕಣ್ಣಯ್ಯ ಕಕ್ಕಸಕ್ಕೆ ಮಾತ್ರ ಜಟಕಾದಲ್ಲಿ ಹೋಗುವುದಿಲ್ಲ" ಅಂತ, ಊರ ಹಿರಿಯ ಸಾವುಕಾರ ರಂಗೋಜಿಯವರು ಲೇವಡಿ ಮಾಡುತ್ತಿದ್ದರಂತೆ. ಸ್ವಾಭಾವಿಕವೇ ಇತ್ತನ್ನಿ. ಊರಿನ ಎರಡೇ ಜಟಕಾಗಳಲ್ಲಿ ಒಂದು ದಿನವಿಡೀ ಯೆಂಕಣ್ಣಯ್ಯ ನವರ ಮನೆ ಮುಂದೆಯೇ ಇದ್ದರೆ ರಂಗೋಜಿಯವರಿಗೆ ಹೊಟ್ಟೆ ಉರಿಯದೆ ಇರುತ್ತದೆಯೇ? ಬದಲಾವಣೆಗಾಗಿ ಯೆಂಕಣ್ಣಯ್ಯನವರಿಗಾಗಿದ್ದ ಹಂಬಲ ಎಷ್ಟೆಂದರೆ ಕನಿಷ್ಠ ಐದು ಸಲ ಅವರೇ ಹಣ ಕೊಟ್ಟು ಜಟಕಾದ ಕುದುರೆ ಬದಲಾಯಿಸಿದರಂತೆ.

ಊರಿನ ಟಾಪ್ ವೇಶ್ಯೆಗಾಗಿ ಯೆಂಕಣ್ಣಯ್ಯ ಕಾಶಿ ಪೀತಾಂಬರ ತೆಗೆದುಕೊಂಡರು ಎಂಬ ಮಿಥ್ಯಾಪವಾದ ಬಂದ ಸಮಾಚಾರ ಹೇಳಿದೆನಲ್ಲ. ಆ ಅಪವಾದ ಬಹಳ ಕಾಲ ಮಿಥ್ಯೆಯಾಗಿ ಉಳಿಯಲಿಲ್ಲ. ನಾನು ಅಶ್ಲೀಲಕ್ಕೆ ಇಳಿಯುತ್ತಿದ್ದೇನೆಂದು ತಿಳಿಯಬೇಡಿ. ಯಾವ ಗೃಹಸ್ಥನೂ ಸೂಳೆಯನ್ನು ಇಟ್ಟುಕೊಳ್ಳದೆ ತಾನು ಸದ್ಗೃಹಸ್ಥನಾದೆನೆಂದು ಎಣಿಸದೆ ಇದ್ದ ಕಾಲ ಅದು. ಯೆಂಕಣ್ಣಯ್ಯ ಒಂದು ಹುಣ್ಣಿಮೆ ಸಂಜೆ ಉಪರಂಭೆಯ ಮನೆಗೆ ಜಟಕಾದಲ್ಲಿ ಬಂದಿಳಿದರು. ಒಳಗೆ ಪ್ರವೇಶಿಸುತ್ತ ಹತ್ತರ ನೋಟೊಂದನ್ನು ಸಿಗರೇಟಿಗೆ ಸುತ್ತಿ ಕಡ್ಡಿಗೀರಿ ಹೊತ್ತಿಸಿ ಎರಡು ದಂ ಎಳೆದು ಗಾದಿಯಲ್ಲಿ ಆಸೀನರಾದರು. ಅವಳು ಏನೆಂದು ಯೋಚಿಸುವುದರೊಳಗಾಗಿ ಜೇಬಿನಿಂದ ಅತ್ತರಿನ ಒಂದು ಸೀಸೆ ತೆರೆದು ಅವಳ ಮೇಲೆರಚಿದರು. ಬನಾರಸಿ ಬುಗುಟದ ಪೀತಾಂಬರ

ವೊಂದನ್ನು ಬಗಲಿನಿಂದ ಬಿಡಿಸಿ ಅವಳ ಮೇಲೆ ತೂರಿ ಈ ರಾತ್ರಿ ತಮ್ಮ ಸಂಗಡ ಬರೆ ಜಟಕಾದಲ್ಲಿ ಕೂತು ಬೆಳದಿಂಗಳಲ್ಲಿ ಊರಿಗೆ ಒಂದು ಸುತ್ತು ಹೊಡೆದು ಬರುವುದಕ್ಕೆ ಇಷ್ಟು ಸಾಕೆ? ಎಂದು ನೂರರ ಒಂದು ನೋಟು ತೋರಿಸಿದರು. ಅವೊತ್ತು ಅವಳಲ್ಲಿಗೆ ರಂಗೋಜಿಯವರು ಬರುವವರಿದ್ದರು. ಆದರೆ ಯೆಂಕಣ್ಣಯ್ಯನವರು ತಮ್ಮ ಪ್ರೇಮದ ಪ್ರಮಾಣವನ್ನು ಹೆಚ್ಚು ಮನವರಿಕೆ ಯಾಗುವ ಹಾಗೆ ಪ್ರಕಟಿಸಿದ್ದರಿಂದ ಉಪರಂಭೆಯ ತಾಯಿ ಈವೊತ್ತು ತನ್ನ ಮಗಳಿಗೆ ಅಸ್ವಸ್ಥವೆಂದು ರಂಗೋಜಿಗೆ ಹೇಳಿಕಳಿಸಿದಳು—ಮತ್ತು ಅಂದು ಮಲ್ಲಿಗೆಮಾಲೆಗಳಿಂದ ಅಲಂಕೃತವಾದ ಸಾರೋಟಿನಲ್ಲಿ ಚಂದ್ರಿಕಾವಿಹಾರ ಹೊರಟು ಯೆಂಕಣ್ಣಯ್ಯ ತಾವು ಸದ್ಗೃಹಸ್ಥಶಿರೋಮಣಿಯೆಂದು ಸಿದ್ಧ ಪಡಿಸಿದರು.

ಯದ್ವಾತದ್ವಾ ಯೆಂಕಣ್ಣಯ್ಯನವರ ಬಿಡುಗೈದೊರೆತನವನ್ನು ಕುರಿತು ನಾನು ಕೇಳಿದ ಕಥೆಗಳನ್ನೆಲ್ಲ ನಿಮಗೆ ಹೇಳುವ ಉದ್ದೇಶ ನನಗಿಲ್ಲ. ಮೇಲೆ ಕೊಟ್ಟವುಗಳು ಕೆಲ ಸ್ಯಾಂಪಲ್ಲುಗಳು. ಆದರೆ ಇವು ಅವರ ವ್ಯಕ್ತಿತ್ವದ ಒಂದು ಮುಖ ಮಾತ್ರ. ಒಂದು ಸಲ ಯಾರೋ, ಒಬ್ಬರು ಅವರನ್ನು ಯದ್ವಾತದ್ವಾ ಯೆಂಕಣ್ಣಯ್ಯ ಅನ್ನುತ್ತಿರುವುದು ಅವರ ಕಿವಿಗೇ ನೇರವಾಗಿ ಬಿತ್ತು. ಅವರು ಆ ವ್ಯಕ್ತಿಯ ಹತ್ತಿರ ಜಟಕಾದಿಂದಿಳಿದು ಅವರನ್ನು ಹತ್ತಿರ ಕರೆದರು. ಅವರ ಕೈಲಿ ಐದು ರೂಪಾಯಿ ಇಟ್ಟರು. ಆಮೇಲೆ, "ನೋಡಿ, ನೀವೀಗ ಹೇಳಿದಿರಲ್ಲ ನನ್ನ ಬಿರುದನ್ನು. ಅದನ್ನು ಇನ್ನು ನೂರು ಸಲ ಗಟ್ಟಿ ಯಾಗಿ ಹೇಳಿದರೆ ನಿಮಗೆ ನಿಂತ ಮೆಟ್ಟಿಗೇ ನೂರು ರೂಪಾಯಿ ಕೊಡುತ್ತೇನೆ!" ಎಂದರು. ಆ ವ್ಯಕ್ತಿ ಉಭಯಸಂಕಟಕ್ಕೆ ಸಿಕ್ಕಿದ. ಆದರೆ ಯೆಂಕಣ್ಣಯ್ಯ ಬಿಡಲಿಲ್ಲ. ಅವನಿಂದ ನೂರು ಸಲ ತಮ್ಮ ಬಿರುದು ಪುನಶ್ಚರಣೆ ಮಾಡಿಸಿ ನೂರು ರೂಪಾಯಿ ಕೊಟ್ಟು ಕಳಿಸಿದರು!

ಯದ್ವಾತದ್ವಾ ಯೆಂಕಣ್ಣಯ್ಯನವರಿಗೆ ಯಾವೊಂದು ಪದಾರ್ಥದ ಮೇಲೂ ಮೋಹ ಇರಲಿಲ್ಲ. ಒಂದು ಸಲ ಪೇಟೆಗೆ ಉಪ್ಪು ತರಲು ಹೋಗುವಾಗ ಅವರು ಚೀಲ ಮರೆತಿದ್ದರಂತೆ. ಮತ್ತು ತಾವು ಹೊದೆದಿದ್ದ ಜರತಾರಿ ರೇಶ್ಮೆ ಶಾಲಿನಲ್ಲೆ ಉಪ್ಪು ಕಟ್ಟಿಕೊಂಡು ಬಂದರಂತೆ.

ಅಜ್ಜ ಕೂಡಿಟ್ಟ ಸಂಪತ್ತನ್ನು ಈ ದರದಲ್ಲಿ ಖರ್ಚು ಮಾಡಿದರೂ ಅದು

ಪೂರ್ತಿ ಕರಗುವುದಕ್ಕೆ ಹತ್ತು ವರ್ಷ ಹಿಡಿಯಿತು. ಎಂದರೆ ಆ ಕಾಲ ಎಷ್ಟು ಅಪ್ರಗತಿಶೀಲವಾಗಿತ್ತು ಎಂದು ನೀವೇ ಊಹಿಸಬಲ್ಲಿರಿ. ಸಿನೆಮಾ ಇರಲಿಲ್ಲ. ಕಾರು ಇರಲಿಲ್ಲ. ಏನೂ ಇರಲಿಲ್ಲ. ಮತ್ತೆ ನಾಲ್ಕು ರೂಪಾಯಿಗೆ ಚೀಲ ಅಕ್ಕಿ ಸಿಗುತ್ತಿತ್ತು. ಹಣ ಖರ್ಚು ಮಾಡಲು ನಿಜವಾದ ಜೀನಿಯಸ್ಸು ಬೇಕಾಗಿತ್ತು.

ಎಲ್ಲಾ ಸಂಪತ್ತು ಮುಗಿದ ಮೇಲೆ ಯದ್ವಾತದ್ವಾ ಯೆಂಕಣ್ಣಯ್ಯ ಮನೆಯನ್ನೂ ಮಾರಿದರು, ತನ್ನ ಮತ್ತು ಹೆಂಡತಿಯ ಆಭರಣಗಳನ್ನೂ ಮಾರಿದರು. ಆಮೇಲೆ ಒಂದು ದಿನ ಅವರು ತಮ್ಮ ಬಾಡಿಗೆ ಬಿಡಾರದ ತೊಲೆಗೆ ನೇಣು ಹಾಕಿಕೊಂಡು....

ಇಲ್ಲ, ನಿಮ್ಮ ಊಹೆ ತಪ್ಪು. ಯದ್ವಾತದ್ವಾ ಯೆಂಕಣ್ಣಯ್ಯನವರನ್ನು ಅಪರೂಪ ಪುರುಷನನ್ನಾಗಿ ಮಾಡಿದ್ದು ಅವರ ದುಂದುಗಾರಿಕೆಯಲ್ಲ—ಅವರ ನಿರಹಂಕಾರ. ಎಲ್ಲವನ್ನು ದುಂದುಮಾಡಿದಮೇಲೆ ಅವರು ಸೇಠ್ ರಖಂ ದಾಸರ (ಹುಕುಂ ದಾಸ್ ಎಂದಿದ್ದದ್ದು ಜನರ ಬಾಯಲ್ಲಿ ಹಾಗಾಗಿತ್ತು) ಹೊಸ ಜವಳಿ ಅಂಗಡಿಯಲ್ಲಿ ಸೇಲ್ಸ್‌ಮನ್ ಆಗಿ ಸೇರಿ ತಿಂಗಳಿಗೆ ಹತ್ತು ರೂಪಾಯಿ ಗಳಿಸತೊಡಗಿದರು. ವಾರಕ್ಕೊಂದು ಅಂಗಿ ಹೊಲಿಸುತ್ತಿದ್ದವರು ಅನಂಗಿ ಗಳಾಗಿಯೇ ನಿರ್ಭಯವಾಗಿ ಓಡಾಡಿದರು.

ಇದೆಲ್ಲಾ ನಡೆದದ್ದು ನನಗೆ ಸುದ್ದಿ ತಿಳಿಯುವ ಮೊದಲು. ನಾನು ಅವರ ಕಥೆ ಕೇಳಿದಾಗ ಯದ್ವಾತದ್ವಾ ಯೆಂಕಣ್ಣಯ್ಯ—ನಮ್ಮೂರು ಬಿಟ್ಟಾಗಿತ್ತು. ಕೆಲವು ವರ್ಷಗಳನಂತರ ಒಂದು ದಿನ ಅವರು ಊರಿಗೆ ಮರಳಿದರು. ಆಗ ಅವರು ಸಿಲ್ಕ್ ಧೋತ್ರ ಉಟ್ಟಿದ್ದರು. ಸರ್ಜ್‌ಕೋಟ್ ಹಾಕಿದ್ದರು. ಸೊಲ್ಲಾಪುರದಲ್ಲಿ ಏನೆಲ್ಲಾ ಏಜನ್ಸಿ ಹಿಡಿದು ಅವರು ಸಾಕಷ್ಟು ಹಣ ಗಳಿಸಿದ್ದರಂತೆ.

ನಾನು ಅವರನ್ನು ನೋಡಿದ್ದು ಆಗ. ಆಗ ಅವರಿಗೆ ಅರುವತ್ತು ಮೀರಿತ್ತು. ನಾನು ಕೆಲಸ ಮಾಡುತ್ತಿದ್ದ ಅಂಗಡಿಯ ಮುಂದೆ ತರಕಾರಿ ಮಾರುತ್ತಿದ್ದವಳಿಂದ ಎಂಟಾಣೆಯ ಬೆಂಡೆಕಾಯಿ ತೆಗೆದುಕೊಂಡು ಚಿಲ್ಲರೆಗಾಗಿ ಕಿಸೆ ತಡಕಾಡಿದ್ದನ್ನು ಕಂಡೆ. ತರಕಾರಿಯವಳ ಹತ್ತಿರ, "ಚಿಲ್ಲರೆ ಇದೆಯಾ?" ಎಂದು ಕೇಳಿದರು. "ಇಲ್ಲ ಒಡೆಯಾ!" ಎಂದಳು ಅವಳು.

ಐದು ರೂಪಾಯಿ ನೋಟನ್ನು ತರಕಾರಿಯವಳಿಗೆ ಕೊಟ್ಟು ಅವರು ಚಿಲ್ಲರೆ ಕೇಳದೆಯೆ ಹೊರಟುಹೋದರು. ನಾನು ಬೆರಗಾಗಿ ನೋಡುತ್ತಿದ್ದಂತೆ ನನ

ಹಿರಿಯ ಸ್ನೇಹಿತರು, "ಇವರೇ ನೋಡಿ—ಆ ಹೆಸರು ಹೋದ ಯದ್ವಾತದ್ವಾ ಯೆಂಕಣ್ಣಯ್ಯ!" ಎಂದು ನನ್ನ ಕಿವಿಯಲ್ಲಿ ಪಿಸುಗುಟ್ಟಿದರು.

## ಹಾಲು ಮತ್ತು ಕೋಲು

ಈಗೀಗ ಪೇಪರುಗಳನ್ನು ತೆರೆಯುವುದೆಂದರೇ ನನಗೆ ಹೆದರಿಕೆಯಾಗುತ್ತದೆ. ಇಲ್ಲ ಇಲ್ಲ; ನನ್ನ ದೇಶದಲ್ಲಿ ರಕ್ತರಹಿತ ಅಥವಾ ರಕ್ತಸಹಿತ ಕ್ರಾಂತಿಯಾಯಿತು, ಅಥವಾ ಸರ್ವಾಧಿಕಾರ ಸ್ಥಾಪನೆಯಾಯಿತು, ಅಥವಾ ಪಾಕಿಸ್ತಾನ ಆಟಂ ಬಾಂಬು ತಯಾರಿಸಿತು, ಅಥವಾ ಚುನಾವಣೆ ರದ್ದಾಯಿತು, ಇಂಥ ಯಾವುದೊಂದು ಸುದ್ದಿ ಬಂದಿರಬಹುದೆಂದು ನಾನು ಅಂಜುವುದಿಲ್ಲ. ಇಂಥವುಗಳಿಂದ ನನ್ನ ಎದೆ ಹೌಹನೆ ಹಾರುವುದಿಲ್ಲ. ಹಸುರು ಕ್ರಾಂತಿಯನ್ನೇ ದಕ್ಕಿಸಿಕೊಂಡ ನಾನು ನಸುಗೆಂಪು ಅಥವಾ ಕೆಂಪು ಕ್ರಾಂತಿಯನ್ನೂ ನುಂಗಿ ನೀರು ಕುಡಿಯಬಲ್ಲೆನೆಂದು ಭರವಸೆ ಇದೆ; ನನ್ನನ್ನೇ ಸರ್ವಾಧಿಕಾರಿಯನ್ನಾಗಿ ಯಾರಾದರೂ ಆರಿಸಿದ ಹೊರತು ನನಗೆ ಸರ್ವಾಧಿಕಾರದ ಭಯವೂ ಇಲ್ಲ; ಮತದಾರರ ಪಟ್ಟಿಯಿಂದ ನನ್ನ ಹೆಸರು ಹೇಗೋ ಅದೃಶ್ಯವಾಗಿರುವುದರಿಂದ ಚುನಾವಣೆ ರದ್ದಾದರೆ "ನಮೇ ಕಿಂಚನ ದಹ್ಯತಿ." ನನ್ನನ್ನು ಹೌಹಾರಿಸುವುದು ವಿಜ್ಞಾನ ಸುದ್ದಿ—ಅದರಲ್ಲಿಯೂ ವೈದ್ಯಕೀಯ ಸುದ್ದಿಗಳು.

ಇದೀಗ ನನ್ನ ಎದುರು ಆರು ವರ್ಷ ಹಳೆಯ ಅಮೆರಿಕನ್ ವಾರಪತ್ರಿಕೆಯೊಂದು ತೆರೆದು ನನ್ನನ್ನು ಬಿರುಗಣ್ಣುಗಳಿಂದ ದಿಟ್ಟಿಸುತ್ತ ಕುಳಿತಿದ್ದೆ. ಅದರಲ್ಲಿ ಇರುವ ಒಂದು ಲೇಖನ ಓದಿ ನನ್ನ ಬ್ಲಡ್ ಪ್ರೆಶರ್ ೧೭೫-೯೦ಕ್ಕೆ ಏರಿದೆ. ಸಕ್ಕರೆಯ ಉಪಯೋಗದಿಂದ ಆಗುವ ಅನರ್ಥಗಳನ್ನು ಅದು ಒತ್ತೊತ್ತಾಗಿ ಮುದ್ರಿಸಿದ ಆರು ಪುಟಗಳಲ್ಲಿ ವರ್ಣಿಸಿದೆ. ಅದನ್ನೋದುವವರೆಗೆ ನಾನು ಸಿಹಿಮೂತ್ರ ರೋಗದವರು ಸಕ್ಕರೆ ತಿನ್ನಬಾರದೆಂದಷ್ಟೇ ತಿಳಿದುಕೊಂಡಿದ್ದೆ. ಈಗ—ಅಂದರೆ ಆರು ವರ್ಷಗಳ ಹಿಂದೆ—ಅಮೆರಿಕನ್ ವಿಜ್ಞಾನಿಯೊಬ್ಬ ಹೆಚ್ಚು ಸಕ್ಕರೆ ತಿಂದರೇನೇ ಮಧುಮೇಹರೋಗ ಬರುತ್ತದೆಂದು ಅಂಕೆಸಂಖ್ಯೆಗಳ ಸಮೇತ ಸಿದ್ಧಾಂತ ಮಾಡಿದ್ದಾನೆ. ನಾನೀಗ ೫೫ ವರ್ಷಗಳಿಂದ ವರ್ಷಕ್ಕೆ

ಕನಿಷ್ಠ ಅರುವತ್ತು ಪೌಂಡು ಸಕ್ಕರೆ ತಿನ್ನುತ್ತ ಬಂದಿದ್ದೇನೆ. ಮತ್ತು ಪೂರ್ವೋಕ್ತ ವಿಜ್ಞಾನಿಯ ಸಂಶೋಧನೆಯ ಪ್ರಕಾರ ವರ್ಷಕ್ಕೆ ಹತ್ತು ಪೌಂಡಿಗಿಂತ ಹೆಚ್ಚು ತಿಂದವರೆಲ್ಲ ಸಿಹಿಮೂತ್ರ ರೋಗಕ್ಕೆ ಉಮೇದ್ವಾರ ರಾಗುತ್ತಾರೆ. ಅದೂ ಬೆಳಗ್ಗೆ, ಬರಿ ಹೊಟ್ಟೆಗೆ, ಕಾಫಿ ಚಹಾ ಶಿರಾ ಫೇಡೆ ಬರ್ಫಿ ಜಿಲೇಬಿ ಶರ್ಬತ್ ಇತ್ಯಾದಿ ಯಾವುದರಲ್ಲಿ ಅಥವಾ ಯಾವುದ ರೊಡನೆಯೂ ಸಕ್ಕರೆ ಸೇವಿಸುವವರಿಗೆ ಸಿಹಿಮೂತ್ರ ಮಾತ್ರವಲ್ಲ, ಸ್ಟಮಕ್ ಅಲ್ಸರ್ ಅಥವಾ ಡಿಯೋಡನಲ್ ಅಲ್ಸರ್ ಅಥವಾ ಇನ್ನೆಲ್ಲಿಯಾದರೂ ಅಲ್ಸರ್ ಆಗುವ ಭಯ ಹೆಚ್ಚುತ್ತದೆ. ಮುತ್ತಪರ್ಷ ನನಗೆ ಸ್ಟಮಕ್ ಅಲ್ಸರ್ ಬಗ್ಗೆ ಆಪರೇಶನ್ ಆಗಿ ಜಠರಕೋಶದಲ್ಲಿ ಹೆಚ್ಚಂಶ ಕತ್ತರಿಸಿ ಹಾಕಬೇಕಾದ್ದು ಸಕ್ಕರೆಯಿಂದಲೇ ಇರಬೇಕು. ಈಗ ನನಗೆ ಸ್ಟಮಕ್ ಎನ್ನುವಂಥಾದ್ದು ಉಳಿದಿಲ್ಲವಾದ್ದರಿಂದ ಅಲ್ಲಿ ಇನ್ನು ಅಲ್ಸರಿನ ಅಂಜಿಕೆ ಇಲ್ಲ. ಆದರೆ ಅನ್ನನಾಳ ದಲ್ಲಿ ಇನ್ನೂ ಸಾಕಷ್ಟಂಶ ಇರುವುದರಿಂದ ಎಲ್ಲಿಯಾದರೂ ಅದು ಇನ್ನೊಮ್ಮೆ ಕಾಣಿಸಿಕೊಳ್ಳಬಹುದು. ಶ್ರೀಮಂತರ ರೋಗವಾದ ಸಿಹಿಮೂತ್ರವಂತೂ ನನ್ನನ್ನು ಖಂಡಿತ ಸುಮ್ಮನೆ ಬಿಡದು. ದುಡ್ಡಿಲ್ಲದಿರುವುದೇ ಒಂದು ದುರಂತ; ದುಡ್ಡಿಲ್ಲದೆ ಶ್ರೀಮಂತರ ರೋಗ ಅನುಭವಿಸುವುದು ಇಮ್ಮಡಿ ದುರಂತ. ಈ ಇಮ್ಮಡಿ ದುರಂತವನ್ನು ಇನ್ನಷ್ಟು ಕಹಿಯಾಗಿ ಮಾಡುವ ಅಂಶವೆಂದರೆ, ಕಳೆದ ಆರು ವರ್ಷಗಳಲ್ಲಿ ನಮ್ಮ ದಯಾಳು ಸರಕಾರ ನನ್ನನ್ನು ಮಧುಮೇಹ, ಅಲ್ಸರ್ ಇತ್ಯಾದಿ ರೋಗಗಳಿಂದ ಕಾಪಾಡುವುದಕ್ಕೆಂದು ಸಕ್ಕರೆ ದರಗಳನ್ನು ಗಗನಕ್ಕೆ ಏರಗೊಟ್ಟಿದ್ದರೂ ಅದರ ಪ್ರಯೋಜನ ಪಡೆಯದೆ ನಾನು ಬಿಳಿ ಪೇಟೆಯಲ್ಲೇ ಕಪ್ಪು ಪೇಟೆಯ ದರದಲ್ಲಿ ಸಕ್ಕರೆ ಕೊಂಡುಕೊಂಡು ತಿಂದಿದ್ದೇನೆ.

ಆದ್ದರಿಂದ ಈಗ ನಾನೇನು ಮಾಡಬೇಕು? ಸಕ್ಕರೆಯನ್ನು ಈ ಕ್ಷಣದಿಂದ ಬಿಟ್ಟುಬಿಡಲೇ? ಏನು ಪ್ರಯೋಜನ? ಸರಕಾರಗಳು ಕಾನೂನು ಮಾಡಿ ಅದನ್ನು ಹಿಂದಣ ತಾರೀಖಿನಿಂದ ಜಾರಿಗೆ ತರಬಹುದು; ಆದರೆ ನಾನು ಇಂದು ಸಕ್ಕರೆ ವರ್ಜ್ಯಮಾಡಿ ಅದನ್ನು ಇಪ್ಪತ್ತೈದು ವರ್ಷ ಹಿಂದಿನಿಂದ ಜಾರಿಗೆ ತಂದು ನನಗೆ ಸಿಹಿಮೂತ್ರ ಬರಕೂಡದೆಂದು ಹೇಳಲಾದೀತೆ? ಇಲ್ಲ. ನಾನು ಸರಕಾರವಲ್ಲವಲ್ಲ. ಆದ್ದರಿಂದ ಇನ್ನು ನನಗಿರಬಹುದಾದ ಅಲ್ಪಾಯುಷ್ಯದಲ್ಲಿ ಮೊದಲಿನಂತೆ ಸಕ್ಕರೆ ತಿನ್ನುತ್ತ ಹೋಗಬೇಕೆಂದು ನಿರ್ಧರಿಸಿದ್ದೇನೆ. ಪ್ರಾರಬ್ಧಂ

ಉತ್ತಮಗುಣಾ ನ ಪರಿತ್ಯಜಂತಿ—ಗುಣವಂತರು ಸುರುಮಾಡಿದ್ದನ್ನು ಬಿಡುವುದಿಲ್ಲ.

ಕಾಫಿ ಕುಡಿಯೋಣ, ಸಕ್ಕರೆ ಬಿಟ್ಟು—ಅನ್ನುತ್ತಿರೋ, ಈಚೆಗೆ ಕಾಫಿ ಕುಡಿಯುವುದರಿಂದ ಹಾರ್ಟ್ ಟ್ರಬಲ್ ಆಗುತ್ತದೆ—ಅನ್ನುವ ಸಂಶೋಧನೆ ಆಗಿದೆ. ಯಾವುದೋ ಮಾಯಕದಲ್ಲಿ ನನ್ನ ಹೆಂಡತಿ ಅದನ್ನು ಓದಿಬಿಟ್ಟು ಕಾಫಿಗೆ ರೇಶನ್ ಜಾರಿ ಮಾಡುತ್ತೇನೆ—ಎಂದು ಕೂತಿದ್ದಾಳೆ. ಅವಳಿಗೆ ನನ್ನ ಹಾರ್ಟ್ ಬಗ್ಗೆ ಭಲೇ ಕಾಳಜಿ. ಅವಳ ಅಭಿಪ್ರಾಯದಲ್ಲಿ ನನಗೆ ಹಾರ್ಟ್ ಇರುವುದೇ ಅತ್ಯಲ್ಪ. ಅದಕ್ಕೂ ಟ್ರಬಲ್ ಸುರುವಾದರೆ ಏನು ಗತಿ ಅಂತ? ನಾನು ಹೇಳುತ್ತೇನೆ, ಕಾಫಿ ಕುಡಿಯದೆ ಇರುವುದಾದರೆ ಹಾರ್ಟ್ ಇದ್ದರೇನು ಬಿಟ್ಟರೇನು ಅಂತ. ಕಾಫಿ ಅವಳಿಗೆ ಮೊದಲಿಂದ ಅಷ್ಟಕ್ಕಷ್ಟೆ. ಅದನ್ನು ಬಿಟ್ಟರೆ ಆದಾಯಕ್ಕೂ ಆಯಿತು, ಆರೋಗ್ಯಕ್ಕೂ ಆಯಿತು, ಸಕ್ಕರೆಯನ್ನೂ ಉಳಿಸಬಹುದು. ಕಾಫಿ ಬೆಲೆ ಏರಿಕೆಗೆ ತಡೆಯೊಡ್ಡುವ ಲೋಕೋದ್ಧಾರಕಾರ್ಯದಲ್ಲಿ ನನ್ನ ಅಳಿಲುಸೇವೆ ಸಲ್ಲಿಸಿದ ಹಾಗೂ ಆಗುತ್ತದೆ. ಬೇಕಾದರೆ ದಿನಕ್ಕೆ ಒಂದು ಲೋಟ ಹಾಲು ಕುಡಿಯಿರಿ ಅನ್ನುತ್ತಾಳೆ. ಆದರೂ ನಾನು ನನ್ನ ಪಟ್ಟು ಬಿಡಲಿಲ್ಲ. ದಿನಕ್ಕೆ ಒಂದೆರಡು ಮಗ್ ಕಾಫಿ ನುಂಗುತ್ತಲೇ ಇದ್ದೆ. ಆದರೆ ಈಗ ನನಗೂ ಹೆದರಿಕೆ ಹುಟ್ಟಿಸುವ ಸುದ್ದಿಯೊಂದು ಬಂದಿದೆ. Coffee is bad for introverts—ಅಂತರ್ಮುಖಿ ಜನರಿಗೆ ಕಾಫಿ ಒಳ್ಳೇದಲ್ಲವಂತೆ—ಅದು ಅವರ ಬುದ್ಧಿಯನ್ನು ಮಂಕು ಮಾಡುತ್ತದೆಂದು ಇನ್ನೊಬ್ಬ ಅಮೆರಿಕನ್ ಡಾಕ್ಟರ್ ಕಂಡುಹಿಡಿದಿದ್ದಾರೆ. ನಾನೋ ಹೊರಗೆ ತೋರಿಸಿ ಹೆಮ್ಮೆಪಡಬಹುದಾದಂಥ ಮುಖ ಇಲ್ಲದ್ದರಿಂದ ಅಪ್ಪಟ ಅಂತರ್ಮುಖಿ. ಈ ಕಾಲದಲ್ಲಿ ಹಾರ್ಟ್ ಇಲ್ಲದಿದ್ದರೆ ಅಂಥಾ ಕಷ್ಟವೇನೂ ಬರಲಿಕ್ಕಿಲ್ಲ. ಬುದ್ಧಿ ಮಂಕಾದರೆ ಬದುಕುವುದೇ ಕಷ್ಟ. ನೀವು ರಾಜಕಾರಣದಲ್ಲಿ ಇಲ್ಲದಿದ್ದರೂ ಹೆಜ್ಜೆಹೆಜ್ಜೆಗೆ ಸುಳ್ಳು ಇನ್‌ವೆಂಟ್ ಮಾಡುವ ಚುರುಕುಬುದ್ಧಿ ಬೇಕೇ ಬೇಕು.

ಏನು ಮಾಡುವುದು? ಹೆಂಡತಿಯನ್ನು ಮೆಚ್ಚಿಸಿದ ಹಾಗೂ ಆಯಿತು, ಆರೋಗ್ಯಕ್ಕೆ ಹಿತವೂ ಆಯಿತು, ಬೆಳಗ್ಗೆ ಎದ್ದು ಗರಡಿಪೈಲವಾನರ ಹಾಗೆ ಹಾಲೇ ಕುಡಿಯುವಾ ಅಂತ ಹೆಚ್ಚುಕಡಿಮೆ ನಿಶ್ಚಯವನ್ನೇ ಮಾಡಿದ್ದೆ. ಅಷ್ಟರಲ್ಲಿ "ಸೈನ್ಸ್ ಡೈಜೆಸ್ಟ್"ನಲ್ಲಿ ಇನ್ನೊಂದು ಸುದ್ದಿ ಬಂತು. ಎಲ್ಲರಿಗೂ ಹಾಲು

ದಕ್ಕುವುದಿಲ್ಲ—ಅಂತ. ಯುರೋಪಿಯನ್ನರಿಗೆ ಹಾಲು ಹಿತವಂತೆ. ಏಶಿಯ, ಆಫ್ರಿಕದ ಜನರಲ್ಲಿ ಸೇಕಡಾ ೮೦ ಜನರಿಗೆ ಹಾಲು ಜೀರ್ಣಿಸಿಕೊಳ್ಳಲು ಬೇಕಾದ ಎನ್‌ಜೈಮುಗಳೇ ಜಠರದಲ್ಲಿ ಇಲ್ಲ. ಅವರಿಗೆ ಹಾಲು ಒಳ್ಳೇದಕ್ಕಿಂತ ಕೆಟ್ಟದನ್ನೇ ಮಾಡಬಹುದಂತೆ. ಈಗ ನನಗೆ ನಿಜಕ್ಕೂ ಸಮಸ್ಯೆಯಾಗಿದೆ. ಚಹಾ ನನಗೆ ಸೇರುವುದಿಲ್ಲ. ಕಾಫಿ ನನ್ನ ಹಾರ್ಟಿಗೂ ಹೆಡ್ಡಿಗೂ ಒಳ್ಳೆಯದಲ್ಲ. ಹಾಲು ಜೀರ್ಣವಾಗುವುದಿಲ್ಲ. ಏನು ಕುಡಿಯಲಿ? ಒಳ್ಳೇ ವುಳಿಯೆಂಡಾನೆ?

ಸಿಹಿ ಕೂಡದು (ಸಕ್ಕರೆ); ಒಗರು ಸಲ್ಲದು (ಕಾಫಿ); ಹಾಗಾದರೆ ಖಾರವನ್ನಾದರೂ ತಿನ್ನೋಣವೇ? "ಮೆಡಿಕಲ್ ಟೈಮ್ಸ್"ನಲ್ಲಿ ಬಂದ ಲೇಖನ ಓದಿದಮೇಲೆ ಮೆಣಸಿನಕಾಯಿಯನ್ನು ದೂರದಿಂದ ನೋಡಿದರೇನೇ ನನ್ನ ಮೂಗಿನಿಂದ ನೀರು ಇಳಿಯತೊಡಗಿದೆ. ಮೆಣಸಿನಕಾಯಿ, ಲವಂಗ, ದಾಲಚಿನ್ನಿ, ಶುಂಠಿ, ಒಳ್ಳೇ ಮೆಣಸು ಮತ್ತು ಇತರ ಯಾವುದೇ ಮಸಾಲೆ ಸಾಮಾನು ತಿಂದರೂ ನಿಮಗೆ ಹೊಟ್ಟೆಹುಣ್ಣು, ಕ್ಯಾನ್ಸರು ಮತ್ತು ಬೇರೆ ವೈವಿಧ್ಯಪೂರ್ಣ ರೋಗಗಳು ಬರಬಹುದೆಂದು ಸಂಶೋಧಕರೂ ಸಂಖ್ಯಾಧ್ಯಾಯಿಗಳೂ ಹೆದರಿಕೆ ಹಾಕಿದ್ದಾರೆ. ಇಂಡಿಯದ ಜನರಿಗೆ ಅಲ್ಸರುಗಳ ಉಪದ್ರವ ಯುರೋಪಿಯನ್ನರಿಗಿಂತ ಜಾಸ್ತಿ ಎಂಬ ಸಂಖ್ಯಾಶಾಸ್ತ್ರೀಯ ನಿರ್ಣಯ ನನಗೆ ಮೊದಲೇ ಗೊತ್ತಿತ್ತು. ಆದರೆ ಇದಕ್ಕೆ ಹೊಟ್ಟೆಕಿಚ್ಚು ಯುರೋಪಿಯನ್ನರಿಗಿಂತ ನಮಗೆ ಜಾಸ್ತಿ ಇರುವುದೇ ಕಾರಣವೆಂದು ನಾನು ನಂಬಿದ್ದೆ. ಈಗ ಅದಕ್ಕೆ ಮಸಾಲೆ ಕಾರಣವೆಂದು ಸಿದ್ಧವಾಗಿರುವುದರಿಂದ ಯಾವ ಮೇಲೋಗರವನ್ನು ಬಾಯಿಗಿಡುವಾಗಲೂ ನನಗೆ ಹುಣ್ಣುಗಳೇ ಕಾಣಿಸತೊಡಗಿವೆ.

ಹಾಗಾದರೆ ಮೆಣಸಿನಕಾಯಿಗೆ ಬಹಿಷ್ಕಾರ ಹಾಕಿಬಿಡುವಾ ಅಂದುಕೊಂಡೆ; ಈಗ ತಾನೆ ಹಳೇ ಪುಸ್ತಕಗಳ ಅಂಗಡಿಯಿಂದ ತೆಗೆದುಕೊಂಡ "ಸೈನ್ಸ್ ಟುಡೇ"ಯಲ್ಲಿ ಮೆಣಸಿನಕಾಯಿ ನೀವೆಣಿಸಿದಷ್ಟು ಕೆಟ್ಟದ್ದಲ್ಲ ಎಂಬ ಆಶ್ವಾಸನೆ ಬಂದು ನನ್ನ ತಲೆಯಲ್ಲಿ ಡಿಕಾಟಮಿಯನ್ನು ಹುಟ್ಟಿಸಿದೆ. ಮೆಣಸಿನಕಾಯಿ ಅಲ್ಸರು, ಕ್ಯಾನ್ಸರು ಉಂಟುಮಾಡಬಹುದು; ಆದರೆ ಶ್ವಾಸಸಂಸ್ಥಾಯದಲ್ಲಿನ ಇನ್‌ಫೆಕ್ಷನ್‌ಗಳನ್ನು ಹತೋಟಿಯಲ್ಲಿಡುತ್ತದಂತೆ. ನಾವು ಹೆಚ್ಚು

ಖಾರ ತಿನ್ನುವುದರಿಂದಲೇ ನಮ್ಮ ಶ್ವಾಸಸಂಸ್ಥಾಯದಲ್ಲಿ ಬಿಳಿಯರ ಸಂಸ್ಥಾಯ ದಲ್ಲಿಗಿಂತ ಕಡಿಮೆ ಇನ್‌ಫೆಕ್ಶನ್ ಇರುತ್ತದಂತೆ. ಈಗ ನೀವು ನನಗೆ ಹೇಳಿ ಸ್ವಾಮಿ, ಅಥವಾ ಸ್ವಾಮಿನಿ—ನಾನು ಯಾವುದನ್ನು ಆರಿಸಿಕೊಳ್ಳಲಿ?—ಅಲ್ಸರ್ ಮತ್ತು ಕ್ಯಾನ್ಸರನ್ನೋ ಅಥವಾ ಇನ್‌ಫೆಕ್ಶನ್ ಅನ್ನೋ? ಯಾವುದು ನನಗೂ ದೇಶಕ್ಕೂ ಇನ್‌ಶೂರೆನ್ಸ್ ಕಾರ್ಪೊರೇಶನ್ನಿಗೂ ಡಾಕ್ಟರುಗಳಿಗೂ ಹೆಚ್ಚು ಹಿತವನ್ನು ಮಾಡಬಹುದು?

ಔಷಧಗಳೂ ಇಂಜಕ್ಶನ್ನುಗಳೂ ಮನುಷ್ಯನಿಗೆ ಹಿತ ಅಂತ ಈ ವರೆಗೂ ನಾನು ದೃಢವಾಗಿ ನಂಬಿದ್ದೆ. ಆದರೆ ಈಗ ಪತ್ರಿಕೆಗಳು ಹೇಳತೊಡಗಿದ್ದಾವೆ—ಪೆನಿಸಿಲಿನ್ ಅಪಾಯಕರ. ಅದರ ಇಂಜಕ್ಶನ್ ತೆಗೆದುಕೊಂಡು ಕೆಲವರು ಸಾಯಬಹುದು ಅಂತ. ಕೆಲವರು ಅಂದರೆ ಯಾರು? ನಾನು ಅದರಲ್ಲಿ ಸೇರಿದ್ದೇನೋ ಇಲ್ಲವೊ? ಗೊತ್ತಿಲ್ಲವಂತೆ. ಆರುನೂರು ಪೆನಿಸಿಲಿನ್ ಚುಚ್ಚಿಸಿಕೊಂಡಾತ ಒಬ್ಬ ಆರುನೂರೊಂದನೆಯದಕ್ಕೆ ಕುಸಿದುಬಿದ್ದನಂತೆ. ಮತ್ತೆ ಪೆನಿಸಿಲಿನ್ ಶಾಕ್ ನಿಮಗೆ ಉಯಿಲು ಬರೆಯಲಿಕ್ಕೂ ವೇಳೆ ಕೊಡುವುದಿಲ್ಲ ವಂತೆ. ಚುಚ್ಚಿದ ಸೂಜಿ ಹೊರತೆಗೆಯುವುದರೊಳಗೆ ನೀವು ಪರಲೋಕದಲ್ಲಿ ಎಚ್ಚರಗೊಳ್ಳಬಹುದು. ಇಂಥಾ ಧಿಡೀರ್ ಗುಣ ಇನ್ನೂ ಅನೇಕ ಆಂಟಿ-ಬಯಾಟಿಕ್ಕುಗಳಲ್ಲಿ ಇದೆ. ಇತರ ಹೆಚ್ಚಿನ ಮದ್ದುಗಳಲ್ಲಿ ನಿಮ್ಮನ್ನು ಸಾವಕಾಶ ವಾಗಿ ಕೊಲ್ಲುವ ಸಾಮರ್ಥ್ಯ ಇದೆ. ಔಷಧಗಳಲ್ಲಿ ಈಗ ಎರಡೇ ವರ್ಗಗಳನ್ನು ಮಾಡಲಾಗುತ್ತಿದೆ. ಮೆಲ್ಲಮೆಲ್ಲನೆ ಕೊಲ್ಲುವಂಥವು ಮತ್ತು ತತ್‌ಕ್ಷಣ ಮುಗಿಸಿಬಿಡುವಂಥವು.

ನೀವು ಬ್ರಶ್ಶಿನಿಂದ ಹಲ್ಲು ತಿಕ್ಕುತ್ತೀರಾ? ಹಲ್ಲುಗಳ ನಾಶಕ್ಕೆ ಆಮಂತ್ರಣ ಕೊಡುತ್ತಿದ್ದೀರಿ. ಯಾಕೆಂದರೆ ಹಲ್ಲು ಉಜ್ಜದೆ ಇರುವುದಕ್ಕಿಂತ ಹೆಚ್ಚಿನ ಇನ್‌ಫೆಕ್ಶನ್ ಅಪಾಯ ಬ್ರಶ್ಶಿನಿಂದ ಉಜ್ಜುವುದರಲ್ಲಿದೆ. ನೀವು ಚಮಚೆ ಯಲ್ಲಿ ಊಟ ಮಾಡುತ್ತೀರಾ? ಫೋರ್ಕಿನಲ್ಲಿ ದೋಸೆ ಹರಿದು ತಿನ್ನುತ್ತೀರಾ? ನೀವು ಇದನ್ನೋದುವುದಕ್ಕಿಂತ ಮೊದಲೇ ಸತ್ತಿರದಿದ್ದರೆ ಇನ್ನು ಆ ಚಾಳಿ ಬಿಡಿ. ಏಕೆಂದರೆ ಚಮಚೆ, ಫೋರ್ಕು, ಚೂರಿ ಇತ್ಯಾದಿಗಳೆಲ್ಲ ರೋಗಾಣುಗಳ ತವರುಮನೆಗಳು. ಕೆಲವುಗಳ ಹಿಂದೆ, ಕೆಲವುಗಳ ಮುಂದೆ, ಕೆಲವುಗಳ ಸಂದಿ ಗಳಲ್ಲಿ ರೋಗಾಣುಗಳು ಠಾಣೆ ಹಾಕಿರುತ್ತವೆ.

ನಿಮ್ಮ ಸ್ನೇಹಿತರನ್ನು ಕಂಡೊಡನೆ ಕೈಕುಲುಕಿಸುವ ಅಭ್ಯಾಸ ನಿಮಗುಂಟೆ? ಇದು ಡರ್ಟಿ ಹ್ಯಾಬಿಟ್ ಅನ್ನುವ ಎಚ್ಚರಿಕೆಯನ್ನು ಮೊನ್ನೆ ಒಂದು ಪೇಪರಿನಲ್ಲಿ ಓದಿದೆ. ಯಾಕೆ ಕೇಳುತ್ತೀರಾ? ಮನುಷ್ಯರ ಕೈಗಳು ಅಪಾಯಕಾರಿ ಸಾಧನಗಳು. ಅವುಗಳಲ್ಲಿ ರೋಗಜಂತುಗಳು ತುಂಬಿಕೊಂಡಿವೆ. ನಿಮ್ಮ ಸ್ನೇಹಿತನೊಡನೆ ಕೈಕುಲುಕುವಾಗ ನೀವು ನಿಮ್ಮ ಕೈಯಲ್ಲಿಲ್ಲದ ರೋಗಾಣುಗಳನ್ನು ಅವನ ಕೈಯಿಂದ ಇಸಿದುಕೊಂಡು ಅವನ ಕೈಯಲ್ಲಿ ಇಲ್ಲದವುಗಳನ್ನು ಅವನಿಗೆ ದಾಟಿಸುತ್ತೀರಿ. ಆದಕಾರಣ ನಿಮ್ಮ ಶತ್ರುಗಳಿಗೆ ಮಾತ್ರವಲ್ಲ ಮಿತ್ರರಿಗೂ ದೂರದಿಂದಲೇ ಕೈಮುಗಿಯಿರಿ. ಅಥವಾ ಕೈಮುಗಿಯುವುದಾದರೂ ಏನು ಸುರಕ್ಷಿತ? ನಿಮ್ಮ ಎಡಗೈಯ ರೋಗಾಣುಗಳನ್ನು ಬಲಗೈಗೆ ವರ್ಗಾಯಿಸುತ್ತಿರಲಿಕ್ಕಿಲ್ಲವೆ?

ಕೈ ಮಿಲಾಯಿಸುವುದೇ ಇಷ್ಟು ಅಪಾಯಕರವಾಗಿರುವಾಗ ತುಟಿ ಮಿಲಾಯಿಸುವುದನ್ನು ಕೇಳಬೇಕೆ? ಪ್ರಿಯೆಯ ಅಧರಾಮೃತದ ಬಗ್ಗೆ ಕವಿಗಳು ಹೇಳುವುದನ್ನು ನಂಬಬೇಡಿ. ಅಧರಗಳಲ್ಲಿರುವುದು ಅಮೃತವಲ್ಲ ವಿಷ—ಎಂಬುದಾಗಿ ಮೊನ್ನೆ ಒಬ್ಬ ಸಂಶೋಧಕರು ಎಚ್ಚರಿಕೆ ಕೊಟ್ಟಿದ್ದಾರೆ. ತುಟಿಗಳಲ್ಲಿ ಪ್ರತಿ ಚದರ ಮಿಲಿಮೀಟರಿಗೆ ಒಂದೂವರೆ ಮಿಲಿಯನ್ ಜೀವಾಣುಗಳು ಇರಬಹುದು. ಈ ಅಣುಜೀವಿಗಳಲ್ಲಿ ಹೆಚ್ಚಿನವು ನಿಮ್ಮ ಜೀವ ತೆಗೆದುಕೊಳ್ಳುವಷ್ಟು ಭಯಂಕರವಾಗಿರುತ್ತವೆ. ಒಂದು ಸೆಕೆಂಡ್ ಕಾಲ ಮನಃಪೂರ್ವಕ ಮುದ್ದಿಟ್ಟರೆ ನೀವು ಸರಾಸರಿಯಲ್ಲಿ ಏಳೆಂಟು ಮಿಲಿಯನ್ ರೋಗಾಣುಗಳನ್ನು ಬರಮಾಡಿಕೊಳ್ಳುತ್ತೀರಿ. ನೀವು ಜೀವಾಣುಪ್ರಜ್ಞೆಯುಳ್ಳ ನಾಗರಿಕರಾಗಿದ್ದರೆ ನಿಮ್ಮ ಪ್ರೇಯಸಿಗೆ, ಪುಕ್ಕ ಕಾಲೇಜ್ ಹುಡುಗರು ಹುಡುಗಿಯರಿಗೆ ಮಾಡುವಂತೆ, ನಿಮ್ಮ ಚುಂಬನವನ್ನು ನಿಮ್ಮ ಬೆರಳುಗಳಿಗೆ ವರ್ಗಾಯಿಸಿ ಛೂ ಬಿಡುವುದು ಒಳ್ಳೇದು.

* * *

ತೀರ ಗಲಿಬಿಲಿಯಾಗಿ ನಾನು ಮೇಲೆ ಹೇಳಿದ ಸಂಗತಿಗಳನ್ನೆಲ್ಲ ಇದೀಗ ನನ್ನ ಪರಿಚಯದ ಮುದಿ ಡಾಕ್ಟರರ ಮುಂದೆ ತೋಡಿಕೊಂಡು ಈ ಅನ್ನಮಯ, ಭೋಗಮಯ, ಔಷಧಮಯ ಪ್ರಪಂಚದಲ್ಲಿ ಸಜೀವವಾಗಿ ಬದುಕುವ ಉಪಾಯವೇನೆಂದು ಕೇಳಿದೆ. ಅವರು ಕೊಟ್ಟ ಸಲಹೆ ಇಷ್ಟೇ: "ಪೇಪರು

ಗಳನ್ನು ಓದಬೇಡಿ, ಬೇಕಾದ್ದನ್ನು ತಿನ್ನಿ. ಬೇಕಾದಷ್ಟು ಮುದ್ದು ಕೊಡಿ."

"ಆದರೆ ಇದು ಬೆಕ್ಕು ಕಣ್ಮುಚ್ಚಿ ಹಾಲು ಕುಡಿದಂತಲ್ಲವೆ?" ನಾನು ಸಂಶಯಪಟ್ಟೆ.

"ಬೆಕ್ಕು ಬಲು ಬುದ್ಧಿವಂತ ಪ್ರಾಣಿ. ಹಾಲು ಕುಡಿಯುವಾಗ ಕಣ್ಮುಚ್ಚಿ ಕೊಳ್ಳುವುದೇ ಹಾಲಿನ ಆನಂದವನ್ನು ಅನುಭವಿಸಲು ಉತ್ತಮ ಉಪಾಯ ವೆಂದು ಅದು ಬಲ್ಲುದು."

"ಆದರೆ ಕೋಲಿನ ವಿಚಾರ?"

"ಬೆಕ್ಕು ಎಷ್ಟು ಸಲ ಹಾಲು ಕುಡಿಯುವಾಗ ಎಷ್ಟು ಸಲ ಕೋಲಿಗೆ ಸಿಕ್ಕುತ್ತದೆ?" ಎಂದವರು ಕೇಳಿದರು.

ನಾನು ಈ ಡಾಕ್ಟರರ ಸಲಹೆಯನ್ನು ಸ್ವೀಕರಿಸಬೇಕೇ? ತಮ್ಮ ಪ್ರಾಕ್ಟೀಸು ಹೆಚ್ಚಾಗಬೇಕೆಂಬ ಇರಾದೆ ಅವರಿಗಿಲ್ಲವೆಂದು ಹೇಗೆ ಗೊತ್ತು? (೧೯೬೭)

## ಈರುಳ್ಳೀ ಮಹಿಮೆ

ನನ್ನ ಹೆಂಡತಿಯ ಸಲುವಾಗಿ ನಾನು ಮಾಡಿದ ಏಕಮಾತ್ರ ಮಹಾತ್ಯಾಗ ಎಂದರೆ, ನೀರುಳ್ಳಿಯನ್ನು ಬಿಟ್ಟದ್ದು. ಇಕೊಳ್ಳಿ! ಅದರ ಹೆಸರು ಹೇಳುತ್ತಲೇ ನಾಲಿಗೆಯಲ್ಲಿ ನೀರು ಒಸರತೊಡಗಿದೆ ಮತ್ತು ಮೂಗಿನ ಹೊರಳೆ ಉಬ್ಬ ತೊಡಗಿದೆ. ಅಂದಮೇಲೆ ನಾನು ಮಾಡಿದ ತ್ಯಾಗ ಎಂಥ ಮಹತ್ತಾದ್ದೆಂದು ನೀವು ಗ್ರಹಿಸುತ್ತೀರೆಂದು ನಂಬಿದ್ದೇನೆ. ಇದೇನು ಸಂಪೂರ್ಣ ಪೂರ್ವಕಲ್ಪಿತ ತ್ಯಾಗವಲ್ಲ. ನಾನು ಅವಳನ್ನು ಕಟ್ಟಿಕೊಳ್ಳುವ ಮೊದಲು ಎಷ್ಟೆಲ್ಲಾ ಪ್ರಶ್ನೆ ಗಳನ್ನು ಕೇಳಿ ನನಗೂ ಅವಳಿಗೂ ಮೇಳ ಕೂಡುತ್ತದೆಂದು ಖಾತ್ರಿ ಮಾಡಿ ಕೊಂಡಿದ್ದೆ. ಆದರೆ ನೀರುಳ್ಳಿಗೂ ನಿನಗೂ ದ್ವೇಷವುಂಟೇ? ಎಂದು ಕೇಳಲು ಮಾತ್ರ ಮರೆತಿದ್ದೆ. ಹೆಣ್ಣು ನೋಡಲು ಹೋಗುವಾಗ ದೇವರು ಗಂಡಿನ ಬುದ್ಧಿಯ ಮೇಲೆ ಏನೋ ಮಂಕುಬೂದಿ ಎರಚುತ್ತಾನೆಂದು ತೋರುತ್ತದೆ. ನೀವು ಅವಳನ್ನು ತಪ್ಪು ಕೋಣದಲ್ಲಿ ನೋಡಿ ಪರಮ ಸುಂದರಿಯೆಂದು ತೀರ್ಮಾನಿಸುತ್ತೀರಿ. ಏನೋ ಬಣ್ಣಗುರುಡು ಬಂದು ಕಪ್ಪಿದ್ದವಳನ್ನು

ಕೆಂಪೆಂದು ಭಾವಿಸಿಕೊಳ್ಳುತ್ತೀರಿ. ಹಲ್ಲಿನ ಕಡೆ ಲಕ್ಷ್ಯಕೊಡುವ ಬದಲು ಮೂಗನ್ನು ನೋಡಿ ಮೆಚ್ಚಿಕೊಳ್ಳುತ್ತೀರಿ. ಮತ್ತು ನಿಮಗೆ ಪ್ರಿಯವಾದ ನೀರುಳ್ಳಿ ಅವಳಿಗೆ ಸುವಾಸನೆಯೋ ದುರ್ವಾಸನೆಯೋ ಎಂದು ಕೇಳಲು ಮರೆತುಬಿಡುತ್ತೀರಿ. ಮದುವೆ ಮಾಡಿಕೊಂಡಮೇಲೆ ನೀರುಳ್ಳಿಯ ವಾಸನೆಯ ಬಗ್ಗೆ ಬಂದ ಭಿನ್ನಾಭಿಪ್ರಾಯವು ಡೈವೋರ್ಸಿಗೆ ತಕ್ಕ ಸಕಾರಣವಲ್ಲೆಂದು ಗೊತ್ತಾಗಿ ಹಳಹಳಿಸುತ್ತೀರಿ.

ಉಳ್ಳಿ, ನೀರುಳ್ಳಿ, ಉರುಳಿ, ಉರುಳಾಗಡ್ಡೆ, ಉಳ್ಳಾಗಡ್ಡೆ, ಈರುಳ್ಳಿ.... ಅಹಹಾ! ನಮ್ಮ ಕೆಲ ದೇವರುಗಳನ್ನು ಬಿಟ್ಟರೆ ಮತ್ತಾವ ಪದಾರ್ಥಕ್ಕೂ ಇಷ್ಟೆಲ್ಲ ಹೆಸರುಗಳು ಇರಬಹುದೆಂದು ನಾನೆಣಿಸುವುದಿಲ್ಲ. ಪ್ರಿಯಕರನು ಪ್ರಿಯಕರಿಯನ್ನು, ಚಿನ್ನಾ, ಪ್ರಿಯೆ, ಮುದ್ದಿನಗಿಣಿ, ಪ್ರಾಣಾಧಿಕೇ, ಕೆಳದೀ ....ಎಂದು ಮುಂತಾಗಿ ಎಷ್ಟೆಲ್ಲ ಹೆಸರುಗಳಿಂದ ಕರೆದರೂ ತೃಪ್ತಿಕಾಣದ ಹಾಗೆ ನೀರುಳ್ಳಿಪ್ರಿಯರೂ ಅದನ್ನು ಬಗೆಬಗೆಯ ಹೆಸರುಗಳಿಂದ ಕರೆದು ಸಂತೋಷ ಪಟ್ಟಂತೆ ಕಾಣುತ್ತದೆ. "ಸಖಿ, ನಿನ್ನ ಸಖ್ಯದ ಆಖ್ಯಾನ ಕಟುಮಧುರ" ಎಂದು ಬೇಂದ್ರೆಯವರು ಹೇಳಿದ್ದಾರೆ. ನೀರುಳ್ಳಿಯ ಆಖ್ಯಾನ ಖಾರ-ಮಧುರ ಮತ್ತು ರಸವರಿಯದ ಮೂಗುಗಳಿಗೆ ಮಾತ್ರ ದುರ್ಗಂಧ-ಮಧುರ. ಮಧುರಗಳಲ್ಲಿ ಭೇದ ತೋರಿಸುತ್ತ ಸಂಸ್ಕೃತಕವಿ, "ದಧಿ ಮಧುರಂ ಮಧು ಮಧುರಂ ದ್ರಾಕ್ಷಾ ಮಧುರಾ ಸುಧಾಪಿ ಮಧುರೈವ" ಎಂದು ಅನೇಕ ಮಧುರಗಳನ್ನು ಹೇಳಿದರೂ ಪಲಾಂಡು (ನೀರುಳ್ಳಿ) ಮಧುರವನ್ನು ಹೇಳಲು ಮರೆತದ್ದು ಮಧುರದ ಸರ್ವ ಪ್ರಕಾರಗಳನ್ನು ಅವನು ಶೋಧಿಸಿದವನಲ್ಲ ಎಂದು ತೋರಿಸುತ್ತದೆ. ಆದರೆ "ತಸ್ಯ ತದೇವ ಹಿ ಮಧುರಂ ಯಸ್ಯ ಮನೋ ಯತ್ರ ಸಂಲಗ್ನಂ"—ಯಾರ ಮನಸ್ಸು ಯಾವುದರಲ್ಲಿ ನಟ್ಟಿದೆಯೋ ಅವನಿಗೆ ಅದೇ ಮಧುರ ಎಂದು ನಿಮಗೆ ಈರುಳ್ಳಿಯನ್ನು ಮಧುರವೆಂದು ಬಗೆಯುವ ಸ್ವಾತಂತ್ರ್ಯವನ್ನು ಅವನು ಕೊಟ್ಟಿದ್ದಾನೆ.

ಈರುಳ್ಳಿಯಂಥ ವಿವಿಧೋದ್ದೇಶ ತರಕಾರಿ ಬೇರೊಂದು ನನಗೆ ಸಿಕ್ಕಿಲ್ಲ. ಅದು "ಸೋಲೋ" ಅಥವಾ "ತನಿಯ" ತರಕಾರಿಯಾಗಿಯೂ "ಪಕ್ಕವಾದ್ಯ" ಅಥವಾ "ಅಕಂಪನೀಮೆಂಟ್" ವ್ಯಂಜನವಾಗಿಯೂ ಉಪಯೋಗಕ್ಕೆ ಬೀಳುತ್ತದೆ. ಗಡ್ಡೆಯಷ್ಟೇ ಅದರ ಸಸಿಯೂ ಸುಗಂಧ ಮತ್ತು ಜಿಹ್ವಾಪ್ರಚೋದಕವಾಗಿರುತ್ತದೆ. ಹಸಿಯಾಗಿ, ಅರೆಬೇಯಿಸಿ, ಪೂರಾ ಬೇಯಿಸಿ, ಹುರಿದು,

ಕರಿದು, ಹದವಾಗಿ ಸುಟ್ಟು–ಬೇಕುಬೇಕಾದಂತೆ ಉಪಯೋಗಿಸಿದರೂ ನೀರುಳ್ಳಿ ತನ್ನ ಸಹಕಾರವನ್ನು ನಿಮಗೆ ನಿರಾಕರಿಸುವುದಿಲ್ಲ. ಬಟಾಟೆ ಅದರ ಜೀವಸಖಿ. "ಚಹಾದ ಜೋಡಿ ಚೂಡಾ" ಇದ್ದಹಾಗೆ ಬಟಾಟೆ ಜೋಡಿ ಉಳ್ಳಿ. ದಡ್ಡ ಬಟಾಟೆಗೆ ಚುರುಕುತನ ಕೊಡಲು ಅದೇ ಬೇಕು. ಬಟಾಟೆ-ನೀರುಳ್ಳಿ ಒಣ ಪಲ್ಯ ದೋಸೆಯ ಗರ್ಭಾಂತರ್ಗತವಾಗಿರುವಾಗ "ಹೋಳಿಗೆಗೆ ಕಿಚ್ಚು ಹಚ್ಚಿಂದ ಲಾಂಗೂಲ." ಬಟಾಟೆ-ನೀರುಳ್ಳಿ ಹುಳಿ ಮಾಡಿದರೆ ಹೋಟೆಲುಗಳಲ್ಲಿ ಅನ್ನಕ್ಕೆ ಡಬಲ್ ಅಕ್ಕಿ ಹಾಕಬೇಕು. ಪಾತಾಳಭಾಜಿ ಎಂದು ಯಾವನೋ ಬುದ್ಧಿಗೇಡಿ ಭಗವಂತ ಹೆಸರುಕೊಟ್ಟ ಬಟಾಟೆ-ನೀರುಳ್ಳಿ ರಸಪಲ್ಯ, ಪೂರಿಯೊಡನೆ ತೆಗೆದು ಕೊಂಡಾಗ ನಿಮ್ಮನ್ನು ಪಾತಾಳಕ್ಕಲ್ಲ, ಆಕಾಶಕ್ಕೆ ಏರಿಸುತ್ತದೆ. ಹಸಿ ನೀರುಳ್ಳಿ ಕೋಸಂಬರಿ, ಸಾಲಡ್; ಕಡಲೆ ಹಿಟ್ಟಿನಲ್ಲಿ ಅದ್ದಿ ಕರಿದರೆ ಭಜಿ; ಪಕೋಡ; ಚಟ್ನಿ....ಕಿಂ ಕಿಂ ನ ಸಾಧಯತಿ ಕಲ್ಪಲತೇವ ಉಳ್ಳೀ? ಮೈಸೂರು ಸಾರಿನೊಡನೆ ಹಸಿ ನೀರುಳ್ಳಿ ನಂಜಿಕೊಂಡು ಊಟಮಾಡಿ ನೋಡಿದ್ದೀರಾ? ಟೊಮ್ಯಾಟೋ-ನೀರುಳ್ಳಿ ಹಸಿಯಾಗಿ ಸಣ್ಣಗೆ ಕೊಚ್ಚಿ ಬೆರಸಿ ತಿಂದು ಬಲ್ಲಿರಾ? ಅದಕ್ಕೇ ಎರಡು ಚಮಚ ಗಟ್ಟಿಮೊಸರು ಹಾಕಿ, ಚಿಟಿಕೆ ಉಪ್ಪು ತೋರಿಸಿ ತುಪ್ಪದ ಒಗ್ಗರಣೆ ಕೊಟ್ಟು ಬಡಿಸಿಕೊಂಡಿದ್ದೀರಾ?

ಈರುಳ್ಳಿಯಲ್ಲಿ ಎಷ್ಟು ಗಾತ್ರಗಳು! ಬೆಳ್ಳುಳ್ಳಿಗಿಂತಲೂ ಸಣಕಲಾದ ವಿಶಿಷ್ಟ ಸಾಂಬಾರ್ ನೀರುಳ್ಳಿಯನ್ನು ನೀವು ಅಷ್ಟಾಗಿ ನೋಡಿರಲಿಕ್ಕಿಲ್ಲ. ಆದರೆ ಮದ್ರಾಸಿನಲ್ಲಿ ಬೆಳಗಿನ ಇಡ್ಲಿಯನ್ನು ಮುಳುಗಿಸಲು ಈ ಪುಟಾಣಿ ನೀರುಳ್ಳಿಯ ಸಾಂಬಾರೇ ತಕ್ಕ ದ್ರವವೆಂದು ಬಗೆಯುತ್ತಾರೆ. ಅವರ ಅಭಿಮತ ನನಗೂ ಸಮ್ಮತವೆಂದು ಹೃತ್ಪೂರ್ವಕ ಸಮರ್ಥಿಸುತ್ತೇನೆ. ಈ ಇಡಿ ನೀರುಳ್ಳಿ ಸಾಂಬಾರಿನ ರುಚಿ ಹೋಳು ನೀರುಳ್ಳಿ ಸಾಂಬಾರಿಗೆ ಬರಲೇ ಆರದು. ಆದರೆ ಭಜಿಗಳಿಗಾಗಿ ಒಳ್ಳೇ ದೊಡ್ಡ ಬಟಾಟೆ ಗಾತ್ರದ ನೀರುಳ್ಳಿಯೇ ಬೇಕು. ಮಲೆಯಾಳಿ ನಾಯರರು ಭಜಿಗಾಗಿ ಈರುಳ್ಳಿ ಹೆಚ್ಚುವುದರಲ್ಲಿ ನಿಸ್ಸೀಮರು. ಕಾಗದ ದಷ್ಟು ತೆಳ್ಳನ್ನ ದುಂಡಾದ ಹೋಳುಗಳನ್ನು ಕೊಯ್ದು ಚಕ್ರಚಕ್ರವಾಗಿ ಮಾಡಿಡುವ ಅವರ ಕೈಚಳಕ ಚಮತ್ಕಾರವಾಗಿದ್ದರೆ, ಅವರು ಉಪಯೋಗಿಸುವ ಚೂರಿಯ ಹರಿತ ಭಯಪ್ರದವಾದದ್ದು.

"ಅಯ್ಯೋ! ವೈದಿಕನಾಗಿ ಹುಟ್ಟಿ ನೀರುಳ್ಳಿ, ಅದೂ ಹಸಿಹಸಿ ತಿನ್ನುತ್ತೀ

ಯಲ್ಲಾ ! ಯಾವ ನರಕಕ್ಕೆ ಹೋಗಬೇಕೂಂತ ಇದ್ದೀ !" ಅಂತ ನಮ್ಮಜ್ಜಿ ಬೈದರೆ ನನ್ನ ಕೀಟಲೆಗಾರ ಭಾವ, "ನಿಮಗೊತ್ತಿಲ್ಲ ಅಜ್ಜಿ ! ನೀರುಳ್ಳಿ ವಿಷ್ಣು ದೇವರಿಗೆ ಭಲೇ ಪ್ರೀತಿ. ಇಲ್ಲದಿದ್ದರೆ ಅಡ್ಡ ಕೊಯ್ದರೆ ಚಕ್ರ, ಉದ್ದ ಕೊಯ್ದರೆ ಶಂಖ ಆಗುತ್ತಿತ್ತಾ ನೀರುಳ್ಳೀನ, ನೀವೇ ಹೇಳಿ! ನೀರುಳ್ಳಿ ತಿಂದವರು ನೆಟ್ಟಗೆ ವೈಕುಂಠಕ್ಕೇ ಹೋಗುತ್ತಾರೆ" ಎಂದು ಛೇಡಿಸುತ್ತಿದ್ದದ್ದು ನನಗಿನ್ನೂ ನೆನಪಿದೆ. ವೈದ್ಯಶಾಸ್ತ್ರದಲ್ಲಿ ಕ್ರಿಮಿನಾಶಕ, ರೋಗಾಣುಹರ ಎಂದು ಪ್ರಸಿದ್ಧವಾದ ನೀರುಳ್ಳಿಯನ್ನು ಈ ಬ್ರಾಹ್ಮಣರು ಅಭೋಜ್ಯ ಎಂದು ಯಾಕೆ ತೆಗೆದುಹಾಕಿದರೋ ನನಗಿನ್ನೂ ಅರ್ಥವಾಗಿಲ್ಲ. ಘಾಟು ಇರುವ ಯಾವ ಪದಾರ್ಥಕ್ಕೂ ಅವರು ಹೆದರಿ ನಡುಗುತ್ತಿದ್ದರೆಂದು ಕಾಣುತ್ತದೆ. ಯಜ್ಞದ ಹೊಗೆಯ ನಾತ ಒಗ್ಗಿಹೋದ ಅವರಿಗೆ ನೀರುಳ್ಳಿಯ ವಾಸನೆ ದುರ್ಗಂಧವೆನಿಸಿರಬೇಕು. ತಿನ್ನಪೆಯೇ ಅದನ್ನು ಅಭೋಜ್ಯ ಎಂದು ಹೊರಗೆ ಇಟ್ಟಿರಬಹುದೆಂದೂ ನನಗೆ ಸಂಶಯವಿದೆ. ಬ್ರಾಹ್ಮಣರು ವರ್ಜ್ಯಮಾಡಿದ್ದನ್ನು ಬಸವಣ್ಣನವರು ಎತ್ತಿಹಿಡಿದು ಕೊಂಡಾಡಿದರು. ಅವರು ನೀರುಳ್ಳಿಯ ಬಗ್ಗೆ ತಮಗಿದ್ದ ಬ್ರಾಹ್ಮಣಪೂರ್ವವಾಸನೆಯನ್ನು ದೂರೀಕರಿಸಿಕೊಳ್ಳುವುದಕ್ಕಾಗಿ ನೀರುಳ್ಳಿಮಾಲೆಯನ್ನೇ ಹಾಕಿಕೊಂಡು ತಿರುಗಿದರಂತೆ.

ನೀರುಳ್ಳಿಯೆಂದರೆ ನಾಚುಗುಳಿ ಹೆಣ್ಣಿನ ಹಾಗೆ ನಾಚಿಕೆಯ ಒಂದು ಪರೆಯನ್ನು ಸುಲಿದುಹಾಕಿದರೆ ಒಳಗೆ ಇನ್ನೊಂದು ಪರೆ ಇರುತ್ತದೆ. ಅದನ್ನು ತೆಗೆದರೆ ಒಳಗೆ ಮತ್ತೂ ಒಂದಿದೆ. ತಿರುಳಿನವರೆಗೂ ಇದೇ ಕಥೆ. ಎಲ್ಲಾ ನಾಚಿಕೆ ಪರೆಗಳನ್ನು ಹೋಗಲಾಡಿಸಿದರೆ ಒಳಗೆ ಏನೂ ಇಲ್ಲ ! ಆಗಲೇ ನಿಮಗೆ ಗೊತ್ತು—ಹೆಣ್ಣೆಂದರೆ ನಾಚಿಕೆಯ ಅಸಂಖ್ಯ ಸುರುಳಿಗಳ ಸಂಯೋಜನೆ ಅಂತ. ಮತ್ತೆ ಈ ಪರೆಗಳ ಕಳಚುವಿಕೆಯಲ್ಲಿ ತುಸು ಅಚಾತುರ್ಯವಾಯಿತೋ, ನಿಮ್ಮ ಕಣ್ಣಲ್ಲಿ ನೀರು !

ಹೌದು, ಕಣ್ಣಲ್ಲಿ ನೀರು. ನೀರುಳ್ಳಿಯನ್ನು ಹೆಚ್ಚಬೇಕಾದರೆ ಕಣ್ಣೀರು ಸುರಿಸಲೇಬೇಕಾಗುತ್ತದೆ. ನನ್ನ ಅಜ್ಜಿಯ ಪುರಾಣದ ಪ್ರಕಾರ, ನೀರುಳ್ಳಿಗೆ ಆದಿಯಲ್ಲಿ ಘಾಟು ಇರಲಿಲ್ಲವಂತೆ. ಜನರು ನಿರ್ದಯವಾಗಿ ತನ್ನನ್ನು ಹೆಚ್ಚಿ ತಿನ್ನುವುದನ್ನು ಸಹಿಸಲಾರದೆ ಅದು ಬ್ರಹ್ಮನನ್ನೋ ವಿಷ್ಣುವನ್ನೋ ಮಹಾ ದೇವನನ್ನೋ ಕುರಿತು ಘೋರ ತಪಸ್ಸುಮಾಡಿ ಹದಿನಾಲ್ಕು ಲೋಕಗಳಲ್ಲಿ

ಉರಿಯೇಳುವಂತೆ ಮಾಡಿತು. ದೇವರ ಪೀಠ ಬಿಸಿಯೇರಿ ಅವನು ಎದ್ದು ಬಂದು ಪ್ರತ್ಯಕ್ಷನಾಗಿ, "ಭಕ್ತಶ್ರೇಷ್ಠನಾದ ಉರುಳಪ್ಪನೆ! ನಿನ್ನ ಇಚ್ಛೆ ಏನು ?" ಎಂದು ಕೇಳಿದೊಡನೆ ನೀರುಳ್ಳಿ, "ಪ್ರಭೋ, ಜನರು ನನ್ನನ್ನು ತಿನ್ನದಂತೆ ಮಾಡುವುದು ಸರ್ವಶಕ್ತನಾದ ನಿನಗೆ ಕೂಡ ಸಾಧ್ಯವಿಲ್ಲೆಂದು ನಾನು ಬಲ್ಲೆ. ಆದ್ದರಿಂದ ನನ್ನನ್ನು ಹೆಚ್ಚಿದವರು ತಾವೇ ನನಗಾಗಿ ಅಳುವಂತಾಗಲಿ ಎಂದಷ್ಟೇ ವರವನ್ನು ಬೇಡುತ್ತೇನೆ" ಎಂದಿತಂತೆ. ದೇವಾಧಿದೇವನು ತಥಾಸ್ತು ಎಂದು ಅಂತರ್ಧಾನವಾದನು. ಅಂದಿನಿಂದ ನೀರುಳ್ಳಿ ಹೆಚ್ಚುವವರು ಕಣ್ಣೀರು ಹಾಕಬೇಕಾಗಿದೆ.

ಆದರೆ ಈ ವರದ ಅವಧಿ ಮುಗಿಯುತ್ತ ಬಂದಂತೆ ಕಾಣುತ್ತದೆ. ನನ್ನ ವಿಜ್ಞಾನಿ ಮಿತ್ರನೊಬ್ಬ ನೀರುಳ್ಳಿ ಹೆಚ್ಚುವಾಗ ಹಾಕಿಕೊಳ್ಳುವ ಗ್ಯಾಸ್‌ಮಾಸ್ಕ್ ಒಂದನ್ನು ನಿರ್ಮಿಸುತ್ತಿದ್ದಾನೆ. (೧೯೬೮)

## ಹಳೇದಾದರೂ ಹೊಸದು

"ಪುರಾಣಮಿತ್ಯೇವ ನ ಸಾಧು ಸರ್ವಂ"—ಹಳೇದು ಅಂದಾಕ್ಷಣ ಎಲ್ಲಾನೂ ಒಳ್ಳೇದು ಅನ್ನಲಾಗದು—ಅಂತ ಕಾಳಿದಾಸ ಹೇಳಿದ್ದಾನೆ ಅನ್ನುವುದು ನಿಜ. ಆದರೆ ಇದನ್ನು ಬರೆದಾಗ ಆತ ಇನ್ನೂ cub dramatist—ಮರಿನಾಟಕಕಾರ ಆಗಿದ್ದ. ಮರಿಗಳಾಗಿದ್ದಾಗ ನಾವೆಲ್ಲ ಹೊಸದರ ಪಕ್ಷಪಾತಿಗಳೇ. ಕಾಳಿದಾಸನಾದರೂ ಅಷ್ಟೇ. ಅವನು ಮುಂದೆ ಶಾಕುಂತಲ ಬರೆದು, "ಮಹಾಕವಿ", "ಕಾಲಿದಾಸೋ ಕವಿಶ್ರೇಷ್ಠಃ" ಅಂತೆಲ್ಲ ಮನ್ನಣೆಪಡೆದಮೇಲೆ ಪುರಾತನದ ಬಗ್ಗೆ ತನ್ನ ಪುರಾತನ ಅಭಿಪ್ರಾಯ ಉಳಿಸಿಕೊಂಡನೋ ಅನ್ನುವ ಸಂಶಯ ನನಗೆ ಇದೆ. ರಘುವಂಶ ಬರೆಯುವ ಹೊತ್ತಿಗೆ, "ಪೂರ್ವಸೂರಿ"ಗಳನ್ನು ಹೊಗಳುವ ಅಭ್ಯಾಸ ಆವನಿಗೆ ಆಗಿಹೋಗಿತ್ತು.

ಇದು ಅನಾದಿ ಮನುಷ್ಯಸ್ವಭಾವ ಅನ್ನಿ. ಹಳೇದು ಚೆನ್ನಾಗಿತ್ತು ಅಂತ ಮನುಷ್ಯ ಹಳೇ ಕಾಲದಿಂದ ಹೇಳುತ್ತಾ ಬಂದಿದ್ದಾನೆ. ಅದೂ ನಲುವತ್ತು ದಾಟುತ್ತಿರುವಾಗ. ಭಾಗವತ ಪುರಾಣದಲ್ಲಿ ಏನು ಹೇಳಿದೆ ಗೊತ್ತೆ ? ಕೃತಯುಗ

ಬಹಳ ಚೆನ್ನಾಗಿತ್ತು. ಆಗ ದುರ್ಜನರೇ ಇರಲಿಲ್ಲ. ಆದ್ದರಿಂದ ರಾಜ, ಸರ್ಕಾರ, ಕಂಟ್ರೋಲು (ಮತ್ತು ಟ್ಯಾಕ್ಸು) ಒಂದೂ ಇದ್ದಿಲ್ಲ. ಆಮೇಲೆ ಕಾಲ ಕೆಡುತ್ತಾ ಹೋಯಿತು. ತ್ರೇತಾಯುಗ ಬಂತು. ರಾವಣ ಹುಟ್ಟಿದ. ಸೀತೆಯನ್ನು ಕದ್ದ. ಮತ್ತೆ ದ್ವಾಪರಯುಗ ಬಂತು. ದುರ್ಯೋಧನ ಪಬ್ಲಿಕ್ಕಿನಲ್ಲೇ ದ್ರೌಪದೀಸೀರೆ ಸೆಳೆಯುವುದಕ್ಕೆ ಆರ್ಡರುಮಾಡಿದ. ಈಗ ಕಲಿಕಾಲ ಬಂದಿದೆ. ಕೇಳುವುದೇ ಬೇಡ. ಹೆಂಗಸರನ್ನ ದುರ್ಜನರು ಅಪಹರಿಸುವ ಬದಲು ಹೆಂಗಸರೇ ಗಂಡಂದಿರನ್ನ ಬಿಟ್ಟು ಓಡಿಹೋಗುತ್ತಾ ಇದ್ದಾರೆ. ಕೃತಯುಗದಲ್ಲಿ ನಾಲ್ಕೂ ಕಾಲ ಮೇಲೆ ನಿಂತಿದ್ದ ಧರ್ಮದೇವತೆ, ಈಗ ಹಳ್ಳದ ದಂಡೆಯಲ್ಲಿ ಮೀನಿಗಾಗಿ ಹೊಂಚುಕಾಯೋ ಬಕಪಕ್ಷಿಯ ಹಾಗೆ, ಒಂದೇ ಕಾಲಲ್ಲಿ ನಿಂತಿದೆ. ಆ ಕಾಲೂ ಮಡಚಿದರೆ ಪ್ರಳಯವೇ ಸೈ ಅಂತ ಹಿಂದಿನವರು ಹೇಳಿದ್ದಾರೆ. ಯಾವ ದೇಶದ, ಯಾವ ಕಾಲದ ಜಾಣರನ್ನೇ ಕೇಳಿ—Golden age—ಸುವರ್ಣ ಯುಗ ಹಳೇ ಕಾಲದಲ್ಲಿ ತಾನೇ ಆಗಿಹೋಯಿತು. ಈಗ ಗಿಲೀಟು ಯುಗ; ಮುಂದಿನದ್ದು ಅಂಧಕಾರಯುಗವೇ. ನೀವು ಎಷ್ಟು ಹಿಂದಿನ ಕಾಲಕ್ಕೆ ಸವಾರಿ ಮಾಡಿದರೂ ಆಗಿನವರು ಹಳೇ ಕಾಲ ಚೆನ್ನಾಗಿತ್ತು ಅನ್ನುತ್ತಾ ಇದ್ದದ್ದನ್ನೇ ಕೇಳುತ್ತೀರಿ. ಮೊತ್ತಮೊದಲನೇ ಮಂಗಗಳು ಮರದಿಂದಿಳಿದು ಗುಹೆಗಳಲ್ಲಿ ಮನೆ ಹೂಡಿ ಮಾತಾಡಲಿಕ್ಕೆ ಕಲಿತ ಕೂಡಲೆ ಮೊತ್ತಮೊದಲು ಆಡಿದ ಮಾತು ಅಂದರೆ "ಆಹಾ! ಹಿಂದಿನ ಕಾಲ ಎಷ್ಟು ಚೆನ್ನಾಗಿತ್ತು. ಈಗೆಲ್ಲಾ ಕೆಟ್ಟೋಯ್ತು" ಎಂಬುದಿರಬೇಕು.

ಹೀಗಂದ ಅಂದಾಕ್ಷಣ ಹಳೇದೆಲ್ಲಾ ಚೆನ್ನು ಅನ್ನುವ ಹಳಬರಲ್ಲಿ ನಾನೂ ಒಬ್ಬ ಅಂತ ತಿಳಿದುಕೊಳ್ಳಬೇಡಿ. ಅಜ್ಜ ನಟ್ಟ ಆಲದ ಮರಕ್ಕೆ ಹಳೇ ಹಗ್ಗದಿಂದ ನೇಣುಹಾಕಿಕೊಳ್ಳುವವನು ನಾನಲ್ಲ. ನೇಣುಹಾಕಿಕೊಳ್ಳಲೇಬೇಕಾದರೆ ನಾನು ನನ್ನ ರೂಮಿನ ಸೀಲಿಂಗಿಗೇ ತಾಜಾ ನೈಲಾನ್ ಹಗ್ಗ ಕಟ್ಟಿ ನೇಣು ಹಾಕಿಕೊಂಡೇನು. ನೇಣುಹಾಕಿಕೊಳ್ಳುವುದಕ್ಕೆ ಆಲದ ಮರ ಅಷ್ಟೇನೂ ಪ್ರಶಸ್ತವಲ್ಲ. ಪೊಳ್ಳುಬಿದ್ದ ಕೊಂಬೆ ಮುರಿದುಬಿದ್ದರೆ ಬರೇ ಮೈಕೈಗೆ ಗಾಯ. ಆದರೂ ಅಜ್ಜ ನಟ್ಟ ಆಲದ ಮರವನ್ನು ಕಡಿದೇಹಾಕಿಬಿಡಬೇಕು ಅನ್ನುವ ಕ್ರಾಂತಿಕಾರನ ಹುಮ್ಮಸ್ಸೂ ನನಗೆ ಇಲ್ಲ. ಮರದ ನೆರಳಲ್ಲಿ ಹಾಯಾಗಿ ಒರಗಿ ಸೋಮಾರಿ ಹಗಲುನಿದ್ದೆ ಮಾಡುವುದಕ್ಕೆ ನನಗೆ ಬಹಳ ಇಷ್ಟ. ಹಳೇದನ್ನ

ಹೇಗೆ ಉಪಯೋಗಿಸಬೇಕು ಅಂತ ತಿಳಕೊಂಡವನೇ ಕಡುಜಾಣ.

"ಹಳೆಯದೆಲ್ಲಾ ನನಗೆ ಪ್ರಿಯ—ಹಳೇ ಗೆಳೆಯರು, ಹಳೇ ಕಾಲ, ಹಳೇ ರೀತಿ-ನೀತಿ, ಹಳೇ ಪುಸ್ತಕಗಳು, ಹಳೇ ಮದ್ಯ"—ಅಂತ ಇಂಗ್ಲಿಷ್ ಕವಿ ಗೋಲ್ಡ್‌ಸ್ಮಿತ್ ಹೇಳುತ್ತಾನೆ. (ಪಾಪ, ಹಳೇ ಸಾಲ ತೀರಿಸದೆ ಅವನು ಜೈಲು ಕಂಡ.) ಇವುಗಳನ್ನ ಒಂದೊಂದಾಗಿ ತೆಗೆದುಕೊಳ್ಳುವಾ. ಹಳೇ ಗೆಳೆಯರು. ಇವರನ್ನ ನಮ್ಮ ದೇಶದಲ್ಲಿ ಲಂಗೋಟಿ ಗೆಳೆಯರು ಅನ್ನುತ್ತೇವೆ. ಹೆಚ್ಚಿನ ಜನರಿಗೆ ಈಗಿನ ಕಾಲದಲ್ಲಿ ಲಂಗೋಟಿಯ ಗುರುತೇ ಇಲ್ಲ. ಆದ್ದರಿಂದ ಇದನ್ನ ಚಡ್ಡೀಗೆಳೆಯರು ಅಂತ ಬೇಕಾದರೆ ತಿದ್ದೋಣ. ಚಡ್ಡೀಗೆಳೆಯರನ್ನು ಮೆಚ್ಚದವರು ಯಾರು? ಅವರ ಸಂಗಡ ನಾವು ಬೆಳೆದಿರುತ್ತೇವೆ. ನಮ್ಮ ಎಲ್ಲ ಹೆಡ್ಡತನಗಳಲ್ಲಿ, ಹುಚ್ಚಾಟಗಳಲ್ಲಿ ಅವರು ಪಾಲುಗಾರರು. ನಮ್ಮ ಹುಸಿ-ಹಸಿ ಕನಸುಗಳನ್ನೆಲ್ಲ ಅವರು ಬಲ್ಲರು. ನಮ್ಮ ಒಳಗುಟ್ಟುಗಳನ್ನು ತಂದೆತಾಯಿಗಳೊಡನೆ ಗುರುಹಿರಿಯರೊಡನೆ ನಾವೆಂದೂ ಹೇಳಿಕೊಳ್ಳಲಾರೆವು. ಹೆಂಡತಿಗಂತೂ ಕೆಲ ಗುಟ್ಟುಗಳನ್ನು ರಟ್ಟು ಮಾಡುವುದಕ್ಕಿಂತ ಸಾಯುವುದಕ್ಕೂ ನಾವು ತಯಾರಾಗಬಹುದು. ಉದಾಹರಣೆಗೆ, ನಮ್ಮ ಪ್ರಥಮ ಪ್ರಣಯದ ಕಥೆ. ಹುಡುಗಿಯ ನೋಟದಲ್ಲಿ ಇಲ್ಲದ ಆಮಂತ್ರಣವೊಂದನ್ನು ಕಂಡುಕೊಂಡು, ಸಾಹಸಕ್ಕೆ ಕೈಹಾಕಿ, ಕಡೆಗೆ ಮುಳ್ಳುಬೇಲಿ ಹಾರಿ ಮೈಕೈ ತರೆಸಿಕೊಂಡುಬಂದದ್ದು ನಮ್ಮ ಹೆಂಡಂದಿರಿಗೆ ತಿಳಿಯಲಿ ಅಂತ ಯಾರು ಬಯಸಿಯಾರು? ಹೆಂಡತಿಯ ಹೊಟ್ಟೆ ಉರಿಸಬೇಕು ಅಂತ ಒಂದುವೇಳೆ ನಾವು ಹುಡುಗಿಯ ಬೆನ್ನುಹತ್ತಿದ್ದನ್ನು ಹುಡುಗಿ ನಮ್ಮ ಬೆನ್ನುಹತ್ತಿತು ಅಂತ ತಿರುಗಿಸಿ ಹೇಳಬಹುದು. ಬೇಲಿ ಹಾರಿ ಪಲಾಯನಸೂತ್ರ ಪಠಿಸಿದ್ದನ್ನು ಹೆಂಡತಿಯ ಮುಂದೆ ಒಪ್ಪುವುದು ಹೇಗೆ? ಹೆಂಡತಿಯ ಮುಂದೆ ಏನನ್ನೂ ಒಪ್ಪಬಹುದು; ನಮ್ಮ ಹೆಡ್ಡತನ ಹೇಡಿತನಗಳನ್ನು ಮಾತ್ರ ಒಪ್ಪುವುದು ಸಾಧ್ಯವೇ ಇಲ್ಲ. ಆದರೆ ನಮ್ಮ ಹಳೇ ಗೆಳೆಯನ ಹತ್ತಿರ ಆದೊಂದೂ ಗೋಪನೀಯವಲ್ಲ.

ಚಡ್ಡೀಗೆಳೆಯನ ಸಂಗಡವೇ ಆಡಿ, ಅವನ ಸಂಗಡವೇ ಶಾಲೆ ತಪ್ಪಿಸಿ, ಅವನೂ ನಾವೂ ಕೂಡಿಯೇ ಮಾವಿನಹಣ್ಣು ಪೇರಲಹಣ್ಣು ಕದ್ದು ತಿಂದು, ಅರ್ಥಾತ್ ಅವನ ಸಂಗಡವೇ ಬೆಳೆದು ಅದೇ ಊರಿನಲ್ಲೇ ಇದ್ದು, ದಿನವೂ

ಕಂಡು ಮಾತಾಡಿ, ಮೊದಲು ನಮ್ಮ ಹೆಂಡಂದಿರ ಹೊಗಳಿಕೆಯನ್ನ, ಆಮೇಲೆ ಅವರ ದೂರುಗಳನ್ನ ಪರಸ್ಪರ ವಿನಿಮಯ ಮಾಡಿಕೊಂಡು, ಒಟ್ಟೊಟ್ಟಿಗೇ ಮುಪ್ಪಾಗುವ ಹಳೇ ಗೆಳೆತನದ ಸವಿಯೇ ಬೇರೆ. ಬಹಳ ಕಾಲ ಅಗಲಿದ್ದು, ಆಮೇಲೊಂದು ದಿನ ಅಕಸ್ಮಾತ್ತಾಗಿ ಭೇಟಿಯಾದ ಚಡ್ಡೀಗೆಳೆಯನ ಸಂಗಡ ಹಳೇ ದಿನಗಳನ್ನು ಮೆಲುಕುಹಾಕುವ ಸವಿಯೇ ಬೇರೆ. ಹೀಗಾದಾಗ ನಾವು ಒಮ್ಮೆಲೇ ಜೋಡಾಗಿ ಗತಕಾಲಕ್ಕೆ ಹಾರುತ್ತೇವೆ. ಆ ಹಳೇ ಕಾಲದಲ್ಲಿನ ಕಷ್ಟಕಾರ್ಪಣ್ಯಗಳು ಕೂಡ ರಮ್ಯವಾಗಿ ಕಾಣಿಸುತ್ತವೆ. ಈ ಸ್ನೇಹಾಲಾಪ ಎಷ್ಟು ಹಳೆಯದಾದರೂ ಹೊಸತೇ. ಮೇಲಿಂದಮೇಲೆ ಸಾಲ ಕೇಳುವ ಹಳೇ ಗೆಳೆಯ ಮಾತ್ರ ಸ್ವಲ್ಪ ಆತಂಕಕಾರಿ. A friend in need is a terrible nuisance. ಆದರೆ ಜಗತ್ತಿನಲ್ಲಿ ಯಾವ ಪದಾರ್ಥ ಅಮಿಶ್ರಿತವಾಗಿರುತ್ತೆ ಹೇಳಿ, ಈ ಕಾಲದಲ್ಲಿ?

ಹಳೇಕಾಲದ ವಿಷಯವಂತೂ ಹೇಳುವುದೇ ಬೇಡ. ದುಡ್ಡಿಗೆ ಪಂಥೇರು ಬೆಲ್ಲ ಸಿಗುತ್ತಿದ್ದ ಕಾಲವನ್ನ ನೆನೆದುಕೊಂಡು ಬೆಲ್ಲಾನೇ ಬಾಯಿಗೆ ಬಂತು ಅನ್ನುವ ಹಾಗೆ ಜೊಲ್ಲು ಸುರಿಸುವ ಹಳಬರನ್ನ ನೀವು ನೋಡಿರಲೇಬೇಕು. ಒಂದು ದುಡ್ಡು ಗಳಿಸುವುದಕ್ಕೆ ಆಗ ಎಷ್ಟು ಕಷ್ಟ ಇತ್ತು ಅನ್ನುವುದನ್ನು ನಾವು ಸುಲಭವಾಗಿ ಮರೆಯುತ್ತೇವೆ. ಹಳೇಕಾಲದ ಕಷ್ಟಗಳನ್ನೆಲ್ಲಾ ಮರೆತು ಸುಖ ಗಳನ್ನ ಮಾತ್ರ ನಮ್ಮ ಮನಸ್ಸು ಜೋಪಾನವಾಗಿ ಟ್ರೆಜರಿಯಲ್ಲಿ ಯಾಕೆ ಇಟ್ಟುಕೊಳ್ಳುತ್ತೆ ಎಂಬುದು ನನಗೆ ಇನ್ನೂ ಸರಿಯಾಗಿ ಅರ್ಥವಾಗುತ್ತಾ ಇಲ್ಲ. "ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು" ಅನ್ನುವ ಕಡೆಂಗೋಡ್ಲು ಶಂಕರಭಟ್ಟರ ಪಂಕ್ತಿಯನ್ನು ಹಳೇಕಾಲದಲ್ಲಿ ಓದಿ ಹೊಸ ಕಾಲದಲ್ಲಿಯೂ ನೆನಪಿಟ್ಟುಕೊಂಡಿದ್ದೇನೆ. ವಯಸ್ಸಾದ ಹಾಗೆ ನಮಗೆ ಹಳೇ ಕಾಲದಲ್ಲಿ ಹೊಸದೇನಾದರೂ ಕಾಣಿಸುತ್ತೋ ಏನು? ಒಂದು ವಯಸ್ಸಿನ ನಂತರ ನಮ್ಮ ಸಮಕಾಲದ ಸಂಗಡ ನಮ್ಮ ಸಂಪರ್ಕ ತಪ್ಪಿಯೇ ಹೋಗುತ್ತೋ ಏನು? ಹೋಗಲಿ, ನಮ್ಮ ಪ್ರಾರಂಭಿಕ ಜೀವಮಾನದಲ್ಲೇ ಆಗಿಹೋದ ಘಟನೆಗಳು ನಮ್ಮ ನೆನಪಿನ ಬಟ್ಟೆಯಲ್ಲಿ ಹಾಸುಹೊಕ್ಕಾಗಿ ಸೇರಿಹೋಗಿವೆ —ಅದಕ್ಕಾಗಿಯೇ ನಮಗೆ ಅವುಗಳಲ್ಲಿ ಅಷ್ಟು ಆಸಕ್ತಿ ಅಂತೀರಾ? ಹಾಗೂ ಇಲ್ಲ. ಇತಿಹಾಸಕಾರರನ್ನು ನೋಡಿ. ಅವರು ನೆಲದಡಿ ಹುಗಿದುಹೋದ ಹಳೇ

ಕಾಲವನ್ನ ಅಗೆದು ತೆಗೆಯುವ್ರದಕ್ಕೆ ಎಷ್ಟೆಲ್ಲ ಒದ್ದಾಡುತ್ತಾರಲ್ಲ, ಯಾಕೆ? ಹಳೇದಾದಷ್ಟೂ ಅದರಲ್ಲಿ ಅವರ ಆಸಕ್ತಿ ಜಾಸ್ತಿ. ಪ್ರತಿಯೊಂದು ಕಲ್ಲನ್ನು ಅವರು ತಿರುವಿ ನೋಡುತ್ತಾರೆ. ಆದರಲ್ಲೇನಾದರೂ ಹಳೇಕಾಲದ ಹಣೇ ಬರಹ ಸಿಗುತ್ತ್ರೋ ಅಂತ. ಒಂದು ಸಲ ನಾನೊಬ್ಬ ಪುರಾತತ್ವಶಾಸ್ತ್ರಿಗಳ ಸಂಗಡ ಯಾವ್ರದೋ ಕೊಂಪೇ ಊರಿಗೆ ಹೋಗಿದ್ದೆ. ರಸ್ತೇ ಕಟ್ಟುವ್ರದಕ್ಕೊ ಏನೋ ಒಂದು ದಿನ್ನೆ ಅಂಚು ಅಗೆಯುತ್ತ ಇದ್ದರು ಕೂಲಿಯವರು. ಅದರ ಹತ್ತಿರ ನಾವು ಹೋಗುತ್ತಾ ಇದ್ದಾಗ ಕಾಲಿಗೆ ನರಸುಕ್ಕು ಆದವರ ಹಾಗೆ ನನ್ನ ಮಿತ್ರರು ಗಕ್ಕನೆ ನಿಂತರು. “ಏನು, ಏನಾಯಿತು?” ಎಂದೆ. “ನೋಡಿ, ನೋಡಿ ಅಲ್ಲಿ! ಒಂದು ಗಡಿಗೇ ಓಡು!” ಅಂದವರೇ ಅತ್ತ ಧಾವಿಸಿದರು. ಕೂಲಿಯವರಿಗೆ ಹೇಳಿಕೊಂಡು ದಿನ್ನೆ ಅಂಚಿನಲ್ಲಿ ಹೊರಗೆ ಹಣಕುತ್ತಿದ್ದ ಗಡಿಗೇಚೂರನ್ನ ಬಲು ಮೃದುವಾಗಿ ಕದಲಿಸಿ ಹೊರಗೆ ತೆಗೆದರು. ಆದನ್ನ ಸುತ್ತಲೂ ತಿರುಗಿಸಿ ನೋಡಿದರು. “ಆಚಾರ್ರೆ, ಇದು ಸಾತವಾಹನರ ಕಾಲದ ಮಡಿಕೇ ಚೂರು!” ಅಂತ ವ್ಯಾಖ್ಯಾನ ಪ್ರಾರಂಭಿಸಿದರು. ನನಗೆ ತಲೆ-ಬುಡ ಅರ್ಥ ಆಗಲಿಲ್ಲ. ಸಾತವಾಹನರ ಕಾಲದ ಮಡಿಕೇಚೂರನ್ನ ಗುರುತಿಸಿದಷ್ಟು ಶೀಘ್ರವಾಗಿ ಅವರು ತಮ್ಮ ಹೆಂಡತೀನ ಗುರುತಿಸುತ್ತಾರೋ ಇಲ್ಲೋ ನನಗೆ ಅನುಮಾನ ಇದೆ. ಏಳು ತಿಂಗಳಲ್ಲಿ ಹುಟ್ಟಿದ ಮಗುವನ್ನ ನರಸಮ್ಮಗಳು ಆಸ್ಪತ್ರೆಯಲ್ಲಿ ಅರಳೆಯಲ್ಲಿ ಸುತ್ತುವಷ್ಟೇ ಜಾಗ್ರತೆಯಿಂದ ಅಲ್ಲಿ ಸಿಕ್ಕಿದ ಗಡಿಗೇ ಚೂರುಗಳನ್ನ ಅವರು ಕರವಸ್ತ್ರದಲ್ಲಿ ಸುತ್ತಿ ಜೇಬಿನಲ್ಲಿ ಸೇರಿಸಿದರು. ಹಳೇ ಗಡಿಗೇ ಚೂರು, ಹಳೇ ತಲೆಬುರುಡೆ, ಹಳೇ ಕಲ್ಲಿನ ಚೂರು, ಹಳೇ ಶಾಸನ ಗಳು, ಹಳೇ ಮೂರ್ತಿಗಳು ಮತ್ತು ಹಳೇದನ್ನೆಲ್ಲ ಇತಿಹಾಸ ಸಂಶೋಧಕರು ಪ್ರೀತಿಸುತ್ತಾರೆ. ಅವರಿಗೆ ಹಳೇದರಲ್ಲೇ ಹೊಸದು ಕಾಣುತ್ತೆ. ಕ್ರಿಸ್ತಪೂರ್ವ ೫೦೦ರಲ್ಲಿ ಕುಕ್ಕಾನಳ್ಳಿಯಲ್ಲಿ ಯಾವ ರಾಜ್ಯ, ಅಥವಾ ಸಾಮಂತ, ಅಥವಾ ಗೌಡ ಆಳುತ್ತಿದ್ದ ಅನ್ನೋದನ್ನ ಅವರು ನಿಮಗೆ ತತ್‌ಕ್ಷಣ ಹೇಳಬಲ್ಲರು. ಸದ್ಯಕ್ಕೆ ತಮ್ಮ ರಾಜ್ಯದ ಕಂದಾಯ ಮಂತ್ರಿ ಯಾರು? ಅಂತ ಕೇಳಿದರೆ ಅವರು ತಲೆ ಕೆರೆದುಕೊಳ್ಳುತ್ತಾರೆ. ಅವರು ಇವೊತ್ತಿನ ಪೇಪರನ್ನು ಓದುವು ದಿಲ್ಲ. ಆದರೆ ೧೮೭೪ನೇ ಇಸವಿಯ ಪೇಪರಿನ ಸಂಚಿಕೆ ಒಂದು ಸಿಕ್ಕಿದೆ ಅಂತ ಹೇಳಿದಿರೋ ಅವರು ದಿಗ್ಗನೆ ಎದ್ದು ಬರುತ್ತಾರೆ. ಇಟಲಿಯಲ್ಲಿ ಒಬ್ಬ ಕೋಟಿ

ಪತಿಗೆ ಹಳೇ ಕಾಲದ ಹುಚ್ಚು ಹಿಡಿಯಿತು. ಎಟ್ರುಸ್ಕನ್ ಕಾಲದ ಹುಗಿದು ಹೋದ ಅವಶೇಷಗಳನ್ನ ಅಗೆಯುವುದಕ್ಕೆ ಆತ ತನ್ನ ಎಲ್ಲಾ ಸಂಪತ್ತನ್ನ ಖರ್ಚುಮಾಡಿದ.

ಹಾಗೆ ಕೇಳಿದರೆ, ಇವೊತ್ತು ಹಳೇದು ಅನ್ನೋದಕ್ಕೆಲ್ಲ ಬೆಲೆ ಬರುತ್ತಾ ಇದೆ. ನಿಮ್ಮ ಕೈಲಿ ಹಳೇ ಅಂಚೇಚೀಟಿಗಳು ಉಂಟೇ? ಐವತ್ತು ವರ್ಷ ಹಿಂದಿನ ಒಂದಾಣೇ ಸ್ಟಾಂಪಿಗೆ ನಿಮಗೆ ಸಾವಿರಗಟ್ಟಳೆ ರೂಪಾಯಿ ಸಿಗ ಬಹುದು. ನಮ್ಮ ತಂದೆಯವರ ಕಾಲದ—ಅಂದರೆ ಸುಮಾರು ೭೫ ವರ್ಷಕ್ಕೂ ಹಿಂದಿನ ಅಂಚೇ ಚೀಟಿಗಳು, ಕಾರ್ಡು ಕವರುಗಳು ಮೊದಲಾದವುಗಳು ಬರೇ ಕೆಲಸಕ್ಕೆ ಬಾರದವು ಅಂತ ಅವನ್ನೆಲ್ಲ ಸುಟ್ಟುಹಾಕಿ ನಾನು ಹತ್ತಿಪ್ಪತ್ತು ಸಾವಿರ ರೂಪಾಯಿಗಳನ್ನು ಕಳೆದುಕೊಂಡೆ ಅಂತ ನನಗೆ ಮೊನ್ನೆತಾನೆ ತಿಳಿದು ಬಂದು ಸಂಕಟ ಆಗುತ್ತಾ ಇದೆ. ಶೇಕ್‌ಸ್ಪಿಯರ್ ಸತ್ತ ಕೆಲವು ವರ್ಷಗಳಲ್ಲಿ ಪ್ರಕಟವಾದ ಅವನ ನಾಟಕಗಳ ಫೋಲಿಯೋ ಆವೃತ್ತಿಯ ಪ್ರತಿಗಳು ನಿಮಗೆ ಲಕ್ಷ ರೂಪಾಯಿ ಕೊಟ್ಟರೂ ಸಿಗಲಾರವು. ಶಂಕರಾಚಾರ್ಯರೋ ಮಧ್ವಾಚಾರ್ಯರೋ ಸ್ವಹಸ್ತದಿಂದ ಬರೆದ ತಾಳವಾಲೆಯ ಬ್ರಹ್ಮಸೂತ್ರಭಾಷ್ಯದ ಒಂದು ಪ್ರತಿ ನಿಮಗೆಲ್ಲಾದರೂ ಅಕಸ್ಮಾತ್ತಾಗಿ ಸಿಕ್ಕಿದರೆ, ನೀವು ಕೆಲ ಹತ್ತು ಸಾವಿರ ರೂಪಾಯಿಗಳ ಧನಿಕರಾದ ಹಾಗೆಯೆ. ಆದರೆ ಅಂಥವು ಯಾರಿಗೂ ಸಿಕ್ಕಿಲ್ಲ. ಅಜಂತಾ ಗುಹೆಯ ಭಿತ್ತಿಚಿತ್ರ ಒಂದರ ಅಂಶವನ್ನು ಚೂರಿಯಿಂದ ಕೊಯ್ದು ಎಬ್ಬಿಸಿದ ಕಳ್ಳನೊಬ್ಬ ಯುರೋಪಿನಲ್ಲಿ ಅದನ್ನ ಸಾವಿರಾರು ಪೌಂಡುಗಳಿಗೆ ಮಾರಿಕೊಂಡ ಅಂತ ಹೇಳುತ್ತಾರೆ.

ಹಳೇದಾದಷ್ಟೂ ರುಚಿ ಏರುವ ಒಂದು ಜನಪ್ರಿಯ ವಸ್ತು ಅಂದರೆ ಮದ್ಯ. ಹಳೇ ಅಥವಾ ಹೊಸ ಮದ್ಯದ ವಿಷಯದಲ್ಲಿ ನಾನು ದೊಡ್ಡ ಎಕ್ಸ್‌ಪರ್ಟ್ ಅನ್ನಲಾರೆ. ಆದರೆ ಎಕ್ಸ್‌ಪರ್ಟ್ ಆಗಿದ್ದವರು ಹಳೇ ಮದ್ಯದ ಹೆಸರು ಕೇಳಿದರೇನೇ ಸ್ವಲ್ಪ ತಲೆಗೇರಿದವರಹಾಗೆ ಮಾಡುವುದನ್ನ ನೋಡಿ ನನಗೆ ಅದರ ಸವಿಯ—ಅಂದರೆ ಹುಳಿಯ ಬಗ್ಗೆ ಖಾತ್ರಿ ಆಗಿದೆ. ಹಳೇ ಮದ್ಯವನ್ನ ಹಳೇ ಮಿತ್ರರ ಸಂಗಡ ಕುಡಿಯಬೇಕಂತೆ—ನಿಮ್ಮ ಕಿಸೆಯಲ್ಲಿ ಅದಕ್ಕೆ ಹಣ ಇದ್ದರೆ. ಅದರ ಬೆಲೆ ಕೇಳಿದರೆ ಮಾತ್ರ ಎಂಥಾ ಮತ್ತೂ ಇಳಿದುಹೋದೀತು ಅಷ್ಟೇ.

ಮದ್ಯಕ್ಕೆ ನಿಮ್ಮ ಆಚಾರದ ಅಥವಾ ಜೇಬಿನ ಆಕ್ಷೇಪ ಇದ್ದರೆ ಅದಕ್ಕೆ

ಪ್ರತಿಯಾಗಿ ಆಚಾರವಂತ ಮಲೆಯಾಳಿಗಳು ಬೇರೊಂದು ಪದಾರ್ಥವನ್ನ ಪಳಗಿಸುತ್ತಾರೆ. ಅದೇ ಮಜ್ಜಿಗೆ. ಅವರಿಗೆ ನೀವು ಹುಳಿಮಜ್ಜಿಗೆ ಕೊಟ್ಟುಬಿಡಿ —ಬ್ರಹ್ಮಾನಂದವೇ ಆದಹಾಗೆ "ಅಹ್! ನಲ್ಲ ಪುಳಿ ಮೋರ್" ಅಂತ ತಲೆ ತೂಗುವುದನ್ನ ನೋಡಿದ್ದೇನೆ. ಕೇರಳದಲ್ಲಿ ಹಿಂದಿನ ಕಾಲದಲ್ಲಿ ಮುರಜಪ ಅಂತ ಒಂದು ಭಾರೀ ವಿದ್ವತ್ಸಭೆ ಆಗುತ್ತಾ ಇತ್ತಂತೆ. ಅದಕ್ಕೆ ಎಲ್ಲಾ ಕಡೆ ಗಳಿಂದ ಪಂಡಿತರು ಬರುತ್ತಾ ಇದ್ದರು. ಅವರಿಗೆ ಪಾನೀಯ ಮತ್ತು ಮೋರ್ ಕೊಳಂಬು ಒದಗಿಸುವ ಸಲುವಾಗಿಊರೂರಿಂದ ಮಜ್ಜಿಗೆ ಸಂಗ್ರಹವಾಗುತಿತ್ತು. ಅದನ್ನ ಭಾರೀ ಮಣ್ಣಿನ ಗುಡಾಣಗಳಲ್ಲಿ ಹಾಕಿ ನೆಲದಡಿ ಹುಗಿದಿಡುತ್ತಿದ್ದರು. ಈ ಮಜ್ಜಿಗೆ ನಲುವತ್ತೆಂಟು ದಿನ ಭೂಗತವಾಗಿ ಪಳಗಿದನಂತರ ಮುರಜಪ ಪ್ರಾರಂಭವಾಗಬೇಕು. ಈ ಮಜ್ಜಿಗೆ ಕುಡಿದೋ ಅದರ ಪಳದ್ಯ ತಿಂದೋ ವಿದ್ವಾಂಸರ ಬುದ್ಧಿ ಕ್ಷೌರದ ಕತ್ತಿ ಹಾಗೆ ಹರಿತವಾಗಿ ಅವರು ಸಭೆಗಳಲ್ಲಿ ವಾದ ಪ್ರಾರಂಭಿಸುತ್ತಿದ್ದರು—ಅಂತ ಹಳಬರು ಹೇಳುವುದನ್ನ ಕೇಳಿದ್ದೇನೆ. ಮಜ್ಜಿಗೆ ಪಳದ್ಯದ ಭಕ್ತರು ಕರ್ನಾಟಕದಲ್ಲಿಯೂ ಇದ್ದಾರೆ. ಆದರೆ ಹಳೇ ಪಳಗಿಸಿದ ಮಜ್ಜಿಗೆಯ ಬ್ರಹ್ಮರಂಧ್ರಕ್ಕೇರುವ ಹುಳಿಯ ರುಚಿ ನಮ್ಮವರಿಗೆ ತಿಳಿಯದು. ಹುಳಿಮಜ್ಜಿಗೆ ಕಂಡರೆ ಮುಖ ಹುಳ್ಳಗಾಗುತ್ತೆ ಇವರಿಗೆ.

ನಾನು ಯಾವಾಗಲೂ ಹಳೇದರ ಭಕ್ತ ಅಲ್ಲ ಅಂತ ಮೊದಲೇ ಹೇಳಿ ದ್ದೇನೆ. ಆದರೂ ಹಳೇಕಾಲದ ಜಾಣ್ಮೆಯಲ್ಲಿ ಕೆಲವಂಶ ಅಳಿ—ಇಲ್ಲದ್ದು ಅಂತಲೇ ನನಗೆ ತೋರುತ್ತದೆ. ಮಹಾಭಾರತ ನೋಡಿ, ರಾಮಾಯಣ ನೋಡಿ, ಉಪನಿಷತ್ತುಗಳನ್ನ ನೋಡಿ. ಇವು ಎಂದಿಗಾದರೂ ಹಳೆಯ ವಾದಾವೇ? ಪ್ರತಿಸಲ ಓದಿದಾಗಲೂ ಹಿಂದೆ ಗಮನಕ್ಕೆ ಬಾರದ ಹೊಸ ಅರ್ಥ ಹೊಳೆಯುತ್ತದೆ ಅವುಗಳಲ್ಲಿ. ಅಲ್ಲಿನ ಆಚಾರಗಳು ಈಗಿನ ಕಾಲಕ್ಕೆ ಅಸಂಗತವಾಗಿರಬಹುದು. ಆದರೆ ಮಾನವನ ಮೂಲ ಪ್ರಶ್ನೆಗಳನ್ನು ಅವು ಹೇಗೆ ಕಂಡವೋ ಹಾಗೆಯೆ ಇಂದಿಗೂ ನಾವು ಕಾಣುತ್ತೇವೆ. ನಾವು ಅವರಿ ಗಿಂತ ಈಗ ಬುದ್ಧಿವಂತರಾಗಿದ್ದೇವೆ, ಆದರೆ ಅವರಿಗಿಂತ ಕಡಿಮೆ ಜಾಣರಾಗಿ ದ್ದೇವೆ ಅನಿಸಿಬಿಡುತ್ತದೆ.

ಹಳೇ ಇತಿಹಾಸವನ್ನ ಕೆದರಿ ಹೆಕ್ಕಿ ತೆಗೆಯುವುದನ್ನ ಇಂದಿನವರು ಸ್ಪೆಶ ಲೈಸ್ ಮಾಡಿದ್ದರೂ ಹಳಬರಿಗೆ ಹಳೇ ಕಾಲದಲ್ಲಿ ಇದ್ದ ಭರಂ—ಅಂದರೆ

ತೂಕ, ಗೌರವ ಈಗ ಉಳಿದಿಲ್ಲ. ಹಿಂದಿನ ಕಾಲದಲ್ಲಿ ವೃದ್ಧ ಅನ್ನೋದಕ್ಕೇ ಮರ್ಯಾದೆ ಇತ್ತು. ಮುತ್ತಪ್ಪ, ಮುದುಕಪ್ಪ, ಮುದ್ದಣ್ಣ—ಅಂತ ಹೆಸರಿಟ್ಟು ಹೊಸದನ್ನ ಹಳೇದಾಗಿ ತೋರಿಸುವ ಕಾಲ ಈಗ ಹೋಯಿತು. ಈಗ ನವೀನ ಕುಮಾರ ಅನ್ನುವುದು ಜನಪ್ರಿಯವಾಗಿದೆ. ಹಳಬರು ಬೇಗ ರಿಟೈರಾಗಿ ಹೋಗಿರಿ ಅನ್ನುತ್ತಾ ಇದಾರೆ, ಹೊಸಬರು. ಹಳಬರೂ ತಮ್ಮ ಬರ್ತ್ ಸರ್ಟಿಫಿಕೇಟ್ ತಿದ್ದಿಸಿ ಹೊಸಬರಾಗಲಿಕ್ಕೆ ಪ್ರಯತ್ನ ಮಾಡುತ್ತಾ ಇದಾರೆ. ಆದರೂ ಪ್ರತಿಯೊಬ್ಬರೂ ತಾವು ಹಳಬರು ಅಂದುಕೊಳ್ಳದೆ ಇದ್ದರೂ ತಮ್ಮ ಕುಲ ಹಳೇದು ಅಂತ ಸಾಧಿಸುವುದು ಮಾತ್ರ ಹಳೇದಾದರೂ ಹೊಸ ಚಟವೇ. ಹಿಂದಿನ ಕಾಲದಲ್ಲಿ ದಾರಿಬಡಕರಾಗಿದ್ದವರು ಹಳೇ ರಾಜರನ್ನು ಗೆದ್ದು ತಾವು ಪಟ್ಟ ಕಟ್ಟಿಸಿಕೊಂಡಾಗ ತಾವು ಮಾಂಧಾಂತರಾಜನ ಕುಲದವರು ಅಂತಲೋ ಜನಮೇಜಯರಾಜನ ಮೊಮ್ಮಕ್ಕಳ ಮರಿಮಕ್ಕಳ ಕುಲದವರು ಅಂತಲೋ ಹೇಳಿಕೊಂಡು ಶಾಸನ ಬರೆಸಿ ಇಡುತ್ತಿದ್ದರು. ಹೊಸದಾಗಿ ಸಮಾಜದಲ್ಲಿ ಮೇಲಿನ ಸ್ತರಕ್ಕೆ ಏರಿಬಂದವರು ಈಗ ವಾಲ್ಮೀಕಿಯನ್ನೋ ಅಜಾಮಿಳನನ್ನೋ ಮತ್ತಾವ ಮುನಿಯನ್ನೋ ತಮ್ಮ ಮೂಲಪುರುಷನಾಗಿ ದತ್ತು ತೆಗೆದುಕೊಳ್ಳು ತ್ತಾರೆ. ನಾವು ಎಷ್ಟೇ ಹೊಸ ಕಾಲದವರಾದರೂ ಹಳೇಕಾಲದ ಬೇರುಗಳನ್ನ ಹುಡುಕುತ್ತೇವೆ.

ಉಳಿದದ್ದು ಯಾವುದು ಹಳೇದಾದರೂ ಹೊಸತೇ ಅನ್ನಬಹುದು. ಆದರೆ ಹೆಂಗಸರನ್ನಲ್ಲ ಅನ್ನುವ ಹೊಸಗಾಳಿ ಈಗೀಗ ಪಶ್ಚಿಮದಿಂದ ಬೀಸುತ್ತಾ ಇದೆ. Oldage is a woman's lull ಅಂತೆ. ಆದರೆ ನಮ್ಮ ಜತೆಗೆ ತಾರುಣ್ಯ ಅನುಭವಿಸಿ ನಮ್ಮ ಸಂಗಡವೇ ಮುದಿಯಾದವಳು ನಮಗೆ ಸದಾ ಹೊಸಬಳೇ ಆಗಿರುತ್ತಾಳೆ. ಶೇಕ್‌ಸ್ಪಿಯರ್ ಒಂದು ಸಾನೆಟ್ಟಿನಲ್ಲಿ ಹೇಳುತ್ತಾನೆ—

ನನಗೆ ನೀನೆಂದಿಗೂ ಹಳತಾಗಲಾರೆ,
ಎಲಗೆ ಸುಂದರಿ! ನಾನಂದು ಹೊಸದಾಗಿ
ನಿನ್ನ ಕಣ್ಣಿಲಿ ಕಣ್ಣು ತೊಡರಿಸಿದ ಕ್ಷಣದಲ್ಲಿ
ಯಾವ ಸುಂದರಿಯಾಗಿ ಕಂಡಿದ್ದೆಯೋ
ಅದೇ ಸುಂದರಿಯಾಗಿ ಇಂದಿಗೂ ಕಾಣುವೆ.

ನೀವು ಪ್ರೀತಿಸಿದ್ದರೆ ಹಳೇ ಹೆಂಡತಿ ಕಡೇವರೆಗೂ ಹೊಸಬಳೇ.

# ದೇವಾಸ್ತ್ವೃಪ್ಯಂತು

ನನಗೊಮ್ಮೆ ಹಿಂದೂಧರ್ಮದ ಮೇಲೆ ಸಿಟ್ಟು ಬಂದು ಬೇರೆ ಯಾವುದಾದರೂ ಧರ್ಮವನ್ನು ಸೇರಬೇಕೆಂದು ಯೋಚಿಸಿದೆ. ಬೇರೊಂದು ಧರ್ಮದ ಮಿತ್ರನನ್ನು ಅವನ ಧರ್ಮದ ಸಾಧಕಬಾಧಕಗಳ ಬಗ್ಗೆ ಪ್ರಶ್ನಿಸಿದೆ :

"ನಿಮ್ಮ ದೇವರ ಗುಣಗಳೇನು ?"

"ಅವನು ಸರ್ವಶಕ್ತ, ಕ್ಷಮಾಶೀಲ. ಮನುಷ್ಯ ಅವನನ್ನು ನಂಬಿದರೆ ಅವನ ತಪ್ಪುಗಳನ್ನೆಲ್ಲ ಕ್ಷಮಿಸುತ್ತಾನೆ."

"ಅವನು ಏನನ್ನು ತಿನ್ನುತ್ತಾನೆ ?"

ನನ್ನ ಮಿತ್ರ ಸ್ವಲ್ಪ ತಲೆ ಕೆರೆದುಕೊಂಡ. "ಅಲ್ಲಾ ! ನಮ್ಮ ದೇವರ ಗುಣಗಳ ಪ್ರಶ್ನೆಯಲ್ಲಿ ಅವನ ಆಹಾರದ ಸುದ್ದಿ ಯಾಕೆ ?" ಎಂದು ಕೇಳಿದ.

"ಪ್ರಶ್ನೆಯಿಂದ ಜಾರಿಕೊಳ್ಳಬೇಡ. ನಿಮ್ಮ ದೇವರು ಏನು ತಿನ್ನುತ್ತಾನೆ ಎನ್ನುವುದು ನನ್ನ ಧರ್ಮಾಂತರದ ನಿರ್ಣಯಕ್ಕೆ ತುಂಬಾ ಮಹತ್ವದ್ದು."

ಮಿತ್ರ ಯೋಚಿಸಿದ. "ನಿಜ ಕೇಳಿದರೆ ನಮ್ಮ ದೇವರಿಗೆ ದಿನಾ ನಾನು ಊಟಕ್ಕೆ ಮುಂಚೆ ಪ್ರಾರ್ಥನೆ ಸಲ್ಲಿಸಿದರೂ ಅವನು ಏನು ತಿನ್ನುತ್ತಿರಬಹುದು ಅನ್ನುವ ಯೋಚನೆ ನನಗೆ ಬಂದೇ ಇರಲಿಲ್ಲ" ಎಂದ. "ನನಗೆ ತಿಳಿದ ಮಟ್ಟಿಗೆ ನಮ್ಮ ದೇವರು ಏನೂ ತಿನ್ನುವುದಿಲ್ಲ, ಕುಡಿಯುವುದಿಲ್ಲ. ತಿನ್ನುವ ಕುಡಿಯುವ ಪದಾರ್ಥಗಳನ್ನೆಲ್ಲ ಅವನು ನಮಗಾಗಿಯೇ ಸೃಷ್ಟಿಸಿದ್ದಾನೆ."

ಇದು ನನ್ನ ನಿರ್ಣಯಕ್ಕೆ ಆಧಾರವಾಯಿತು. ನಾನು ಹಿಂದೂ ಧರ್ಮದಲ್ಲಿಯೇ ಉಳಿಯಲು ನಿಶ್ಚಯಿಸಿದೆ. ಏನನ್ನೂ ತಿನ್ನದ ಕುಡಿಯದ ದೇವರ ಕೈಲಿ ನನ್ನ ಜುಟ್ಟನ್ನು ಕೊಡಲು ನನಗೆ ಧೈರ್ಯ ಬರಲಿಲ್ಲ. ಸ್ವತಃ ಏನೂ ಬೇಕಾಗದ ದೇವರಿಗೆ ನಮ್ಮ ಸುಖದುಃಖಗಳು ಸರಿಯಾಗಿ ತಿಳಿಯುವುದು ಸಾಧ್ಯವೇ ? ಚೆನ್ನಾಗಿ ಉಂಡು ತಿಂದು ಸುಖವಾಗಿರುವ ದೇವರುಗಳು ಮನುಷ್ಯರ ತಪ್ಪುಗಳನ್ನು ಹೆಚ್ಚು ಅಸಡ್ಡೆಯಿಂದ ನೋಡಬಲ್ಲ, ಯಾವಾಗಲೂ ಉಪೋಷಣೆ ಮಾಡುವ ದೇವರು ನಮ್ಮ ಅಪರಾಧಗಳಮೇಲೆ ಸದಾ ಕಣ್ಣು ಇಟ್ಟಿರುತ್ತಾನೆ. ಸಮೀಚೀನ ಭೋಜನಮಾಡಿದ ದೇವರಿಗೆ ಸ್ವಲ್ಪ ಕಣ್ಣಾಲಸ್ಯ

ವಾದಾಗ ನಾವು ನಮ್ಮ ಮನುಷ್ಯ ಸಹಜಪಾಪಗಳನ್ನು ಮಾಡಿ ದಕ್ಕಿಸಿಕೊಳ್ಳ ಬಹುದು.

ಹಿಂದೂ ದೇವರುಗಳು ಉಪವಾಸಿಗಳಲ್ಲ. ಉಂಡುಪವಾಸಿಗಳು. ಒಳ್ಳೇ ಉಣಿಸು ತಿನಿಸು ಅವರಿಗೆ ಬೇಕು. ನಾವು ಎಲ್ಲಾ ಕಾರ್ಯಗಳಲ್ಲಿ ಮೊದಲು ಪೂಜೆ ಮಾಡುವ ಗಣಪತಿಯನ್ನೇ ತೆಗೆದುಕೊಳ್ಳಿ. (ಇದನ್ನು ಬರೆಯುತ್ತಿರುವಾಗ ನಾನು, ಮೊನ್ನೆ ಗಣೇಶಚೌತಿಗೆ ಮಾಡಿದ ಕೊನೆಯ ಉಂಡೆಗಳನ್ನು ಜಗಿಯುತ್ತಾ ಇದ್ದೇನೆ) ಅವನು ಎಂದೂ ಹೊಟ್ಟೆಯನ್ನು ಖಾಲಿ ಇಟ್ಟು ಕೊಳ್ಳುವವನಲ್ಲ. ಮೋದಕಪ್ರಿಯ ಅಂತಲೇ ಅವನಿಗೆ ಇನ್ನೊಂದು ಹೆಸರು. ಒಂದು ಕೈಲಿ ಮೋದಕವನ್ನು ಯಾವಾಗಲೂ ಹಿಡಿದೇ ಇರುತ್ತಾನೆ. ಆದರೆ ಅವನಿಗೆ ಇತರ ಸಿಹಿತಿಂಡಿಗಳು ವರ್ಜ್ಯ ಎಂದೇನೂ ಇಲ್ಲ. ಅಕ್ಕಿಯ, ಗೋದಿಯ, ಹೆಸರಿನ, ಎಳ್ಳಿನ ಅಥವಾ ಮತ್ತಾವುದರ ಲಡ್ಡುಗೆಗಳನ್ನೂ ಅವನು ಮೆಚ್ಚುತ್ತಾನೆ. ಅವಲಕ್ಕಿಯ ಪಂಚಕಜ್ಜಾಯವಾದರೂ ಸೈಯೆ. ಚೌತಿಯ ದಿನ ಅವನಿಗೆ ನವವಿಧ ಭಕ್ಷ್ಯಗಳು ಬೇಕು. ಸಿಹಿತಿಂಡಿಗಳು ಗಣೇಶನಿಗೆ ಇಷ್ಟವೆಂದು ಹೇಳಿದರೆ ಖಾರ ತಿಂಡಿಗಳೂ ಅವನಿಗೆ ಬೇಕೆಂದು ಬೇರೆ ಹೇಳ ಬೇಕಾಗಿಲ್ಲ. ಒಂದು ಸಿಹಿ ತಿಂಡಿಗೂ ಇನ್ನೊಂದಕ್ಕೂ ನಡುವೆ ಖಾರ ತಿನ್ನದೆ ಹೋದರೆ ರುಚಿಭೇದವೇ ತಿಳಿಯುವುದಿಲ್ಲವಲ್ಲ. ಆದ್ದರಿಂದ ಚಕ್ಕುಲಿ, ಕೋಡು ಬಳೆ ಇತ್ಯಾದಿ ನವವಿಧ ಸೇವರಿಗಳೂ ಅವನಿಗೆ ನೈವೇದ್ಯವಾಗುತ್ತವೆ.

ಇದು ವರ್ಷಕ್ಕೆ ಒಂದು ದಿನದ ಅವನ ಹಬ್ಬದ ಮಾತಾಯಿತು. ಬೇರೆ ದಿನಗಳಲ್ಲಿ ಅವನ ಪ್ರೀತ್ಯರ್ಥವಾಗಿ ಇಷ್ಟೆಲ್ಲವನ್ನೂ ಒದಗಿಸಲು ಭಕ್ತನಿಗೆ ಸಾಧ್ಯವಿಲ್ಲೆಂದು ಆತ ಬಲ್ಲ. ಪ್ರತಿ ತಿಂಗಳ ಚೌತಿಯ ಹೋಮ ನೈವೇದ್ಯಕ್ಕೆ ಪಂಚಕಜ್ಜಾಯವೇ ಸಾಕೆಂಬ ಅವನು ದೊಡ್ಡ ಮನಸ್ಸು ಮಾಡಿದ್ದಾನೆ. ಆದರೆ ಕೆಲವೊಂದು ಊರಿನ ಗಣಪತಿ ಕೆಲವೊಂದು ವಿಶಿಷ್ಟಭಕ್ಷ್ಯಕ್ಕೇ ಪ್ರಾಶಸ್ತ್ಯ ಕೊಡುವುದೂ ಉಂಟು. ಉದಾಹರಣೆಗೆ, ಕುಂಭಾಶಿಯ ಗಣಪತಿ. ಅವನಿಗೆ ಕಡುಬೆಂದರೆ ಜೀವವಂತೆ. ಉತ್ತರ ಕರ್ನಾಟಕದ ಕರಿಗಡುಬಲ್ಲ, ಕೊಟ್ಟೆ ಕಡುಬು. ದಕ್ಷಿಣಕನ್ನಡದ ವಿಶೇಷ. ಅದನ್ನು ಕಂಡರಿಯದ ಇತರ ಕನ್ನಡಿಗರಿಗಾಗಿ ವಿವರಣೆ ಕೊಡಬೇಕಾದರೆ, ಅದನ್ನು ಸಿಲಿಂಡರಾಕೃತಿಯ ದೀರ್ಘೀಭೂತ ಇಡ್ಲಿ ಎನ್ನಬಹುದು. ಇದನ್ನು ಒಂದಲ್ಲ, ಎರಡಲ್ಲ, ಗಣಪತಿಯ

ಗಾತ್ರದಷ್ಟೆತ್ತರ ರಾಶಿ ಹಾಕಿದರೆ (ಅವನ ಗಾತ್ರ ಸುಮಾರು ನಾಲ್ಕಡಿ ಇರ ಬೇಕು), ನಿಮ್ಮ ಇಷ್ಟಾರ್ಥ ಸಿದ್ಧಿಸಿದಂತೆಯೇ ಸೈ.

ಗಣಪತಿಯನ್ನು "ಕವಿಂ ಕವೀನಾಂ", "ವಿಪ್ರತಮಂ ಕವೀನಾಂ" ಎಂದೆಲ್ಲ ವೇದಗಳಲ್ಲಿ ವರ್ಣಿಸಿದೆ. ಅವನು ಬರೆದ ಕವಿತೆಗಳು ಈಗ ಉಪಲಬ್ಧವಾಗಿಲ್ಲ. ಆದರೆ ಸುಖಭೋಜನಪ್ರಿಯನಾದ ಗಣಪತಿ ಖಂಡಿತವಾಗಿಯೂ ಹಸಿದ ನವ್ಯ ಕವಿತೆಗಳನ್ನು ಬರೆದಿರಲಾರ. ಅವನು ರೊಮ್ಯಾಂಟಿಕ್ ಸಂಪ್ರದಾಯದವನೇ ಆಗಿರಬೇಕು.

ನಮ್ಮ ದೇವರುಗಳ ಆಹಾರ ಪ್ರಾಶಸ್ತ್ಯಗಳು ಆಶ್ಚರ್ಯಕರವೆನಿಸುವಷ್ಟು ವಿಶಾಲವಾಗಿವೆ. "ನಾಗರಪಂಚಮಿ ನಗುತಾ ಬಂತು, ಯುಗಾದಿ ಹಬ್ಬ ಅಳುತಾ ಹೋಯ್ತು"—ಅನ್ನುವ ಗಾದೆಯಲ್ಲಿ, ನಾವು ಯುಗಾದಿಯಿಂದ ನಾಲ್ಕು ತಿಂಗಳ ಹಬ್ಬವಿರಾಮವನ್ನು ಕುರಿತು ಅತ್ತಿದ್ದೇವೆ. ನಾಗರಪಂಚಮಿ, ಬಹುಶಃ ನಮ್ಮ ಜನಮೇಜಯರಾಯ ನಾಗಯಜ್ಞಮಾಡಿ ನಾಗರನ್ನು ಹೆಚ್ಚು ಕಡಿಮೆ ನಿರ್ನಾಮ ಮಾಡಿದಮೇಲೆ, ರೂಢಿಯಲ್ಲಿ ಬಂದಿರಬೇಕು. ಯಾರ ನ್ನಾದರೂ ಕೊಂದನಂತರ ನಾವು ಅವರ ಪ್ರೀತ್ಯರ್ಥವಾಗಿ ಹಬ್ಬ ಆಚರಿಸು ತ್ತೇವೆ ಅನ್ನುವುದಕ್ಕೆ ದೀವಳಿಗೆ ಹಬ್ಬವೂ ಒಂದು ಸಾಕ್ಷಿಯಾಗಿದೆ ತಾನೆ. ನಾಗರಪಂಚಮಿಯ ಹೆಚ್ಚಳವೆಂದರೆ ತಂಬಿಟ್ಟಿನ ನೈವೇದ್ಯ. ನಾಗರಿಗೆ ಹುರಿ ದದ್ದು ಕರಿದದ್ದು ಮಹಾ ವಿರೋಧವಂತೆ. ಅದಕ್ಕೆ ಬೇಕಾಗಿ ಹಸಿಹಿಟ್ಟಿನ ಸಿಹಿತಿಂಡಿಯನ್ನು ಅವರ ಹೆಸರಲ್ಲಿ ನಾವು ತಿನ್ನುತ್ತೇವೆ. ಮುಂಬರುವ ಹಬ್ಬದ ಸೀಜನ್ನಿಗೆ ಇದು ಬಲು ಸೌಮ್ಯವಾದ ಮಂಗಲಾಚರಣೆಯೇ ಸೈ. ಆದರೂ ನಾಲ್ಕು ತಿಂಗಳ ಹಬ್ಬವಿರಾಮದಿಂದ ಸಪ್ಪಗಾಗಿದ್ದ ನಾಲಗೆಗಳು ಈ ತಂಬಿಟ್ಟಿ ಗಾಗಿ ಹಾತೊರೆಯುತ್ತ ಪೂಜೆ ಯಾವಾಗ ಮುಗಿಯಲಿಲ್ಲ ಅಂತ ಚಿಕ್ಕಂದಿನಲ್ಲಿ ನಾವು ಕಾಯುತ್ತಿದ್ದದ್ದು ನನಗೆ ನೆನಪಿದೆ. ನಮ್ಮ ಹಿರಿಯರು ಪ್ರತಿಯೊಂದು ಒಳ್ಳೇ ಕೆಲಸ ಮತ್ತು ಕೆಟ್ಟ ಕೆಲಸವನ್ನು ದೇವರಿಗಾಗಿ ಮಾಡುತ್ತಿದ್ದದ್ದು ಆಗ ನಮಗೆ ತುಂಬಾ ಅಸಹನೆಗೆ ಕಾರಣವಾಗಿತ್ತು. ಪೂಜೆ ಮುಗಿಯುವ ವರೆಗೆ ನಾವು ತಿನ್ನದೆ ಕಾಯಬೇಕು, ಅನ್ನುವುದು ಅಸ್ವಾಭಾವಿಕ, ಅಮಾನುಷ, ಮೂಲಭೂತ ಹಕ್ಕಿನ ಉಲ್ಲಂಘನೆ, ದಬ್ಬಾಳಿಕೆ ಎಂದು ಅನಿಸುತ್ತಿತ್ತು. ಆದರೆ ಈಗ ನಾನು ನಮ್ಮ ಹಿರಿಯರ ಜಾಣ್ಮೆಯನ್ನು ಅರ್ಥಮಾಡಿಕೊಳ್ಳುವಷ್ಟು

ಜಾಣನಾಗಿದ್ದೇನೆ. ನಿರೀಕ್ಷೆಯಿಂದ ಸುಖದ ಆಪ್ಯಾಯಕತ್ವ ಹೆಚ್ಚುತ್ತದೆ. ಬಯಸಿದೊಡನೆ ಬಂದರೆ ಅದು ಬೇಗ ಬೋರು ಹೊಡೆಯುತ್ತದೆ. ಮೂಲಭೂತ ಹಕ್ಕುಗಳು ಮೂಲಭೂತ ಕರ್ತವ್ಯಗಳ ಪಾಲನೆಯಿಂದ ಮಾತ್ರ ದೊರಕಬಲ್ಲವೆಂಬುದನ್ನು ನಮಗೆ ಕಲಿಸುವುದಕ್ಕಾಗಿ, ಹಿರಿಯರು ಬನದಲ್ಲಿ ನಾಗನ ಸುದೀರ್ಘಪೂಜೆ ಮುಗಿಯುವವರೆಗೆ ನೈವೇದ್ಯದ ತಂಬಿಟ್ಟನ್ನು ಕಾಗೆಯ ಕೈಯಿಂದ ಕಾಪಾಡುವ ಕೆಲಸವನ್ನು ಹುಡುಗರಾದ ನಮಗೆ ಒಪ್ಪಿಸುತ್ತಿದ್ದರು. ಕಾಗೆಗಳು ದೇವರಿಗೆ ಹೆದರುವುದಿಲ್ಲವಾದರೆ ನಾವೇಕೆ ಹೆದರಬೇಕು ಎನ್ನುವ ಬಂಡಾಯಗಾರ ಪ್ರಶ್ನೆ ನನ್ನ ಜನ್ಮಸಿದ್ಧ ದುರ್ಬುದ್ಧಿಯಲ್ಲಿ ಹುಟ್ಟುತ್ತಿತ್ತಾದರೂ ಅದನ್ನು ವ್ಯಕ್ತಪಡಿಸುವ ಅಭಿಪ್ರಾಯಸ್ವಾತಂತ್ರ್ಯ ನಮಗಿಲ್ಲವೆಂದು ಗೊತ್ತಿತ್ತು.

ಶ್ರೀಕೃಷ್ಣ ನಾಗನಿಗಿಂತಲೂ ನಿರ್ದಯ ದೇವರು ಎಂದು ನಮಗೆ ಆಗ ಅನಿಸುತ್ತಿತ್ತು. ಅವನ ಜನ್ಮದಿನದ ನೈವೇದ್ಯಕ್ಕಾಗಿ ತಂಬಿಟ್ಟಿಗಿಂತಲೂ ರುಚಿಯಾದ ಘಮಘಮಿಸುವ ಭಕ್ಷ್ಯಗಳು ನಮ್ಮ ಮೂಗುಗಳನ್ನು ಉತ್ತೇಜನಗೊಳಿಸುತ್ತಿರುವಾಗ್ಗೆ, ಮಧ್ಯರಾತ್ರಿಯವರೆಗೂ—ಅಂದರೆ ಕೃಷ್ಣ ಹುಟ್ಟುವ ಅಷ್ಟಮಿಯ ಅರ್ಧರಾತ್ರಿಯವರೆಗೂ—ಕಾಯುವುದು ಯಮಯಾತನೆಯೇ. ಈ ದೇವರುಗಳಿಗೆ ಸ್ವಲ್ಪವೂ ಸೆನ್ಸ್ ಬೇಡವೇ? ಹುಟ್ಟುವುದಂತೂ ಹುಟ್ಟುತ್ತಾರೆ. ಹೊತ್ತಲ್ಲದ ಹೊತ್ತಿನಲ್ಲಿ ಹುಟ್ಟಬೇಕೇಕೆ? ಆದರೆ ಯತ್ನವಿರಲಿಲ್ಲ. ಸಂಜೆಯಿಂದಲೇ ಪ್ರಾರಂಭವಾಗುವ ನೈವೇದ್ಯ ಸನ್ನಾಹವನ್ನು ಅವಲೋಕಿಸುತ್ತ ಕಾಲ ಕಳೆಯಬೇಕು.

ಶ್ರೀಕೃಷ್ಣನ ಅಭಿರುಚಿಗಳ ವೈವಿಧ್ಯ ಅದ್ಭುತವೇ ಆಗಿರಬೇಕೆಂದು ಅವನ ಹೆಂಡಂದಿರ ಸಂಖ್ಯೆಯಿಂದ ಮಾತ್ರವಲ್ಲ, ಅವನಿಗಾಗಿ ಮಾಡುವ ನೈವೇದ್ಯಗಳ ಸಂಖ್ಯೆಯಿಂದಲೂ ತಿಳಿಯುತ್ತದೆ. ಅರಳುಹಿಟ್ಟನಿಂದ ಹಿಡಿದು ಗೇರುಬೀಜದ ಚೂರುಗಳ ವರೆಗಿನ ಎಷ್ಟೆಲ್ಲ ಬಗೆಯ ಲಡ್ಡುಗೆಗಳು! ಕೃಷ್ಣ ಬರೇ ಮಧುಮಧುರವನ್ನಲ್ಲದೆ ಕಟುಮಧುರವನ್ನೂ ಮೆಚ್ಚುವವನು. ಆದ್ದರಿಂದ ಶುಂಠಿಯ ಉಂಡೆಗಳು. ಇದೆಲ್ಲದರ ಮೇಲೆ ಚಕ್ಕುಲಿ ಕರಿಯುವುದಕ್ಕೆ ಆರಂಭ. ತನ್ನ ದೇವರನ್ನು ಮೆಚ್ಚಿಸುವುದಕ್ಕೆ ಮನುಷ್ಯ ಏನೇನು ವಿಶೇಷಗಳನ್ನು ಕಲ್ಪಿಸಬಲ್ಲ ಅನ್ನುವುದು ಆಶ್ಚರ್ಯದ್ದು. ಮೂರು, ಐದು, ಏಳು, ಒಂಬತ್ತು ಸುತ್ತಿನ

ಚಕ್ಕುಲಿಗಳು. ಕೃಷ್ಣನ ಆಯುಧಗಳಾದ ಶಂಖಚಕ್ರಗದಾಪದ್ಮಗಳ ಶಷ್ಕುಲೀ ಪ್ರತಿರೂಪಗಳು. ಅರ್ಧರಾತ್ರಿಯಲ್ಲಿ ಪೂಜೆ ಮುಗಿಯುವ ವರೆಗೆ ನಾಲಿಗೆ ಯನ್ನೂ ನಿದ್ರೆಯನ್ನೂ ಏಕಕಾಲಕ್ಕೆ ನಿಗ್ರಹಿಸಿಕೊಂಡಿರಬೇಕು. ಚಳಿಯಲ್ಲಿ ಬರಿಮೈಲಿ ಕೃಷ್ಣನಿಗೆ ಅರ್ಘ್ಯ ಕೊಡಬೇಕು.

ಈಗಿನ ಹುಡುಗರು ಪುಣ್ಯವಂತರು. ಈಗ ಹಿರಿಯರಿಗೂ ನಿದ್ದೆಕಟ್ಟಲು ಸಾಧ್ಯವಿಲ್ಲ. ಆದ್ದರಿಂದ ಕತ್ತಲಾಗುತ್ತಲೇ ಪೂಜೆಯ ಶಾಸ್ತ್ರ ಮಾಡಿ ಪ್ರಸಾದ ಸ್ವಾಹಾ ಆಗಿಬಿಡುತ್ತದೆ. ಅಥವಾ ಪೂಜೆಮಾಡದೆಯೇ ಪ್ರಸಾದ ಸ್ವೀಕಾರವೂ ಆಗುತ್ತದೆ. ಕೃಷ್ಣನೇನು ನಮ್ಮ ಜಾಗರಣೆಯ ಸಹಾಯವಿಲ್ಲದೆಯೂ ಹುಟ್ಟ ಬಲ್ಲ; ಪೂಜೆ ಇಲ್ಲದೆಯೂ ಬದುಕಬಲ್ಲ. ಅವನ ಹೆಸರಲ್ಲಿ ನಮಗೆ ಮಾಡಿ ಕೊಳ್ಳಬೇಕಾದ ವಿನಿಯೋಗವನ್ನು ಬೇಗನೆ ಮಾಡಿ ಕೈತೊಳೆದುಕೊಂಡು ಮಲಗಿಬಿಟ್ಟರೆ ಮಕ್ಕಳಿಗೆ ಸಂತೋಷ, ಹಿರಿಯರಿಗೆ ಸುಖ.

ಸತ್ಯನಾರಾಯಣ ಹುಟ್ಟಿ ೧೮೦ಕ್ಕಿಂತ ಹೆಚ್ಚು ವರ್ಷಗಳಾಗಿಲ್ಲವೆಂದು ಸಂಶೋಧಕರು ಕಂಡುಹಿಡಿದಿದ್ದಾರೆ. ಮೂಲ ನಾರಾಯಣನಾದರೂ ಬಹಳ ಹಳೆಯವನಲ್ಲ, ವೇದಕಾಲದ ಕಡೆಕಡೆಗೆ ಹುಟ್ಟಿಕೊಂಡವನು ಎಂದೂ ತಜ್ಞರ ಹೇಳಿಕೆ. ದೇವರ ವಯಸ್ಸು ಮುಖ್ಯವಲ್ಲ. ಹೊಸ ದೇವರುಗಳು ಹಳೆಯ ವರಿಗಿಂತ ಚತುರರಾಗಿರುವ ಸಂಭವ ಅಪರೂಪವಲ್ಲ. ಸತ್ಯನಾರಾಯಣ ಮೂಲ ನಾರಾಯಣನಿಗಿಂತ ಕಡಿಮೆ ಅವಧಿಯಲ್ಲಿ ದೇಶದಲ್ಲೆಲ್ಲಾ ಜನಪ್ರಿಯ ನಾಗಿದ್ದಾನೆ. ಅವನ ಜನಪ್ರಿಯತೆಯ ರಹಸ್ಯವೇನು? ಅವನ ಅಭಿರುಚಿ ಪಾಕಾಭಿರುಚಿ ಎಂದು ನನಗೆ ತೋರುತ್ತದೆ. ಅವನ ನೈವೇದ್ಯಕ್ಕೆ ಬೇಕಾಗಿ ತಯಾರಿಸುವ ಸಪಾದಭಕ್ಷ್ಯ ತನ್ನ ಸರಳತನ ಮತ್ತು ರುಚಿಯಿಂದಾಗಿ ಸತ್ಯ ವನ್ನು ನಂಬದವರೂ ಸತ್ಯನಾರಾಯಣನನ್ನು ನಂಬುವಂತಾಗಿದೆ. ಹಾಲು, ತುಪ್ಪ, ರವೆ, ಸಕ್ಕರೆ ಇವುಗಳ ಇಂಥ ಹಿತಮಿತವಾದ ಸಮ್ಮಿಶ್ರಣವನ್ನು ಮತ್ತಾವ ದೇವರು ಕಂಡುಹಿಡಿದಿದ್ದಾನೆ? ಸತ್ಯನಾರಾಯಣ ಗಣಿತಪ್ರಿಯ ನೆಂದೂ ತೋರುತ್ತದೆ. ವಿಶ್ವಸೃಷ್ಟಿಕರ್ತನು ಪೂರ್ಣಾಂಕಗಳಲ್ಲಿ ಚಿಂತಿಸುವ ಗಣಿತ ಶಾಸ್ತ್ರಿಯಿರಬೇಕೆಂದು ವ್ಹೈಟ್‌ಹೆಡ್ಡೋ ಜೇಮ್ಸ್ ಜೀನ್ಸೋ ಮತ್ತಾರೋ ವಿಜ್ಞಾನಿ ಹೇಳಿದ್ದಾನೆ. ನಮ್ಮ ಸತ್ಯನಾರಾಯಣ ಪೂರ್ಣಾಂಕ ಗಳಲ್ಲಿ ಅಲ್ಲ, ಭಿನ್ನರಾಶಿಗಳಲ್ಲಿ ಚಿಂತಿಸುವ ದೇವರು. ಅವನ ಪ್ರಸಾದ ಆದರ

ಎಲ್ಲ ಅಂಗಗಳನ್ನೂ ಸಪಾದ-ಅಂದರೆ ಒಂದೂಕಾಲರ ಮಾಸಲೆಯಲ್ಲಿ ಹಾಕ ಬೇಕಂತೆ. ಮತ್ತೆ ಈ ಪ್ರಸಾದವನ್ನು ಹೊಟ್ಟೆತುಂಬಾ ಅಲ್ಲ-ನಾಲಿಗೆಗೆ ರುಚಿ ಎನಿಸುವಷ್ಟೇ ಪ್ರಮಾಣದಲ್ಲಿ ಹಂಚಬೇಕು. ಬೇರೆ ಯಾವ ದೇವರ ಪ್ರಸಾದ ವನ್ನೂ ಆರೋಗ್ಯದೃಷ್ಟಿಯಿಂದ ನೀವು ಟೀಕಿಸಬಹುದು. ಸತ್ಯನಾರಾಯಣ ಪ್ರಸಾದದ ಪಾಕದ ಹದ ಉದರಕ್ಕೆ ಹಿತ, ಅಧರಕ್ಕೆ ರುಚಿ.

ಹಬ್ಬಗಳ ಸಂಖ್ಯೆಯ ಮೇಲಿಂದ ಹೇಳುವುದಾದರೆ ಉತ್ತರ ಕರ್ನಾಟಕ ವನ್ನು ಸೋಲಿಸುವ ಬೇರೆ ಪ್ರದೇಶ ಸಿಗಲಿಕ್ಕಿಲ್ಲ. ಪ್ರತಿ ಹುಣ್ಣಿಮೆಯೂ ಹಬ್ಬ ಪ್ರತಿ ಅಮಾವಾಸ್ಯೆಯೂ ಹಬ್ಬ. ನಡುನಡುವೆ ಬೇರೆ ಹಬ್ಬಗಳು. ಅವಕ್ಕೆಲ್ಲ ಚಂದಚಂದದ ಕನ್ನಡ ಹೆಸರುಗಳು—ದವನದ ಹುಣ್ಣಿಮೆ, ಕಾರಹುಣ್ಣಿಮೆ, ಮಣ್ಣೆತ್ತಿನ ಅಮಾಸೆ ಇತ್ಯಾದಿ. ಪ್ರತಿ ಹಬ್ಬವೂ ಹೋಳಿಗೆಯಿಂದ ಮಧುರೀ ಕೃತ ಕರಿಗಡುಬು, ಕುಚ್ಚಿದ ಕಡುಬು ಇತ್ಯಾದಿ ಇತ್ಯಾದಿಯೂ ಸೈ. ಎಲ್ಲ ಸಿಹಿ, ಅವರ ಭಕ್ಷ್ಯಗಳೆಲ್ಲ ಅವರ ಹಾಗೆ: ಹೊರಗಿಂದ ಸಪ್ಪಗೆ, ಒಳಗೆ ಸವಿ. ಆದರೆ ಅವರ ದೇವರುಗಳು ಹೆಚ್ಚು ಬಡಿವಾರದವರಲ್ಲ. ಅವರ ಗಣಪತಿಯೇ ಇರಲಿ, ಹನುಮಂತನೇ ಇರಲಿ, ಶಿವನೇ ಇರಲಿ, ಕಾಮಣ್ಣನೇ ಇರಲಿ— ಸುಲಭತೃಪ್ತರು. ಒಂದಷ್ಟು ಮಂಡಕ್ಕಿ, ಆದರಲ್ಲಷ್ಟು ತೆಂಗಿನಕಾಯಿ ಹೋಳು —ಇಷ್ಟು ಸಾಕು. ಕೆಲವೇಳೆ ಇದರೊಡನೆಯೇ ಒಂದಿಷ್ಟು ಫಾಟಿ ಅಥವಾ ಸೇವುಚೂಡಾ ಬೆರಸಿಟ್ಟರೆ ದಿವ್ಯವಾಗಿ ಹೋಯಿತು. ಅವರು ಮಡಿಯನ್ನು ಕೂಡ ಬೇಡರು. ಮಂಡಕ್ಕಿಯನ್ನು ಭಟ್ಟಿಯಿಂದ, ಸೇವು ಚೂಡಾವನ್ನು ಹೋಟೆಲಿನಿಂದ ತಂದರೂ ನಡೆಯುತ್ತದೆ. ಅವರಿಗೆ ಭಕ್ತಿ ಮುಖ್ಯ. ಆದರೂ ಕೆಲ ಸಾರ್ವಜನಿಕ ದೇವರುಗಳು ಕೆಲವೊಮ್ಮೆ ಧಾರವಾಡದ ಲೈನ್ ಬಾಜಾರಿನ ಸುಪ್ರಸಿದ್ಧ ಫೇಡೆಗಳನ್ನು ಬಯಸುವುದುಂಟು. ನಿಮ್ಮ ಜೇಬು ಅದಕ್ಕೆ ಅನುಮತಿ ಕೊಟ್ಟರೆ ಅದನ್ನೂ ತರಿಸಿ ಸಮರ್ಪಿಸಿ ಹಂಚಬಹುದು. ಆದರೆ ಅದೇನೂ ಕಂಪಲ್ಸರಿ ಅಲ್ಲ.

ವಿಶಿಷ್ಟ ದೇವರುಗಳ ಇಷ್ಟರುಗಳ ಮಾತು ಬಂದಾಗ ನನಗೆ ದಕ್ಷಿಣ ಕನ್ನಡದ ಒಂದೂರಿನ ದೇವರ ನೆನಪು ಬರುತ್ತದೆ. ಈ ದೇವರು ಶಿವನೋ ವಿಷ್ಣುವೋ ಗಣೇಶನೋ ಸ್ಕಂದನೋ ನಾಗನೋ ಈಗ ನನಗೆ ನೆನಪಿಲ್ಲ. ಆದರೆ ಅವನಿಗೆ ಪ್ರೀತಿಯ ತಿಂಡಿ ಎಂದರೆ ಅಪ್ಪವಂತೆ. (ಈ ಅಪ್ಪ ಅನ್ನುವುದು

ಬಹಳ ಪ್ರಾಚೀನ ತಿನಿಸಾಗಿ ತೋರುತ್ತದೆ. ವೇದಾಂಗಗಳಲ್ಲೇ 'ಅಪೂಪ' ಎಂಬ ಹೆಸರಿಂದ ಅದು ಕಾಣಿಸಿಕೊಳ್ಳುತ್ತದೆ.) ನಾನು ಹೇಳಿದ ದೇವರಿಗೆ ಅಪ್ಪದ ಮೋಹ ಎಷ್ಟೆಂದರೆ ಅವನು ಅದನ್ನು ಬಳ್ಳಗಟ್ಟಳೆ ಅಲ್ಲ—ಕೊಪ್ಪರಿಗೆ ಗಟ್ಟಳೆಯಲ್ಲಿ ನುಂಗುತ್ತಾನೆ. ಕೊಪ್ಪರಿಗೆ ಅಪ್ಪದ ಹರಕೆ ಹೊತ್ತರೆ ಅವನು ನಿಮ್ಮ ಒಳ್ಳೇ ಅಥವಾ ಕೆಟ್ಟ ಇಷ್ಟಾರ್ಥಗಳನ್ನು ದಯಪಾಲಿಸುತ್ತಾನೆ. ಈ ಸಂದರ್ಭದಲ್ಲಿ ನನ್ನ ತಾಯಿ ಹೇಳಿದ ಒಂದು ಹೃದಯವಿದ್ರಾವಕ ಕಥೆ ನೆನಪಿಗೆ ಬರುತ್ತದೆ. ಅವರ ಸಂಬಂಧಿಕರ ಪೈಕಿ, ಯಾವುದೋ ಸಾಲದ ಸಂಬಂಧದಲ್ಲಿ, ಭಾವನಂಟರಲ್ಲಿ ಜಗಳವಾಗಿ ಭಾವ ಸಾಯಲೆಂದು ಹೇಳಿ ದೇವರಿಗೆ ಕೊಪ್ಪರಿಗೆ ಅಪ್ಪದ ಹರಕೆಯನ್ನು ನಂಟರು ಹೊತ್ತರಂತೆ. ದೇವರು ತಥಾಸ್ತು ಅಂದಿರ ಬೇಕು. ಭಾವ ಸತ್ತರು. ನಂಟರು ಮೊದಲು ದೇವರಿಗೆ ಕೊಪ್ಪರಿಗೆ ಅಪ್ಪದ ಹರಕೆ ತೀರಿಸಿ, ಆಮೇಲೆ ಅಕ್ಕನ ಕ್ಷೇಮಸಮಾಚಾರ ಕೇಳಲು ಹೋದರು.

"ಹಾಡುವ ಸಭೆಯಲಿ ನರಳುವರುಂಟೆ?" ಈ ಬಗೆಯ ವೇದನಾಮಯ ಸಮಾಚಾರಗಳನ್ನು ಹಾಗೆಯೆ ಬಿಟ್ಟು, ನಮ್ಮ ಮೂಲ ಪ್ರಶ್ನೆಗೆ ಮರಳುವಾ. ಭಾರತಕ್ಕೆಲ್ಲ ಪರಿಚಿತನಾದ ಉಡುಪಿಯ ಕೃಷ್ಣ ಭಾರತದಿಂದೆಲ್ಲ ನಾಲಿಗೆಯ ರುಚಿಗಳನ್ನು ಕಲಿತುಕೊಂಡು ಬಂದು ಅವುಗಳಿಗೆ ತನ್ನದೇ ಮೆರುಗು ಕೊಟ್ಟಿದ್ದಾನೆ. ಅವನ ಸನ್ನಿಧಾನದಲ್ಲಿ ಅಡಿಗೆ ಕಲಿತವರನ್ನು ಪಾಕವೈವಿಧ್ಯದಲ್ಲಿ ಭಾರತದಲ್ಲೇಕೆ ಜಗತ್ತಿನಲ್ಲೇ ಯಾರೂ ಮೀರಲಾರಿಯರು. ಸಿಹಿತಿಂಡಿ ಖಾರ ತಿಂಡಿಗಳನ್ನು ಮಾತ್ರವಲ್ಲದೆ ಕಹಿತಿಂಡಿಗಳನ್ನೂ ಅವನು ಮೆಚ್ಚಬಲ್ಲ. ಇವೆಲ್ಲ ಸುಗ್ರಾಸಭೋಜನಗಳ ನವವಿಧ ಪೂಜೆಗಳ ಮಧ್ಯದಲ್ಲಿ ಅವನಿಗೆ ಸುಲಭ. ಸುಹಿತವಾದ ತಿಂಡಿಯೊಂದರ ಆಸೆ ಆಗುತ್ತದಂತೆ. ಅದೆಂದರೆ ಬೆಣ್ಣೆ ದೋಸೆ. ದೋಸೆಯ ಆಸೆಗಾಗಿಯೆ ಅವನಿಗೆ ಒಂದು ವಿಶೇಷ ಪೂಜೆ ಆಗುತ್ತದೆ. ದೇವತೆಗಳ ಅಭಿಲಾಷೆಗಳು ಅವರ ಕೃತ್ಯಗಳ ಹಾಗೇದುರೂಹ್ಯವಾಗಿರುತ್ತವೆ.

ಆದರೆ ಅಭಿರುಚಿಗಳ ವಿಷಯದಲ್ಲಿ ಉಡುಪಿ ಕೃಷ್ಣನೇ ಎಲ್ಲರನ್ನೂ ಗೆಲ್ಲುತ್ತಾನೆಂದು ಹೇಳಿದರೆ ಮಿಥ್ಯಾಭಿಮಾನವಾದೀತು. ವೆಂಕಟರಮಣನನ್ನು ನೆನೆಯಿರಿ (ಸಂಕಟ ಬಾರದಿದ್ದರೂ!). ಶ್ರಾವಣ ಮಾಸದಲ್ಲಿ ಅವನ ಪ್ರೀತಿಗಾಗಿ ಮಾಡುವ ಎಳ್ಳಿನ ಚಿಗಳಿ ತಿಂದು ನೋಡಿದ್ದೀರಾ? ತಿಂದಿರದಿದ್ದರೆ ಮಾಡಿ ತಿಂದು ನೋಡಿ. ಕಷ್ಟವೇನೂ ಇಲ್ಲ. ಎಳ್ಳನ್ನು ಹದವಾಗಿ ಹುರಿದು ಬೆಲ್ಲ,

ತುರಿ ತೆಂಗಿನಕಾಯಿ ಹಾಕಿ, ಸಾಧ್ಯವಿದ್ದರೆ ಸ್ವಲ್ಪ ಯಾಲಕ್ಕಿ ಪುಡಿ ತೋರಿಸಿ ಶ್ರೀನಿವಾಸನನ್ನು ಧ್ಯಾನಿಸಿ ಬಾಯಿಗೆ ಹಾಕಿಕೊಳ್ಳಿ. ವೆಂಕಟೇಶನ ರುಚಿಗೆ ತಲೆದೂಗುವಿರಿ. ಬೇಕಾದರೆ ಚಿಗಳಿಗೆ ಸಂಬಂಧಿಸಿದ ಒಂದು ಕಥೆಯನ್ನೂ ಬಾಡಿಸಿಕೊಳ್ಳಿ :

ಹೀಗೊಬ್ಬ ಅಳಿಯ ಇದ್ದ. ಅತ್ತೇ ಮನೆಗೆ ಹೋಗಿದ್ದ. ಅಂದು ಶ್ರಾವಣ ಶನಿವಾರ. ಚಿಗಳಿ ಮಾಡಿದ್ದರು. ಊಟದ ನಡುವೆ ಬಡಿಸಿದರು. ಅಳಿಯ ರಾಯ ಮಾಮೂಲು ದಾಕ್ಷಿಣ್ಯದಿಂದ ಬೇಡಬೇಡವೆಂದು ಕೈ ಅಡ್ಡ ಹಿಡಿದ. ಅಳಿಯನಿಗೆ ಚಿಗಳಿ ಸೇರುವುದಿಲ್ಲೇನೋ ಅಂದುಕೊಂಡು ಅತ್ತೆ ಅದನ್ನು ಹಾಕಲಿಲ್ಲ. ಆದರೆ ಅಡ್ಡ ಹಿಡಿದ ಹಿಂಗೈ ಮೇಲೆ ತುಸು ಬಿದ್ದಿತ್ತು. ಅಳಿಯ ಅದನ್ನು ನೆಕ್ಕಿದ. ಅದರ ರುಚಿಗೆ ಹುಚ್ಚಾದ. ಕೇಳಿ ಹಾಕಿಸಿಕೊಳ್ಳೋಣ ಎಂದರೆ ಅತ್ತೇ ಮನೆ. ಹಗಲೆಲ್ಲ ಅದರ ಗಮಗಮ ಮತ್ತು ರುಚಿಯೇ ತಲೆ ಯಲ್ಲಿ ಸುತ್ತುತ್ತಿತ್ತು. ರಾತ್ರಿ ಎಲ್ಲರೂ ಮಲಗಿದಮೇಲೆ, ಪೊಲೀಸು ನಾಯಿಯ ಹಾಗೆ ಮೂಗಿನ ಹೊರಳೆ ಅರಳಿಸಿಕೊಂಡು ಬೆಕ್ಕಿನ ಹೆಜ್ಜೆಯಿಂದ ಮನೆಯಲ್ಲೆಲ್ಲ ಸುತ್ತಿದ. ಅಡಿಗೇ ಮನೆಯಲ್ಲಿ ಚಿಗಳಿ ಕುಟ್ಟಿದ ಒರಳಿನಿಂದ ವಾಸನೆ ಇನ್ನೂ ಇಡುಗುತ್ತಿತ್ತು. ಕೈಹಾಕಿದ. ಕೈಗೆ ಸಿಗುವಷ್ಟೇನೂ ಇರಲಿಲ್ಲ. ಆದರೆ ಸುವಾಸನೆಯ ಆಸೆಗೆ ಒರಳೊಳಗೆ ತಲೆ ಹಾಕಿ ನಾಲಿಗೆಯಿಂದ ನೆಕ್ಕತೊಡಗಿದ. ನೆಕ್ಕಿ ಮುಗಿದಮೇಲೆ ಪಾಪ, ತಲೆಯನ್ನು ಹೊರಗೆ ತೆಗೆಯಲಿಕ್ಕೇ ಆಗಲಿಲ್ಲ!

ಚಿಗಳಿಯಂಥ ಸರಳ ತಿಂಡಿಯ ಮೇಲಿಂದಲೇ ವೆಂಕಟೇಶನ ರುಚಿವಿಶೇಷ ಗಳನ್ನು ಅಳೆಯಬೇಡಿ ಮಾತ್ರ. ತಿರುಪತಿಯಲ್ಲಿ ಅವನಿಗೆ ಮಾಡುವ ನೈವೇದ್ಯ ಅವನ ರಾಜಭೋಗದ ಒರೆಗಲ್ಲಾಗಿದೆ. "ಅಪ್ಪವು ಅತಿರಸ ಮೆದ್ದ, ಅವ, ಅಸುರರ ಕಾಲಲಿ ಒದ್ದ" ಅಂತ ಪುರಂದರದಾಸರು ಹೇಳಿದ್ದಾರೆ. ಅಪ್ಪ ಅತಿರಸ ತಿಂದು ಅದರ ಹುಮ್ಮಸ್ಸಿನಿಂದ ಅವನು ಅಸುರನನ್ನು ಒದ್ದನೆಂದಮೇಲೆ ಅವು ಗಳ ಸತ್ವ ಏನನ್ನಬೇಕು! ಆದರೆ ಅವು ಅವನ ಅಭಿರುಚಿಯ ಮೊದಲನೇ ಮಾತೂ ಅಲ್ಲ, ಕೊನೆಯದೂ ಅಲ್ಲ. ಪಚ್ಚಕರ್ಪೂರದ ವಾಸನೆಯಿಂದ ಘಮ ಘಮಿಸುವ ಆ ಪೊಂಗಲ್ಲೋ! ಮತ್ತೆ ಅವೆಲ್ಲವುಗಳಿಗೆ ಕಳಸವಿಡುವ ಹಾಗೆ ಆ ಗೇಣಗಲದ ತೆಳ್ಳನ್ನ ಆ ಮೊಳಗುವಡೆಯೊ! ಕಾಳುಮೆಣಸು ಹಾಕಿ ಮಾಡಿದ ಈ ವಡೆಯ ಸಮಾಚಾರ ತೆಗೆದುಕೊಳ್ಳಬೇಕಾದರೆ ನಿಮಗೆ ಸ್ವಲ್ಪ ದಂತಶಕ್ತಿ

ಬೇಕು. ಒಮ್ಮೆ ಅದನ್ನು ನಿಮ್ಮ ಬಿನಾಕಾ-ದೃಢೀಕೃತ ದಂತಪಂಕ್ತಿಗಳ ನಡುವೆ ನುರಿಸಿ ಚಪ್ಪರಿಸಿದರೆ ಅಂಥ ವಡೆ ಬೇರೊಂದಿಲ್ಲ ಅನ್ನಿಸಿಬಿಡುತ್ತದೆ.

—ಮತ್ತು ತನ್ನ ವಡೆಗಳ ಸಲುವಾಗಿ ನ್ಯಾಯಸ್ಥಾನದ ಕಟ್ಟೆ ಹತ್ತಿದವನೆಂದರೆ ವೆಂಕಟೇಶನೊಬ್ಬನೇ–ದೇವರುಗಳಲ್ಲಿ. ತಿರುಪತಿ ತಿಮ್ಮಪ್ಪನ ವಡೆಯ ಗಾತ್ರವನ್ನು ಕಡಿಮೆ ಮಾಡಿ ಹಣ ಉಳಿಸಬೇಕೆಂದು ಆಂಧ್ರ ಪ್ರದೇಶ ಸರಕಾರದ ಎಂಡೋಮೆಂಟ್ ಇಲಾಖೆಯವರು ಒಂದು ಹುಕುಂ ಹೊರಡಿಸಿದರು. ಅದರ ವಿರುದ್ಧ ವೆಂಕಟೇಶ್ವರ ಆಂಧ್ರ ಹೈಕೋರ್ಟಿಗೆ ಅಪೀಲು ಮಾಡಿದ. ವಡೆಯನ್ನೂ ಸರಕಾರದ ವಾದಗಳನ್ನೂ ತೂಗಿನೋಡಿ ಹೈಕೋರ್ಟು ವಡೆಯ ಗಾತ್ರವನ್ನು ಇದ್ದಕ್ಕಿದ್ದಂತೆ ಇರಿಸುವುದು ವೆಂಕಟೇಶನ ಸಾನ್ನಿಧ್ಯವನ್ನು ಕಾಪಾಡಲು ಅತ್ಯಗತ್ಯವೆಂದು ಡಿಕ್ರಿ ಕೊಟ್ಟಿತು. ಮನುಷ್ಯರ ನ್ಯಾಯಸ್ಥಾನಗಳಲ್ಲಿ ದೇವರಿಗೂ ನ್ಯಾಯ ಸಿಗುತ್ತದೆಂದು ಸಿದ್ಧವಾಯಿತು. (೧೯೭೬)

# ಸಲಹೆಗಳು ಅನ್-ಲಿಮಿಟೆಡ್

ನಿನ್ನೆ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಾಲಯದಿಂದ ಇಳಿದು ಬಸ್-ಸ್ಟ್ಯಾಂಡ್ ಕಡೆ ಹೊರಟಿದ್ದೆ. ಹಿಂದಿನಿಂದ ಒಂದು ದನಿ ಕೇಳಿಸಿತು: "ಸಾಹೇಬರೇ!" ಪಂಚೆ ಕಚ್ಚೆ, ಜುಬ್ಬಾ ಧರಿಸಿರುವ ನನ್ನನ್ನೂ ಸಾಹೇಬರೇ ಎಂದು ಕರೆಯುವವನು ಯಾರಿರಬಹುದೆಂದು ತಿರುಗಿ ನೋಡಿದೆ. ವಿಶ್ವವಿದ್ಯಾಲಯದ ಜವಾನ—ಅಲ್ಲಲ್ಲ ಅಟೆಂಡರ್‌ರಲ್ಲಿ ಒಬ್ಬ. "ಏನಣ್ಣಾ?" ಅಂದೆ. "ಸಾಹೇಬರೇ, ಹವಾಯಿ ಚಪ್ಪಲು ಹಾಕಿಕೊಳ್ಳಬೇಡಿ. ಬಹಳ ಕಾವು. ಕಣ್ಣಿಗೆ ಬಲು ಕೆಟ್ಟ" ಅಂತ ಸಲಹೆ ಕೊಟ್ಟ. "ಸ್ವಲ್ಪ ತುಟ್ಟಿಯಾದರೂ ಅಡ್ಡಿಯಿಲ್ಲ, ಚರ್ಮದ ಚಪ್ಪಲ್ ಕಣ್ಣಿಗೂ ನೆತ್ತಿಗೂ ಒಳ್ಳೇದು" ಅಂತ ಎರಡನೇ ಸಲಹೆ ಕೊಟ್ಟ.

"ಯಾವ ಚರ್ಮ ಒಳ್ಳೇದಣ್ಣಾ?"

"ಯಾವ ಚರ್ಮದ್ದಾದರೂ ಸೈಯೆ. ಎಮ್ಮೇದು, ದನದ್ದು...."

"ಮನುಷ್ಯರದು ಹೇಗೆ ? ತಂಪೋ ಉಷ್ಣವೋ ?" ಎಂದು ಕೇಳಿ ಉತ್ತರಕ್ಕೆ ಕಾಯದೆ ಭರಭರನೆ ಮುಂದೆ ಸಾಗಿದೆ.

ನನ್ನ ಅಸಹನೆಯನ್ನು ನೀವು ಅರ್ಥಮಾಡಿಕೊಳ್ಳಬೇಕು. ಇದು ನಿನ್ನೆ ಬೆಳಗ್ಗಿನಿಂದ ನನಗೆ ದೊರೆತ ಐದನೇ ಪುಕ್ಕಟೆ ಸಲಹೆಯಾಗಿತ್ತು. ಈ ಸಲಹೆಗಳು ನನ್ನ ಇಹಲೋಕದ ಆರೋಗ್ಯದಿಂದ ಹಿಡಿದು ಪರಲೋಕದ ಸುಖದ ವರೆಗೆ ಹರಹುಳ್ಳವಾಗಿದ್ದವು. ಮತ್ತೆ ಅವೆಲ್ಲವೂ ಕೇಳದೆ ಬಂದವುಗಳಾಗಿದ್ದವು.

ಬೆಳಗ್ಗೆ ಯಥಾಪ್ರಕಾರ ಸ್ವಲ್ಪ ತಡವಾಗಿ ಎದ್ದು ಸರಕಾರಿ ಹಾಲಿನ ಕೇಂದ್ರಕ್ಕೆ ಹಾಲು ತರುವುದಕ್ಕೆ ಅವಸರದಿಂದ ಹೊರಟಿದ್ದೆ. ಎದುರಿಗೆ ನನಗೆ ಮುಖಪರಿಚಯ ಮಾತ್ರ ಉಳ್ಳ, ನನ್ನ ಹೆಸರು ಗೊತ್ತಿರುವ ಆದರೆ ಅವರ ಹೆಸರು ನನಗೆ ಗೊತ್ತಿಲ್ಲದ, ಮಹನೀಯರೊಬ್ಬರು ಸಿಕ್ಕಿದರು. ಅವರು ಹಾಕಿಕೊಂಡಿದ್ದ ಮಂಗಟೊಪ್ಪಿಗೆ, ಕೊರಳಿಗೆ ಸುತ್ತಿದ್ದ ಮಫ್ಲರು, ತೊಟ್ಟಿದ್ದ ಉದ್ದ ಕೋಟು ಮೊದಲಾದುವುಗಳಿಂದ ನನಗೆ ಇನ್ನೂ ಕಡಿಮೆ ಮುಖ ಪರಿಚಯದವರಾಗಿ ಕಾಣುತ್ತಿದ್ದರು. ಅವರು ನನ್ನನ್ನು ನಿಲ್ಲಿಸಿ, "ಸ್ವಾಮೀ, ಆಚಾರ್ಯರೇ, ನೀವು ಇಷ್ಟು ಕಮ್ಮಿ ವೇಷದಲ್ಲಿ ಬೆಳಗಿನ ಹೊತ್ತು ಹೊರಗೆ ಬೀಳಬಾರದು" ಅನ್ನುವ ಸಲಹೆ ಕೊಟ್ಟರು. ನಾನು, "ಯಾಕೆ ಸಾರ್, ನಾನು ನಗ್ನಸತ್ಯವನ್ನು ಪ್ರದರ್ಶಿಸುತ್ತ ಇಲ್ಲವಲ್ಲ" ಅಂದೆ. "ಹಾಗಲ್ಲ, ಈ ಹವೆಯಲ್ಲಿ ನೀವು ಕನಿಷ್ಠ ಮೂರು ಅಂಗಿಗಳನ್ನಾದರೂ ತೊಟ್ಟು, ತಲೆಗೆ ಕೊರಳಿಗೆ ಬಿಗಿಯಾಗಿ ವುಲನ್ ಮಫ್ಲರ್ ಸುತ್ತಿ, ಕಾಲಿಗೆ ಕನಿಷ್ಠ ಕ್ಯಾನ್‌ವಾಸ್ ಶೂಸ್ ಹಾಕಿಕೊಂಡು ಹೊರಬೀಳಬೇಕು. ಕೆಟ್ಟ ಚಳಿ ಹವೆ. ನಾನು ನೋಡಿ, ಈ ವುಲನ್ ಓವರ್‌ಕೋಟ್ ಸೇರಿ ಐದು ಅಂಗಿಗಳಿಂದ ಎದೆ ಮುಚ್ಚಿಕೊಂಡಿದ್ದೇನೆ. ನೀವು ಕೃಶಕಾಯದವರು. ಚಳಿಯ ಇಫೆಕ್ಟ್ ನಿಮ್ಮಂಥವರ ಮೇಲೆ ಹೆಚ್ಚು ಆಗುತ್ತೆ" ಅಂದರು.

"ಏನು ಮಾಡಲಿ ಸ್ವಾಮಿ, ಚರ್ಬಿ ಬೆಳೆಸಿಕೊಳ್ಳುಕ್ಕೆ ನಾನು ಸರ್ವ ಪ್ರಯತ್ನ ಮಾಡಿದೆ. ತುಪ್ಪ, ಡಾಲ್ಡಾ, ಸಕ್ಕರೆ, ಜೇನುತುಪ್ಪ...."

"ಹಾಂ, ಅಲ್ಲೇ ತಪ್ಪಿದಿರಿ ನೀವು. ಜೇನುತುಪ್ಪ ಕೊಬ್ಬು ಇಳಿಸುತ್ತೆ, ಏರಿಸೋದಿಲ್ಲ ಅಂತ ಮೊನ್ನೆ ಪೇಪರಿನಲ್ಲಿ ಬಂದಿತ್ತು."

ನಾನು ಅವರನ್ನು ಲಕ್ಷಿಸದೆ, "ಕೊಬ್ಬರಿ ಎಣ್ಣೆ, ಪಿಸ್ತಾ, ಬದಾಮು,

ಖೋವಾ ಎಲ್ಲ ತಿಂದು ನೋಡಿದೆ. ಪ್ರಯೋಜನ ಆಗಲಿಲ್ಲ" ಅಂತ ವಾಕ್ಯ ಮುಗಿಸಿಯೇ ಬಿಟ್ಟೆ.

"ಓ ! ನೀವು ಮೊಟ್ಟೆ ತಿನ್ನಬೇಕಿತ್ತು."

"ಅದೂ ತಿಂದು ನೋಡಿದ್ದೇನೆ. ವನಸ್ಪತಿ ಮೊಟ್ಟೆ, ದೇಶಿ ಕೋಳಿಮೊಟ್ಟೆ, ಲೆಗ್‌ಹಾರ್ನ್ ಮೊಟ್ಟೆ ಮತ್ತು ಕುದುರೇ ಮೊಟ್ಟೆ."

"ಕುದುರೇ ಮೊಟ್ಟೆ ? ಕೇಳಿಯೇ ಇಲ್ಲವಲ್ಲ !" ಎಂದರವರು.

ಅದೀಗ ಕಷ್ಟ. ಪುಕ್ಕಟೆ ಸಲಹೆಗಳನ್ನು ವಿತರಣೆ ಮಾಡುವವರಿಗೆ ತಮಾಷೆ ಅರ್ಥವಾಗುವುದಿಲ್ಲ. ಅವರು ಸೀರಿಯಸ್ ಜನ.

"ಹೌದು, ಓದಿಲ್ಲವೇ ನೀವು ? ಕುದುರೇ ಮೊಟ್ಟೇ ಗುಣಗಳನ್ನು ವಿವರಿಸುವ 'ಕುದುರೇ ಮೊಟ್ಟೆ' ಅನ್ನೋ ಪುಸ್ತಕ ಕಳೆದ ವರ್ಷ ಪ್ರಕಟವಾಗಿದೆ. ನೀವು ಓದಲೇಬೇಕು." ನಾನೂ ಅವರಿಗೆ ಸಲಹೆ ಕೊಟ್ಟೆ.

"ಯಾರು ಪ್ರಕಟಿಸಿದ್ದಾರೆ ?"

"ಮನೋಹರ ಗ್ರಂಥಮಾಲೆಯವರು. ಆದರೆ ಈಗ ಪ್ರತಿಗಳು ಉಳಿದಿದ್ದಾವೋ ಇಲ್ಲವೋ ಗೊತ್ತಿಲ್ಲ."

"ಅವಶ್ಯ ಓದುತ್ತೇನೆ....ಆದರೆ ನೀವು ನಿಮ್ಮ ಮೈಯನ್ನು ಭದ್ರವಾಗಿ ಮುಚ್ಚಿಕೊಳ್ಳಬೇಕು. ನೆಗಡಿ ಆದರೆ ಬಹಳ ಕಷ್ಟ. ನೋಡಿ, ೧೯೩೬ರಲ್ಲಿ ಐದನೇ ಜಾರ್ಜ್ ರಾಜರಿಗೆ ಬರೇ ನೆಗಡಿ ತಾಗಿ, ಅದರಿಂದಲೇ ಕಡೆಗೆ ನಿಧನರಾದರು. ಪಾಪ, ಸುಮಾರು ನಿಮ್ಮದೇ ವಯಸ್ಸು. ತಪ್ಪು ತಿಳಕೊಳ್ಳಬೇಡಿ. It is better to be safe than sorry."

"ನೀವನ್ನೋದು ನಿಜ" ಅಂದೆ ನಾನು. "ನಾನು ಸತ್ತರೆ ಯಾರಿಗೂ ಸಂತೋಷ ಆಗಲಿಕ್ಕಿಲ್ಲ. ಯಾಕಂದರೆ ನಾನು ಆಸ್ತಿ ಮಾಡಿಟ್ಟಿಲ್ಲ. ಎಲ್ಲರೂ sorryನೇ ಆಗಬಹುದು. ಮತ್ತು ಯಾವ ಕೃತಿಯಿಂದಲೂ ಯಾರನ್ನೂ sorry ಮಾಡೋದು ನನಗೆ ಇಷ್ಟ ಇಲ್ಲ."

"ಹೌದೌದು. ಮನುಷ್ಯರಾಗಿ ಹುಟ್ಟಿದ ಮೇಲೆ ಯಾರನ್ನೂ sorry ಮಾಡಬಾರದು" ಎಂದು ಅವರು ಮತ್ತೊಂದು ನಿತ್ಯಸತ್ಯವನ್ನು ಬೋಧಿಸಿದರು.

ಅವರನ್ನು ಹೇಗೋ ಸಾಗಹಾಕಿ ಹಾಲಿನ ಕೇಂದ್ರ ತಲಪುವಾಗ ಹಾಲು ಮುಗಿದು ಹೋಗಿತ್ತು. "ಸಾರಿ, ಆಚಾರ್ರೆ, ನೀವು ತೀರ ತಡವಾಗಿ ಬಂದ್ರಿ.

ಈಗ ಹಾಲು ಕಡಿಮೆ ಬರುತ್ತಾ ಇದೆ. ಮೊದಲು ಬಂದವರಿಗೆ ಮೊದಲು ಕೊಡಬೇಕಾಗುತ್ತೆ ನಾವು" ಎಂದು ಹಾಲಿನ ಕೇಂದ್ರದವನು ಸಹಾನುಭೂತಿ ಪ್ರದರ್ಶಿಸಿದ. ನಾನು ಬೆಳಗಿನ ಕಾಫಿಗೆ ಎರವಾಗಿ ತಲೆನೋವು ತರಿಸಿಕೊಳ್ಳ ಬೇಕಾಯಿತು.

ಸಲಹೆಗಳಷ್ಟು ಪುಕ್ಕಟೆಯಾಗಿ ಸಿಗಬಹುದಾದ ಪದಾರ್ಥ ಬೇರೊಂದಿಲ್ಲ. ಪ್ರತಿಯೊಂದು ಪರಿಸ್ಥಿತಿಗೂ ಒಂದು ಸಲಹೆ ಕೊಡುವವರಿದ್ದಾರೆ. ಕಳೆದ ವರ್ಷ ಬೀಚಿಯವರು ಗಂಭೀರವಾಗಿ (!) ಅಸ್ವಸ್ಥರಾದರು. ಅವರಿಗೆ ಅತಿಯಾಗಿ ಸ್ನೇಹಿತರಿದ್ದಾರೆ, ಅದಕ್ಕಿಂತಲೂ ಮಿತಿಮೀರುವಷ್ಟು ಹಿತೈಷಿಗಳಿದ್ದಾರೆ. ಪ್ರತಿಯೊಬ್ಬರೂ ಬಂದರು, ನೋಡಿದರು, ಸಲಹೆ ಕೊಟ್ಟರು. ಬೀಚಿಯವರು ಎಂದೋ ಕಳಚಿಬಿಟ್ಟಿದ್ದ ಜನಿವಾರವನ್ನು ಪುನಃ ಹಾಕಿಕೊಳ್ಳಬೇಕೆಂದು ಕೂಡ ಸಲಹೆ ಬಂತು. ಬದುಕಬೇಕೆಂಬ ಹಟದಿಂದಲ್ಲದಿದ್ದರೂ ಇಷ್ಟೆಲ್ಲ ಹಿತೈಷಿಗಳಿಂದ ಪಾರಾಗಬೇಕೆಂದು (ಓಡಿಹೋಗಲಾರದಷ್ಟು ದುರ್ಬಲರಾಗಿದ್ದರು, ಪಾಪ !) ಅವರು ಎಲ್ಲಾ ಸಲಹೆಗಳನ್ನು ಸ್ವೀಕರಿಸಿ ತಮ್ಮ ಮೇಲೆ ಜಾರಿ ಮಾಡಿ ಕೊಂಡರು. ಆದರೂ ಬದುಕಿಕೊಂಡರು. ಆಯುಷ್ಯರೇಖೆ ಬಲವಾಗಿತ್ತು, ಆದ್ದರಿಂದ.

ಬೀಚಿಯವರಿಗಿರುವಷ್ಟು ಸ್ನೇಹಿತರಾಗಲಿ ಹಿತೈಷಿಗಳಾಗಲಿ ನನಗಿಲ್ಲ. ಆದರೂ ಆರೋಗ್ಯ ವಿಷಯವಾಗಿ ನನಗೆ ಬಂದ ಪುಕ್ಕಟೆ ಸಲಹೆಗಳು ಎನ್‌ಸೈಕ್ಲೋಪೀಡಿಯ ಬ್ರಿಟಾನಿಕದ ೨೪ ಸಂಪುಟಗಳನ್ನು ತುಂಬುವಷ್ಟಾಗ ಬಹುದು. ಕಾಫಿ ಬಿಟ್ಟು ಚಹ ಪ್ರಾರಂಭಿಸಿರಿ, ನಿಮ್ಮ ಅಸ್ತ್ಮಾ ವಾಸಿಯಾಗು ತ್ತದೆ; ಬೆಳಗಿನ ಜಾವ ಎದ್ದು ದಿನಾ ಒಂದು ತಂಬಿಗೆ ತಣ್ಣೀರು ಕುಡಿಯಿರಿ; ಬಿಸಿನೀರು ಕುಡಿಯಿರಿ. ಆದರೆ ತಣ್ಣೀರು ಸ್ನಾನ ಮಾಡಿರಿ; ಬಿಸಿನೀರಿನ ಮೇಲೆ ತಣ್ಣೀರು ಸ್ನಾನ ಮಾಡಿರಿ; ದಿನಾ ರಾತ್ರಿ ಒಂದು ಪೆಗ್ ಬ್ರಾಂದಿ ಹಾಕಿರಿ, ಬೆಳಗ್ಗೆ ಎದ್ದು ಎಂಟು ನೆನೆಗಡಲೆ ತಿನ್ನಿರಿ; ಚಾರ್‌ಮಿನಾರ್ ಸಿಗರೇಟು ಸೇದಿರಿ; ಗಣೇಶ ಬೀಡಿ ಎಳೆಯಿರಿ; ಮೂಗನ್ನು ತಣ್ಣೀರಲ್ಲಿ ಮುಳುಗಿಸಿ ಎಡಮೂಗಿನಿಂದ ನೀರೆಳೆದುಕೊಂಡು ಬಲಮೂಗಿನಿಂದ ಹೊರಗೆ ಬಿಡಿರಿ; ಉಪ್ಪು ಮುಟ್ಟಬೇಡಿರಿ; ಹುಣಸೇಹಣ್ಣನ್ನು ತಿನ್ನಬೇಡಿರಿ, ಆದರೆ ಅದರ ಬೀಜವನ್ನು ಲಿಂಬೇ ಹಣ್ಣಿನ ರಸದಲ್ಲಿ ಹತ್ತೊಂಬತ್ತು ಸುತ್ತು ತೇದು

ದಿನಾ ಮೂರು ಸಲ ತೆಗೆದುಕೊಳ್ಳಿ; ಹಸಿಮೀನು ನುಂಗಿರಿ....ಇವು ನನ್ನ ಅಸ್ವಾಸ್ಥ್ಯಕ್ಕೆ ಬಂದ ಸಲಹೆಗಳಲ್ಲಿ ಕೆಲವು ಮಾತ್ರ. ಈ ಪುಕ್ಕಟೆ ಸಲಹೆಗಳನ್ನೆಲ್ಲ ನಾನು ಅಸಡ್ಡೆ ಮಾಡಿಬಿಟ್ಟಿದ್ದೇನೆಂದಲ್ಲ. ಒಂದು ಸಲ ಒಬ್ಬರು ದಿನಾ ಬೆಳಗ್ಗೆ ಬರೇ ಹೊಟ್ಟೆಗೆ ಒಂದು ಟೇಬಲ್ ಚಮಚದಷ್ಟು ಜೇನುತುಪ್ಪವನ್ನು ಲಿಂಬೇ ರಸದೊಡನೆ ತೆಗೆದುಕೋ ಎಂದು ಸಲಹೆ ಕೊಟ್ಟರು. ನಾನು ಅದನ್ನು ಅಕ್ಷರಶಃ ಪಾಲಿಸಿದೆ. ನಾಲ್ಕನೇ ದಿನ ನನಗೆ ಅಸಾಧ್ಯ ಎದೆಶೂಲೆ ಆಯಿತು. ಡಾಕ್ಟರರು ಪರೀಕ್ಷಿಸಿ ಕೆಳಗಿನ ತುಟಿ ಮುಂದೆ ಮಾಡಿ ತಲೆ ಆಡಿಸುತ್ತ, "ಪ್ಲೂರಸಿ ಆಗಿದೆ" ಅಂದರು. ನನ್ನನ್ನು ನೋಡಬಂದ, ನನ್ನ ಆ ಸ್ನೇಹಿತರಿಗೆ ಹೇಳಿದೆ. ಅವರು ಕಂಗೆಡಲಿಲ್ಲ. "ಪ್ಲೂರಸಿ ಆದ ಅನೇಕರಿಗೆ ಅಸ್ವಾಸ್ಥ್ಯ ಬಿಟ್ಟು ಹೋಗುತ್ತೇಂತ ಕೇಳಿದ್ದೇನೆ" ಅಂದರು. ನಾನು, "ಪ್ಲೂರಸಿಯಿಂದ ಬದುಕಿದರೆ ತಾನೆ" ಅಂದೆ. "ಸತ್ತರೆ ಹೇಗೂ ಬಿಟ್ಟೇ ಹೋಗುತ್ತಲ್ಲ" ಎಂದು ಅವರು ದೊಡ್ಡದಾಗಿ ನಕ್ಕರು. ನನಗೂ ನಗು ಬಂದು ಎದೆನೋವು ವಿಪರೀತ ಆಯಿತು. ಆದರೆ ನಾ ಕಂಡ ಪುಕ್ಕಟೆ ಸಲಹೆಗಾರರಲ್ಲಿ ತಮಾಷೆ ಮನೋವೃತ್ತಿ ಇದ್ದವರು ಅವರೊಬ್ಬರೇ ಎಂದು ನಾನು ಒಪ್ಪಬೇಕಾಗಿದೆ.

ನಿನ್ನೆಯೆ ನನಗೆ ಎದುರಾದ ಒಬ್ಬರು, "ಆಚಾರ್ರೆ, ನೀವೀಗ ರಿಟೈರ್ ಆಗಿದ್ದೀರಂತಲ್ಲ, ನೀವು ಖಂಡಿತ ಅಧ್ಯಾತ್ಮಶಾಸ್ತ್ರ ಅಭ್ಯಾಸ ಮಾಡಬೇಕು. ಸ್ವಾಮೀ ಉತ್ಕಟಾನಂದರು ಆಧ್ಯಾತ್ಮಿಕ ಕ್ಲಾಸುಗಳನ್ನು ಈ ಊರಲ್ಲಿ ಪ್ರಾರಂಭಿಸಿದ್ದಾರೆ" ಅಂತ ಸಲಹೆ ಕೊಟ್ಟರು.

"ರಿಟೈರ್ ಆದರೆ ಅಧ್ಯಾತ್ಮ ಯಾಕೆ ಅಭ್ಯಾಸ ಮಾಡಬೇಕು ನಾನು?"

"ಸಾಯುವ ಮುಂಚೆ ಆತ್ಮದ ವಿಷಯ ತಿಳಿದುಕೊಳ್ಳಬೇಡವೆ? ಆತ್ಮಕ್ಕೆ ಬಂದ ಅಸ್ವಸ್ಥದಿಂದ ಮುಕ್ತರಾಗಬೇಡವೇ?"

"ನನ್ನ ಆತ್ಮಕ್ಕೆ ಏನೂ ಅಸ್ವಸ್ಥವಾಗಿಲ್ಲ. ಆಗಿರುವುದು ನನ್ನ ದೇಹಕ್ಕೆ" ಎಂದೆ ನಾನು.

"ಆತ್ಮಕ್ಕೆ ಅಸ್ವಸ್ಥವಾಗಿಲ್ಲ ಅಂತ ನೀವು ಹೇಗೆ ಹೇಳುತ್ತೀರಿ?"

"ಕೆಟ್ಟ ಕೆಲಸ ಮಾಡುವಾಗ ಮಾಡಬೇಡ ಅಂತ ಇನ್ನೂ ನನ್ನ ಆತ್ಮ ಹೇಳುತ್ತೆ."

"ಓ! ಈ ಒಳ್ಳೇದು ಕೆಟ್ಟದ್ದು ಎಲ್ಲ ಪ್ರಾಪಂಚಿಕ. ಆತ್ಮಜ್ಞಾನ ಆದರೆ

ಈ ದ್ವಂದ್ವಗಳೆಲ್ಲ ಅಳಿದುಹೋಗಿ ನಮ್ಮ ಚೇತನ ನಿರ್ವಾತ ಪ್ರದೇಶದಲ್ಲಿಟ್ಟ ದೀಪದ ಹಾಗೆ ನಿಶ್ಚಲವಾಗಿ ಉರಿಯುತ್ತೆ."

"ನೀವು ಹೈಸ್ಕೂಲಲ್ಲಿ ಕಲಿತ ಪದಾರ್ಥವಿಜ್ಞಾನಶಾಸ್ತ್ರ ಮರೆತ ಹಾಗೆ ತೋರುತ್ತಲ್ಲ. ನಿರ್ವಾತ ಪ್ರದೇಶದಲ್ಲಿ ದೀಪ ನಂದಿಹೋಗುತ್ತೆ ಅಂತ ಮೇಷ್ಟ್ರು ಹೇಳಿಕೊಟ್ಟಿಲ್ಲವೆ? ಒಳ್ಳೇದು-ಕೆಟ್ಟದ್ದರಿಂದ ವಿಚಲಿತವಾಗದ ಆತ್ಮವನ್ನು ನಾನು ಮೆಚ್ಚುವುದಿಲ್ಲ. ಕ್ಷಮಿಸಿ" ಎಂದು ನಾನು ಹೊರಟೆ.

"ನಿಲ್ಲಿ ಆಚಾರ್ರೆ ಸ್ವಲ್ಪ. ನಾನು ಯಾರು, ಇಲ್ಲಿ ಯಾಕೆ ಬಂದೆ, ಎಲ್ಲಿಗೆ ಹೋಗುತ್ತಿದ್ದೇನೆ ಅಂತ ತಿಳಿದುಕೊಳ್ಳಬೇಕಂತ ನಿಮಗೆ ಅನಿಸುವುದಿಲ್ಲವೆ?"

"ನಾನು ಲಾಂಗೂಲಾಚಾರ್ಯ ಅನ್ನೋದು ನನಗೆ ಚೆನ್ನಾಗಿ ಗೊತ್ತಿದೆ. ನನಗೇನೂ ಅಮ್ನೇಶಿಯ ಆಗಿಲ್ಲ. ಇಲ್ಲಿ ಯಾಕೆ ಬಂದೆ ಅಂದರೆ ನಮ್ಮನೆಯಿಂದ ಪೋಸ್ಟಾಫೀಸಿಗೆ ಹೋಗಬೇಕಾದರೆ ಈ ದಾರಿಯೆ ಅತಿ ಸಮೀಪ; ಎಲ್ಲಿಗೆ ಹೋಗುತ್ತಿದ್ದೇನೆ ಅಂದರೆ ಪೋಸ್ಟಾಫೀಸಿಗೆ; ಯಾಕೆ ಅಂದರೆ ಸ್ಟಾಂಪ್ ತೆಗೆದುಕೊಳ್ಳೋದಿಕ್ಕೆ...."

"ಆದರೆ ಸತ್ತಮೇಲೆ...."

"ಸತ್ತಮೇಲೆ ನಾನು ಪುಕ್ಕಟೆ ಸಲಹೆಗಾರರು ಇಲ್ಲದಿದ್ದ ಲೋಕಕ್ಕೆ ಹೋಗುತ್ತೇನೆ."

ಈ ಇಸಮು ಖಂಡಿತವಾಗಿ ಭ್ರಮಿಷ್ಠ ಎಂದುಕೊಂಡು ಅವರು ನನ್ನ ಉಸಾಬರಿ ಬಿಟ್ಟು ಮುಂದೆ ಹೋದರು.

ಆದರೆ ಸಲಹೆಗಳು ಯಾವಾಗಲೂ ವ್ಯಕ್ತಿಗಳಿಂದಲೇ ಬರುತ್ತವೆ ಅಂತ ತಿಳಿದುಕೊಳ್ಳಬೇಡಿ. ನಿನ್ನೆಯೇ ನಾನು ಒಂದು ಒಳ ರಸ್ತೆಯಲ್ಲಿ ಹೊರಟಿದ್ದಾಗ ಒಂದು ಸೈನ್ ಬೋರ್ಡು ನನ್ನನ್ನು ಕೂಗಿ ಕರೆಯಿತು.

"ಸಲಹೆ ಪುಕ್ಕಟೆ!"

ಅದರ ಕೆಳಗೆ ಸಣ್ಣಾಕ್ಷರಗಳಲ್ಲಿ—

"ಕನ್ನಡಕಕ್ಕೆ ಮಾತ್ರ ಬೆಲೆ."

ನಾನು ನಿಂತೆ. ಕಳೆದ ಸಲ ಕನ್ನಡಕ ಬದಲಾಯಿಸಬೇಕಾದಾಗ ಸಲಹೆಗಾಗಿ ಡಾಕ್ಟರರಿಗೆ ಹದಿನೈದು ರೂಪಾಯಿ ತೆತ್ತಿದ್ದೆ. ಈಗ ಮತ್ತೆ ಎದುರಲ್ಲಿ ಬರುವವರ ಹಿಂದೆ ಇನ್ನೊಂದು ವ್ಯಕ್ತಿಯ ಛಾಯೆ ಕಾಣಿಸತೊಡಗಿದೆ. ಪುಕ್ಕಟೆ

ಸಲಹೆ ಸಿಗುವುದಾದರೆ ಯಾಕೆ ಅದರ ಉಪಯೋಗ ತೆಗೆದುಕೊಳ್ಳಬಾರದು?

ನಾನು ಒಳಗೆ ಹೊಕ್ಕೆ. ನನ್ನ ಕಣ್ಣುಗಳನ್ನು ಅವರು ಹದಿನೈದು ನಿಮಿಷ ಪರೀಕ್ಷಿಸಿದರು. ಕಣ್ಣುಗಳನ್ನೇನೂ ಬದಲಾಯಿಸಬೇಕಿಲ್ಲ. ಕನ್ನಡಕ ಮಾತ್ರ ಬದಲು ಮಾಡಿದರೆ ಸಾಕು, ಎಂದು ಸಲಹೆ ಕೊಟ್ಟರು. ಪುಕ್ಕಟೆ ಸಲಹೆ ಸಿಕ್ಕಿದ ಉತ್ಸಾಹದಲ್ಲಿ ನಾನು ಕನ್ನಡಕಕ್ಕೆ ಆರ್ಡರು ಕೊಟ್ಟೆ. ಬಿಲ್ ಬಂತು. ಅರುವತ್ತು ರೂಪಾಯಿ. ಸಲಹೆಗೆ ಹದಿನೈದು ಕೊಟ್ಟು ಕನ್ನಡಕ ಬೇರೆ ತೆಗೆದುಕೊಂಡಿದ್ದರೆ ಐವತ್ತಕ್ಕೇ ಮುಗಿಯುತ್ತಿತ್ತು.

ಸಲಹೆ ಕೊಡುವುದರಲ್ಲಿ ನಿಮ್ಮ ಸ್ನೇಹಿತರು, ಹಿತೈಷಿಗಳು, ಅಹಿತೈಷಿಗಳೆಲ್ಲ ರನ್ನು ಮೀರಿಸುವವರು ವರ್ತಮಾನಪತ್ರಿಕೆಗಳವರು. ಅವರಷ್ಟು ವಿಷಯಗಳ ಮೇಲೆ ಅವರಷ್ಟು ಕ್ಲುಪ್ತವಾಗಿ ಸಲಹೆ ಕೊಡುವವರು ಬೇರೆ ಯಾರೂ ಸಿಗ ಲಾರರು. ಐನೂರು ಪ್ರಸಾರವುಳ್ಳ ಪತ್ರಿಕೆಯೊಂದು ಅಧ್ಯಕ್ಷ ಕಾರ್ಟರರಿಗೆ ಅವರ ವಿದೇಶನೀತಿ ಹೇಗಿರಬೇಕೆಂದು ಸಲಹೆ ಕೊಡುತ್ತದೆ. ರೊಡೇಶಿಯದ ಕಪ್ಪು-ಬಿಳಿ ಸಮಸ್ಯೆಯನ್ನು ಬಿಡಿಸುವುದಕ್ಕೆ ಇಬ್ಬರೂ ಕಂದು ಬಣ್ಣದ ಉಪಾಯವನ್ನು ಅನುಸರಿಸಿದರೆ ಜಗತ್ತಿಗೇ ಮಾದರಿ ಹಾಕಿಕೊಟ್ಟಂತಾಗು ವುದು ಎಂಬುದು ಇನ್ನೊಂದು ಪತ್ರಿಕೆ ಇಯಾನ್ ಸ್ಮಿತ್ತರಿಗೆ ಸಲಹೆ ಕೊಡು ತ್ತದೆ. ಬಂದೂಕಿನ ಯಾವ ತುದಿಯಲ್ಲಿ ಗುಂಡು ಹಾರುತ್ತದೆಂದು ಗೊತ್ತಿಲ್ಲದ ಸಂಪಾದಕೀಯ ಲೇಖಕ ರಶಿಯದ ಸಂರಕ್ಷಣ ಶಾಖೆಗೆ ಸಲಹೆ ಕೊಡುತ್ತಾನೆ. ಕತ್ತೆಗಳಿಗೆ ಹೇಗೆ ಒದೆಯಬೇಕೆಂದೂ ನಾಯಿಗಳಿಗೆ ಹೇಗೆ ಬಗುಳಬೇಕೆಂದೂ ಕುದುರೆಗಳಿಗೆ ಹೇಗೆ ಓಡಬೇಕೆಂದೂ ಪತ್ರಿಕೆಗಳು ಸಲಹೆ ಕೊಡಬಹುದು. ಮತ್ತೆ ಇವೆಲ್ಲ ಕೇವಲ ಉಪಕಾರ ಬುದ್ಧಿಯಿಂದ ಪುಕ್ಕಟೆಯಾಗಿ ಕೊಡುವ ಸಲಹೆಗಳು.

ನನ್ನ ಪ್ರಾಣಿಶಾಸ್ತ್ರಜ್ಞ ಮಿತ್ರನೊಬ್ಬನ ಹತ್ತಿರ ಒಂದು ಥಿಯರಿ ಇದೆ. ಹಿಂದೆ, ಬಹಳ ಹಿಂದೆ, ಕಾಗೆಗಳೂ ಕೋಗಿಲೆಗಳೂ ಒಂದೇ ಜಾತಿಯಾಗಿ ದ್ದವು. ಅವೆಲ್ಲವೂ ಮಾಮರಗಳಲ್ಲಿ ಅಡಗಿಕೊಂಡು ಪಂಚಮ ಸ್ವರದಲ್ಲಿ ಹಾಡುತ್ತಿದ್ದವು. ಆಮೇಲೊಂದು ದಿನ ಪರೋಪಕಾರಿಯೊಬ್ಬ ಅವುಗಳಿಗೆ, ಅವುಗಳ ಸಂಗೀತವನ್ನು ಹೆಚ್ಚು ಶ್ರಾವ್ಯವಾಗಿ ಹೇಗೆ ಮಾಡಲು ಸಾಧ್ಯವಿದೆ ಎಂಬುದಕ್ಕೆ ಸಲಹೆಗಳನ್ನು ಕೊಟ್ಟ. ಸಲಹೆಗಳನ್ನು ದುರ್ಲಕ್ಷ್ಯ ಮಾಡಿದ

ಕೋಗಿಲೆಗಳು ಕೋಗಿಲೆಗಳಾಗಿಯೇ ಉಳಿದುವು. ಸಲಹೆ ತೆಗೆದುಕೊಂಡವು ಗಳು ಕಾಗೆಗಳಾದವು. (೧೯೭೭)

# ನಗ್ನಾಪರಾಧ

ಬತ್ತಲೆಯಾಗಿ ಸಮುದ್ರತೀರದಲ್ಲಿ ತಿರುಗುವುದು ಅಪರಾಧವೆ? ಇಟಲಿಯ ನ್ಯಾಯಾಲಯದ ಮುಂದೆ ಬಂದ ಪ್ರಶ್ನೆ ಇದು. ಪೂರ್ವ ಜರ್ಮನಿಯಿಂದ ಬಂದ ಇಬ್ಬರು ಮಹಿಳಾ ಟೂರಿಸ್ಟರು ಸಮುದ್ರದಲ್ಲಿ ಮಿಂದು ಅಡ್ರಿಯಾಟಿಕ್ ಕರಾವಳಿಯಲ್ಲಿ ಸರ್ವಾಂಗಗಳನ್ನು ಬಿಸಿಲಿಗೊಡ್ಡಿ ಸೂರ್ಯಸ್ನಾನ ಮಾಡುತ್ತ ಮರಳ ಮೇಲೆ ಮಲಗಿದ್ದರಂತೆ. ಎಲ್ಲ ದೇಶಗಳ ಪೋಲೀಸರ ಹಾಗೆ ಇಟಲಿಯ ಪೋಲೀಸರಿಗೂ ಸೌಂದರ್ಯಪ್ರಜ್ಞೆಯಾಗಲಿ ವಿನೋದಪ್ರಜ್ಞೆಯಾಗಲಿ ಇಲ್ಲ. ಅವರು ಈ ಇಬ್ಬರ ಮೇಲೆ ಅಶ್ಲೀಲ ಆಚಾರಕ್ಕಾಗಿ ನ್ಯಾಯಾಲಯ ದಲ್ಲಿ ದೂರು ದಾಖಲು ಮಾಡಿದರು. ನ್ಯಾಯಾಧೀಶರು ತೀರ್ಪು ಹೇಳುವ ಮುಂಚೆ ಈ ತರುಣಿಯರಿಂದ, ಅವರು ಆರೋಪಕ್ಕೆ ಕಾರಣವಾದ ಘಟನೆಯ ಕಾಲದಲ್ಲಿ ಯಾವ ರೀತಿ ಇದ್ದರೆಂಬುದರ ಪ್ರಾತ್ಯಕ್ಷಿಕೆಯನ್ನು ಕೇಳಿದರೋ ಇಲ್ಲವೋ ನಾನರಿಯೆ. ಕೇಳಿದ್ದರೆ ತಪ್ಪಾಗುತ್ತಿರಲಿಲ್ಲವೆಂದೇ ನನ್ನೆಣಿಕೆ. ಅವರು ಹುಟ್ಟಿದ ರೂಪದಲ್ಲಿದ್ದಾಗ ಹೇಗೆ ಕಾಣುತ್ತಿದ್ದರೆಂಬುದರಮೇಲೆಯೇ ಶೀಲ-ಅಶ್ಲೀಲದ ನಿರ್ಣಯವಾಗುವುದು ನ್ಯಾಯ. ನನ್ನ ಅಭಿಪ್ರಾಯದಲ್ಲಿ ಅಸಹ್ಯವೇ ಅಶ್ಲೀಲ. ಆರೋಪಿಗಳು ತಮ್ಮ ರೂಪರಾಶಿಯನ್ನು ತೆರೆದಿಟ್ಟದ್ದರಿಂದ ಅಡ್ರಿ-ಯಾಟಿಕ್ ಕರಾವಳಿಯ ಸೌಂದರ್ಯ ಹೆಚ್ಚಿತೇ ಅಥವಾ ಕುಂದಿತೇ....? ಕೊನೆಗೆ ನ್ಯಾಯಾಧೀಶರು ಜನಸಂದಣಿ ಇಲ್ಲದಿರುವಾಗ ಬತ್ತಲೆಯಲ್ಲಿ ಸಾರ್ವ ಜನಿಕ ಸ್ಥಳಗಳಲ್ಲಿ ತಿರುಗುವುದು ಮಲಗುವುದು ಅಪರಾಧವಲ್ಲ—ಎಂಬುದಾಗಿ ತೀರ್ಪು ಕೊಟ್ಟರು. ನಾನು ಅವರೊಡನೆ ಸಹಮತನಾಗಿದ್ದೇನೆ. ಜನಸಂದಣಿ ಇಲ್ಲದಾಗ—ಎಂಬ ಶರ್ತನ್ನು ನ್ಯಾಯಾಧೀಶರು ಹಾಕಿದ್ದು ಅತ್ಯಂತ ನ್ಯಾಯವೇ ಆಗಿದೆ. ಜನಸಂದಣಿ ಇದ್ದಾಗ ನಗ್ನ ತರುಣಿಯರು ಹೆಚ್ಚು ಅಶ್ಲೀಲರಾಗುತ್ತಾರೆಂದು ಇದರ ಅರ್ಥವಲ್ಲ. ಆದರೆ ದರ್ಶನಾಪೇಕ್ಷಿಗಳ ನೂಕು

ನುಗ್ಗಲಿನಲ್ಲಿ ಸಾರ್ವಜನಿಕ ಶಾಂತಿ ಭಂಗವಾಗಬಹುದೆಂಬ ಭಯ ಈ ಶರ್ತಿಗೆ ಕಾರಣವಾಗಿರಬೇಕು.

ದೇವರು ಮನುಷ್ಯರನ್ನೆಲ್ಲ ಬತ್ತಲೆಯಾಗಿಯೆ ಉಂಟುಮಾಡಿದ. ದೇವರು ಬತ್ತಲೆ ಮಾಡಿದ್ದನ್ನು ಮನುಷ್ಯ ಮುಚ್ಚಿಡಲು ಸಾಹಸ ಮಾಡಿದ್ದಾನೆ. ಬತ್ತಲೆತನ ಪಾಪ ಎಂದು ಇಂದು ಹೇಗೋ ಜನರ ತಲೆಯಲ್ಲಿ ಹೊಕ್ಕು ಕುಳಿತಿದೆ. ಆದರೆ, ಬತ್ತಲೆಯಲ್ಲ, ಮುಚ್ಚಾಲೆಯೇ ಮೂಲತಃ ಪಾಪಕ್ಕೆ ಸಂಬಂಧಿಸಿದೆ ಎಂದು ಹೇಳಿದರೆ ಮೂಗುಮುರಿಯಬೇಡಿ. ದೇವರು ಪ್ರಥಮ ಮಾನವ ಮಾನವಿಯರಾದ ಆದಮ-ಹವ್ವಾರನ್ನು ಬತ್ತಲೆಯಾಗಿಯೇ ಸೃಷ್ಟಿಸಿ ನಂದನವನದಲ್ಲಿ “ಬೇಕಾದ ಹಾಗೆ ಇರಿ. ಆದರೆ ಆ ಒಂದು ಮರದ ಹಣ್ಣನ್ನು ಕುಯ್ಯಬೇಡಿ” ಎಂದು ಆಜ್ಞಾಪಿಸಿದ. ನಮ್ಮ ಮೂಲಪುರುಷ ಪುರುಷೆಯರು ಅದೇ ಅವಸ್ಥೆಯಲ್ಲಿ ಎಷ್ಟು ಕಾಲ—ಎಷ್ಟು ಯುಗ ಇದ್ದರೋ ನಾನರಿಯೆ. ಒಂದು ದಿನ ಸೈತಾನ ಬಂದು ಅವರಿಗೆ ಆ ನಿಷಿದ್ಧ ವೃಕ್ಷದ ಹಣ್ಣು ತಿನ್ನಲು ಪ್ರಚೋದನೆ ಕೊಟ್ಟ. ಅವರು ಅದನ್ನು ತಿಂದ ಕೂಡಲೇ ಅವರಿಗೆ ತಾವು ಬತ್ತಲೆಯಾಗಿದ್ದೇವೆ ಎಂಬ ಅರಿವು ಬಂದು ನಾಚಿಕೆಯಾದದ್ದು. ದೇವರ ಅಪ್ಪಣೆಯನ್ನು ಉಲ್ಲಂಘಿಸುವ ಪಾಪಕೃತ್ಯಕ್ಕೂ ಬತ್ತಲೆತನದ ಅರಿವಿಗೂ ಹೀಗೆ ಕಾರ್ಯಕಾರಣಸಂಬಂಧವಿದೆ. ಅವರಿಗೆ ಈ ಬತ್ತಲೆತನದ ಅರಿವು ಮಾಡಿಕೊಟ್ಟ ಪಾಪಪುರುಷ ಸೈತಾನನು ಹಾವಾಗಿದ್ದನೆಂದು ಹೇಳಲಾಗಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ಅವನು ದರ್ಜಿಯೋ ಜವಳಿ ಗಿರಣಿ ಮಾಲಿಕನೋ ಆಗಿರಬೇಕು. ನಮ್ಮ ಮೈ ಮುಚ್ಚಿಕೊಳ್ಳುವ ಹವ್ಯಾಸದಿಂದ ಲಾಭ ಹೊಂದುವವರು ಅವರೇ. ಬತ್ತಲೆ ಪಾಪವಲ್ಲ—ನಿಜವಾಗಿ ಮುಚ್ಚಾಲೆ ಪಾಪ. ಆಧಾರ: ಬೈಬಲ್.

ಸುದೈವದಿಂದ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಬತ್ತಲೆಗೂ ಪಾಪಕ್ಕೂ ಏನೂ ಸಂಬಂಧವಿಲ್ಲ. ನಮ್ಮ ಆದಿಮಾತೆ ಕಾಳೀದೇವಿ ಯಾವ ಹಂಗು ಹೆದರಿಕೆಯಿಲ್ಲದೆ ಬತ್ತಲೆಯಾಗಿರುತ್ತಾಳೆ. ನಮ್ಮ ಶಿವನೂ ನೆತ್ತರು ಜಿನುಗುವ ಆನೆಯ ಚರ್ಮಕ್ಕೆ ಬೇಸತ್ತಾಗ ಅದನ್ನೆಲ್ಲ ತೆಗೆದಿಕ್ಕಿ ದಿಗಂಬರನಾಗಿ ತಿರುಗುತ್ತಾನೆ. ಅವನನ್ನು ಆಶ್ರಯಿಸುವ ನಾಗಾ ಸಾಧುಗಳು ಇಂದಿಗೂ ಬಟ್ಟೆಯ ಹಂಗಿನಲ್ಲಿ ಇಲ್ಲ. ಜೈನಪರಂಪರೆಯಲ್ಲಿ ಇಹಲೋಕದ ಬಂಧನದ ಚಿಹ್ನೆಗಳಲ್ಲಿ ಬಟ್ಟೆಯೂ

ಒಂದು. ದಿಗಂಬರ ಪಂಥ ಅವರಲ್ಲಿಯೂ ಇದೆ. ಸರ್ವಸಂಗಪರಿತ್ಯಾಗ ಅಂದರೆ ಇದೇ. ಅಕ್ಕಮಹಾದೇವಿಯರ ಕಥೆ ಯಾರಿಗೆ ಗೊತ್ತಿಲ್ಲ? ಅವರನ್ನು ಕಂಡು ಪಾಪಬುದ್ಧಿ ಯಾರಿಗಾದರೂ ಮೂಡಿರುವುದು ಸಾಧ್ಯವೇ? ಬತ್ತಲೆಗೂ ಪಾಪಕ್ಕೂ ಏನಾದರೂ ಸಂಬಂಧ ಹೇಳುವವರು ಶ್ರವಣಬೆಳಗೊಳದ ಕಲ್ಲು ಬಂಡೆಯೇರಿ ಗೊಮ್ಮಟೇಶ್ವರನನ್ನು ನೋಡಲಿ. ಆ ಉದ್ದಾಮ ಪರಿತ್ಯಾಗದ ಮುಂದೆ ಪಾಪ ತಲೆಬಾಗಿ ನಿಲ್ಲುತ್ತದೆ.

ಬತ್ತಲೆತನದ ಕೆಲ ಚರಿತ್ರಾಂಶಗಳು ಸ್ವಾರಸ್ಯವಾಗಿವೆ. ನಮ್ಮ ಪ್ರಾಚೀನ ಮೊಹೆಂಜೊದಾರೋ ಸಂಸ್ಕೃತಿಯಲ್ಲಿ ಕ್ರೀತ ದಾಸದಾಸಿಯರಿಗೆ ಬಟ್ಟೆ ಉಡಲು ಅನುಮತಿಯಿದ್ದಿಲ್ಲವೆಂದು ಸಂಶೋಧಕರು ಅನುಮಾನಪಟ್ಟಿದ್ದಾರೆ. ಅದರ ತರ್ಕ ಹೀಗಿತ್ತು : ಬಟ್ಟೆ ಹಾಕಿಕೊಂಡರೆ ಅವರು ದಾಸ ಅಥವಾ ದಾಸಿಯೆಂದು ಕೂಡಲೇ ಎದ್ದು ತೋರಲಾರದು. ಆದ್ದರಿಂದ ಅವರಿಗೆ ಓಡಿ ಹೋಗಲು ಸುಲಭವಾಗುವುದು! ಮಹಾಭಾರತ ಕಾಲದಲ್ಲಿಯೂ ಈ ಸಂಪ್ರದಾಯವಿತ್ತೇ ಎಂದು ನನಗೆ ಸಂಶಯ ಬರುತ್ತದೆ. ಧರ್ಮರಾಯನು ದ್ರೌಪದಿಯನ್ನು ಪಣವಿಟ್ಟು ಕಳೆದುಕೊಂಡಮೇಲೆ ದುರ್ಯೋಧನನು ಬರ ಸಭೆಯಲ್ಲಿ ಅವಳ ಸೀರೆ ಸೆಳೆಯಲು ಆಜ್ಞಾಪಿಸುವುದು ಪ್ರತೀಕಾರಬುದ್ಧಿಯಿಂದಿರಬಹುದಾದರೂ ದಾಸಿಗೆ ಬಟ್ಟೆ ತೊಡುವ ಅಧಿಕಾರವಿಲ್ಲ ಎಂಬ ಸಂಪ್ರದಾಯದ ನೆರಳಲ್ಲಿ ಅವನು ಈ ಉದ್ಯೋಗಕ್ಕೆ ಇಳಿದಿರಬಹುದು. ಆದ್ದರಿಂದಲೇ ಹಿರಿಯರೆಲ್ಲರೂ ನಿರುಪಾಯರಾಗಿರಬಹುದು. ಬಟ್ಟೆ ತೊಡುವುದಕ್ಕೂ ಆರ್ಯತೆಗೂ ಆಗಲೇ ಸಂಬಂಧ ಸಿದ್ಧವಾಗಿರಬಹುದು. ಕುಲೀನ ಹೆಣ್ಣು ಪತಿ ಹೊರತು ಮತ್ತಾರ ಮುಂದೆಯೂ ನಗ್ನಳಾಗಿ ಕಾಣಿಸಿಕೊಳ್ಳುವುದು ಮಾನಗೇಡೆಂದು ವರ್ಣಿಸಲ್ಪ ಡುವುದಾಗಿರಬೇಕು. ದೇವಯಾನಿಯನ್ನು ಶರ್ಮಿಷ್ಠೆ ನಗ್ನಾವಸ್ಥೆಯಲ್ಲಿ ಬಾವಿಗೆ ತಳ್ಳಿಹೋದಮೇಲೆ ಯಯಾತಿ ರಾಜ ಅವಳನ್ನು ಬಾವಿಯಿಂದ ಎತ್ತಿದ. ಅವಳು ಕೂಡಲೆ "ನೀನು ನನ್ನನ್ನು ನಗ್ನಳಾಗಿ ನೋಡಿದ್ದರಿಂದ ನೀನೇ ನನ್ನನ್ನು ಮದುವೆಯಾಗು" ಎಂದು ಗಂಟುಬಿದ್ದಳು. ಬಟ್ಟೆ ಕಳೆದು ಕೊಂಡು ಬಾವಿಯಲ್ಲಿ ಬಿದ್ದ ತರುಣಿಯರನ್ನು ಮೇಲೆತ್ತುವುದು ಎಷ್ಟು ಅಪಾಯದ ಕೆಲಸ ಎಂದು ಇದು ತೋರಿಸುತ್ತದೆ.

ಆದಮನೂ ಹವ್ವಾಳೂ ಜ್ಞಾನವೃಕ್ಷದ ಹಣ್ಣು ತಿಂದು ತಮ್ಮ ಬತ್ತಲೆತನ

ವನ್ನು ಕಂಡುಕೊಂಡು ದೇವರ ಶಾಪಕ್ಕೀಡಾದಂದಿನಿಂದ ಮನುಷ್ಯನ ಆಚ್ಛಾದನೆ ಅಂಜೂರಿ ಎಲೆಯಿಂದ ಪ್ರಾರಂಭವಾಗಿ ಅತ್ಯಂತ ಪಾಶ್ ಆದ ಕ್ರಿಶ್ಚನ್ ಡಾಯರ್ ಹೊಲಿಗೇ ಬಟ್ಟೆಗಳ ವರೆಗೆ ಉತ್ತರೋತ್ತರವಾಗಿ ಭಾರ ವಾಗುತ್ತ ಬಂದಿದೆ. ಈ ಬಟ್ಟೆಯ ಹಂಬಲಕ್ಕೆ ಹೆಚ್ಚು ಗುರಿಯಾದವರು ಮಹಿಳಾಮಣಿಗಳೇ ಆದರೂ ಇತಿಹಾಸದಲ್ಲಿ ಅವರು ಒಮ್ಮೊಮ್ಮೆ ತಮ್ಮ ಮೂಲ ನಗ್ನಾವಸ್ಥೆಗೆ ಮರಳಲು ಅದಮ್ಯ ಆಕಾಂಕ್ಷೆಯಿಂದ ಪೀಡಿತರಾದಂತೆ ಕಾಣುತ್ತದೆ. ಭಾರತದಲ್ಲಿ ಬಟ್ಟೆ ಕಳಚಿಟ್ಟು ನದಿಯಲ್ಲೋ ಸರೋವರದಲ್ಲೋ ಸಾಮೂಹಿಕವಾಗಿ ಸ್ನಾನ ಮಾಡುವ ಹುಚ್ಚು ರಮಣಿಯರಿಗೆ ಇತ್ತೆಂಬುದಕ್ಕೆ ಪುರಾಣಗಳಿಂದ ಎಷ್ಟು ಸಾಕ್ಷಿಗಳನ್ನೂ ಕೊಡಬಲ್ಲೆ. ಅವರು ದಂಡೆಯಲ್ಲಿ ಬಚ್ಚಿಟ್ಟ ಸೀರೆಗಳನ್ನು ಕದ್ದವರಲ್ಲಿ ಕೃಷ್ಣ ಮೊದಲಿನವನು ಆಗಿರಲಿಕ್ಕಿಲ್ಲ; ಕಡೆಯವನೂ ಇರಲಿಕ್ಕಿಲ್ಲವೆಂದು ನನ್ನ ತರ್ಕ. ಯುರೋಪಿನಲ್ಲಿ ರೋಮನ್ ಸ್ನಾನಗೃಹಗಳಲ್ಲಿ ಗಂಡಸರೂ ಹೆಂಗಸರೂ ಬಟ್ಟೆಗಳನ್ನು ಅನವಶ್ಯಕ ಭಾರ ವೆಂದೇ ಭಾವಿಸುತ್ತಿದ್ದರು. ಜಪಾನಿನ ರಮಣಿಯರು ಜಗತ್ತಿನಲ್ಲೇ ಅತ್ಯಂತ ಮೋಹಕ ಉಡುಪು ಧರಿಸುವರಾಗಿದ್ದರು. (ಈಗ ಅವರ ಕಿಮೋನೋ ಮೂಲೆಗುಂಪಾಗುತ್ತಿದೆ.) ಆದರೆ ಅವರು ನಗ್ನತೆಯನ್ನು ಎಂದೂ ಅವಹೇಳನಾ ಸ್ಪದವೆಂದು ಭಾವಿಸಿದ ಹಾಗೆ ಕಾಣಲಿಲ್ಲ.

ಸಾವಿರ ಸಾವಿರ ವರ್ಷಗಳ ಕಾಲ ಮೈ ಮುಚ್ಚಿಕೊಳ್ಳುವುದನ್ನೇ ಮಾನ ಮುಚ್ಚಿಕೊಳ್ಳುವುದೆಂಬುದಾಗಿ ಭಾವಿಸಿದ ಮೇಲೆ ಪಾಶ್ಚಾತ್ಯ ಹೆಂಗಸರು ಇಂದು ನಗ್ನತೆಗೆ ಮರಳುತ್ತಿದ್ದಾರೆ. ತಮ್ಮ ನಗ್ನತೆಯನ್ನು ಅವರು ಅತ್ಯಂತ ಅರ್ಥಪೂರ್ಣವಾಗಿ ಉಪಯೋಗಿಸಿದ ಒಂದು ಸಂದರ್ಭವನ್ನು ಇದೇ ತಾನೆ ಓದಿ ನಾನು ಮೂಕನಾಗಿದ್ದೇನೆ. ಈ ಶತಮಾನದ ಆದಿಯಲ್ಲಿ ಮಹಾ ಕಾದಂಬರಿಕಾರನೆಂದು ಹೆಸರಾಂತ, ಸ್ಮರಸುಂದರನಾದ ಮಾರ್ಸೆಲ್ ಪ್ರೌಸ್ತನ ವಿಷಯ ಅದು. ಆಗ ಫ್ರಾನ್ಸಿನಲ್ಲಿ ಅತ್ಯಂತ ಸುಂದರಿ ನಟಿಯೆಂದು ಹೆಸ ರಾಗಿದ್ದ ಲುಯಿಸಾ ಮೊರ್ನಾಂದ್ ಒಂದು ದಿನ ಅವನನ್ನು ತನ್ನ ಮನೆಗೇ ಆಮಂತ್ರಿಸಿದಳು. ಅವಳು ಅವನನ್ನು ಬರಮಾಡಿಕೊಂಡಿದ್ದು ತನ್ನ ಶಯ್ಯಾ ಗೃಹದಲ್ಲಿ ದೇವರು ಉಂಟುಮಾಡಿದ ರೂಪದಲ್ಲಿ. ಪ್ರತಿಭೆಗೆ ಸೌಂದರ್ಯ ಎಂತೆಂಥಾ ಕಷ್ಟಗಳನ್ನು ಕೊಡಬಲ್ಲದು ನೋಡಿ! (೧೯೬೩)

# ಆತ್ಮಸಾಕ್ಷಿಗೆ ಕೈಪಿಡಿ

ಇತ್ತೀಚೆಗೆ ಆತ್ಮಸಾಕ್ಷಿಯ ವಿಷಯ ಬಹಳವಾಗಿ ಕೇಳಿಬರುತ್ತಿದೆ. ಅನೇಕ ಓದುಗರಿಗೆ ಇದು ಎಂಥಾ ಸಾಕ್ಷಿ ಅಂತ ಸರಿಯಾಗಿ ಅರ್ಥವಾಗುತ್ತಿಲ್ಲ. ಆದ್ದರಿಂದ ಆತ್ಮಸಾಕ್ಷಿಯನ್ನು ವಿಶದೀಕರಿಸುವುದಕ್ಕಾಗಿ ಈ ಪ್ರಯತ್ನ ಕೈಕೊಳ್ಳಲಾಗಿದೆ.

ಆತ್ಮಸಾಕ್ಷಿ ಎಂಬುದರಲ್ಲಿ ಆತ್ಮ ಮತ್ತು ಸಾಕ್ಷಿ ಎಂಬ ಎರಡು ಪದಗಳು ಬೆರೆತಿವೆ. ಆತ್ಮ ಎಂದರೇನು ಎಂಬ ಬಗ್ಗೆ ಈಗ ಅನೇಕ ಸಾವಿರ ವರ್ಷಗಳಿಂದ ಚರ್ಚೆಯಾಗಿದ್ದರೂ ಅದಕ್ಕೆ ಸರ್ವಸಮ್ಮತವಾದ ಅರ್ಥ ಇನ್ನೂ ದೊರಕಿಲ್ಲ. ಮೋಟಾರಿಗೆ ಡ್ರೈವರಿದ್ದ ಹಾಗೆ ದೇಹಕ್ಕೆ ಆತ್ಮ ಇದೆ ಎಂದು ಹೆಚ್ಚು ಜನರು ಹೇಳುತ್ತಾರೆ. ಆದರೆ ಇಲ್ಲಿಗೆ ಅಭಿಪ್ರಾಯಸಾಮ್ಯ ಮುಗಿದುಹೋಗುತ್ತದೆ. ಆತ್ಮ ಎಲ್ಲಿಂದ ಬಂತು, ಎಲ್ಲಿಗೆ ಹೋಗುತ್ತದೆ ಎಂಬುದೆಲ್ಲಾ ವಿವಾದಾಸ್ಪದವಾಗಿದೆ. ಕೆಲವರು ಆತ್ಮಗಳೆಲ್ಲಾ ಮೊದಲಿಂದ ಇದ್ದವು ಎಂದು ಹೇಳುತ್ತಾರೆ. ಮೊದಲಿಂದ ಅಂದರೆ ಯಾವಾಗಿಂದ ಎಂದು ಕೇಳಿದರೆ ಮೊದಲಿಂದ ಅಂದರೆ ಆದಿಯಿಂದ ಅಂದರೆ ಅನಾದಿಯಿಂದ ಎಂದು ಅವರು ಸಂಸ್ಕೃತದಲ್ಲಿ ಹೇಳುತ್ತಾರೆ. ಅವುಗಳನ್ನು ಯಾರೂ ಉಂಟುಮಾಡಿಲ್ಲವೆಂದು ಅವರ ಮತ. ಆತ್ಮಗಳು ದಾರಿಬಡಕರ ಹಾಗೆ ಅಲ್ಲಲ್ಲಿ ಅವಿತಿದ್ದು ವೈಮರೆತ ತಾಯಂದಿರ ಹೊಟ್ಟೆಯೊಳಗಿನ ಭ್ರೂಣಗಳನ್ನು ಸೇರಿಕೊಳ್ಳುತ್ತವೆ—ಮತ್ತು ಹುಟ್ಟುತ್ತವೆ. ಶ್ರೀಮಂತರು ಕಾರುಗಳನ್ನು ಕಾಲಕಾಲಕ್ಕೆ ಬದಲಾಯಿಸುವ ಹಾಗೆ ಆತ್ಮಗಳೂ ಶರೀರಗಳನ್ನು ಬದಲಾಯಿಸುತ್ತ ಇರುತ್ತವೆ. ಯಾವ ಕಾರು ಕೊಂಡರೂ ಅಷ್ಟೇ ಉಪದ್ರವ ಎಂದು ಮನವರಿಕೆಯಾದಮೇಲೆ ಕೆಲವರು ಕಾರು ಕೊಳ್ಳುವುದನ್ನೇ ನಿಲ್ಲಿಸಿಬಿಡುವುದುಂಟು. ಹಾಗೆ ಯಾವ ಶರೀರದಲ್ಲೂ ಸುಖವಿಲ್ಲ ಎಂದು ಅನುಭವದಿಂದ ಕಂಡಮೇಲೆ ಶರೀರವೇ ಬೇಡ ಎಂದು ಕೆಲ ಆತ್ಮಗಳಿಗೆ ಅನಿಸಿಬಿಡುತ್ತದೆ. ಇದೇ "ಅನುಭವಾಮೃತ." ಹೀಗನಿಸಿದಮೇಲೆ ಕೆಲವೊಂದು ಉಪಾಯದಿಂದ ಮೋಕ್ಷವನ್ನು ಪಡೆಯಬಹುದೆಂದು ಹೇಳಲಾಗಿದೆ. ಮೋಕ್ಷ ಎಂದರೆ ಕಾರು ಕೊಳ್ಳುವ ಹಂಬಲವನ್ನು ಪೂರ್ತಿಯಾಗಿ

ಬಿಟ್ಟುಕೊಡುವುದು. ಮೋಕ್ಷವಾದಮೇಲೆ ಆತ್ಮ ಏನು ಮಾಡುತ್ತದೆ ಎಂಬ ಬಗ್ಗೆ ಬಹಳ ಭಿನ್ನಾಭಿಪ್ರಾಯಗಳಿವೆ. ಸುಖವಾಗಿ ಪೆನ್ಷನ್ ಅನುಭವಿಸುತ್ತ ಇರುತ್ತವೆಂದು ಹೇಳಲಾಗುತ್ತದೆ. ನಿವೃತ್ತ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ವಿಶೇಷ ಆಯೋಗಗಳ ಅಧ್ಯಕ್ಷರಾಗಿ ಮಾಡಲ್ಪಡು ವಂತೆ ಕೆಲವು ಸಲ ಈ ಮುಕ್ತಾತ್ಮಗಳು ಪ್ರಪಂಚಕ್ಕೆ ಕಳಿಸಲ್ಪಡುವುದುಂಟು. ಇವರಿಗೆ 'ಅವತಾರಪುರುಷ'ರು ಎಂದು ಹೆಸರು.

ಆದರೆ ಇತರರು ಆತ್ಮದ ಈ ವಿವರಣೆಯನ್ನು ಒಪ್ಪುವುದಿಲ್ಲ. ಆತ್ಮವನ್ನು ದೇವರು ಸ್ವರ್ಗದಲ್ಲಿ ಕುಳಿತು ಸೃಷ್ಟಿಸಿ ಒಂದು ದೇಹದಲ್ಲಿ ಅದನ್ನು ಹಾಕಿ ಪ್ರಪಂಚಕ್ಕೆ ಕಳಿಸುತ್ತಾನೆಂದೂ ಒಂದು ಆತ್ಮಕ್ಕೆ ಒಂದೇ ಕಾರನ್ನು ಡ್ರೈವ್ ಮಾಡುವ ಛಾನ್ಸ್ ಅವನು ಕೊಡುತ್ತಾನೆಂದೂ ಬೇರೆ ಕೆಲವರ ಹೇಳಿಕೆ. ಈ ಕಾರಿನಲ್ಲಿ ಅವನು ಎಷ್ಟು ಅಪಘಾತಗಳನ್ನು ಮಾಡಿದ್ದಾನೆ ಎಂಬುದರ ಮೇಲಿಂದ ಆತ್ಮನಿಗೆ ಶಿಕ್ಷೆ (ನರಕ) ಅಥವಾ ಬಹುಮಾನ (ಸ್ವರ್ಗ) ಸಿಗುತ್ತದೆ. ಈ ವ್ಯವಸ್ಥೆಯಲ್ಲಿ ಆತ್ಮಗಳು ಎರಡನೇ ಸಲ ಪ್ರಪಂಚಕ್ಕೆ ಬರಲಾರವು. ರಿಟೈರ್ ಅಂದರೆ ರಿಟೈರ್. ಒಂದಕ್ಕಿಂತ ಹೆಚ್ಚು ಕಾರುಗಳನ್ನು ಅಪಘಾತಕ್ಕೀಡು ಮಾಡಲಿಕ್ಕೂ ಅವಕಾಶವಿಲ್ಲ. ರಿಟೈರ್ ಆಗಿ ಸ್ವರ್ಗದಲ್ಲೋ ನರಕದಲ್ಲೋ ವಸತಿ ಹೂಡಿದಮೇಲೆ ಅವು ಏನು ಮಾಡುತ್ತವೆಂದೂ ಸರಿಯಾಗಿ ಗೊತ್ತಿಲ್ಲ. ಕೆಲವೊಮ್ಮೆ ಆತ್ಮಗಳು ಸ್ವರ್ಗಕ್ಕೂ ಹೋಗಲಾರದೆ ನರಕದಲ್ಲೂ ಜಾಗ ಸಿಗದೆ ಅಲಾಲಟೋಪಿಗಳಾಗಿ ಇರುವುದೂ ಉಂಟಂತೆ.

ಆತ್ಮಗಳ ವಿಷಯದಲ್ಲಿ ಇರುವ ಈ ಗೊಂದಲಗಳನ್ನು ನಿವಾರಿಸುವುದಕ್ಕೆ ವಿಜ್ಞಾನಕ್ಕೂ ಸಾಧ್ಯವಾಗಿಲ್ಲ. ವಿಜ್ಞಾನಿಗಳ ತೊಂದರೆಯೆಂದರೆ ಯಾವು ದಾದರೂ ಪದಾರ್ಥವನ್ನು ಸೂಕ್ಷ್ಮದರ್ಶಕದಲ್ಲಿ ನೋಡದೆ ಅಥವಾ ಪ್ರಯೋಗ ನಲಿಕೆಯಲ್ಲಿ ಹಾಕದೆ ಅವರಿಗೆ ಆ ಬಗ್ಗೆ ಏನೂ ಹೇಳಲಾಗುವುದಿಲ್ಲ. ಮತ್ತು ಅತ್ಯಂತ ಸೂಕ್ಷ್ಮವಾದ ಇಲೆಕ್ಟ್ರಾನಿಕ್ ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಕೂಡ ಆತ್ಮ ಕಾಣಿಸಿಲ್ಲ. ಯಾವ ಪ್ರಯೋಗನಲಿಕೆಯಲ್ಲೂ ಆತ್ಮವನ್ನು ಬೆಳೆಸುವುದಕ್ಕೆ ಸಾಧ್ಯವಾಗಿಲ್ಲ.

ಆದ್ದರಿಂದ ಆತ್ಮವೇ ಇಲ್ಲ—ಅದೊಂದು ತರಹದ ಮೊಲದ ಕೋಡು ಎಂದು ಹೇಳುವವರುಂಟು. ನನಗೆ ಈ ಅಭಿಪ್ರಾಯ ಒಪ್ಪೋಣ ಅನಿಸುತ್ತದೆ.

ಆದರೆ ನಾನು ಸತ್ತಮೇಲೆ ನನ್ನದೇನೂ ಉಳಿಯುವುದಿಲ್ಲ ಎನ್ನುವ ಸಂಭವದಿಂದ ನಾನು ಗಾಬರಿಯಾಗುತ್ತೇನೆ. ಆದ್ದರಿಂದ ಆತ್ಮ ಇದೆ ಎಂದು ನನ್ನ ಆತ್ಮ ಹೇಳುತ್ತದೆ.

ಇನ್ನು ಸಾಕ್ಷಿ. ಇದರ ಅರ್ಥ ಕಣ್ಣಾರೆ ಕಂಡದ್ದು ಅಂತ. ಆದರೆ ಇದು ಕೂಡ ಕಡಿಮೆ ಗೊಂದಲದ ಶಬ್ದವಲ್ಲ. ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು ಎಂಬ ಹಳೇ ಗಾದೆ ಸಾಕ್ಷಿಯನ್ನು ನಾವು ಎಷ್ಟು ಸಂಶಯ ದೃಷ್ಟಿಯಿಂದ ನೋಡಬೇಕೆಂದು ತೋರಿಸುತ್ತದೆ. ಮೂರು ಜನರು ಒಂದೇ ಅಪಘಾತದ ವಿಷಯದಲ್ಲಿ ದೇವರಾಣೆ ಮಾಡಿ ಹೇಳುವ ಸಾಕ್ಷ್ಯವನ್ನು ಕೇಳಿದರೆ ಕಂಡದ್ದನ್ನು ನಂಬಬೇಡ ಎಂದು ಗೊತ್ತಾಗುತ್ತದೆ. ಸಾಕ್ಷಿಗೆ ಎಷ್ಟೋ ಸಲ ಎದುರಿಗೆ ಇದ್ದದ್ದು ಕಾಣಿಸುವುದಿಲ್ಲ; ಮಾತ್ರವಲ್ಲ ಎಲ್ಲಿಯೂ ನಡೆಯದಿದ್ದದ್ದು ಕಾಣಿಸುತ್ತದೆ ಎಂಬುದು ನ್ಯಾಯಸ್ಥಾನಗಳಲ್ಲಿ ನಡೆಯುವ ಪಾಟೀ ಸವಾಲುಗಳಲ್ಲಿ ಹೊರಬೀಳುತ್ತದೆ.

ಹೀಗೆ ಆತ್ಮ ಮತ್ತು ಸಾಕ್ಷಿ ಇವೆರಡೂ ಸಾಬೂನಿನಷ್ಟು ಜಾರುಪದಾರ್ಥಗಳಾಗಿರುವಾಗ ಆತ್ಮಸಾಕ್ಷಿಯೆಂಬುದು ಎಷ್ಟು ನುಣುಚಿಕೊಳ್ಳುವ ವಸ್ತು ಎಂದು ಊಹಿಸಿಕೊಳ್ಳಬಹುದು. ವಾಸ್ತವಿಕವಾಗಿ ಆತ್ಮಸಾಕ್ಷಿ ಎಂಬುದು ಎಲ್ಲಾ ರಾಸಾಯನಿಕ ಸಂಯುಕ್ತಗಳ ಹಾಗೆ ಅದ್ಭುತ ಪದಾರ್ಥವಾಗಿದೆ. ಅದು ತನ್ನ ಅಸ್ತಿತ್ವಕ್ಕೆ ಕಾರಣವಾದ ಎರಡೂ ಮೂಲ ಪದಾರ್ಥಗಳನ್ನು ಸ್ವಲ್ಪವೂ ಹೋಲುವುದಿಲ್ಲ.

ನಿಮ್ಮ ಆತ್ಮ ನಿಮ್ಮ ಕೆಲಸಗಳನ್ನು ಯಾವಾಗಲೂ ನಿರೀಕ್ಷಿಸುತ್ತಿರುತ್ತದೆ ಎಂದು ಹೇಳಲಾಗುತ್ತದೆ. ಅದು ನಿಮ್ಮ ಕೆಲಸ ಸರಿಯೋ ತಪ್ಪೋ ಎಂದು ಯಾವಾಗಲೂ ಹೇಳುತ್ತಿರುತ್ತದೆ. ಆದರೆ ನಿಮ್ಮ ಆತ್ಮಕ್ಕೆ ಇದು ಸರಿ ಇದು ತಪ್ಪು ಎಂದು ಹೇಗೆ ಗೊತ್ತಾಗುತ್ತದೆ? ಬೆಕ್ಕು ಹಾಲು ಕುಡಿಯುತ್ತದೆ. ಸಂಗಡಲೇ ಕೋಲು ಬೆನ್ನ ಮೇಲೆ ಬೀಳುತ್ತದೆ. ಇದು ಒಂದೆರಡು ಸಲ ಆದಮೇಲೆ ಬೆಕ್ಕು ಆತ್ಮಸಾಕ್ಷಿಯನ್ನು ಬೆಳೆಸಿಕೊಳ್ಳುತ್ತದೆ. (ಬೆಕ್ಕು ಮೊದಲಾದ ಪ್ರಾಣಿಗಳಿಗೂ ಅದೇ ವರ್ಗಕ್ಕೆ ಸೇರಿದ ಹೆಂಗಸರಿಗೂ ಆತ್ಮವೇ ಇಲ್ಲ ಎಂದು ಕೆಲವರು ಅಭಿಪ್ರಾಯಪಡುತ್ತಾರೆಂದು ನಾನು ಬಲ್ಲೆ. ಆದರೆ ಈ ಸಕಲಸಮಾನತೆಯ ಕಾಲದಲ್ಲಿ ಯಾರಿಗೂ ಆತ್ಮವನ್ನು ನಿರಾಕರಿಸುವುದು

ಸಾಧ್ಯವಿಲ್ಲ.) ಮುಂದೆ ಕದ್ದು ಹಾಲು ಕುಡಿಯುವಾಗಲೆಲ್ಲ ಅದು ಎಷ್ಟೇ ಕಣ್ಣು ಮುಚ್ಚಿದರೂ ಆತ್ಮ ಅದನ್ನು ಎಚ್ಚರಿಸುತ್ತದೆ. ಇದಕ್ಕೇ ಆತ್ಮಸಾಕ್ಷಿ ಎನ್ನುವುದು.

ಮೇಲಿನದು ನೆಗೆಟಿವ್ ಆತ್ಮಸಾಕ್ಷಿ. ಪಾಸಿಟಿವ್ ಆತ್ಮಸಾಕ್ಷಿಯೂ ಒಂದಿದೆ. ನೀವು ಕಣ್ಣುಹಾಕುತ್ತಿದ್ದ ನೆರೆಮನೆಯ ಹುಡುಗಿ ಇನ್ನೊಬ್ಬನೊಡನೆ ಕಣ್ಸನ್ನೆ ಸಂಭಾಷಣೆ ನಡೆಸುತ್ತಿದ್ದಾಳೆ ಎನ್ನಿ. ಆಗ ನಿಮ್ಮ ಆತ್ಮಸಾಕ್ಷಿ ಜಾಗ್ರತವಾಗುತ್ತದೆ. ಈ ಅಸಾಮಾಜಿಕ, ಅಧರ್ಮ, ಅಹಿತಕರವಾದ ವಿಚಾರವನ್ನು ಹುಡುಗಿಯ ಅಣ್ಣನಿಗೆ ವರದಿ ಮಾಡಿ ಸಂಬಂಧಪಟ್ಟ ಹುಡುಗನಿಗೆ ಶಾಸ್ತಿ ಮಾಡಬೇಕೆಂದು ಅದು ನಿಮ್ಮನ್ನು ಪ್ರೇರಿಸುತ್ತದೆ. "ಇದು ನಿಮ್ಮ ತಂಗಿಗೂ ನಿಮ್ಮ ಕುಟುಂಬಕ್ಕೂ ನಾಳೆ ತರಬಹುದಾದ ಕಷ್ಟಗಳನ್ನು ನೆನೆದಾಗ ಈ ಸಂಗತಿಯನ್ನು ನಿಮಗೆ ವರದಿಮಾಡದೆ ಇರಲು ನನ್ನ ಆತ್ಮಸಾಕ್ಷಿ ಒಪ್ಪಲಿಲ್ಲ" ಎಂದು ನೀವು ಹೇಳುತ್ತೀರಿ.

ಆತ್ಮಸಾಕ್ಷಿ ಹೀಗೆ ನಮಗೆ ಉಪಕಾರಿಯಾಗಿದ್ದರೂ ಎಷ್ಟೋ ಸಲ ತುಂಬ ಅನಿಷ್ಟ ಸಂಗಾತಿಯಾಗಿದೆ. ಅದಕ್ಕೆ ವಿವೇಕ ಕಡಿಮೆ. ನೀವು ಪರೀಕ್ಷೆಯಲ್ಲಿ ನೆರೆಯವನ ಪೇಪರಿನಿಂದ ಕಾಪಿ ಹೊಡೆಯುವಾಗ ನಿಮ್ಮ ಆತ್ಮಸಾಕ್ಷಿ ಇದು ತಪ್ಪು ಎಂದು ಕಿರಿಕಿರಿ ಪ್ರಾರಂಭಿಸುತ್ತದೆ. ಆಗ ನಿಮ್ಮ ಲಕ್ಷ್ಯ ವಿಕ್ಷಿಪ್ತವಾಗಿ ನೀವು ಕಾಪಿ ಹೊಡೆಯುವುದರಲ್ಲೂ ತಪ್ಪು ಮಾಡತೊಡಗುತ್ತೀರಿ. ಇಂಥಾ ಪ್ರಸಂಗಗಳಲ್ಲಿ ನೀವು ಭೋಳೇ ಸ್ವಭಾವದ ನಿಮ್ಮ ಆತ್ಮದ ಮೇಲೆ ಕಣ್ಣಿಡುವುದಕ್ಕಾಗಿ ಇನ್ನೊಂದು ಸಾಕ್ಷಿಯನ್ನು ತಯಾರಿಸಿಕೊಳ್ಳಬೇಕಾಗುತ್ತದೆ. ಆತ್ಮಸಾಕ್ಷಿ ಕಿರಿಕಿರಿ ಹಚ್ಚಿದಾಗ ನೀವು ಅದನ್ನು ಕೇಳುತ್ತೀರಿ. ಅದು, "ಸೂಪರ್ವೈಜರ್ ಬೇರೇ ಕಡೆ ನೋಡುತ್ತಿದ್ದಾನೆ ಬಿಡೋ !" ಎಂದರೆ ನೀವು ಆತ್ಮಸಾಕ್ಷಿಯನ್ನು ಹೆದರಿಸಿ ಸುಮ್ಮನಿರಿಸುತ್ತೀರಿ. ನಿಮ್ಮ ಸಿ.ಐ.ಡಿ. ಸಾಕ್ಷಿ, "ಹೌದೋ ! ಸೂಪರ್ವೈಜರ್ ಈ ಕಡೇನೇ ನೋಡ್ತಿದಾನೋ !" ಎಂದು ವರದಿಮಾಡಿದರೆ ನೀವು "ಛೇ ಛೇ ! ಕಾಪಿ ಹೊಡೆಯುವುದಕ್ಕೆ ನನ್ನ ಆತ್ಮಸಾಕ್ಷಿ ಒಪ್ಪೋದಿಲ್ಲ" ಅಂದುಕೊಂಡು ನಿಮಗೆ ತಿಳಿದ ಹಾಗೆ ಬರೆಯತೊಡಗುತ್ತೀರಿ.

ಆತ್ಮಸಾಕ್ಷಿಗೆ ಒಂದು ಕೆಟ್ಟ ಅಭ್ಯಾಸವಿದೆ. ನೀವು ಕಳ್ಳತನ ಮಾಡುತ್ತಿರುವಾಗ ಅದು ಮನೆ ಕಾಯುವ ನಾಯಿಯ ಹಾಗೆ ಕಣ್ಣು ಮುಚ್ಚಿಕೊಂಡು

ತೆಪ್ಪಗೆ ಬಿದ್ದಿರುತ್ತದೆ. ಆಮೇಲೆ ಕಂಪೌಂಡ್ ಗೋಡೆ ಹಾರಿ ಆಚೆಗೆ ಹೋಗ ಬೇಕೆನ್ನುವಾಗ ಗಪ್ಪನೆ ನಿಮ್ಮ ಬಟ್ಟೆಯನ್ನು ಹಿಡಿದು ನಿಲ್ಲಿಸುತ್ತದೆ. ಕೆಲ ವೊಮ್ಮೆ ನೀವು ಗೋಡೆ ದಾಟಿ ಹೋಗಿ ಎಷ್ಟೋ ಕಾಲದನಂತರ ವಾಸನೆ ಹಿಡಿದು ನೀವಿದ್ದಲ್ಲಿಗೆ ಬಂದು ನಿಮ್ಮನ್ನು ಕಡಿಯಬಹುದು. ಟಿಕೇಟಿಲ್ಲದೆ ರೈಲು ಪ್ರವಾಸ ಮಾಡಿ ಎಷ್ಟೋ ಕಾಲದಮೇಲೆ ಆತ್ಮಸಾಕ್ಷಿಯಿಂದ ಹಿಡಿಯ ಲ್ಪಟ್ಟು ರೈಲ್ವೇ ಬೋರ್ಡಿಗೆ ಮನಿಯಾರ್ಡರು ಮಾಡುವವರು ಇದಕ್ಕೆ ದೃಷ್ಟಾಂತವಾಗಿದ್ದಾರೆ. (ಈ ಮನಿಯಾರ್ಡರುಗಳನ್ನು ಅಧಿಕಾಂಶ ರೇಲ್ವೆ ಬೋರ್ಡಿನ ಸದಸ್ಯರೇ ಕಳಿಸಿ ಟಿಕೇಟಿಲ್ಲದ ರೇಲ್ವೆ ಪ್ರವಾಸಿಕರಲ್ಲಿ ಇನ್ನೂ ಆತ್ಮಸಾಕ್ಷಿ ಎಂಬುದಿದೆ ಎಂಬ ಪ್ರಚಾರಮಾಡುತ್ತಿದ್ದಾರೆಂದು ನನಗೆ ಬಲವಾದ ಸಂಶಯವಿದೆ.) ಆದರೂ ಈ ಮನಿಯಾರ್ಡರುಗಳಲ್ಲಿ ಹತ್ತಿಪ್ಪತ್ತು ರೂಪಾಯಿ ಗಳನ್ನು ಮೀರುವವು ತೀರ ಅಪರೂಪ. ಅಗ್ಗವಾಗಿ ತಮ್ಮ ಆತ್ಮಸಾಕ್ಷಿಯನ್ನು ತೃಪ್ತಿಪಡಿಸಿಕೊಳ್ಳುವುದು ಸಾಧ್ಯವಿದ್ದರೆ ನಮ್ಮಲ್ಲಿ ಕೆಲವರು ಇದಕ್ಕೆ ಸಿದ್ಧ ರಾಗಿರುತ್ತಾರೆಂದು ಇದು ತೋರಿಸುತ್ತದೆ. ಈ ಆತ್ಮಸಾಕ್ಷಿಪೀಡಿತರು ತಮ್ಮ ಹೆಸರು ವಿಳಾಸ ಕೊಟ್ಟಿರುವುದಿಲ್ಲ. ಆತ್ಮಸಾಕ್ಷಿಯ ಮೇಲೆ ರೇಲ್ವೇ ಬೋರ್ಡಿ ನವರಿಗೆ ನಿಮ್ಮಷ್ಟೇ ಸಹಾನುಭೂತಿ ಇದೆಯೆಂಬ ಗ್ಯಾರಂಟಿ ಏನು? ಮೇಲಾಗಿ ನೀವು ಪ್ರಸಿದ್ಧಿಕಾಮಿಗಳಲ್ಲ. ಕೀರ್ತಿಶನಿಯ ವಿರೋಧಿಗಳು.

"ಆತ್ಮಸಾಕ್ಷಿ ನಮ್ಮನ್ನೆಲ್ಲಾ ಹೇಡಿಗಳನ್ನಾಗಿ ಮಾಡುತ್ತದೆ" ಎಂಬುದಾಗಿ ಹೆಮ್ಲೆಟ್ ಹೇಳಿದ್ದಾನೆ. ಆದ್ದರಿಂದ ಧೈರ್ಯದ ಅಗತ್ಯವುಳ್ಳವರೆಲ್ಲಾ ತಮ್ಮ ಆತ್ಮಸಾಕ್ಷಿಗಳನ್ನು ಬಂಗಾರದ ಕರಡಿಗೆಗಳಲ್ಲಿ ಹಾಕಿ ದೇವರ ಮನೆಯಲ್ಲಿ ಆಳ ವಾಗಿ ಹುಗಿದಿರುತ್ತಾರೆ. ಉದಾಹರಣೆಗೆ ವ್ಯಾಪಾರಿಗಳು ; ರಾಜಕಾರಣಿಗಳು. ಆತ್ಮಸಾಕ್ಷಿ ಎಂಬುದು ಬಹಳ ಮಡಿ ಪದಾರ್ಥ. ಅದನ್ನು ಸಿಕ್ಕಾಬಟ್ಟೆ ತಮ್ಮ ಸಂಗಡ ಒಯ್ದು ಹೊಲೆಗೆಡಿಸುವುದಕ್ಕೆ ಅವರ ಆತ್ಮಸಾಕ್ಷಿ ಒಪ್ಪುವುದಿಲ್ಲ. ವರ್ಷಕ್ಕೊಮ್ಮೆಯೋ ಎರಡು ವರ್ಷಕ್ಕೊಮ್ಮೆಯೋ ಅವರು ಕರಡಿಗೆಗಳನ್ನು ಹೊರತೆಗೆದು ತಮ್ಮ ಆತ್ಮಸಾಕ್ಷಿಗಳು ಸುಖವಾಗಿ ನಿದ್ರಿಸುತ್ತಿರುವುದನ್ನು ದೃಢ ಪಡಿಸಿಕೊಂಡು ತಿರುಗಿ ಇದ್ದಲ್ಲಿಯೇ ಮಡಗಿಬಿಡುತ್ತಾರೆ.

ನಮ್ಮ ದೇಶವಂತೂ ಧರ್ಮನಿರಪೇಕ್ಷ ರಾಜ್ಯ. ಆತ್ಮಸಾಕ್ಷಿ ಎಂದರೆ ಅದರಲ್ಲಿ ಧರ್ಮ ತಲೆಹಾಕಿದಂತಾಗುತ್ತದೆ. ಆದ್ದರಿಂದ ನಮ್ಮ ರಾಜಕಾರಣಿಗಳು

ಆತ್ಮಕ್ಕೂ ರಾಜಕಾರಣಕ್ಕೂ ಸಂಬಂಧ ಬಾರದಂತೆ ನೋಡಿಕೊಳ್ಳುತ್ತ ಬಂದಿದ್ದರು. ಆದರೆ ಈಗ ಅವರಿಗೆ ಒಮ್ಮೆಲೇ ಆತ್ಮಸಾಕ್ಷಿ ತಾವು ಮೊದಲು ವರ್ಣಿಸಿದಷ್ಟು ನಿರುಪಯುಕ್ತ ಪದಾರ್ಥವಲ್ಲೆಂದು ಗೊತ್ತಾಗಿದೆ. ಪ್ರತಿಯೊಬ್ಬರಿಗೂ ಆತ್ಮಸಾಕ್ಷಿಯ ಪ್ರೇರಣೆ ದೊರಕತೊಡಗಿದೆ.

ಆದರೆ ನೀವು ಆತ್ಮಸಾಕ್ಷಿಯನ್ನು ಉಪಯೋಗಿಸುವಾಗ ಒಂದು ಮೂಲಭೂತ ವಿಚಾರವನ್ನು ಮರೆಯಬಾರದು. ಯಾರ ಕೈಲಿ ಕೋಲು ಉಂಟೋ ಅವರ ವಿರುದ್ಧ ನಿಮ್ಮ ಆತ್ಮಸಾಕ್ಷಿಯನ್ನು ಸಾಕ್ಷಿ ಹೇಳುವುದಕ್ಕೆ ಕರೆಯಬಾರದು. "ನಿಮ್ಮ ಆತ್ಮಸಾಕ್ಷಿ ನನ್ನ ಪರವಾಗಿ ನಿಮ್ಮನ್ನು ಪ್ರೇರಿಸುತ್ತಿದ್ದರೆ ಅದನ್ನು ಖಂಡಿತವಾಗಿ ಉಪಯೋಗಿಸಿ. ನನ್ನ ವಿರುದ್ಧ ಅದು ಗೊಣಗುಟ್ಟುತ್ತಿದ್ದರೆ ಅದಕ್ಕೆ ನಿದ್ದೇಗುಳಿಗೆ ಕೊಟ್ಟು ಮಲಗಿಸಿ ಬನ್ನಿ" ಎಂದು ಕೋಲುಳ್ಳವರು ಸೂಚಿಸುತ್ತಾರೆ. ಆತ್ಮಸಾಕ್ಷಿಗಳು ಶಕ್ತಿವಂತರ ವಿರುದ್ಧ ನಿರುಪಯೋಗಿಗಳು. ಅಲ್ಲಸಲ್ಲದ ಹೊತ್ತಿನಲ್ಲಿ ಆತ್ಮಸಾಕ್ಷಿಯನ್ನು ಹೊರತೆಗೆದವರಿಗೆ ಶಿಕ್ಷೆಯಾಗುತ್ತದೆ.

ಇವರಿಂದ ಕಲಿಯುವ ಪಾಠ ಇಷ್ಟೇ: ಸಂದರ್ಭ ನೋಡಿ ಆತ್ಮಸಾಕ್ಷಿಯನ್ನು ಬಳಸಬೇಕು. (೧೯೭೦)

## ದ್ರೌಪದೀವಸ್ತ್ರಾಪಹರಣಂ

ನಮ್ಮ ಇಂ. ಮತ್ತು ಸಿಂ. ಎರಡೂ ಕಾಂಗ್ರೆಸ್ಸಿನವರು ಒಂದು ವಿಷಯದಲ್ಲಿ ಏಕಮತದವರಾಗಿದ್ದಾರೆ. ಈಗ ನಡೆಯುತ್ತಿರುವುದು ಇಪ್ಪತ್ತೆಂಟನೇ ಕಲಿಯುಗವಲ್ಲ. ಇಪ್ಪತ್ತೊಂಬತ್ತನೇ ದ್ವಾಪರಯುಗ. ಈಗ ಕೌರವಪಾಂಡವರ ಕಲಹ ನಡೆಯುತ್ತಿದೆ. ತಮ್ಮಲ್ಲಿ ಒಬ್ಬರು ಕೌರವರು; ಇನ್ನೊಬ್ಬರು ಪಾಂಡವರು ಎಂದೂ ಅವರು ಒಪ್ಪುತ್ತಾರೆ. ಆದರೆ ಇಲ್ಲಿಗೆ ಅವರ ಐಕಮತ್ಯ ಮುಗಿಯುತ್ತದೆ. ಇಬ್ಬರೂ ತಾವೇ ಪಾಂಡವರು ಎಂಬುದಾಗಿ ಸಾಧಿಸುತ್ತಿದ್ದಾರೆ.

ತಮಾಷೆಯಾಗಿದೆ. ಮಹಾಭಾರತದಲ್ಲಿ ಕೌರವರು ಪಾಂಡವರಲ್ಲಿ ಯಾರು ಯಾರು ಎಂಬ ಬಗ್ಗೆ ಏನೂ ಮತಭೇದವಿರಲಿಲ್ಲ. ರಾಜ್ಯ ಯಾರಿಗೆ ಸೇರ

ಬೇಕು ಎಂಬುದಕ್ಕಾಗಿ ಅವರು ಜಗಳಾಡಿದರು. ಈಗ ಹಾಗಲ್ಲ. ಇಬ್ಬರಲ್ಲಿ ಒಬ್ಬರೂ ಕೌರವರಾಗಲು ಒಪ್ಪುವುದಿಲ್ಲ. ಇಂಡಿಕೇಟಿನವರು ತಾವೇ ಪಾಂಡವರು ಎಂಬುದಾಗಿ ಮೊದಲು ಹಕ್ಕು ಮಂಡಿಸಿದರು. ಈಗ ಸಂಸ್ಥಾ ಕಾಂಗ್ರೆಸ್ಸಿನ ಎಸ್. ಎನ್. ಮಿಶ್ರರು ತಾವೇ ಪಾಂಡವರು ಎಂದು ವಾದಿಸುತ್ತಾರೆ. ಅವರ ಪ್ರಕಾರ ಇಂಡಿಕೇಟಿನವರು ಕೌರವರು ಮಾತ್ರವಲ್ಲ. ಈಗವರು ದ್ರೌಪದೀ ವಸ್ತ್ರಾಪಹರಣ ಮಾಡುತ್ತಿದ್ದಾರೆ. ಈ ದ್ರೌಪದಿ ಮತ್ತಾರೂ ಅಲ್ಲ, ಪ್ರಜಾ-ಸತ್ತಮ್ಮನೇ ಈಗಿನ ದ್ರೌಪದಿ.

ಇಂಡಿಕೇಟಿನವರು ಏನೇ ಹೇಳಲಿ, ನನ್ನ ಅಭಿಪ್ರಾಯದಲ್ಲಿ ಮಿಶ್ರಮಹಾ ಭಾರತವೇ ಹೆಚ್ಚು ಯುಕ್ತಿಯುಕ್ತವಾದದ್ದು. ಬೆಂಗಳೂರಿನಲ್ಲಿ ಆರಂಭವಾಗಿ ದಿಲ್ಲಿಯಲ್ಲಿ ಮುಕ್ತಾಯವಾದ ಲೆತ್ತದಾಟದಲ್ಲಿ ಸೋತವರು ಯಾರು ? ಸಿಂಡಿ ಕೇಟಿನವರಲ್ಲವೆ ? ಜೂಜಿನಲ್ಲಿ ಸೋತವರೇ ಪಾಂಡವರು ಎಂದಲ್ಲವೇ ಭಾರತ ಹೇಳುವುದು ?

ಸಿಂಡಿಕೇಟಿನಲ್ಲಿರುವ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಧರ್ಮರಾಯರು. ಇದು ಇಲೆಕ್ಟ್ರಿಕ್ ದೀಪದಷ್ಟು ಸ್ಪಷ್ಟವಾಗಿದೆ. ಇಂಡಿಕೇಟಿನವರು ತಮ್ಮ ಪಕ್ಷದಲ್ಲಿರುವ ಧರ್ಮರಾಯನನ್ನು ತೋರಿಸಲಿ. ಸಿಂಡಿಕೇಟಿನ ಸದೋಬಾ ಪಾಟೀಲರೇ ಅರ್ಜುನ. ಅವರು ಮುಂಬಯಿ ಕಾಂಗ್ರೆಸ್ಸಿನ ಸವ್ಯಸಾಚಿ. ಮೂರು ಲೋಕದ ಗಂಡ. ಮುಂಬಯಿ ಬಂಡವಾಳಗಾರರು ಕೊಟ್ಟ ಗಾಂಡೀವ ಧನುಸ್ಸು ಅವರ ಹತ್ತಿರ ಇದೆ. ಆದರೆ ಯುದ್ಧ ಮಾಡಬೇಕೋ ಬೇಡವೋ ಎಂಬ ಬಗ್ಗೆ ಅವರಿಗೆ ಭಲೇ ಮೀನಮೇಷ. ಸಿಂಡಿಕೇಟಿನ ಭೀಮನನ್ನೂ ತೋರಿಸಬಲ್ಲೆ. ಆದರೆ ಭೀಮಸೇನ 'ಭಾಮಿನಿ'ಯಾಗಿದ್ದಾನೆ. ತಾರಕೇಶ್ವರಿ ಸಿಂಹೆ ರನ್ನನ ಭೀಮನ ಹಾಗೆ. "ಇದು ಲಾಕ್ಷಾಗೇಹದಾಹಕ್ಕೆ, ಇದು ವಿಷಮ ವಿಷಾನ್ನಕ್ಕೆ, ಇದು ಆ ನಾಡ ಜೂಜಿಂಗೆ...." ಎಂದು ಒಂದೊಂದೇ ತಪ್ಪು ಗಳನ್ನೆಣಿಸಿ ಮಾತಿನ ಗದಾಪ್ರಹಾರ ಮಾಡುತ್ತಾರೆ.

ಸಿಂಡಿಕೇಟು ತನ್ನ ದುರ್ಯೋಧನ, ದುಶ್ಯಾಸನ, ಸೋದರಮಾವನಾಗಿ ಬಂದ ಶಕುನಿ—ಎಲ್ಲರಿಂದ ಪರಿಪೂರ್ಣವಾಗಿದೆ. ಆದರೆ ನನ್ನ ಚರ್ಮದಮೇಲೆ ನನಗೆ ಪ್ರೀತಿ ಇರುವುದರಿಂದ ಅವರನ್ನು ಹೆಸರು ಹಿಡಿದು ಹೇಳುವುದಿಲ್ಲ. ನೀವೆಲ್ಲ ಅವರನ್ನು ಸುಲಭವಾಗಿ ಗುರುತು ಹಿಡಿಯುತ್ತೀರೆಂದು ನನಗೆ ಭರವಸೆ

ಇದೆ. ಕನ್ನಡ ಕುಂತಿ ತೊರೆದುಬಿಟ್ಟ ಕರ್ಣನೊಬ್ಬ ನಿಜವಾಗಿ ಬಂಡವಾಳಗಾರ. ಪಾಂಡವರ ಸಂಗಡ ಇರಬೇಕಾದವ ಕೌರವರ ಪಕ್ಷಕ್ಕೆ ತಳ್ಳಲ್ಪಟ್ಟದ್ದು ಕೂಡ ನಿಮಗೆ ಗೊತ್ತಿದೆ.

ಮಿಶ್ರಾಜಿಯವರು ಪಾರ್ಲಿಮೆಂಟರಿ ಪ್ರಜಾಸತ್ತಮ್ಮನನ್ನು ದ್ರೌಪದಿಯಾಗಿ ಮಾಡಿದ್ದಾರೆ. ಆಧುನಿಕ ಕೌರವರು ಈ ನವೀನ ದ್ರೌಪದಿಯ ಸೀರೆ ಸೆಳೆಯುತ್ತಿದ್ದಾರೆ. ಸತ್ಯವೇ. ಆದರೆ ಮಿಶ್ರಾಜಿ, ನಿಮ್ಮ ಪಾಂಡವರು ಈ ವಸ್ತ್ರಾಪಹರಣಕ್ಕೆ ತಾವೇ ದಾರಿ ಮಾಡಿಕೊಡಲಿಲ್ಲವೇ? ತಮತಮಗೆ ಅನುಕೂಲವಾದಾಗ ಈ ಅಗ್ನಿಪುತ್ರಿಯ ಸೀರೆಯನ್ನು ಪ್ರತಿ ಪಾಂಡವನೂ ಅಲ್ಲಿಷ್ಟು ಇಲ್ಲಿಷ್ಟು ಹರಿದೋ ಸರಿಸಿಯೋ ಅವಳ ಮಾನವನ್ನು ಬಯಲಿಗೆ ಇಡಲಿಲ್ಲವೆ?

ಈ ವಸ್ತ್ರಾಪಹರಣದ ವಿಷಯದಲ್ಲಿ ನವಕೌರವರಿಗೆ ನಾನು ಸವಾಲು ಹಾಕಿದೆ. ಅವರು ಹೇಳುತ್ತಾರೆ, "ನಾವು ಸೀರೆ ಸೆಳೆಯುತ್ತಾ ಇಲ್ಲ. ಬರೇ ಈ ಬಡಪಾಯಿ ದ್ರೌಪದಿಯ ಸೀರೆ ಎಷ್ಟುಮಟ್ಟಿಗೆ ಹರಿದು–ತೇಪೆಹಾಕಿ, ಒಗೆದು-ಬಣ್ಣಗೆಟ್ಟು, ಸವೆದು ಜಾಳಾಗಿಹೋಗಿದೆಯೆಂದು ತೋರಿಸುವುದಕ್ಕಾಗಿ ನಾವು ಈ ಸಭಾಪರ್ವವನ್ನು ಆಚರಿಸುತ್ತಿದ್ದೇವೆ. ಐವರು ಗಂಡರಿದ್ದು ಒಂದು ಒಳ್ಳೇ ಗಟ್ಟಿರಂಗಿನ ಜಲಗಂಟಾಪುರ ಸೀರೆಯನ್ನಾದರೂ ತಂದುಕೊಡಲಾರದ ಇವರು ಗಂಡರೋ ಷಂಡರೋ ನೀವೇ ಹೇಳಿ. ದ್ರೌಪದಮ್ಮ ನಮ್ಮ ಜತೆಗೆ ಬಂದರೆ ಈ ದರಿದ್ರ ಸೀರೆಯನ್ನು ಕಿತ್ತೊಗೆದು ಅಪ್ಪಟ ಲೇಟೆಸ್ಟ್ ಡಿಜೈನ್ ಬಟ್ಟೆಯಿಂದ ಅವಳನ್ನು ಸಿಂಗರಿಸುತ್ತೇವೆ" ಅಂತ.

ನವಕೌರವರು ದ್ರೌಪದಿಯ ಸೀರೆ ಸೆಳೆದೊಗೆದು ಅವಳಿಗೆ ಒಳ್ಳೇ ಗಟ್ಟಿಮುಟ್ಟಾದ ಬಟ್ಟೆಯಿಂದ ಮಾಡಿದ ಒಂದು ಮಿನಿಸ್ಕರ್ಟು ತೊಡಿಸಲು ಆತುರರಾಗಿದ್ದಾರೆ. ಹೊಕ್ಕಳ ಕೆಳಗೆ ಸಡಿಲಾಗಿ ಉಟ್ಟ ಸೀರೆಗಿಂತ ಬಿಗಿಯಾದ ಮಿನಿಸ್ಕರ್ಟು ವಸ್ತ್ರಾಪಹರಣದ ಭಯವನ್ನು ಕಡಿಮೆ ಮಾಡುತ್ತದೆ. ವಸ್ತ್ರಾಪಹರಣದ ಆಗತ್ಯವೂ ಅಷ್ಟು ಉಳಿಯುವುದಿಲ್ಲ ಎನ್ನಿ. ಈ ನವದ್ರೌಪದಮ್ಮನಿಗೆ ಉದ್ದವಾಗಿ ಚವರಿ ಹಾಕಿ ಹೆಣೆದ ಜಡೆಯ ಬದಲು ಬಾಬ್ ಕಟ್ ಮಾಡಿಸಿಬಿಡುವುದಕ್ಕೂ ಇಂಡಿಕೇಟಿನವರು ಆತುರರಾದ ಹಾಗೆ ಕಾಣುತ್ತದೆ. ನನ್ನ ನಿಜವಾದ ಅಭಿಪ್ರಾಯ ಕೇಳಿದರೆ ಪ್ರಜಾಸತ್ತಮ್ಮನಿಗೆ ಬಂದ ಅನೇಕ ಜ್ವರ, ಪೌಷ್ಟಿಕ ಆಹಾರದ ಅಭಾವ, ಅತಿಯಾದ ಕೂದಲೆಣ್ಣೆ ವ್ಯಾಸ್‌ಲೀನ್

ಗಳ ಲೇಪನ ಇವುಗಳಿಂದ ಕೂದಲು ಉದುರಿಹೋಗಿ ಅವಳ ಕೇಶಕಲಾಪದಲ್ಲಿ ಚವರಿ ಹೆಚ್ಚು, ಕೇಶ ಕಡಿಮೆಯಾಗಿದೆ. ಬಾಬ್ ಕಟ್ಟಿನ ಹೆಣ್ಣಿನ ಕೂದಲು ಎಳೆಯುವುದು ಮುಡಿ ಕಟ್ಟಿದ ಹೆಣ್ಣಿನ ಕೇಶಾಕರ್ಷಣದಷ್ಟು ಸುಲಭವಲ್ಲ.

ಈ ನವಪಾಂಡವರು ಅಂತಿಮ ಜಯ ತಮ್ಮದೇ ಎಂದು ತಮ್ಮನ್ನು ತಾವು ಪುಸಲಾಯಿಸಿಕೊಳ್ಳುತ್ತಿದ್ದಾರೆ. ಏಕೆಂದರೆ ತಾವು ಸತ್ಯವಂತರು ಎಂಬುದು ಅವರ ನಂಬಿಕೆ. ಅಥವಾ ನಮ್ಮಲ್ಲಿ ಆ ನಂಬಿಕೆ ಕುದುರಿಸುವುದು ಅವರ ಅಪೇಕ್ಷೆ. ವಾಸ್ತವಿಕವೆಂದರೆ ಪಾಂಡವರಿಗೆ ಒಂದು ಒಳ್ಳೆ ಚೂಟಿಯಾದ ಒರಿಜಿನಲ್ ಸುಳ್ಳು ಹೇಳಲು ಬಾರದು. ಸುಳ್ಳು ಸತ್ಯವನ್ನು ಸ್ವಲ್ಪವಾದರೂ ಹೋಲಬೇಕು ಎಂಬ ಗೊಡ್ಡು ರಾಜಕೀಯ ಸಿದ್ಧಾಂತವನ್ನು ಅವರಿನ್ನೂ ಅಪ್ಪಿ ಕೊಂಡಿದ್ದಾರೆ. ಆದರೆ ಕೌರವರು ಇಂಥಾ ಹಳೇ ಭ್ರಾಂತಿಗಳನ್ನೆಲ್ಲಾ ಒಕ್ಕೊಟ್ಟಿ ದ್ದಾರೆ. ಹಸಿದವರು ಸತ್ಯವನ್ನು ತಿನ್ನಲಾರರೆಂದು ಅವರಿಗೆ ಗೊತ್ತು. ಅಡಿಗೆ ಆಗುತ್ತಿದೆಯೆಂದು ಸುಳ್ಳು ಹೇಳಿದರೆ ಹಸಿದವರನ್ನು ಕೆಲಕಾಲ ಶಾಂತವಾಗಿಡಲು ಸಾಧ್ಯವಿದೆ.

ಅಂತಿಮ ಜಯ ತಮಗೇ ಎಂದು ಈ ನವಪಾಂಡವರು ನಂಬುತ್ತಿರಬಹುದು. ನನಗೆ ಅಷ್ಟು ನಂಬಿಕೆಯಿಲ್ಲ. ಆ ಕೌರವರಿಗೂ ಈ ಕೌರವರಿಗೂ ಒಂದು ಮುಖ್ಯ ಅಂತರ ಇದೆ. ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ ಎಂಬ ಮುದುಕರನ್ನೆಲ್ಲಾ ಈ ಕೌರವರು ಹೊರಗಟ್ಟಿದ್ದಾರೆ. ಇವರ ಪಕ್ಷದಲ್ಲಿ ಭೀಷ್ಮ ಇಲ್ಲ, ಕೃಪ ಇಲ್ಲ, ದಾರಿ ತಪ್ಪಿ ಬಂದ ಶಲ್ಯ ಇಲ್ಲ.

ಆ ಪಾಂಡವರಿಗೂ, ಈ ಪಾಂಡವರಿಗೂ ಒಂದು ಮುಖ್ಯ ಅಂತರ ಇದೆ. ಅವರಿಗೆ ಕೃಷ್ಣ ಇದ್ದ. ಇವರು ಒಬ್ಬ ಕೃಷ್ಣನನ್ನು ಸಂಪಾದಿಸುವುದಕ್ಕೆ ಅಸಮರ್ಥರಾಗಿದ್ದಾರೆ. ಪಾಂಡವರನ್ನು ಧರ್ಮರಾಯನ ಮೊದ್ದು ಸತ್ಯ ಕಾಯ್ದಿತೆಂಬುದು ಪ್ರಥಮ ಅಸತ್ಯ. ಅವರನ್ನು ಕಾಯ್ದವ ಕೃಷ್ಣ. ಕೃಷ್ಣ ಪಾಂಡವರಿಗಾಗಿ ಅವರಿಗೆ ಒಲಿಯಲಿಲ್ಲ, ದ್ರೌಪದಿಗಾಗಿ ಒಲಿದ. ದ್ರೌಪದಿಯ ಮೊರೆ ಕೇಳಿ ಆತ ಬಂದ. ಆದರೆ ಈ ದ್ರೌಪದಿಗೆ ತನ್ನ ವಸ್ತ್ರಾಪಹರಣ ಅಷ್ಟು ಅಪ್ರಿಯವಾದಂತೆ ಕಾಣಲಿಲ್ಲ. ಅವಳಿಗೆ ಮಿನಿಸ್ಕರ್ಟಿನ ಹಂಬಲ.

ಆದ್ದರಿಂದ ಅಂತೂ ಇಂತೂ ಕುಂತೀ ಮಕ್ಕಳಿಗೆ ವನವಾಸವೇ ಗತಿ ಎಂಬುದು ನನ್ನ ಊಹೆ. (೧೯೭೩)

# ಮಂತ್ರಿಗಳ ದಿನಚರಿ

## ೧

ಈಚೆಗೆ ನಾನು ಬಫೆಲೋ-ಲ್ಯಾಂಡಿನ ಮಂತ್ರಿಗಳೊಬ್ಬರ ಜತೆ ಪ್ರವಾಸಮಾಡುತ್ತಿದ್ದಾಗ ಅವರ ಟ್ರಂಕಿನಿಂದ ನಾನು ಅವರ ದಿನಚರಿ ಪುಸ್ತಕವನ್ನು ಎಬ್ಬಿಸಿದೆ. ಪುಸ್ತಕಗಳನ್ನು ಕದಿಯುವುದೂ ಸಾಲಿಗ್ರಾಮಗಳನ್ನು ಅಪಹರಿಸುವುದೂ ಪಾಪವಲ್ಲವೆಂದು ನನಗೆ ಚಿಕ್ಕಂದಿನಲ್ಲೇ ಕಲಿಸಲಾಗಿರುವುದರಿಂದ ಈ ಕಳವಿಗಾಗಿ ನನಗೆ ಪಶ್ಚಾತ್ತಾಪವಾಗುವುದಿಲ್ಲ.

ಈ ಮಂತ್ರಿಮಹಾಶಯರಿಗೆ ಇತರ ಮಂತ್ರಿಗಳ ಹಾಗೆ ಬಹಳ ಕೆಲಸ ಇದ್ದಂತೆ ಕಾಣಲಿಲ್ಲ. ಇಲ್ಲದಿದ್ದರೆ ಅವರಿಗೆ ದಿನಚರಿ ಬರೆಯಲು ಎಲ್ಲಿ ಪುರುಸೊತ್ತು ಸಿಗುತ್ತಿತ್ತು! ಮೇಲಾಗಿ ಅವರು ಬರೆದದ್ದನ್ನು ಓದುವಾಗ ಅವರು ತಮ್ಮ ದೈನಂದಿನ ಚಟುವಟಿಕೆಗಳ ಬಗ್ಗೆ ಏನೂ ಬರೆದಿಲ್ಲವೆಂದು ವಿದಿತವಾಯಿತು. ಇದನ್ನು ನೋಡಿ ನನಗೆ ಪುಸ್ತಕ ಕದ್ದದ್ದರಲ್ಲಿ ಅರ್ಧ ಸಾರ್ಥಕ ಭಾವ ಹಾರಿಹೋಯಿತು. ಅವರು ಅದರಲ್ಲಿ ತಮ್ಮ ಆಯಾ ದಿನದ ವಿಚಾರ ಲಹರಿಯನ್ನು ಮಾತ್ರ ನಮೂದಿಸುತ್ತಿದ್ದರು. ಈ ವಿಚಾರಲಹರಿಗೆ ಹಿನ್ನೆಲೆಯಾಗಿ ಅವರ ಸ್ವಂತ ಕೃತಿಗಳು ಇರುತ್ತಿದ್ದವೋ ಅಥವಾ ಇತರ ಕೃತಿಗಳ ಪ್ರೇರಣೆಯಿತ್ತೋ ತಿಳಿಯುವುದಿಲ್ಲ. ಆದರೆ ರಾಜಕೀಯ ವಿಚಾರಗಳೆಂಬ ದೃಷ್ಟಿಯಿಂದ ಅವು ತುಂಬ ಪ್ರೌಢವಾಗಿವೆಯೆಂದು ನನ್ನ ಮತ.

ಮಂತ್ರಿಗಳ ಹೆಸರೇನೆಂದು ತಿಳಿಯಲು ನೀವು ಬಹಳ ಉತ್ಸುಕರಾಗಿದ್ದೀರೆಂದು ನನಗೆ ಗೊತ್ತು. ಅವರು ಪುಸ್ತಕದ ಮೇಲೆ ಸರ್ವಪ್ಪ ಮಂತ್ರಪ್ಪ ಎಂದು ಬರೆದಿದ್ದುದರಿಂದ ಜಾತ್ಯತೀತ ಮನೋವೃತ್ತಿಯವರಾಗಿದ್ದರೆಂದು ವೇದ್ಯವಾಗುತ್ತದೆ.

ಈಗ ಸರ್ವಪ್ಪ ಮಂತ್ರಪ್ಪ ಅವರ ದೈನಂದಿನ ವಿಚಾರಲಹರಿಗಳಿಂದ ಕೆಲ ಆಯ್ದ ಮುಕ್ತಕಗಳನ್ನು ಓದಿರಿ.

## ಜೂನ್ ೧೫, ೧೯೭೨

ಮಳೆ ಪ್ರಾರಂಭವಾಗಿ ಎರಡು ವಾರ ಆಗಬೇಕಿತ್ತು. ಆದರೆ ಇನ್ನೂ ಒಂದು ಕರಿಮೋಡದ ಸುಳಿವಿಲ್ಲ. ಮಂತ್ರಿಗಳ ಅಧಿಕಾರಕ್ಕೆ ಮಿತಿ ಇಲ್ಲ ಎಂದು ಜನರು ಭಾವಿಸುತ್ತಾರೆ; ಮತ್ತು ನಾವು ನಮ್ಮ ಮೊದ್ದು ಕ್ಷಣಗಳಲ್ಲಿ ಹಾಗೇ ಭಾವಿಸುತ್ತೇವೆ. ಮೋಡಗಳ ಮೇಲೊಂದು ಸುಗ್ರೀವಾಜ್ಞೆ ಹೊರಡಿಸಲು ನಮಗೆ ಸಾಧ್ಯವಾಗದಿರುವುದು ಎಷ್ಟು ಅನ್ಯಾಯ! ಈ ಸಲ ಮಳೆಯಾಗದಿದ್ದರೆ ಈ ಮೂರನೇ ಬರಗಾಲ ವರ್ಷವನ್ನು ಎದುರಿಸಿ ನಮ್ಮ ಮಂತ್ರಿಸಂಪುಟ ಉಳಿಯುವುದು ಕಷ್ಟ.

## ನವಂಬರ್ ೧೨, ೧೯೭೨

ಬರಗಾಲ ಪೂರ್ತಿಯಾಗಿ ನಮ್ಮ ಮೇಲೆರಗಿದೆ. ಆದರೆ ಆಶ್ಚರ್ಯವೆಂದರೆ ನಮ್ಮ ಮಂತ್ರಿಮಂಡಲ ಎಂದಿಗಿಂತಲೂ ಬಲವಾಗಿದೆ. ಮನುಷ್ಯ ಪ್ರತಿಯೊಂದು ವಿಪತ್ತನ್ನು ತನ್ನ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳಲು ಕಲಿಯುತ್ತಾನೆ. ಬರಗಾಲ ಪ್ರದೇಶಗಳಲ್ಲಿ ಕೋಟಿಗಟ್ಟಲೆ ಹಣವನ್ನು ಸುರಿದಿದ್ದೇವೆ. ಅದರಿಂದ ಜನ ನಮ್ಮನ್ನು ಹರಸುತ್ತಿದ್ದಾರೆ. ಅದರಲ್ಲಿ ಒಂದಂಶ ನಮಗೆ ಬೇಕಾದವರ ಜೇಬುಗಳಿಗೆ ಹರಿಯುತ್ತಲೇ ಇದೆ. ಈಗ ಶಾಸನಸಭೆಯನ್ನು ವಿಸರ್ಜಿಸಿ ಚುನಾವಣೆ ಏರ್ಪಡಿಸಿದರೆ ನಮಗೆ ಪ್ರಚಂಡ ವಿಜಯ ಕಟ್ಟಿಟ್ಟದ್ದು.

## ಡಿಸೆಂಬರ್ ೭, ೧೯೭೧

ಮಂತ್ರಿಗಳ ನಡೆನುಡಿಗಳ ಬಗ್ಗೆ ದಿನವೂ ಬೊಬ್ಬೆಗಳು ಕೇಳಿಸುತ್ತಿವೆ. ಪ್ರಯೋಜನವಿಲ್ಲದೆ ಸುಮ್ಮನೆ ಯಾರಾದರೂ ಕೆಲಸ ಮಾಡಬೇಕೆಂದು ಬಹುದೆಂದು ಈ ಜನ ಯಾಕೆ ನಿರೀಕ್ಷಿಸುತ್ತಾರೆ? ನಮಗೆ ಆಗುವವರಿಗೆ ಕೆಲ ಉಪಕಾರಗಳನ್ನೂ ಆಗದವರಿಗೆ ಅಪಕಾರಗಳನ್ನೂ ಮಾಡಲಾಗದಿದ್ದರೆ ಮಂತ್ರಿ ಬಿಡಿ, ಯಾವ ಅಧಿಕಾರಸ್ಥಾನವನ್ನಾದರೂ ಪಡೆದು ಏನು ಫಲ? ಒಳ್ಳೆಯದನ್ನು ಮಾಡಲು ಈ ಪ್ರಪಂಚದಲ್ಲಿ ಸಾಧ್ಯತೆಗಳು ತೀರ ಕ್ವಚಿತ್ತಾಗಿವೆಯೆಂದೂ ಬಹುತರವಾಗಿ ಮನುಷ್ಯ ತನ್ನ ಅಸ್ತಿತ್ವವನ್ನು ಸಿದ್ಧಮಾಡಿಕೊಡಲು ಅನ್ಯಾಯಗಳನ್ನೇ ಅವಲಂಬಿಸಬೇಕಾಗುವುದೆಂಬುದನ್ನೂ ಅಧಿಕಾರ ನಡೆಸು

ವುದರಲ್ಲಿ ಇರುವ ಸವಿ ಇದೇ ಎಂಬುದನ್ನೂ ಜನರು ಮನಗಾಣದಿರುವುದು ತೀರ ಆಶ್ಚರ್ಯ.

### ಜನವರಿ ೩, ೧೯೬೯

ರಾಜ್ಯವಾಳುವವನ ಹಾಸಿಗೆ ಮುಳ್ಳಿನ ಹಾಸಿಗೆಯೆನ್ನುತ್ತಾರೆ. ನಿಮಗೆ ಹೇಗೆ ಮಾಡಬೇಕೆಂದು ಗೊತ್ತಿದ್ದರೆ ಮುಳ್ಳಿನ ಮೇಲೆ ಅದಕ್ಕೆ ಎಟುಕದಷ್ಟು ದಪ್ಪ ಹಾಸಿಗೆಯನ್ನು ಮಾಡಿಕೊಳ್ಳಲು ಸಾಧ್ಯವಿದೆ. ಅದಕ್ಕಿಂತಲೂ ಒಳ್ಳೆಯದೆಂದರೆ ಮುಳ್ಳು ನಾಟದಷ್ಟು ದಪ್ಪವಾದ ತೊಗಲನ್ನು ಬೆಳೆಸಿಕೊಳ್ಳುವುದು. ದಪ್ಪ ಚರ್ಮದಷ್ಟು ಒಳ್ಳೆಯ ಸಂಪತ್ತು ಮತ್ತೊಂದಿಲ್ಲ.

### ಡಿಸೆಂಬರ್ ೧೬, ೧೯೭೧

ಕಾನೂನು ವಿರಾರಿ ಮಂತ್ರಿಗಳು ವರ್ತಿಸುತ್ತಾರೆಂದು ಆರೋಪಗಳು ಬರುತ್ತಿವೆ. ಪಕ್ಷಪಾತ ಮಾಡಲಾಗುತ್ತದೆಂದೂ ದೂರಾಗುತ್ತದೆ. ಕಾನೂನುಪ್ರಕಾರ ಕೆಲಸ ಮಾಡುವುದಾದರೆ ರಾಜ್ಯವಾಳಲಿಕ್ಕೆ ಹೆಡ್ ಕ್ಲಾರ್ಕುಗಳು ಸಾಲುವುದಿಲ್ಲವೇ? ವರ್ಷಗಟ್ಟಲೆ ಏದುಸಿರು ಬಿಡುತ್ತ ಏಣಿ ಹತ್ತಿ ಬಂದು ಮಂತ್ರಿಯಾಗುವುದರಲ್ಲಿ ಏನು ಪುರುಷಾರ್ಥ?

### ಜನವರಿ ೮, ೧೯೭೩

ಇಡೀ ದೇಶವೇ ಹೇಡಿಯಾಗಿರುವಾಗ ಮಂತ್ರಿಗಳು ಪೌರುಷವಂತರಾಗಲಾರರು. ಪೌರುಷ ತೋರಿಸಿ ಫಲವೂ ಇಲ್ಲ. ಇಡೀ ದೇಶವೇ ಭ್ರಷ್ಟಾಚಾರಿಯಾಗಿರುವಾಗ ಮಂತ್ರಿಯೊಬ್ಬ ಸುಭಗನಾಗಿರಲಾರ. ರಾಜಕಾರಣವೆಂದರೆ ಸಾಧ್ಯವಿದ್ದದ್ದನ್ನು ಮಾಡಿ ಅಸಾಧ್ಯವನ್ನು ಮಾಡಿದಂತೆ ತೋರಿಸಿಕೊಳ್ಳುವ ಕಲೆ. ಕಳ್ಳನ ಒಂದಂಶವಿಲ್ಲದೆ ರಾಜಕಾರಣಿಯಾಗಿ ದಕ್ಕಿಸಿಕೊಳ್ಳುವುದು ಅಸಾಧ್ಯ.

### ಅಕ್ಟೋಬರ್ ೧೭, ೧೯೬೯

ಸಂಭಾವಿತ ಮಂತ್ರಿಯೆನ್ನುವುದು ಯುಟೋಪಿಯನ್ ಕಲ್ಪನೆ. ಮಂತ್ರಿ ಶಬ್ದದಲ್ಲೇ ಮಂತ್ರಣ ಅಂದರೆ ಗುಟ್ಟಾದ ಮಾತುಕತೆ ಅಡಕವಾಗಿದೆ. ಗುಟ್ಟು

ಮಾಡತಕ್ಕದ್ದಿಲ್ಲದಿದ್ದರೆ ಗುಟ್ಟು ಯಾಕೆ? ನಿಜವಾಗಿ ಸಂಭಾವಿತ ಮಂತ್ರಿಯನ್ನು ಯಾರೂ ಗೌರವಿಸುವುದಿಲ್ಲ. ಯಾಕೆ ಗೌರವಿಸಬೇಕು? ಗೌರವ ಎಂಬುದು ಭಯಮೂಲವಾದದ್ದು. ಸಂಭಾವಿತನಿಗೆ ಯಾರೂ ಅಂಜಬೇಕಾದ್ದಿಲ್ಲ. ಅವನನ್ನು ಯಾರೂ ಆಶ್ರಯಿಸುವುದಿಲ್ಲ. ಏಕೆಂದರೆ ಆಶ್ರಯಿಸಿದ್ದರಿಂದ ಅವರಿಗೆ ಲಾಭವಿಲ್ಲ.

### ಜುಲೈ ೧, ೧೯೭೧

ಯಾವ ಮಂತ್ರಿಯ ತಲೆ ಯಾವಾಗ ಉರುಳುತ್ತದೋ ಹೇಳುವವರು ಯಾರು? ಆದ್ದರಿಂದ ಇದ್ದಾಗ ಜೇಬುಗಳ ತುಂಬಿಕೊಳ್ಳದ ಹೊಲೆಯ. ಹಣ ಎಂಬುದೇ ಸತ್ಯ, ಹಣವೆಂಬುದೇ ರಕ್ಷೆ.

### ಆಗಸ್ಟ್ ೧೫, ೧೯೭೦

ಪಾಯಸ ಮಾಡುವವರು ಅದರ ರುಚಿ ನೋಡಬಾರದೆಂದು ಹೇಳಲು ಸರಕಾರ ನಡೆಸುವುದೆಂದರೆ ಬ್ರಾಹ್ಮಣರ ಶ್ರಾದ್ಧದ ಅಡಿಗೆ ಕೆಟ್ಟುಹೋಯಿತೇ?

### ಮಾರ್ಚ್ ೬, ೧೯೭೨

ಪ್ರಜಾಸತ್ತಾತ್ಮಕ ರಾಜಕಾರಣವೆಂದರೆ ಇನ್ನೊಬ್ಬನು ಜನರಿಗೆ ಯಾವ ಒಳ್ಳೆಯದನ್ನೂ ಮಾಡಲು ಅಸಾಧ್ಯವಾಗುವಂತೆ ಮಾಡುವ ಕಲೆ. ನಾವು ವಿರೋಧ ಪಕ್ಷದಲ್ಲಿ ಇದ್ದಾಗ ಅದನ್ನೇ ಮಾಡಿದೆವು. ಈಗ ವಿರೋಧ ಪಕ್ಷದಲ್ಲಿರುವವರು ಅದನ್ನೇ ಮಾಡುತ್ತಾರೆ. ದೇಶ ಇದ್ದಲ್ಲಿಯೇ ಇರುತ್ತದೆ. ಎಲ್ಲರೂ ಸುಖವಾಗಿರುತ್ತಾರೆ.

### ಏಪ್ರಿಲ್ ೧೧, ೧೯೭೪

ಜನಹಿತ ಮಾಡುವುದು ಚುನಾವಣಾ ಘೋಷಣೆಯಲ್ಲಿದ್ದಷ್ಟು ಕಾಲ ಚಂದ. ಆಚರಣೆಗೆ ತರುವ ಪ್ರಯತ್ನಮಾಡಿದರೆ ಯಾರಿಗೆ ಹಿತವಾಗುತ್ತದೋ ಅವರೇ ಅದರ ವಿರುದ್ಧ ದಂಗೆ ಏಳುತ್ತಾರೆ.

## ಏಪ್ರಿಲ್ ೧೨, ೧೯೭೩

ಜನರು ತಮ್ಮ ಕಾಲುಗಳನ್ನು ಬಿಗಿದ ಸಂಕೋಲೆಗಳನ್ನು ಕಳೆದುಕೊಳ್ಳಲು ಹಿಂಜರಿಯುತ್ತಾರೆ—ಅವರು ಹೆಡ್ಡರಲ್ಲ. ಅವರ ಕಾಲಿನ ಸಂಕೋಲೆ ಮುರಿದೊಯ್ದವರು ಅದರಿಂದ ಅವರ ಗಂಟಲಿಗೆ ಗಾಣಗಳನ್ನು ನಿರ್ಮಿಸುವ ಸಂಭವವಿದೆ.

## ೨

ಬಫೆಲೋ-ಲ್ಯಾಂಡಿನ ಮಂತ್ರಿಗಳಾದ ಶ್ರೀಮಾನ್ ಸರ್ವಪ್ಪ ಮಂತ್ರಪ್ಪ ಅವರ ದಿನಚರಿಯನ್ನು ನಾನು ಕೈವಶ ಮಾಡಿಕೊಂಡು ಅದರಲ್ಲಿ ಅವರು ವ್ಯಕ್ತಪಡಿಸಿದ ಕೆಲ ವಿಚಾರಲಹರಿಗಳನ್ನು ಓದುಗರ ಕಡೆ ಕಳೆದ ವಾರ ತೇಲಿಸಿಬಿಟ್ಟಿದ್ದೆ. ಈಗ ಅದರಿಂದ ಮತ್ತೆ ಕೆಲವು ಆಣಿಮುತ್ತುಗಳನ್ನು ಕೊಡುತ್ತಿದ್ದೇನೆ.

## ಡಿಸೆಂಬರ್ ೧೬, ೧೯೭೦

ಜನಸಾಮಾನ್ಯರು ಜನಸಾಮಾನ್ಯರಿಂದ ಜನಸಾಮಾನ್ಯರಿಗಾಗಿ ಆರಿಸುವ ಪ್ರತಿನಿಧಿಗಳಾದ ನಾವು ಜನಸಾಮಾನ್ಯರ ಗುಣದೋಷಗಳಿಂದ ಮುಕ್ತರಾಗಿರಬೇಕೆಂದು ಜನಸಾಮಾನ್ಯರು ಯಾಕೆ ಭಾವಿಸುತ್ತಾರೆ? ಜನಸಾಮಾನ್ಯರಿಗಿಂತ ಭಿನ್ನವಾದ ನಡವಳಿಯನ್ನು ನಾವು ಹಮ್ಮಿಕೊಂಡರೆ ತತ್‌ಕ್ಷಣ ಜನಸಾಮಾನ್ಯರಿಂದ ದೂರವಾಗುವುದಿಲ್ಲವೆ? ಆಗ ನಾವು ಅವರ ಪ್ರತಿನಿಧಿಗಳು ಹೇಗಾಗುತ್ತೇವೆ?

## ಜನವರಿ ೧೭, ೧೯೭೨

ಜನರು ತಮ್ಮ ಪ್ರತಿನಿಧಿಗಳನ್ನು ಆರಿಸುವಾಗ ಅವರ ಗುಣಗಳನ್ನು, ಸತ್ಕಾರ್ಯಗಳನ್ನು, ಸೇವಾನಿಷ್ಠೆಯನ್ನು ಗಮನಿಸುವುದಿಲ್ಲ. ನಮ್ಮ ಅವಗುಣಗಳಿಗಾಗಿಯೇ ಜನ ನಮ್ಮನ್ನು ಮೆಚ್ಚುವಂತೆ ಕಾಣುತ್ತದೆ. ನನ್ನಿಂದ ಸರ್ವವಿಧದಲ್ಲಿಯೂ ಉತ್ತಮನಾದ ಪ್ರತಿಸ್ಪರ್ಧಿಯನ್ನು ಸೋಲಿಸಿ ನಾನು ಆರಿಸಿ

ಬಂದಿದ್ದೇನೆ. ಆದರೂ ಜನರು ಮೂರ್ಖರೆಂದು ಹೇಳಲು ಸಾಧ್ಯವಿಲ್ಲ. ಒಳ್ಳೆಯವನನ್ನು ಮೆಂಬರನೋ ಮಂತ್ರಿಯೋ ಮಾಡಿ ಅವನನ್ನು ಹೊಲೆಗೆಡಿಸುವುದಕ್ಕಿಂತ ಆಗಲೇ ಸಂಶಯಾಸ್ಪದ ಚರಿತ್ರದವನಾದವನನ್ನು ಆರಿಸಿ ಒಳ್ಳೆಯವರನ್ನು ಅವರ ಒಳ್ಳೆತನಕ್ಕೆ ಬಿಡುವುದು ಲೇಸಲ್ಲವೆ?

## ಜನವರಿ ೧೮, ೧೯೬೨

ಬಫೆಲೋ-ಲ್ಯಾಂಡಿನಲ್ಲಿ ಪತ್ರಿಕೆಗಳು ಒಂದು ತರಹದ ಬಫೆಲೋಗಳು. ನಾವು ಕೆಲವೇಳೆ ಉದ್ದನಾಲಿಗೆಯಿಂದ ಮಾಡುವ ಹೇಳಿಕೆಗಳನ್ನು ಅವು ಮುದ್ರಿಸುತ್ತವೆ. ಆಮೇಲೆ ನಾವು ಹಾಗೆ ಹೇಳಿಲ್ಲ, ಪತ್ರಿಕೆಗಳು ತಪ್ಪುವರದಿ ಮಾಡಿವೆ ಎಂದು ಹೇಳಿದರೆ ಅದನ್ನೂ ಮುದ್ರಿಸುತ್ತವೆ. ನಮ್ಮ ಪುಣ್ಯಕ್ಕೆ ಅವು ನಾವು ಹಾಗೆ ಹೇಳಿದ್ದೇವೆಂದು ಪುರಾವೆಸಹಿತ ಸಿದ್ಧಮಾಡಿಕೊಡಲು ಪ್ರಯತ್ನಿಸುವುದಿಲ್ಲ. ಬಫೆಲೋ ಹಾಗೆ ಪತ್ರಿಕೆಗಳು ಎಲ್ಲರ ತಪ್ಪಿಗೂ ತಾವು ತಲೆಕೊಡುತ್ತವೆ. ಅವುಗಳ ಚರ್ಮ ರಾಜಕಾರಣಿಗಳ ಚರ್ಮಕ್ಕಿಂತಲೂ ದಪ್ಪ ಅಂತ ಕಾಣುತ್ತದೆ.

## ಡಿಸೆಂಬರ್ ೧, ೧೯೬೨

ಇಂದಿನ ಕಾಲದಲ್ಲಿ ಸರ್ವಜ್ಞತ್ವ ಪದವಿಯನ್ನು ಪಡೆಯಲು ಎಲ್ಲಕ್ಕಿಂತ ಶ್ರೇಷ್ಠಸಾಧನ ಎಂದರೆ ಮಂತ್ರಿಪದಕ್ಕೇರುವುದು. ಮಂತ್ರಿಯಾದ ನಿರಕ್ಷರಿಯನ್ನು ವಿಜ್ಞಾನಿಗಳು ತಮ್ಮ ಪರಿಷತ್ತುಗಳನ್ನು ಉದ್ಘಾಟಿಸಲು ಕರೆಯುತ್ತಾರೆ; ಮತ್ತು ಪರಮಾಣುವನ್ನು ಜನಹಿತಕ್ಕೆ ಹೇಗೆ ಬಳಸಬೇಕೆಂಬ ಬಗ್ಗೆ ಅವನಿಂದ ಉಪದೇಶಾಮೃತವನ್ನು ಸ್ವೀಕರಿಸುತ್ತಾರೆ; ಸಂಸ್ಕೃತ ಪಂಡಿತರು ಅವನನ್ನು ಬರಮಾಡಿಕೊಂಡು ಸಂಸ್ಕೃತದ ಹಿರಿಮೆಯ ಬಗ್ಗೆ ಹೇಳಿಸಿಕೊಳ್ಳುತ್ತಾರೆ; ಕವಿಗಳು ನಮ್ಮನ್ನು ಸ್ವಾಗತಿಸಿ ಕವಿತ್ವದ ವಿಷಯದಲ್ಲಿ ಸಲಹೆಗಳನ್ನು ಆಲಿಸುತ್ತಾರೆ. ಕಳ್ಳರು ಸಮ್ಮೇಳನಗಳನ್ನು ಮಾಡಿ ನಮ್ಮನ್ನು ಆಮಂತ್ರಿಸಿದರೆ ಅವರಿಗೂ ನಾವು ಒಂದೆರಡು ಉಪಯುಕ್ತ ಸಲಹೆಗಳನ್ನು ಕೊಡಬಹುದಿತ್ತು. ಮತ್ತು ಕಳ್ಳರ ಮೂಲಭೂತ ಹಕ್ಕುಗಳ ಬಗ್ಗೆ ನಮಗೆ ಮನವಿ ಅರ್ಪಿಸಿದರೆ ಅದನ್ನು ನಾವು ಸಹಾನುಭೂತಿಯಿಂದ ಕೇಳಿಕೊಳ್ಳಲು ಸಿದ್ಧರಿದ್ದೇವೆಂದು

ಅವರಿಗೆ ಮನವರಿಕೆಯಾಗಬಹುದು. ಅವರು ಇಂಥ ಕಾರ್ಯಕ್ರಮ ಇಟ್ಟು ಕೊಳ್ಳದಿರುವುದು ವಿಷಾದಕರ.

### ಜೂನ್ ೬, ೧೯೭೨

ನಾನು ಸರ್ವಾಧಿಕಾರಿಯಾಗಲು ಒಪ್ಪುವುದಿಲ್ಲ. ಆಗ ಆದ ತಪ್ಪುಗಳಿಗೆ ನಾನೇ ಜವಾಬ್ದಾರಿ ಹೊರಬೇಕಾಗುವುದು. ಜನರ ಬಾಯಿ ಮುಚ್ಚಿಸಿದರೆ ಅವರು ಕೈಯಿಂದ ಏನನ್ನಾದರೂ ಮಾಡಲು ಪ್ರಯತ್ನಿಸುವರು. ಪ್ರಜಾ ಸತ್ತೆಯಲ್ಲಿ ಹೊರತು ನಮ್ಮಂಥವರಿಗೆ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ. ಬಂದರೆ ನಾವು ಗುಂಡಿಗೆ ಗುರಿಯಾಗುವುದು ಖಂಡಿತ. ಪ್ರಜಾಸತ್ತೆಯಲ್ಲಿ ನಾನು ತಪ್ಪನ್ನು ವಿರೋಧಿ ಪಕ್ಷಗಳ ಮೇಲೆ ಹೊರೆಸಿ ಪಾರಾಗಬಹುದು.

### ಜೂನ್ ೭, ೧೯೭೨

ಜನರು ಮಾತಾಡುವಷ್ಟು ಕಾಲ ಇಲ್ಲಿ ರಕ್ತಕ್ರಾಂತಿಯಾಗುವುದಿಲ್ಲ. ಆದ್ದರಿಂದ ಮನೆಗಳಲ್ಲಿ, ಹೋಟೆಲುಗಳಲ್ಲಿ, ಆಫೀಸುಗಳಲ್ಲಿ, ವಿಧಾನಸಭೆಗಳಲ್ಲಿ, ಬೀದಿಗಳಲ್ಲಿ, ಬಸ್ಸುಗಳಲ್ಲಿ, ಸರ್ಕಸ್ಸುಗಳಲ್ಲಿ ಜನರಿಗೆ ಮಾತಾಡಲು ಸ್ವತಂತ್ರ ಕೊಡಬೇಕು. ಅವರು ನಮ್ಮನ್ನು ಬಯ್ಯಲಿ; ನಮ್ಮ ಬಗ್ಗೆ ಸುಳ್ಳು ಸತ್ಯ ಅಪವಾದಗಳನ್ನು ಚರ್ಚಿಸಲಿ; ಆಮೇಲೆ ಬಾಯಿ ಸೋತು ಮನೆಗೆ ಬಂದು ಸ್ವಸ್ಥ ಮಲಗಲಿ.

### ಜೂನ್ ೮, ೧೯೭೨

ನಮ್ಮ ಕಾನೂನುಗಳನ್ನು ನಾವು ಸರಿಯಾಗಿ ಜಾರಿಗೆ ತರಲು ಯತ್ನಿಸಿದರೆ ನಮ್ಮ ಸರಕಾರ ಉರುಳುವುದು ಖಂಡಿತ. ಆದ್ದರಿಂದ ನಾವು ಕಾನೂನು ಗಳನ್ನು ಮಾಡುತ್ತೇವೆ ಮತ್ತು ಅವುಗಳನ್ನು ಜಾರಿಗೆ ತರುವುದು.

### ನವೆಂಬರ್ ೧೧, ೧೯೭೧

ನೀವು ಇಷ್ಟೇಕೆ ಭಾಷಣ ಮಾಡುತ್ತೀರಿ?—ಅಂತ ಒಬ್ಬರು ನನಗೆ ಇಂದು ಕೇಳಿದರು. ಏನಾದರೂ ಮಾಡುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ.

(೧೯೭೩)

# ಸೇವಕರೇ ಎಲ್ಲಾ

ನಾನು ಸರ್ವಾಧಿಕಾರಿಯಾಗಿದ್ದರೆ—ದುರ್ದೈವದಿಂದ ಯಾರೂ ನನಗೆ ಆ ಪಟ್ಟಕಟ್ಟಲು ತಯಾರಾಗಿಲ್ಲ—ನಾನು ಎಲ್ಲಾ ಶಬ್ದಕೋಶಗಳಿಂದ "ಸೇವೆ" ಎಂಬ ಶಬ್ದವನ್ನು ಕಿತ್ತುಹಾಕುವಂತೆ ಕಟ್ಟಪ್ಪಣೆ ಹೊರಡಿಸುತ್ತಿದ್ದೆ. ನಮ್ಮ ದೇಶದ ವಿಪತ್ತುಗಳಿಗೆಲ್ಲಾ ಸೇವೆಯೇ ಕಾರಣವೆಂಬುದಾಗಿ ನನಗೆ ದಿನ ಹೋದ ಹಾಗೆ ಮನವರಿಕೆಯಾಗುತ್ತಿದೆ.

ನಮಗಿರುವ ಸೇವಕರ ಹಿಂಡನ್ನು ನೋಡಿ. ಗ್ರಾಮಗ್ರಾಮಕ್ಕೆ ಗ್ರಾಮ ಸೇವಕರಿದ್ದಾರೆ. ಈಚೆಗೆ ಈ ವರ್ಗವನ್ನು ಹಿಗ್ಗಿಸುವುದಕ್ಕೆ ಗ್ರಾಮಸೇವಿಕೆಯರು ಬೇರೆ ಸೇರಿಕೊಂಡಿದ್ದಾರೆ. ಹಳ್ಳಿಗಳನ್ನೇ ಹಿಂದೆಂದೂ ನೋಡಿರದ ಇವರು ಅಲ್ಲಿ ಏನು ಸೇವೆಮಾಡುವರೊ ತಿಳಿಯದು. ಆದರೆ ಅವರು ಆಗಾಗ್ಗೆ ದಣಿವಾರಿಸಿಕೊಳ್ಳುವುದಕ್ಕೆ ಜೀಪುಗಳಲ್ಲಿ ಶಹರುಗಳಿಗೆ ಸಿನೆಮಾಕ್ಕೆ ಬಂದಾಗ ನೋಡಿದರೆ ಅವರು ನಿಜವಾಗಿ ಸೇವೆಯಿಂದ ಬಹಳ ಥಕಾಯಿಸಿದ ಹಾಗೆ ಕಾಣುತ್ತದೆ. ಇವರ ಸೇವೆಗೆ ಗುರಿಯಾದವರು ಇನ್ನೆಷ್ಟು ಥಕಾಯಿಸಿರಬೇಕೋ ಎಂದು ನಾನು ಸೋಜಿಗಪಡುತ್ತೇನೆ.

ಪಟ್ಟಣಗಳಿಗೆ ಬಂದಿರೋ, ಇಲ್ಲಿ ಸಿವಿಲ್ ಸೇವಕರಿದ್ದಾರೆ. ಅವರು 'ಸಿವಿಲ್' ಆಗಿರುವುದು ಅಪರೂಪವಾಗಿರುವುದರಿಂದಲೇ ನಿಮಗೆ ಮುನ್ನೆಚ್ಚರಿಕೆ ಕೊಡೋಣವೆಂದು ಅವರಿಗೆ ಹಾಗೆ ಹೆಸರು ಕೊಟ್ಟಿರಬೇಕೆಂದು ನನಗೆ ಸಂಶಯವಿದೆ. ಆಮೇಲೆ ಪೋಲೀಸ್ ಸೇವೆ ಬೇರೆ ನಮಗೆ ಸದಾಕಾಲ ಇದೆ. ಇವರು ನಮ್ಮ ಸೇವೆಯಲ್ಲಿ ಎಷ್ಟು 'ಬಿಸಿ' ಆಗಿರುತ್ತಾರೆಂದರೆ ತೊಂದರೆ ಉದ್ಭವಿಸಿದಲ್ಲಿ ಹೋಗುವುದಕ್ಕೆ ಅವರಿಗೆ ಪುರುಷೊತ್ತೇ ಇರುವುದಿಲ್ಲ. ಒಮ್ಮೆ ಕಳವಿನ ವರದಿ ಕೊಡುವುದಕ್ಕೆ ಹೋದಾಗ ಈ ಸೇವಕರು, "ಕಳ್ಳನನ್ನು ಯಾಕೆ ಹಿಡಿದು ತರಲಿಲ್ಲ? ನೀವೇ ಕಳ್ಳ ಎಂದು ನಾವೇಕೆ ನಿಮ್ಮನ್ನು ಅರೆಸ್ಟು ಮಾಡಬಾರದು?" ಎಂದು ಗದರಿಸಿದರು. ಕಳ್ಳನನ್ನು ಹಿಡಿದುಕೊಟ್ಟದ್ದರೆ ಅವನಿಗೆ ಇವರು ಮಾಡಬಹುದಾದ ಸೇವೆಯನ್ನು ನನಗೇ ಎಲ್ಲಿ ಮಾಡಿಬಿಡುವರೋ ಎಂದು ನಾನು ಗಾಬರಿಯಾದೆ.

ಇವರು ಸಾಲದಿದ್ದರೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸೇವಕರು ನಿಮ್ಮ ಸೇವೆಗೆ ತುದಿಗಾಲ ಮೇಲೆ ನಿಂತಿರುತ್ತಾರೆ. ಸ್ಥಾನಿಕಸ್ವರಾಜ್ಯ ಎಂದರೆ ಈ ಸೇವಕರ ಸ್ವರಾಜ್ಯ ಎಂದೇ ನೀವು ತಿಳಿಯಬೇಕು. ಇವರು ಆರು ತಿಂಗಳ ಹಿಂದೆ ಮಾಡಿಹೋದ ನಲ್ಲೀ ದುರಸ್ತಿಯ ಬಿಲ್ಲನ್ನು ಮೊನ್ನೆ ನನಗೆ ಕಳಿಸಿ ಮೂರೇ ದಿನಗಳಲ್ಲಿ ಅದನ್ನು ತೀರಿಸದಿದ್ದರೆ ನನ್ನನ್ನು ನಿರ್ಜಲ ಏಕಾದಶಿಗೆ ಗುರಿಪಡಿಸುವುದಾಗಿ ನೋಟೀಸು ಕೊಟ್ಟರು. "ನೀವು ಬಿಲ್ಲು ಕಳಿಸುವುದಕ್ಕೆ ಆರು ತಿಂಗಳು ವಿರಾಮ ತೆಗೆದುಕೊಂಡಮೇಲೆ ನನಗೂ ಆರು ತಿಂಗಳ ಪುರುಸೊತ್ತು ಕೊಡಬೇಕಾಗಿತ್ತು" ಅಂತ ನಾನು ವಾದ ಹಾಕಿದೆ. ಅದಕ್ಕೆ ಅವರು, "ಕೆಂಪು ಟೇಪಿನ ಸಂಪೂರ್ಣ ಮೊನಾಪಲಿ ನಮಗೇ ಇದೆ; ನಿಮಗಿಲ್ಲ. ನೀವಿನ್ನೂ ಪುಣ್ಯವಂತರು. ಕೆಲವು ಸಲ ನಾವು ಯಾವ ನೋಟೀಸನ್ನೂ ಕೊಡದೆ, ನಾವು ಮಾಡದೇ ಇದ್ದ ದುರಸ್ತಿಯ ಕಾಣಿಕೆಯನ್ನು ನೀವು ಬಾಕಿ ಮಾಡಿಕೊಂಡಿದ್ದೀರಿ ಅಂತ ನಿಮ್ಮ ನಲ್ಲೀ-ಕ್ಟೊಮಿ ಮಾಡಿಬಿಡುವುದುಂಟು" ಎಂದು ಹೇಳಿದರು. ಅವರು ಹೇಳಿದ ಹಾಗೆಯೆ ಮಾಡಿದರು. ಮರುದಿನ ನಗರದ ಯಾವುದೋ ಓಣಿಯ ಯಾವನೋ ಆಚಾರ್ಯನ ನಲ್ಲೀ ದುರಸ್ತಿಯ ಬಿಲ್ಲು ನನ್ನನ್ನು ಹುಡುಕಿಕೊಂಡು ಬಂತು. ವಾಡಿಕೆಯಂತೆ ಆ ಬಿಲ್ಲಿನಲ್ಲಿ ಅದನ್ನು ಮೂರು ರಾತ್ರಿಗಳು ಹಗಲಿಸುವ ವೊದಲು ತೀರಿಸದಿದ್ದರೆ ಆಗತಕ್ಕ ಭೀಕರ ಪರಿಣಾಮಗಳ ಬಿಭೀಷಿಕೆ ಇತ್ತು. ಶ್ರೀರಾಮನು ಶಿವನ ಬಿಲ್ಲು ಮುರಿದು ಹಾಕಿದ ಹಾಗೆ ನಾನೂ ಈ ಬಿಲ್ಲನ್ನು ಹರಿದೊಗೆದಿದ್ದೇನೆ. ಇನ್ನವರು ನನ್ನ ನಳಭಂಗ ಮಾಡುತ್ತಾರೋ ಆ ಇನ್ನೊಬ್ಬ ದುರ್ದೈವೀ ಆಚಾರ್ಯನ ನಲ್ಲೀ-ಕ್ಟೊಮಿ ಮಾಡುತ್ತಾರೋ ನೋಡಬೇಕು.

ಆದರೆ ನಾನು ಹೇಳಹೊರಟಿರುವುದು ಈ ಸೇವಕರ ಮತ್ತು ಅವರ ಸೇವೆಯ ವಿಚಾರ ಮಾತ್ರವಲ್ಲ. ನಿಜವಾಗಿ ಇವರು ಅಪ್ಪಟ ಸೇವಕರಲ್ಲ. ಆ ಬಿರುದನ್ನು ಅವರು ಮೆಚ್ಚುವುದೂ ಇಲ್ಲ. ಇಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ಆಳುತ್ತಿದ್ದಾಗ ಸರಕಾರಿ ಅಧಿಕಾರಿಗಳಿಂದ ಬರುತ್ತಿದ್ದ ಪತ್ರಗಳ ಕೊನೆಗೆಲ್ಲ "ನಿಮ್ಮ ಅತ್ಯಂತ ವಿಧೇಯ ಸೇವಕನಾಗಿರಲು ಹಂಬಲಿಸುವ" ಎಂಬ ಉಪಸಂಹಾರವಿರುತ್ತಿತ್ತು. ಸ್ವರಾಜ್ಯ ಬಂದ ಮೇಲೆ ನಾವು ಸಮಾಜವಾದಿ ಪ್ಯಾಟರ್ನ್‌ನಿಂದಾರಂಭಿಸಿ ಈಗ ಪೂರ್ತಿ ಸಮಾಜವಾದಿಗಳೇ ಆಗಿರುವುದರಿಂದ ನಮ್ಮನ್ನು

ಸಮಾಜವಾದಕ್ಕೆ ಕೈಹಿಡಿದು ಸಾಗಿಸುವ ಸರಕಾರಿ ಕರ್ಮಚಾರಿಗಳು (ಯಾರ ಕರ್ಮವೋ !) ನಮ್ಮ "ಅತ್ಯಂತ ವಿಧೇಯ ಸೇವಕರಾಗಿರಲು ಹಂಬಲಿಸು"ವುದು ಸರಿಯಲ್ಲವೆಂದು ನಿರ್ಧರಿಸಲಾಗಿದೆ. ಆದಕ್ಕಾಗಿ ಪತ್ರಗಳ ಬಾಲವನ್ನು "ನಿಮ್ಮ ವಿಶ್ವಾಸಿ" ಅರ್ಥಾತ್ "ಯುವರ್ಸ್ ಫೇಯ್ತ್‌ಫುಲ್ಲೀ" ಎಂದು ತಿದ್ದುಪಡಿ ಮಾಡಲಾಗಿದೆ. "ಯುವರ್ ಮೋಸ್ಟ್ ಒಬೀಡಿಯೆಂಟ್ ಸರ್ವೆಂಟ್" ಆಗಿ ಅವರಿದ್ದಷ್ಟೇ ಇವರೂ "ಫೇಯ್ತ್‌ಫುಲ್" ಆಗಿರುವರು ಅನ್ನಿ. ಆದರೆ ನನಗೆ ಇವರ ಮೇಲೆ ನಿಜವಾದ ದೂರು ಇಲ್ಲ. ಇವರು ಎಷ್ಟಾದರೂ ಸಂಬಳ ತೆಗೆದುಕೊಂಡು ಕೆಲಸ ಮಾಡುವವರು-ಅಥವಾ ಕೆಲಸ ತಪ್ಪಿಸುವವರು. ಸಂಬಳ ತೆಗೆದುಕೊಂಡಮೇಲೆ ಅವರು "ಒಬೀಡಿಯೆಂಟಾ"ಗಲಿ "ಫೇಯ್ತ್‌ಫುಲ್" ಆಗಲಿ ಆಗಿರಬೇಕೆಂದು ನಿರೀಕ್ಷಿಸುವುದು ಸರಿಯಲ್ಲ, ಆದೂ ಈ ಯುಗದಲ್ಲಿ.

ಈ ಸಂಬಳ ತೆಗೆದುಕೊಂಡು ಸೇವೆ ಮಾಡುವವರಿಗೆ ನಾನು ನಿಜವಾಗಿ ಅಂಜುವುದಿಲ್ಲ. ಅವರು ಏನು ಮಾಡಹೊರಟಿದ್ದಾರೆಂದು ನನಗೆ ಗೊತ್ತಿರುತ್ತದೆ. ಅವರು ಅರ್ಜಿಹಾಕಿ, ಸ್ಕೇಲು ಗೊತ್ತುಪಡಿಸಿಕೊಂಡು ಡಾಣಾಡಂಗುರವಾಗಿ ನನ್ನ ಸೇವೆಗೆ ಹಾಜರಾಗಿರುತ್ತಾರೆ. ಅವರು ಎಲ್ಲಿರುತ್ತಾರೆಂದು ನಾನು ಬಲ್ಲೆ. ಅವರ ಸೇವೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನಾನು ಯಾವ ದಾರಿಯಲ್ಲಿ ಹೋಗಬೇಕೆಂದೂ ನನಗೆ ಗೊತ್ತು. ಅದನ್ನು ಯಾವಾಗಲೂ ತಪ್ಪಿಸಿಕೊಳ್ಳಲಾಗದಿದ್ದರೂ ಆ ಪ್ರಸಂಗಗಳನ್ನು ಕನಿಷ್ಠ ಪ್ರಮಾಣದಲ್ಲಿರಿಸುವುದಕ್ಕೆ ನಾನು ಯತ್ನಿಸಬಹುದು. ಅವರೂ ಜಂಟಲ್‌ಮನ್ನರು. ನಾನು ಅವರನ್ನು ಹುಡುಕಿಕೊಂಡು ಹೋಗದಿದ್ದರೆ ಅವರು ನನ್ನನ್ನು ಹುಡುಕಿಕೊಂಡು ಬರುವುದು ಅಪರೂಪ.

ನಾನು ಹೆದರುವುದು ನನ್ನ ತಪ್ಪಾಗಲಿ ಒಪ್ಪಿಗೆಯಾಗಲಿ ಇಲ್ಲದೆ ನಮ್ಮ ಸೇವೆಮಾಡುವವರಿಗೆ. ಇವರು ದೇಶಸೇವೆ, ಈಶಸೇವೆ, ಧರ್ಮಸೇವೆ, ಸಮಾಜ ಸೇವೆ, ದೀನಸೇವೆ, ದಲಿತಸೇವೆ ಮೊದಲಾದ ಅಸಂಖ್ಯ ಸೇವೆಗಳಲ್ಲಿ ನಿರತರಾಗಿರುತ್ತಾರೆ. ಬೆಳಗ್ಗೆ ಎದ್ದು ನಿಮಗೆ ಎದುರಾಗುವ ಒಂದನೆಯವನು ಸೇವಕನಾಗಿರದಿದ್ದರೆ ಎರಡನೆಯವನಾದರೂ ಆಗಿರುತ್ತಾನೆ. ಅವನಿಂದ ತಪ್ಪಿಸಿಕೊಳ್ಳುವ ದಾರಿಯೇ ಇಲ್ಲ, ಏಕೆಂದರೆ ಅವನು ಎಲ್ಲಿರುತ್ತಾನೆಂದು ಹೇಳುವುದು

ಸಾಧ್ಯವಿಲ್ಲ. ಅವನು ಅರ್ಜಿಹಾಕಿ ನೇಮಕ ಹೊಂದಿರುವುದಿಲ್ಲ; ಸಂಬಳವನ್ನು ಅಪೇಕ್ಷಿಸುವುದಿಲ್ಲ. ಅವನು ತನ್ನನ್ನು ತಾನೇ ನೇಮಿಸಿಕೊಂಡಿರುತ್ತಾನೆ. ಸಂಬಳ ತೆಗೆದುಕೊಂಡು ಸೇವೆ ಮಾಡುವವನು—ಎಷ್ಟೇ ಸುಳ್ಳು ಜನ್ಮತಾರೀಕನ್ನು ದಾಖಲು ಮಾಡಿಸಿದರೂ—ಒಂದಲ್ಲ ಒಂದು ದಿನ ರಿಟೈರ್ ಆಗಿಯೇ ಆಗುತ್ತಾನೆಂದು ನೀವು ಭರವಸೆ ತಾಳಬಹುದು. ಆದರೆ ತನ್ನನ್ನೇ ತಾನು ನೇಮಕ ಮಾಡಿಕೊಂಡವನನ್ನು ರಿಟೈರ್ ಮಾಡಿಸುವುದು ಹೇಗೆ? ಅವನು ರಿಟೈರ್ ಆಗಲು ಒಪ್ಪುವುದೇ ಇಲ್ಲ. ನೇಮಕವಾಗಿದ್ದರಲ್ಲವೇ ರಿಟೈರ್ ಆಗುವುದು; ಸೇವೆಮಾಡುವುದು ತನ್ನ ಜನ್ಮಸಿದ್ಧ ಹಕ್ಕು—ಸೇವೆ ಮಾಡಿಸಿಕೊಳ್ಳುವವರು ಕೂಡ ಅದನ್ನು ಕಸಿದುಕೊಳ್ಳಲಾರರು ಎಂದು ಅವನ ಮತ.

ಹೋದ ವರ್ಷ ನಮ್ಮೂರಿನ ದೇವಾಲಯ ಜೀರ್ಣೋದ್ಧಾರ ಮಾಡುವುದಕ್ಕಾಗಿ ಚಂದಾ ಎತ್ತುವುದಕ್ಕೆ ಒಬ್ಬ ಮಹಾಶಯರು ಬಂದರು. ಅವರು ಸೇವಾಪರಾಯಣರಿರಬಹುದೆಂಬ ಸಂಶಯ ಎಳ್ಳಷ್ಟೂ ಬರುವಂತಿರಲಿಲ್ಲ. ಆದ್ದರಿಂದ ಅವರನ್ನು ಬನ್ನಿ ಬನ್ನಿ ಎಂದು ಸ್ವಾಗತಿಸಿದೆ. ಅವರು ಹಿಂದೂ ಧರ್ಮದ ಸದ್ಯದ ಅವಸ್ಥೆಯನ್ನೂ ದೇವರುದಿಂಡರಲ್ಲಿ ಈಚೆಗೆ ಜನರಿಗೆ ಕಡಿಮೆಯಾದ ಭಕ್ತಿಯನ್ನೂ ಕುರಿತು ಕಲ್ಲು ಕರಗುವಂತೆ ಮಾತನಾಡಿದರು. ನನ್ನ ಹೃದಯ ಕಟ್ಟಿಗೆಯದಾದ್ದರಿಂದ ಅದು ಕರಗಲಿಲ್ಲ. ಆಮೇಲೆ ಅವರು ಮುಸ್ಲಿಂ ಮಸೀದಿಗಳೂ ಕ್ರೈಸ್ತ ಇಗರ್ಜಿಗಳೂ ಎಲ್ಲ ಕಡೆ ಹೊಸಹೊಸದಾಗಿ ತಲೆ ಎತ್ತುತ್ತಿರುವಾಗ ನಮ್ಮ ಹಿರಿಯರು ಕಟ್ಟಿಸಿದ ದೇವಾಲಯಗಳು ಕೂಡ ಜೀರ್ಣವಾಗುತ್ತಿರುವುದನ್ನು ಖಂಡಿಸಿದರು. ಆಮೇಲೆ ನಮ್ಮೂರಿನ ಪಾಂಡವರ ಕಾಲದ ವಿಷ್ಣುಮೂರ್ತಿ ದೇವಾಲಯದ ದುರವಸ್ಥೆಯನ್ನು ಬಣ್ಣಿಸಿದರು. ಅದರ ಜೀರ್ಣೋದ್ಧಾರ ಮಾಡುವ ಸೇವಾಕಾರ್ಯಕ್ಕೆ ತಾವು ಕಂಕಣಬದ್ಧರಾಗಿರುವುದಾಗಿಯೂ ನನ್ನಂಥ ದೇವಭಕ್ತರು ಅದರಲ್ಲಿ ಸಹಕರಿಸುವ ಭರವಸೆ ತಮಗುಂಟೆಂದೂ ಹೇಳಿ ರಶೀದಿ ಪುಸ್ತಕವನ್ನು ಹೊರತೆಗೆದರು. "ದೇವರು ನಿಮಗೆ ಈ ಕಾರ್ಯವನ್ನು ಒಪ್ಪಿಸಿದ್ದಾರೆಯೆ?" ಎಂದು ಕೇಳಿದೆ. "ಏನು ಸ್ವಾಮಿ, ಹೀಗೆ ಹೇಳೋದುಂಟೆ? ದೇವರಿಗೆ ಮಾತಾಡುವುದಕ್ಕೆ ಬರುತ್ತೆಯೆ ಎಲ್ಲಿಯಾದರೂ? ಏನೋ ಅವನ ಸೇವೆ ಅಂತ ನಾನೇ ಈ ಕಾರ್ಯಕ್ಕೆ ಕೈ ಹಾಕಿದ್ದೇನೆ" ಎಂದರು. "ಊರವರಾದರೂ ನಿಮ್ಮನ್ನು ನೇಮಿಸಿದ್ದಾರೆಯೇ?"

ಎಂದು ಪ್ರಶ್ನಿಸಿದೆ. "ಎಲ್ಲಿ ಸ್ವಾಮಿ, ಊರವರನ್ನು ಕೇಳಿದರೆ ಇಂಥಾ ಕೆಲಸ ಎಲ್ಲಾ ಆದ ಹಾಗೆಯೇ. ಸೇವಾಭಾವವುಳ್ಳವರು ತಾವಾಗಿಯೇ ಮುಂದೆ ಬಿದ್ದು ಮಾಡಬೇಕಾಗುತ್ತೆ" ಎಂದರು. ಅವರು ಸೇವೆ ಎಂಬ ಶಬ್ದವನ್ನು ಇನ್ನೊಮ್ಮೆ ಉಚ್ಚರಿಸಿದರೆ ಅವರನ್ನು ಕೊಲೆ ಮಾಡುವ ಆಕಾಂಕ್ಷೆಯನ್ನು ಸಹಿಸಿಕೊಳ್ಳುವುದು ನನಗೆ ಸಾಧ್ಯವಿಲ್ಲೆನಿಸಿತು. ನನಗೆ ಸದ್ಯ ಗಲ್ಲಿಗೇರುವುದಕ್ಕೆ ಇಷ್ಟವಿರಲಿಲ್ಲವಾದ್ದರಿಂದ "ಯಥಾಶಕ್ತಿ" ಕೊಟ್ಟು ಅವರನ್ನು ಸಾಗ ಹಾಕಿದೆ. ಮೊನ್ನೆ ಮೊನ್ನೆ ಊರಿಗೆ ಹೋದಾಗ ವಿಷ್ಣುಮೂರ್ತಿ ದೇವರು ತನ್ನ ಮುರುಕಲು ಮನೆಯಲ್ಲೇ ಇದ್ದದ್ದನ್ನು ಕಂಡೆ. ಅವನ ಸೇವಕರ ಮನೆಗೆ ಪೋರ್ಟಿಕೋ ಬಂದಿತ್ತು. ವಿಷ್ಣುಮೂರ್ತಿಸೇವೆ ಎಲ್ಲಿಗೆ ಬಂತು ಎಂದು ಅವರನ್ನು ಕೇಳಿದೆ. "ಎಲ್ಲಿ ಸ್ವಾಮಿ, ಕಲೆಕ್ಶನ್ ಆದದ್ದು ಟ್ರಾವಲಿಂಗಿಗೇ ಸಾಲಲಿಲ್ಲ" ಎಂದರು. "ಲೆಕ್ಕಗಿಕ್ಕ ಇಟ್ಟಿದ್ದೀರಾ?" ಎಂದು ಪ್ರಶ್ನಿಸಿದೆ. "ಏನ್ ಸ್ವಾಮೀ. ನಾನೇನಾದರೂ ಸಂಬಳ ತೆಗೆದುಕೊಂಡು ಕೆಲಸ ಮಾಡಿದ್ದೇನೆಯೇ ಲೆಕ್ಕಗಿಕ್ಕ ಅಂತ ಕೇಳೋಕೆ? ಏನೋ ಸೇವೆ ಅಂತ ಹೊರಟೆ. ದೇವರ ಚಿತ್ತಕ್ಕೆ ಬರಲಿಲ್ಲ" ಎಂದರು. ಬಡ ವಿಷ್ಣುಮೂರ್ತಿ ದೇವರು! ತನ್ನ ಹಿತವೇನೆಂದು ಅವನಿಗೆ ಗೊತ್ತಿದ್ದರೆ ತಾನೇ!

ದೇವರಿಗೆ ಬಾಯಿ ಇಲ್ಲದಿರುವುದರಿಂದ ಮತ್ತೆಲ್ಲರ ಸೇವೆಮಾಡುವವರಿಗಿಂತ ಅವನ ಸೇವೆಯಲ್ಲಿ ಸವೆಯುವವರ ಸಂಖ್ಯೆ ಹೆಚ್ಚಾಗಿದೆಯೆಂದು ತೋರುತ್ತದೆ. ಕಾನೂನಿನಲ್ಲಿ ದೇವರು ಮೈನರ್ ಅಥವಾ ಅಪ್ರಾಯಸ್ಥ ಎಂಬುದಾಗಿ ಹೇಳಲಾಗಿದೆಯಂತೆ. ಆದ್ದರಿಂದ ದೇವರಿಗೆ ಯಾರಾದರೂ ರಕ್ಷಕರು ಬೇಕು. ಈ ರಕ್ಷಕರು ದೇವರ ಸೇವೆಯಲ್ಲಿ ಕೊಲೆಗಳನ್ನು ಮಾಡುತ್ತಾರೆ. ವಂಚನೆಯಲ್ಲಿ ನಿರತರಾಗುತ್ತಾರೆ, ದಂಗೆಗಳನ್ನೆಬ್ಬಿಸುತ್ತಾರೆ, ಯುದ್ಧಗಳನ್ನು ಹೂಡಿ ರಕ್ತದ ಹೊಳೆಗಳನ್ನು ಹರಿಸುತ್ತಾರೆ.

ದೇವರನಂತರ ಇನ್ನೊಂದು ಮೂಕಪ್ರಾಣಿ ಎಂದರೆ "ಸಾರ್ವಜನಿಕರು" ಎಂಬ ಸಾವಿರ ತಲೆಯ ವಿಚಿತ್ರಜೀವಿ. ಇದನ್ನು ಇಂಗ್ಲಿಷಿನಲ್ಲಿ "ಡಂಬ್ ಮಿಲಿಯನ್ಸ್" ಅಥವಾ "ಮೂಕಕೋಟಿ" ಎಂದು ಹೆಸರಿಸಲಾಗುತ್ತದೆ. ನೀವೂ ನಾವೂ ಕೇಳುವವರಿಗೆ ನಿದ್ದೆ ಬರುವವರೆಗೂ ಮಾತಾಡಬಹುದು. ಆದರೂ ನಾವು "ಡಂಬ್ ಮಿಲಿಯನ್ಸ್" ಪೈಕಿಯೇ. ನೀವೂ ನಾವೂ ಕೂಡ

ಮಾತಾಡುವುದು ನಮ್ಮನ್ನು ಬಿಟ್ಟು ಇತರರ ವಿಷಯವೇ. ಆದರೂ ನಾವು ಇತರರ ಬಗ್ಗೆ ಮಾತಾಡುವುದನ್ನು ಬಿಟ್ಟು ಮತ್ತೇನೂ ಮಾಡುವುದಿಲ್ಲ. ಮಾಡಬೇಕೆಂದು ಹೇಳುವುದೂ ಇಲ್ಲ. ಆದರೆ ಸಾರ್ವಜನಿಕ ಸೇವಾಪ್ರಿಯನಾದವನು ಇತರರ ಬಗ್ಗೆ ಏನಾದರೂ ಮಾಡಬೇಕೆಂದು ಕೂಗುತ್ತಾನೆ. ಆದ್ದರಿಂದ ನಾವು ಮೂಕಕೋಟಿಯಲ್ಲಿ ಸೇರುತ್ತೇವೆ; ಅವನು ಮೂಕಕೋಟಿಯ ಬಾಯಿಯಾಗುತ್ತಾನೆ. ಕೈಯೂ ಆಗುತ್ತಾನೆ. ಅವನು ಜನಸೇವಕ ಎನಿಸುತ್ತಾನೆ.

ಸರಕಾರಿ ಸೇವೆಗೆ ಏನಾದರೊಂದು ಅರ್ಹತೆ ಬೇಕಾಗುತ್ತದೆ. ಜನಸೇವೆಗೆ ಯಾವ ಅರ್ಹತೆಯೂ ಬೇಕಾಗಿಲ್ಲ. ಅದಕ್ಕೆ ಬೇಕಾದ ಒಂದೇ ಅರ್ಹತೆ ಎಂದರೆ ನಿಃಸ್ವಾರ್ಥ. ಮತ್ತೆ ನಿಃಸ್ವಾರ್ಥ ಎಂದರೇನೆಂದು ನಿಮಗೆಲ್ಲ ಗೊತ್ತು. ತನ್ನದಲ್ಲದ ಸಂಗತಿಗಳಲ್ಲಿ ತೀವ್ರವಾದ ಆಸಕ್ತಿಯೇ ನಿಃಸ್ವಾರ್ಥವೆನಿಸುತ್ತದೆ. ಉತ್ತರ ಕರ್ನಾಟಕದಲ್ಲಿ ಇದಕ್ಕೆ "ಉಸಾಬರಿ" ಎಂಬ ಮುದ್ದಾದ ಹೆಸರಿದೆ.

ಉಸಾಬರಿ ಪ್ರವೃತ್ತಿಯೊಂದಿದ್ದರೆ ನೀವು ಸೇವಾಧರ್ಮದಲ್ಲಿ ಗ್ರಾಜುಯೇಟರೆಂದೇ ತಿಳಿದುಕೊಂಡು ಮುಂದುವರಿಯಬಹುದು. ನೀವು "ಮೂಕಕೋಟಿ"ಯ ಪರವಾಗಿ ಮಾತಾಡಲು ಕೃತಿಮಾಡಲು ಹಕ್ಕುಪಡೆಯುತ್ತೀರಿ. ನಿಮ್ಮ ಸುತ್ತಮುತ್ತಲಿನ ಪ್ರಪಂಚ ಅತ್ಯಂತ ದುಃಖಿತ ಅಥವಾ ವೇದನಾಪೂರ್ಣವಾಗಿದೆಯೆಂಬ ಅರಿವು ನಿಮ್ಮಲ್ಲಿ ಮೂಡತೊಡಗುತ್ತದೆ. ಅದು ಕಷ್ಟದಲ್ಲಿದೆ, ದುಃಖಿತವಾಗಿದೆ ಎಂಬುದು ಅದಕ್ಕೇ ಗೊತ್ತಿಲ್ಲದಿರಬಹುದು. ಆದ್ದರಿಂದ ಅದಕ್ಕೆ ಸಮಸ್ಯೆಗಳಿವೆಯೆಂದು ಅದರ ತಲೆಯೊಳಗೆ ಹಾಕುವುದು ನಿಮ್ಮ ಮೊದಲ ಕೆಲಸವಾಗುತ್ತದೆ. ಅಥವಾ ಒಮ್ಮೊಮ್ಮೆ ಅದರ ತಲೆಯೊಳಗೆ ಏನನ್ನೂ ಹಾಕುವ ಮೊದಲೇ ನೀವು ಅದರ ದುಃಖನಿವಾರಣೆಗೆ ಉದ್ಯುಕ್ತರಾಗಬಹುದು.

ಈ ಸ್ವಯಂನಿಯಮಿತ ಸೇವಕರ ವೈವಿಧ್ಯವನ್ನು ನೋಡಿದರೆ ತಲೆ ತಿರುಗುತ್ತದೆ. ನಮ್ಮ ದೇಶದಲ್ಲಂತೂ ಸೇವೆಗೆ ಅವಕಾಶವಿಲ್ಲದ ಸ್ಥಳವೇ ಇಲ್ಲ. ಆದ್ದರಿಂದ ನಮ್ಮ ದೇಶಕ್ಕೆ ಸೇವಾಧುರಂಧರರು ಎಲ್ಲಾ ಪ್ರದೇಶಗಳಿಂದಲೂ ಆಕರ್ಷಿಸಲ್ಪಡುತ್ತಾರೆ. ಅವರಲ್ಲಿ ಕೆಲವರು ತಮ್ಮ ದೇಶದಲ್ಲೇ ಇರುವವರ ಸೇವೆಯನ್ನು ಮಾಡುವುದು ಸಂಕುಚಿತ ಸ್ವಾರ್ಥವಾಗುತ್ತದೆಂದು ಬಗೆದು ನಮ್ಮ ದೇಶದಲ್ಲಿ ಬಂದು ಸೇವೆ ಮಾಡುತ್ತಾರೆ. ತಮ್ಮ ದೇಶಗಳಲ್ಲಿ ತಮ್ಮ ಧರ್ಮದಿಂದ ಜನರ ಕುಂಟುಬುದ್ಧಿ ಸರಳವಾಗಲಿಲ್ಲವೆಂದು ಅವರು ಮನ

ಗಂಡಿದ್ದರೂ ನಮ್ಮ ದೇಶದ ಜನರ ನಾಯೀ ಬಾಲವನ್ನು ಅವರ ಧರ್ಮದ ಅಂಡೆಯಲ್ಲಿ ಹಾಕಿಟ್ಟರೆ ನೆಟ್ಟಗಾಗುತ್ತದೆಂದು ಅವರಿಗೆ ಸಂಪೂರ್ಣ ವಿಶ್ವಾಸ ವಿರುತ್ತದೆ. ನಮ್ಮ ದೇಶವನ್ನು ನೋಡಿದ ಕೂಡಲೇ ಈ ಜನರ ಸೇವೆಯನ್ನು ಮಾಡಿಯೇ ಬಿಡಬೇಕೆಂದು ಸ್ವದೇಶಿಗಳಲ್ಲಿಯೂ ವಿದೇಶಿಗಳಲ್ಲಿಯೂ ಉತ್ಕಟ ವಾದ ಹಟವನ್ನು ಉತ್ಪಾದಿಸುವ ಯಾವುದೋ ಗುಣ ಅಥವಾ ಲಕ್ಷಣ ನಮ್ಮಲ್ಲಿ ಇರಬೇಕೆಂದು ನನಗೆ ಅನಿಸುತ್ತಿದೆ.

ನಮ್ಮ ರಾಜಕಾರಣಿಗಳನ್ನು ನೋಡಿರಿ. ಅವರ ಪಕ್ಷಗಳನ್ನು ನೋಡಿರಿ. ಅವರಲ್ಲಿ ಪ್ರತಿಯೊಬ್ಬರೂ ನಿಮ್ಮ ಸೇವೆ ಮಾಡುವುದಕ್ಕಾಗಿ ಜೀವವನ್ನು ಮುಡುಪಾಗಿಟ್ಟಿದ್ದಾರೆ. ಕಾಂಗ್ರೆಸ್ಸಿನವರು ನಿಮ್ಮ ಸೇವೆಯ ಆದ್ಯಹಕ್ಕನ್ನು ಘೋಷಿಸಿದ್ದಾರೆ. ಸಮಾಜವಾದಿಗಳು ಕೂಡ ನಿಮ್ಮ ಸೇವೆಗಾಗಿ ತುದಿಗಾಲ ಮೇಲೆ ನಿಂತಿದ್ದಾರೆ. ಜನಸಂಘದವರು, ಸ್ವತಂತ್ರರು ನಿಮ್ಮ ಸೇವೆಗಾಗಿ ಹಂಬಲಿಸುತ್ತಾರೆ. ಕಮ್ಯುನಿಸ್ಟರಂತೂ ತಮಗೇ ನಿಮ್ಮ ಸೇವೆಯ ಪೂರ್ಣಹಕ್ಕು ಸಿಗಬೇಕೆನ್ನುತ್ತಾರೆ. ಪುಣ್ಯಕ್ಕೆ ಇವರೆಲ್ಲ ನಿಮ್ಮ ಸೇವಾಹಕ್ಕಿಗಾಗಿ ತಮ್ಮ ತಮ್ಮೊಳಗೆ ಕಾದುತ್ತ ಒಬ್ಬರನ್ನೊಬ್ಬರು ಕೆಡಹುವುದರಲ್ಲೇ ಮಗ್ನರಾಗಿರುವುದ ರಿಂದ ಇನ್ನೂ ನಿಮ್ಮ ಸೇವೆಯನ್ನು ಸರಿಯಾಗಿ ಮಾಡುವುದಕ್ಕೆ ಅವರಿಗೆ ಪುರುಸೊತ್ತಾಗಿಲ್ಲ. ಆದ್ದರಿಂದ ನೀವು ಬದುಕಿದ್ದೀರಿ.

ನಾನು ಪ್ರಜಾಸತ್ತೆಯ ಬೆಂಬಲಿಗನಾಗಿರುವುದು ಇದಕ್ಕಾಗಿಯೇ. ಪ್ರಜಾ ಸತ್ತೆಯಲ್ಲಿ ನಿಮ್ಮ ಸೇವಕರಿಗೆ ಪರಸ್ಪರ ಕಾದುವುದಕ್ಕೆ ಅವಕಾಶವಿದೆ. ಅವರು ಕಾದುತ್ತ ಇರುವಷ್ಟು ಕಾಲ ನೀವು ನಿಶ್ಚಿಂತರಾಗಿರಬಹುದು. ಆದರೆ ಸರ್ವಾಧಿ ಕಾರದ ಸತ್ತೆಗಳಲ್ಲಿ ಕೆಲವರು ಸೇವೆಯ ಗುತ್ತಿಗೆ ಹಿಡಿಯುತ್ತಾರೆ. ಆಮೇಲೆ ಅವರ ಸೇವೆ ನಿಮ್ಮ ಮನಸ್ಸಿಗೆ ಬಾರದೆ ಹೋದರೆ ನಿಮ್ಮ ಹಿತಕ್ಕಾಗಿಯೇ ಅವರು ನಿಮಗೆ ಗುಂಡು ಹಾಕುತ್ತಾರೆ.

ನಮ್ಮ ದೇಶದಲ್ಲಿರುವಷ್ಟು ಸೇವಕ ವೈವಿಧ್ಯ ಜಗತ್ತಿನಲ್ಲಿ ಎಲ್ಲಾದರೂ ಉಂಟೇ ಎಂದು ನನಗೆ ಸಂಶಯ. ಇಲ್ಲಿ ದೇಶಸೇವಕರಿದ್ದಾರೆ, ಈಶಸೇವಕ ರಿದ್ದಾರೆ, ಅನಾಥಸೇವಕರಿದ್ದಾರೆ, ಹಿಂದುಳಿದವರ ಸೇವಕರಿದ್ದಾರೆ, ಮುಂದು ವರಿದವರ ಸೇವಕರಿದ್ದಾರೆ, ಮಧ್ಯದಲ್ಲೇ ಸಿಕ್ಕಿಬಿದ್ದವರ ಸೇವಕರಿದ್ದಾರೆ, ಜಾತಿಸೇವಕರಿದ್ದಾರೆ. ಇಲ್ಲಿ ಸೇವಕರಲ್ಲದವರು ನಾಲ್ಕು ಜನರ ಮುಂದೆ

ಬರುವುದೇ ಸಾಧ್ಯವಿಲ್ಲ ಎನಿಸುತ್ತದೆ. ಎಲ್ಲಾ ದೇಶಗಳಲ್ಲಿ ಕಲಾವಿದರಿರುತ್ತಾರೆ; ಕಲಾಭಿಜ್ಞರಿರುತ್ತಾರೆ. ಆದರೆ ನಮ್ಮ ದೇಶದಲ್ಲಿ ಕಲಾಸೇವಕರಿದ್ದಾರೆ. ಎಲ್ಲಾ ದೇಶಗಳಲ್ಲಿ ಸಾಹಿತಿಗಳಿರುತ್ತಾರೆ; ನಮ್ಮ ದೇಶದಲ್ಲಿ ಸಾಹಿತ್ಯಸೇವಕರಿದ್ದಾರೆ. ಎಲ್ಲಾ ದೇಶಗಳಲ್ಲಿ ನಾಟಕ ಕಂಪನಿಗಳಿರುತ್ತವೆ; ನಮ್ಮ ದೇಶದಲ್ಲಿ ನಾಟ್ಯ ಸೇವಾಸಂಘಗಳಿವೆ.

ಸೇವೆಗಾಗಿ ಮುಗಿಬೀಳುವವರ ಸಂಖ್ಯೆ ಮತ್ತು ವೈವಿಧ್ಯ ಇಷ್ಟು ಹೆಚ್ಚಾಗಿ ಇರುವುದಕ್ಕೆ ಏನು ಕಾರಣ ಎಂಬುದಕ್ಕೆ ನನ್ನ ಹತ್ತಿರ ಒಂದು ಥಿಯರಿ ಇದೆ. ನೀವು ಕಲಾವಿದರೋ ಸಂಗೀತಗಾರರೋ ಸಾಹಿತಿಯೋ ನಟರೋ ಆಗಿದ್ದರೆ ನಿಮ್ಮಿಂದ ಒಂದು ನಿಶ್ಚಿತ ಮಟ್ಟವನ್ನು ನಿರೀಕ್ಷಿಸುವ ಹಕ್ಕು ಜನರಿಗೆ ಬರುತ್ತದೆ. ಆದರೆ ನೀವು ಸೇವಕರಾಗಿದ್ದರೆ ನಿಮ್ಮಿಂದ ಮಟ್ಟವನ್ನು ನಿರೀಕ್ಷಿಸಲಾಗುವುದಿಲ್ಲ. ಸೇವಾಧರ್ಮವೇ ಒಂದು ಮಟ್ಟ. ಎಲ್ಲ ಅಳತೆಗಳಿಂದಲೂ ಮಟ್ಟಗಳಿಂದಲೂ ನೀವು ವಿನಾಯಿತಿ ಪಡೆಯುತ್ತೀರಿ.

ಸೇವಕರು "ಮೂಕಕೋಟಿ"ಯ ಬಾಯಿ, ಕೈಗಳು ಎಂದೆನಲ್ಲವೆ? ಅಲ್ಲೇ ಸ್ವಲ್ಪ ತೊಂದರೆ ಬರುವುದು. ಬಾಯಿ ಬರೇ ಮಾತಾಡುವುದಿಲ್ಲ. ಅದು ಹೊಟ್ಟೆಯ ಬಾಗಿಲೂ ಆಗಿದೆ. ಕೈಯ ಸ್ವಭಾವ ತುತ್ತುಗಳನ್ನು ಇತರ ಬಾಯಿಗಳಿಗೆ ಹಾಕುವುದಕ್ಕಿಂತಲೂ ತನ್ನ ಬಾಯಿಗೆ ಹಾಕಿಕೊಳ್ಳುವುದಾಗಿದೆ. ಕೈ ತನ್ನ ಸ್ವಭಾವದಂತೆ ಬಾಯೊಳಗೆ ಹಾಕುತ್ತದೆ. ಬಾಯಿ ತನ್ನ ಸ್ವಭಾವದಂತೆ ಅದನ್ನು ಹೊಟ್ಟೆಗೆ ಇಳಿಸುತ್ತದೆ. ಆದ್ದರಿಂದಲೇ ನಮ್ಮ ದೇಶದಲ್ಲಿ ದರಿದ್ರ ನಾರಾಯಣ ಸೇವಾ ಸಂಘದ ಸೇವಾಸಕ್ತರ ದಾರಿದ್ರ್ಯ ಬಹುಬೇಗ ನಿವಾರಣೆಯಾಗುತ್ತದೆ. ಸಮಾಜವಾದ ಸೇವಕರು ಮಂತ್ರಿಗಳಾದಾಗ ಬಡವರುದ್ಧಾರಕ್ಕಾಗಿ ಅವರು ಭವ್ಯ ಬಂಗಲೆಗಳಲ್ಲಿ ವಾಸಿಸಿ ಕ್ಯಾಡಿಲಾಕುಗಳಲ್ಲಿ ತಿರುಗುತ್ತಾರೆ. (ಇಲ್ಲದಿದ್ದರೆ ಅವರು ಪ್ರತಿನಿಧಿಸುವ ಬಡವರ ಡಿಗ್ನಿಟಿ ಹೇಗೆ ಉಳಿಯಬೇಕು?)

"ನಮ್ಮ ಸೇವಕರಿಂದ ನನ್ನನ್ನು ಕಾಪಾಡು, ದೇವಾ!" ಎಂದು ನಾನು ಅಲ್ಪರಿಯುತ್ತೇನೆ. "ಸ್ವಲ್ಪ ತಡಿಯೋ, ಮಂಕೆ! ನನ್ನ ಸೇವಕರಿಂದ ನಾನು ಮೊದಲು ಬದುಕಿಕೊಳ್ಳುತ್ತೇನೆ, ಆಮೇಲೆ ನಿನ್ನ ವಿಚಾರ" ಎಂದು ದೇವರು ಹೇಳುತ್ತಾನೆ. ಅದೂ ಹೌದು. ದಾಸರು ಹೇಳಿದ್ದಾರಲ್ಲ—

ಬಿಡೆ ನಿನ್ನ ಪಾದವ
ಬಿಂಕವಿನ್ಯಾಕೋ
ಕೊಡು ಮನದಿಷ್ಟವ.... (೧೯೬೯)

# ಮನುಷ್ಯ ನಗದಿದ್ದರೆ

ಮನುಷ್ಯ ನಗುವ ಮೃಗ ಅಂತ ಯಾರೋ ಒಬ್ಬ ಲಕ್ಷಣವಾಕ್ಯ ಹೇಳಿದ್ದಾನೆ. ಇತರ ಪ್ರಾಣಿಗಳು ನಗುವುದಿಲ್ಲ; ನಗುವುದು ಮನುಷ್ಯನಿಗೇ ಸೇರಿದ ವೈಶಿಷ್ಟ್ಯ ಅನ್ನುವುದು ಅವನ ತಾತ್ಪರ್ಯ. ಇದು ನನಗೆ ಅಷ್ಟು ಖಾತ್ರಿ ಇಲ್ಲ. ಇತರ ಪ್ರಾಣಿಗಳು ನಗುವುದಿಲ್ಲ ಅಂತ ನಿಮಗೆ ಹೇಗೆ ಗೊತ್ತು? ಅವುಗಳು ತಮ್ಮದೇ ಆದ ಭಾಷೆಯಲ್ಲಿ ನಗುತ್ತಿರಬಹುದು. ಅವುಗಳ ನಗು ಮನುಷ್ಯನ ನಗುವಿನ ಹಾಗೆ ಇಲ್ಲ ಅಂದಾಕ್ಷಣ ಅದು ನಗು ಅಲ್ಲ ಅಂತ ಹೇಗೆ ಹೇಳುತ್ತೀರಿ? ಅವು ಮನುಷ್ಯನನ್ನು ನೋಡಿ laughing in their sleeves ಮಾಡುತ್ತಿರಬಹುದು. ಮನುಷ್ಯ ನಗುವುದೆಲ್ಲ ಮುಗಿಸಲಿ; ಆಮೇಲೆ ನಾವು ನಗೋಣ ಅಂತ ಅವು ತಮ್ಮ ನಗುವನ್ನು ನುಂಗಿಕೊಂಡಿರಬಹುದು. He laughs best who laughs last ಅಲ್ಲವೇ ?

ಪರವಾಯಿಲ್ಲ ಬಿಡಿ. ಪ್ರಾಣಿಗಳು ಎಂದು ಬೇಕಾದರೂ ನಗಲಿ. ಅವರೆಗೆ ನಾವು ಮನುಷ್ಯರು ನಗುತ್ತಲೇ ಇರೋಣ. ನಾವು ತಿಳಿದ ಮಟ್ಟಿಗಂತೂ ಇದು ನಮ್ಮ ಗುತ್ತಿಗೆಯೇ ಸೈ. ಮನುಷ್ಯ ತನ್ನ ವಿಕಾಸದ ಯಾವ ಹಂತದಲ್ಲಿ ನಗಲಿಕ್ಕೆ ಕಲಿತ ಅಂತ ನಮಗೆ ಗೊತ್ತಿಲ್ಲ. ಆದರೆ ತನ್ನ ಪ್ರಥಮ ನಗುವಿನ ನಂತರ ಅವನು ಪ್ರತಿಯೊಂದು ಸಂದರ್ಭಕ್ಕೆ ಒಂದು ನಗುವನ್ನು ರೂಪಿಸಿಕೊಂಡಿದ್ದಾನೆ. ನಸುನಗೆ, ಹುಸಿನಗೆ, ಮುಸಿಮುಸಿನಗೆ, ತಿಳಿನಗೆ, ನಂಜುನಗೆ, ಕೊಂಕುನಗೆ, ಪೆದ್ದುನಗೆ, ದೇಶಾವರಿ ನಗೆ, ಆಟ್ಟ ಹಾರಿ ಹೋಗುವ ಹಾಗೆ ನಗುವ ಅಟ್ಟಹಾಸ—ಇನ್ನೂ ಎಷ್ಟೋ ಬಗೆಯ ನಗುವನ್ನು ಮನುಷ್ಯ ಬಲ್ಲ. ನಗೆಯಿಂದ ನೀವು ಇನ್ನೊಬ್ಬರನ್ನು ಕರೆಯಬಹುದು, ಜರೆಯಬಹುದು, ಕೊರೆಯಬಹುದು, ಕೆರಳಿಸಬಹುದು, ಸಮಾಧಾನಪಡಿಸಬಹುದು, ಮನಸಿನಲ್ಲಿ

ರುವುದನ್ನು ಬಿಚ್ಚಬಹುದು ಅಥವಾ ಮುಚ್ಚಬಹುದು. ನಗೆ ಅತ್ಯಂತ ರಹಸ್ಯಪೂರ್ಣವೂ ಆಗಿರಬಹುದು ; ಅಥವಾ ರಾಜಕಾರಣಿ ನಿಮಗೆ ಮುಖ ತೋರಿಸುವಾಗ ತಂದುಕೊಳ್ಳುವ ನಗುವಿನ ಹಾಗೆ ಅದು ತಟಸ್ಥವಾಗಿಯೂ ಇರಬಹುದು.

ಒಂದು ವೇಳೆ ಮನುಷ್ಯನಿಗೆ ನಗುವ ಶಕ್ತಿ ಇಲ್ಲದಿದ್ದರೆ ಏನಾಗಬಹುದಿತ್ತು? ಈ ಪ್ರಶ್ನೆ ಅರ್ಥವಿಲ್ಲದ್ದು ಅನಿಸಬಹುದು. ಮನುಷ್ಯನಿಗೆ ನಗಲು ಬಾರದಿದ್ದರೆ ನಮಗೆ "ನಗು" ಎಂಬ ಮುಖವಿಕಾರ ಇರಬಲ್ಲದೆಂದೇ ತಿಳಿಯುತ್ತಿರಲಿಲ್ಲ ಅಲ್ಲವೆ? ಆಗ ನಗುವಿನ ಬದಲು ನಾವು ಬೇರೇನನ್ನಾದರೂ ಉಪಯೋಗಿಸುತ್ತಿದ್ದೆವೋ ಇಲ್ಲವೊ ಎಂದು ಕೂಡ ಹೇಳಲು ಸಾಧ್ಯವಿಲ್ಲ. ಇಪ್ಪತ್ತೈದು ವರ್ಷ ಸಂಸಾರ ಮಾಡಿದಮೇಲೆ "ನನಗೆ ಮದುವೆಯಾಗಿರದಿದ್ದರೆ?" ಅಂತ ಯೋಚಿಸಿದ ಹಾಗೆಯೇ ಇದು. ಪ್ರಶ್ನೆ ನಿರರ್ಥಕ. ಆದರೂ ಸ್ವಾರಸ್ಯವಾದ ಪ್ರಶ್ನೆ.

ಮೊದಲನೆಯದಾಗಿ, ಮನುಷ್ಯನಿಗೆ ನಗುವುದು ಗೊತ್ತಿಲ್ಲದಿದ್ದರೆ ಜಗತ್ತಿನಲ್ಲಿ ಏನೂ ಸ್ವಾರಸ್ಯ ಉಳಿಯಲಿಕ್ಕಿಲ್ಲ. ಎರಡು ತಿಂಗಳ ಮಗು ಮೊಟ್ಟಮೊದಲನೇ ನಗುವನ್ನು ನಕ್ಕಾಗಿನಿಗಿಂತ ಸುಂದರವಾದದ್ದು ಪ್ರಪಂಚದಲ್ಲಿ ಏನಾದರೂ ಇದೆಯೇ? ನೀವು ಅಳುವ ಮಗುವನ್ನು ಯಾಕೆ ಎತ್ತಿಕೊಳ್ಳುತ್ತೀರಿ ಅಂತ ಯೋಚಿಸಿದ್ದೀರಾ? ಅದರ ಮುಖದಲ್ಲಿ ಅಳುವಿನಿಂದ ಒಂದೇ ಪಟ್ಟಿಗೆ ನಗು ಮೂಡುವುದನ್ನು ನೋಡಬೇಕೆಂದಲ್ಲವೆ? ಕಣ್ಣುಗಳಲ್ಲಿ ಕಣ್ಣೀರು ತುಂಬಿದ್ದಂತೆ ತುಟಿ ಅರಳಿಸಿ ತಿಳಿನಗು ಮೂಡಿಸುವ ಮಗುವಿನ ಮುಖವನ್ನು ನೋಡುವುದು ಲೋಕದಲ್ಲಿ ನಿತ್ಯ ದೃಶ್ಯವಾದರೂ ಅದು ಪ್ರತಿ ಸಲವೂ ಲೋಕೋತ್ತರವಾಗಿಯೇ ಕಾಣುತ್ತದೆ. ಈ ಒಂದು ನಗು ಸಂಸಾರದ ತಾಪತ್ರಯವೆಲ್ಲವನ್ನೂ ಮರೆಸಿಬಿಡುತ್ತದೆ.

ಮಗುವಿನ ನಗುವಿನ ಬಗ್ಗೆ ನಾನು ಓದಿದ ಅತ್ಯಂತ ಸುಂದರವಾದ ವಚನ ಸರ್ ಜೇಮ್ಸ್ ಬಾರಿಯದು :

"When the first baby laughed for the first time, the laugh broke into a thousand pieces and they all went skipping about, and that was the beginning of the fairies."

ಮೊದಲ ಮಗುವಿನ ಮೊದಲ ನಗುವಿನ ತುಣುಕುಗಳೆಲ್ಲ ಚೆದರಿ ಅವೇ ಯಕ್ಷಿಣಿ ಕಥೆಗಳಾದವಂತೆ. ಮಗುವಿನ ಮೊದಲ ನಗುವಿಗಾಗಿ ನಾವೆಲ್ಲ ಎಂಥ ನಿರೀಕ್ಷೆಯಿಂದ, ಎಂಥ ಉತ್ಸಾಹದಿಂದ, ಅದು ಆರೆಂಟು ವಾರಗಳಲ್ಲಿ ಕಾಣಿಸಿ ಕೊಳ್ಳದಿದ್ದರೆ ಎಷ್ಟೊಂದು ಆತಂಕದಿಂದ, ಕಾಯುತ್ತೇವೆ. ಮಗು ನಗದಿದ್ದರೆ ನಮಗೆ ಭಯ ಹುಟ್ಟುತ್ತದೆ. ಅದರ ಮಿದುಳಿನಲ್ಲಿ ಎಂಥಾ ಪ್ರಲಯಂಕರ ಭವಿಷ್ಯ ಬೆಳೆಯುತ್ತಿದೆಯೋ ಅಂತ ಚಿಂತೆಯಾಗುತ್ತದೆ.

ಬದುಕನ್ನು ತುಂಬುವಂಥ ಮಗುವಿನ ಅಮಾಯಕ ನಗುವಿಗೆ ತದ್ವಿರುದ್ಧ ವಾದದ್ದು ಬುದ್ಧದೇವನ ಮುಖದಲ್ಲಿ ಯಾವಾಗಲೂ ಅರಳಿರುವ ನಸುನಗು. ಮಗುವಿನ ನಗುವಿನಲ್ಲಿ ಬದುಕಿನ ನೋವಿನ ಸ್ಪರ್ಶವಿಲ್ಲ. ಆದರೆ ಬುದ್ಧನ ನಸುನಗು ಪ್ರಪಂಚದ ದುಃಖವನ್ನೆಲ್ಲ ಅರಿತ ನಗು. ಆದರೂ ಅದರಲ್ಲಿ ಕೊಂಕಿಲ್ಲ, ನಂಜಿಲ್ಲ, ನಿರಾಶೆಯಿಲ್ಲ. ನೋವನ್ನೆಲ್ಲ ಗೆದ್ದ ನಗು ಅದು. 'ತೀವಿದೆಳ ನಗೆಯ ಬೆಳುದಿಂಗಳಂ ಪಸರಿಸುವ' ಅಂತ ಲಕ್ಷ್ಮೀಶ ಹೇಳುವುದು ಈ ನಗು ವನ್ನೇ. ಮನುಷ್ಯಕುಲಕ್ಕೆ ನಗು ಬಳುವಳಿಯಾಗಿ ಬಂದಿರದಿದ್ದ ಪಕ್ಷದಲ್ಲಿ ಬುದ್ಧನ ಹೃದಯದ ಪ್ರಸಾದವನ್ನು, ಕರುಣೆಯನ್ನು ಶಿಲ್ಪಿ ಮತ್ತೆ ಯಾವ ಉಪಾಯದಿಂದ ಪ್ರದರ್ಶಿಸಲಿಕ್ಕೆ ಸಾಧ್ಯವಿತ್ತು? ಇಲ್ಲ ಸ್ವಾಮಿ. ನಗು ಇಲ್ಲ ದಿದ್ದರೆ ಈ ಪ್ರಪಂಚದಲ್ಲಿ ದೇವತ್ವದ ದರ್ಶನ ಸಾಧ್ಯವಿದ್ದಿಲ್ಲ.

ನಗುವಿನ ಈ ಎರಡು ತುದಿಗಳ ನಡುವೆ ಬರುವ ನಗುವಿನ ಪ್ರಕಾರಗಳು ಹಲವು. 'ಜವ್ವನವೆನ್ನಲೆ, ಮದವಿಲ್ಲದ ಮನ, ಶೈಶವವೆನ್ನಲೆ ಕವಡು ನಗೆ' ಅಂತ ಕಡೆಂಗೋಡ್ಲು ಶಂಕರಭಟ್ಟರು ಹೇಳುವ 'ಕವಡುನಗೆ' ಮನುಷ್ಯನಿಗೆ ಎದುರಾಗುವ ಅತ್ಯಂತ ಅಪಾಯಕಾರಿ ನಗು. ಈ ಕವಡುನಗೆಯ ಬಲೆ ಯಿಂದಲೇ ಮನ್ಮಥನೆಂಬ ಬೆಸ್ತ ನಮ್ಮನ್ನು ಸಂಸಾರದಲ್ಲಿ ಸಿಲುಕಿಸುತ್ತಾನೆ. ಈ ಯೌವನದ ಕವಡುನಗೆ ಅರಳಿದಾಗ ಕುರೂಪಿ ತರುಣಿಯರು ಕೂಡ ಜಗ್ಗನೆ ರತಿಯರಾಗಿ ಮಾರ್ಪಡುವುದನ್ನು ನೋಡಿ ನಾನು ಬೆರಗಾಗಿದ್ದೇನೆ. ನಾನು ಹೆಣ್ಣಾಗಿದ್ದರೆ, ಮತ್ತು ಗಂಡಿನಷ್ಟೇ ನಿರ್ವಂಚನೆಯಾಗಿ ನನ್ನ ಭಾವನೆ ಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ನನಗಿದ್ದಿದ್ದರೆ ಬಹುಶಃ ಗಂಡಿನ ನಗುವನ್ನೂ ನಾನು ಹೀಗೇ ಬಣ್ಣಿಸುತ್ತಿದ್ದೆನೋ ಏನೋ. ಹೌದು, ಇದೆಲ್ಲ ಸಂಸಾರಬಂಧನದ ಆಯುಧವೇ ನಿಜ. ಆದರೆ ಈ ಸಂಸಾರವ್ಯಾಪಾರದಲ್ಲಿ

ನಗು ಇದ್ದಿಲ್ಲವೆಂದು ಒಂದು ಕ್ಷಣ ಭಾವಿಸಿಕೊಳ್ಳಿ. ಆಗಲೂ ನಾವು ಗಂಡು ಹೆಣ್ಣು ಸೇರುತ್ತಿದ್ದೆವು; ಪ್ರಜೋತ್ಪತ್ತಿ ಮಾಡುತ್ತಿದ್ದೆವು. ಆದರೆ ಅದು ಬರೇ ಪುನರುತ್ಪತ್ತಿಯಾಗುತ್ತಿತ್ತು. ಅದರ ಪ್ರೇರಣೆ ಕಾಮ ಆಗುತ್ತಿತ್ತು; ಆದರೆ ಅದು ಶೃಂಗಾರವಾಗುತ್ತಿರಲಿಲ್ಲ; ಪ್ರಣಯವಾಗುತ್ತಿರಲಿಲ್ಲ.

ಇದೆಲ್ಲ ಸ್ವರ್ಗದಿಂದಲೋ ಅಥವಾ ಅದರ ಹತ್ತಿರದಿಂದಲೋ ಹುಟ್ಟಿಬಂದ ನಗೆಯ ಸುದ್ದಿಯಾಯಿತು. ಇದನ್ನು ಸ್ಮಿತ, ಸ್ಮೇರ ಅಂತ ಸಂಸ್ಕೃತದಲ್ಲಿ ಕರೆಯುತ್ತಾರೆ. ಅದರಲ್ಲಿ ಶಬ್ದ ಕಡಿಮೆ, ಅರ್ಥ ಆಳ. ಕೆಲವೊಮ್ಮೆ ನಿಃಶಬ್ದ ನಗುವಿನ ಅರ್ಥ ದುರೂಹ್ಯವೇ ಆಗಿರುತ್ತದೆ. ಆದರೆ ಇಷ್ಟು ಗೂಢವೂ ದೈವಿಕವೂ ಅಲ್ಲದ ಸಶಬ್ದವಾದ ನಗೆ ಕೂಡ ಮನುಷ್ಯನಿಗೆ ದಾಯವಾಗಿ ಬಂದಿದೆ. ಅದರ ಪಾತ್ರ ಚಿಕ್ಕದೇನೂ ಅಲ್ಲ.

ನೀವು ಊಹಿಸಿರಲಿಕ್ಕಿಲ್ಲ—ಆದರೆ ಮಹಾಭಾರತವಾದದ್ದು ನಗೆಯಿಂದ ಅಂತ ನಾನು ಹೇಳುತ್ತೇನೆ. ರಾಜಸೂಯ ಯಾಗದ ಮಂಟಪದಲ್ಲಿ ಮಯನ ಮಾಯಾವಿಲಾಸದಿಂದ ಬೇಸ್ತುಬಿದ್ದು ದುರ್ಯೋಧನ ಕೆರೆಯಲ್ಲಿ ಬಿದ್ದಾಗ ಬಾಲ್ಕನಿಯಲ್ಲಿ ನಿಂತಿದ್ದ ದ್ರೌಪದಿ ಉಪಹಾಸದಿಂದ ನಕ್ಕಳಲ್ಲವೆ? ದುರ್ಯೋಧನನಿಗೆ ಮತ್ತೆಲ್ಲ ಇತ್ತು; ಸೆನ್ಸ್ ಆಫ್ ಹ್ಯೂಮರ್–ವಿನೋದಬುದ್ಧಿ–ಮಾತ್ರ ಇದ್ದಿಲ್ಲ. ದ್ರೌಪದಿಯ ನಗುವಿನಿಂದ ಅವನ ಹೃದಯದಲ್ಲಿ ಎದ್ದ ಕಿಚ್ಚು ಸಭೆಯಲ್ಲಿ ಅವಳ ಸೀರೆ ಸೆಳೆಯುವವರೆಗೂ ಶಾಂತವಾಗಲಿಲ್ಲ. ಅದರ ಫಲವಾಗಿಯೇ ತಾನೇ ಭೀಮಸೇನ ಮತ್ತು ದ್ರೌಪದಿ ರಾಜಿಗೆ ಒಪ್ಪದೆ ಯುದ್ಧವೇ ಬೇಕಂದದ್ದು. ನಗೆ ಎಷ್ಟು ಅಪಾಯಕಾರಿಯಾಗಬಹುದು ಅನ್ನುವುದಕ್ಕೆ ಇದು ಒಂದು ಉದಾಹರಣೆ. ಇನ್ನೂ ಎಷ್ಟು ಚಿಕ್ಕಪುಟ್ಟ ಮಹಾಭಾರತಗಳು ನಗೆಯಿಂದ ಆದವೋ ಲೆಕ್ಕಕ್ಕೆ ಸಿಕ್ಕಿಲ್ಲ.

ತಪ್ಪು ನಗುವಿನದಲ್ಲ. ದುರ್ಯೋಧನನದು. ಅವನಿಗೆ ದೇವರು ಸೆನ್ಸ್ ಆಫ್ ಹ್ಯೂಮರ್ ದಯಪಾಲಿಸಲಿಲ್ಲ. ನಿಜವಾಗಿ ವಿನೋದಬುದ್ಧಿ ಉಳ್ಳವರು, ಮಂದಿ ಬಿದ್ದಾಗ ಮಾತ್ರ ನಗುವುದಿಲ್ಲ; ತಾವೇ ಜಾರಿ ಬಿದ್ದಲ್ಲಿಯೂ ನಗೆ ತಡೆದುಕೊಳ್ಳಲಾರರು. ವಿನೋದಬುದ್ಧಿ ಇಲ್ಲದವರಿಂದಲೇ ಪ್ರಪಂಚದಲ್ಲಿ ಅನಾಹುತಗಳಾಗುವುದು. ಜರ್ಮನ್ ಜನರಿಗೆ ಸೆನ್ಸ್ ಆಫ್ ಹ್ಯೂಮರ್ ಇಲ್ಲವಂತೆ. ಆದ್ದರಿಂದ ಅವರು ಯಾವಾಗಲೂ ಜಗಳಕ್ಕೆ ಕಾಲು ಕೆದರುತ್ತಾರಂತೆ.

ಮುಸಿಮುಸಿ ನಗಬೇಕೋ ಗಹಗಹ ನಗಬೇಕೋ—ಯಾವುದು ಸಭ್ಯ
ನಗೆ? ಸಭ್ಯರು ಗಟ್ಟಿಯಾಗಿ ನಗಬಾರದು ಅಂತ ಹೇಳುವವರು ಇದ್ದಾರೆ.
ಇಂಗ್ಲಂಡಿನ ಅರ್ಲ್ ಚೆಸ್ಟರ್‌ಫೀಲ್ಡ್ ಗಟ್ಟಿಯಾಗಿ ನಗುವುದಕ್ಕಿಂತ ಅಸಭ್ಯ
ಪ್ರದರ್ಶನ ಬೇರೆ ಯಾವುದೂ ಇಲ್ಲ—ಅಂತ ಮಗನಿಗೆ ಉಪದೇಶ ಮಾಡಿ
ದ್ದಾನೆ. ತನಗೆ ಬುದ್ಧಿ ತಿಳಿದಮೇಲೆ ತಾನು ಎಂದೂ ಗಟ್ಟಿಯಾಗಿ ನಕ್ಕದ್ದಿಲ್ಲ
ಅಂತ ಅವನು ಜಂಬಕೊಚ್ಚಿಕೊಳ್ಳುತ್ತಾನೆ. ಅವನ ಮಗ ಈ ಉಪದೇಶವನ್ನು
ಎಷ್ಟುಮಟ್ಟಿಗೆ ಅಂಗೀಕರಿಸಿದನೋ ನನಗೆ ಗೊತ್ತಿಲ್ಲ. ಆದರೆ ಬುದ್ಧಿ ತಿಳಿದ
ನಂತರ ಒಮ್ಮೆಯೂ ಗಟ್ಟಿಯಾಗಿ ನಗಲಿಲ್ಲ ಅನ್ನುವುದು ಸತ್ಯವಾಗಿದ್ದರೆ
ಚೆಸ್ಟರ್‌ಫೀಲ್ಡ್ ನಿಜಕ್ಕೂ ಭಯಂಕರ ವ್ಯಕ್ತಿಯಾಗಿರಬೇಕು. ನಗಬೇಕಾದ
ಪ್ರಸಂಗದಲ್ಲಿ ನಗುವನ್ನು ನುಂಗಿಕೊಳ್ಳಲು ಯಾವನು ಸಮರ್ಥನಾಗುತ್ತಾನೋ
ಅವನಿಗೆ ಇಂದ್ರಿಯನಿಗ್ರಹಿ ಅಂತ ನಾನು ಬಿರುದು ಕೊಡಲಾರೆ. ನಗುವಿನ
ಕೊರಳನ್ನು ನಿರ್ದಯವಾಗಿ ಹಿಸುಕಿದವನು ಮನುಷ್ಯನ ಕೊರಳನ್ನೂ ಹಿಸುಕಿ
ಕೊಲ್ಲಬಲ್ಲ, ಮತ್ತು ಅದಕ್ಕಾಗಿ ಪಶ್ಚಾತ್ತಾಪ ಕೂಡ ಪಡಲಿಕ್ಕಿಲ್ಲ. ಜಗತ್ತಿನಲ್ಲಿ
ನಗೆ ಕಮ್ಮಿಯಾದರೆ ಹಗೆ ಹೆಚ್ಚಾಗುತ್ತದೆ. ಮನುಷ್ಯನಿಗೆ ನಗೆಯೇ ಬಾರ
ದಿದ್ದರೆ ಜಗತ್ತಿನಲ್ಲಿ ಹೊಗೆಯೇ ತುಂಬುತ್ತದೆ.

"ನಗೆಯು ಬರುತಿದೇ, ಎನಗೆ ನಗೆಯು ಬರುತಿದೇ" ಅಂತ ಪುರಂದರ
ದಾಸರು "ಜಗದೊಳಗಿನ ಜನಗಳೆಲ್ಲ ಹಗರಣ ಮಾಡುವುದ ಕಂಡು" ನಗು
ತ್ತಾರೆ. ಅದೇ ಈಗ ನೋಡಿ. ಜಗತ್ತಿನ ಜನರ ಹಗರಣ ಕಂಡು, ನಾವು
ಹೊಟ್ಟೆತುಂಬಾ ನಕ್ಕು ಅದನ್ನು ಅಲ್ಲೇ ಬಿಟ್ಟುಬಿಡುತ್ತೇವೆ. ನಮಗೆ ನಗುವ
ಪ್ರಸಂಗಗಳು ಸಿಗಲಿ ಅಂತ ನಾವು ಹೆಚ್ಚು ಹಗರಣಗಳಾಗಲಿ ಅಂತ ಒಳ
ಗೊಳಗೇ ಹಾರೈಸುತ್ತೇವೆ ಕೂಡ. ಇದು ತಾಮಸ ಆನಂದ ಅಂತ ನೀವು
ಹೇಳಬಹುದು. ಆದರೆ ಇದು ಅನುದಾರತರ್ಕ. ಇನ್ನೊಬ್ಬರ ಫಜೀತಿಯನ್ನು
ಕಂಡು ನಾನು ನಗುತ್ತಿದ್ದರೆ ನಿಜಕ್ಕೂ ನಾನು ನನಗೆ ಆದ ಅಂಥಾದ್ದೇ ಫಜೀತಿ
ಯನ್ನು ನೆನೆದುಕೊಂಡು ನಗುತ್ತೇನೆ, ಅನ್ನುವುದನ್ನು ಮರೆಯಬೇಡಿ. ನಾನು
ಬಿದ್ದ ಹೊಂಡದಲ್ಲಿ ನೀವೂ ಬಿದ್ದದ್ದು ನೋಡಿದಾಗ ಜಗತ್ತಿನಲ್ಲಿ ಹೆಡ್ಡ
ನಾನೊಬ್ಬನೇ ಅಲ್ಲ ಅನ್ನುವ ಸಮಾಧಾನ ನನಗೆ ಆಗುತ್ತದೆ. ಅದಕ್ಕೇ ನಗು
ತ್ತೇನೆ. ನಿಜವಾಗಿ ನಾನು ನಗುವುದು ನನ್ನನ್ನು ನೋಡಿಯೇ ಹೊರತು

ನಿಮ್ಮನ್ನು ನೋಡಿ ಅಲ್ಲ. ಇದು ತಾಮಸ ಹೇಗಾದೀತು? ಇದೊಂದು ತರಹದ ಬಂಧುಭಾವನೆಯೇ ಸೈ.

ಮುಂದಿಯ ಹಗರಣ ನೋಡಿ ನಮಗೆ ನಗೆ ಬರುವುದಿಲ್ಲ ಅಂತ ಭಾವಿಸಿ ಕೊಳ್ಳಿ. ಆಗೇನಾದೀತು ಯೋಚಿಸಿದ್ದೀರಾ? ಆಗ ನೀವು ಹಗರಣ ನೋಡಿ ಬಹಳ ಹೊತ್ತು ಸುಮ್ಮನೆ ಕೂತಿರಲಾರಿರಿ. ಅದರ ಬಗ್ಗೆ ಏನನ್ನಾದರೂ ಮಾಡಲೇಬೇಕು ಅಂತ ನಿಮ್ಮ ಮನಸ್ಸು ತುಡಿಯುತ್ತದೆ. ನಿಮ್ಮ ಈ ಸದುದ್ದೇಶದ ಫಲವಾಗಿ ಅನರ್ಥ ಒದಗಬಹುದು. ನೆರೆಮನೆಯವನ ಹೆಂಡತಿ ಆಚೇ ಮನೆಯುವಳ ಗಂಡನಿಗೆ ಕಣ್ಣು ಹೊಡೆಯುತ್ತಾಳೆ. ನೀವಿದನ್ನ ನೋಡುತ್ತೀರಿ. ನಿಮಗೆ ನಗು ಬರುವುದಿಲ್ಲ. ಈ ದುರ್ವರ್ತನೆ ನಿಮ್ಮನ್ನು ನಿಮ್ಮ ಕರ್ತವ್ಯಕ್ಕೆ ಪ್ರೇರಿಸುತ್ತದೆ. ಆಗ ನೀವೇನು ಮಾಡುತ್ತೀರಿ? ಒಂದೋ ನೆರೆಮನೆಯವಳಿಗೆ ಬುದ್ಧಿ ಹೇಳುತ್ತೀರಿ; ಇದರ ಪರಿಣಾಮ ನಿಮಗೆ ಅವಳು ಗೃಹಚಾಮರ ಸೇವೆ ಮಾಡಬಹುದು; ಅಥವಾ ಅವಳ ಗಂಡನಿಗೆ ಎಚ್ಚರ ಕೊಡುತ್ತೀರಿ; ಆಗ ಅವನೇ ನಿಮಗೆ ಪೂಜೆ ಮಾಡಬಹುದು, ಅಥವಾ ಅವಳನ್ನು ಖೂನಿ ಮಾಡಬಹುದು; ಅಥವಾ ತಾನೇ ಆತ್ಮಹತ್ಯೆ ಮಾಡಿಕೊಳ್ಳಬಹುದು. ಇದೆಲ್ಲದರ ತಾಪ ಅಥವಾ ಪಾಪ ನಿಮ್ಮ ತಲೆಗೇ ಬರುತ್ತದೆ. ಮನುಷ್ಯಜಾತಿಗೇ ನಗಲು ಬಾರದಿದ್ದರೆ ಏನಾದೀತೆಂದು ಅಂದಾಜು ಬೇಕಾದರೆ ಮೇಲಿನ ಅನಾಹುತವನ್ನು ನೂರಿನ್ನೂರು ಕೋಟಿಗಳಿಂದ ಗುಣಿಸಿರಿ.

ನಮ್ಮ ದೇಶದಲ್ಲಿ ಕ್ರಾಂತಿ ಯಾಕೆ ಆಗುವುದಿಲ್ಲ, ನಿಮಗೆ ಗೊತ್ತೇ? ನಾವು ನಗುವುದರಿಂದ. ದೇಶದಲ್ಲಿರುವ ಅನಾಚಾರ, ದುರ್ವ್ಯಾಪಾರ ಎಲ್ಲವನ್ನೂ ಚರ್ಚಿಸುತ್ತ ನಾವು ಗಹಗಹಿಸಿ ನಗುತ್ತೇವೆ. ನಮ್ಮ ರೋಷವೆಲ್ಲ ನಗುವಿನಲ್ಲಿ ಕರಗಿಹೋಗುತ್ತದೆ. ನಗುವುದಿಲ್ಲ ಅಂತ ಇಡೀ ದೇಶ ಪ್ರತಿಜ್ಞೆ ಮಾಡಿದರೆ ನಾವು ಕೆಲವೇ ದಿನಗಳಲ್ಲಿ ರೋಷವನ್ನು ಹಿಂಸೆಯಾಗಿ ಮಾರ್ಪಡಿಸಿ ಒಬ್ಬರೊಬ್ಬರ ಕೊರಳು ಕೊಯ್ಯದೆ ಬಿಡಲಿಕ್ಕಿಲ್ಲ.

ಯಾರೋ ಒಬ್ಬ ಉತ್ಸಾಹಿ ಶರೀರಶಾಸ್ತ್ರಜ್ಞ ನಾವು ಗಹಗಹಿಸಿ ನಗುವಾಗ ನಮ್ಮ ಮುಖ, ಎದೆ ಮೊದಲಾದ ಅವಯವಗಳ ಇನ್ನೂರೂ ಚಿಲ್ಲರೆ ಸ್ನಾಯುಗಳಿಗೆ ವ್ಯಾಯಾಮವಾಗುತ್ತದೆ ಅಂತ ಲೆಕ್ಕಹಾಕಿದ್ದಾನೆ. ನಗೆ ಒಳ್ಳೇ ವ್ಯಾಯಾಮ, ಆದ್ದರಿಂದ ಆರೋಗ್ಯಕ್ಕೆ ಹಿತಕರ ಅಂತ ಆತ ಸಿದ್ಧ

ಮಾಡಿ ತೋರಿಸಿದ್ದಾನೆ. ಅದು ನಿಮ್ಮ ನರಗಳ ಗಂಟುಗಳನ್ನೂ ಬಿಡಿಸುತ್ತದಂತೆ. ಕಾರ್ಲೈಲನ ಪ್ರಕಾರ ಒಮ್ಮೆಯಾದರೂ ಮನಃಪೂರ್ವಕವಾಗಿ ಗಹಗಹಿಸಿ ನಕ್ಕ ಮನುಷ್ಯನನ್ನು ಪುಟ್ಟಪೂರಾ ಕೆಟ್ಟವನು ಅಂತ ತೆಗೆದುಹಾಕಲಿಕ್ಕೆ ಆಗದು.

ಪ್ರಪಂಚ ದುಃಖದ ಆಗರ, ನೋವಿನ ನೆಲೆ ಅಂತ ನಾ ಬಲ್ಲೆ. ಶೆಲ್ಲಿಯ ಹಾಗೆ Our sincerest laughter with some pain is fraught ನಮ್ಮ ತಿಳಿತಿಳಿ ನಗುವಿನಲ್ಲಿಯೂ ಒಂದು ಕಡುನೋವಿನ ಎಳೆ ಇದ್ದೇ ಇರುತ್ತದೆ— ಅಂತ ನಾನೂ ನಂಬುತ್ತೇನೆ. ಎಷ್ಟೋ ಸಲ ಅಳುವುದರ ಬದಲು ನಾವು ನಗುತ್ತೇವೆ. ಆದರೆ ಜಗತ್ತನ್ನು ಅಳುವಿನಿಂದ ತುಂಬುವುದಕ್ಕಿಂತ ನಗುವಿನಿಂದ ತುಂಬುವುದು ಒಳಿತಲ್ಲವೇ? (೧೯೭೬)

## ನಶ್ಯಂ ವಶ್ಯಕರಂ

ದೇವರು ಮೂಗನ್ನು ಮಾಡಿದ; ಮನುಷ್ಯ ನಶ್ಯವನ್ನು ಮಾಡಿದ. ನಶ್ಯವನ್ನು ಮನುಷ್ಯ ಸೃಷ್ಟಿಸುವವರೆಗೂ ಮೂಗಿರುವುದು ಉಸಿರಾಡಿಸುವುದಕ್ಕೇ ಎಂದು ಮನುಷ್ಯ ಭ್ರಮಿಸಿದ್ದ. ತಿನ್ನುವುದು ಮಾತಾಡುವುದು ಎರಡನ್ನೂ ಬಾಯಿಯಿಂದಲೇ ಮಾಡುವ ಹಾಗೆ ಬಾಯಿಂದಲೇ ಉಸಿರಾಡಿಸುವುದಕ್ಕೂ ದೇವರು ಅವಕಾಶ ಮಾಡಿರುವಾಗ ಮೂಗನ್ನು ಅವನು ಕೇವಲ ಉಸಿರಾಡಿಸುವುದಕ್ಕೆ ಮಾಡಿದ್ದಾನೆ ಎನ್ನುವುದು ಯುಕ್ತಿಯುಕ್ತವಾಗುವುದಿಲ್ಲ. ಮೂಗಿಗೆ ಬೇರೆ ಯಾವುದೋ ದೈವೀ ಉದ್ದೇಶವಿರಬಹುದೆಂಬ ಸಂಶಯ ಮನುಷ್ಯನಿಗೆ ಮೊದಲಿಂದ ಇತ್ತೆಂದು ಕಾಣುತ್ತದೆ. ಆ ಉದ್ದೇಶದ ಊಹೆಯ ಫಲವಾಗಿಯೇ ದೀರ್ಘಶ್ವಾಸ, ಪ್ರಾಣಾಯಾಮ ಮೊದಲಾದ ಸರ್ಕಸ್ಸುಗಳನ್ನು ಮನುಷ್ಯ ಕಲ್ಪಿಸಿಕೊಂಡ. ಪ್ರೇಮಿಗಳು ನಿಟ್ಟುಸಿರು ಬಿಡುವ ಮೂಲಕ ಮೂಗನ್ನು ಸಾರ್ಥಕ ಮಾಡಿಕೊಳ್ಳುತ್ತಿದ್ದೇವೆಂದು ಕೂಡ ಭಾವಿಸುತ್ತಿದ್ದರು. ಆದರೆ ಜೋಡು ಕೊಳವೆಯ ಮೂಗು ನಿಜವಾಗಿ ಅರ್ಥಪೂರ್ಣವಾದದ್ದು ನಶ್ಯದ ಆವಿಷ್ಕಾರದಿಂದ.

ನಶ್ಯವನ್ನು ಜ್ಞಾನಚೂರ್ಣ ಅಂತ ಹಿರಿಯರು ಹೇಳುವುದನ್ನು ಕೇಳಿದ್ದೇನೆ. ಇದು ಅನೇಕ ರೀತಿಗಳಿಂದ ತಥ್ಯಕ್ಕೆ ಹತ್ತಿರವಾದ ಮಾತು. ಅಂಗೈಯಿಂದಲೋ ಡಬ್ಬಿಯಿಂದಲೋ ನಶ್ಯವನ್ನು ಎತ್ತಿಕೊಳ್ಳುವುದೇ ಜ್ಞಾನಮುದ್ರೆಯಲ್ಲಿ. ಯೋಗಿಗಳೂ ಧರ್ಮೋಪದೇಶಕರೂ ಧರ್ಮವನ್ನು ಶಿಷ್ಯರಿಗೆ ವಿವರಿಸುವಾಗ ಕೈಯ ಹೆಬ್ಬೆರಳ ತುದಿಯನ್ನು ತೋರುಬೆರಳ ತುದಿಗೆ ಜೋಡಿಸಿ ಉಳಿದ ಬೆರಳುಗಳನ್ನು ಅರಳಿಸಿ ಅಂಗೈಯನ್ನು ಶಿಷ್ಯರ ಕಡೆ ತಿರುಗಿಸಿ ಹಿಡಿಯುತ್ತಾರಲ್ಲ, ಅದೇ ಜ್ಞಾನಮುದ್ರೆ. ಈ ಮುದ್ರೆಯಲ್ಲಿ ನಶ್ಯವನ್ನು ಹಿಡಿದೇ ಹಿಂದಿನ ಆಚಾರ್ಯರು ಆಶ್ರಮಗಳಲ್ಲಿ ಬೋಧನೆಮಾಡುತ್ತಿದ್ದರೆಂದು ನನಗೆ ಸಂಶಯವಿದೆ. ತಂಬಾಕು ನಮ್ಮ ದೇಶಕ್ಕೆ ಬಂದದ್ದೇ ಹದಿನಾರನೇ ಶತಮಾನದಲ್ಲಿ. ಅನಂತರವೇ ನಶ್ಯ ಹುಟ್ಟಿರಬೇಕು ಎಂಬುದು ಇತಿಹಾಸ ಸಂಶೋಧಕರ ನಿಲುವು. ಇದನ್ನು ನಿರಾಕರಿಸುವುದಕ್ಕೆ ನನ್ನ ಹತ್ತಿರ ಪ್ರಮಾಣಗಳಿಲ್ಲ. ಆದರೆ ನನ್ನದೊಂದು ಮನವಿ ಇದೆ. ತಂಬಾಕು ಬರುವ ಮುಂಚೆ ಬೇರೆ ಯಾವುದಾದರೂ ಎಲೆಯಿಂದ ಚೂರ್ಣವನ್ನು ಮಾಡಿ ತಮ್ಮ ನಾಸಿಕವನ್ನು ಸಾರ್ಥಕಮಾಡಿಕೊಳ್ಳುತ್ತಿರಲಿಕ್ಕಿಲ್ಲವೇ ನಮ್ಮ ಪೂರ್ವಜರು?

ಇದರ ನಿರ್ಣಯವನ್ನು ಸಂಶೋಧಕರಿಗೆ ಬಿಡುತ್ತೇನೆ. ಆದರೆ ಜ್ಞಾನಮುದ್ರೆಯಲ್ಲಿ ಜ್ಞಾನಚೂರ್ಣವನ್ನು ಎತ್ತಿಕೊಂಡು ಪ್ರಾಣಾಯಾಮ ಕ್ರಮದಿಂದ ಎಡಗೈ ಹೆಬ್ಬೆರಳಿನಿಂದ ಬಲಮೂಗನ್ನು ಒತ್ತಿ ಹಿಡಿದು, ಎಡಮೂಗಿನ ನಳಿಗೆಯ ಬಾಯಿಗೆ ಅದನ್ನು (ಜ್ಞಾನಚೂರ್ಣವನ್ನು) ಒತ್ತಿ ಹಿಡಿದು ಸಶಬ್ದವಾಗಿ ಅದನ್ನು ಒಳಗೆಳೆದುಕೊಂಡು ಆಮೇಲೆ ತ್ವರಿತವಾಗಿ ಬಲ ಹೊರಳೆಯನ್ನು ಮುಕ್ತಮಾಡಿ ಅದಕ್ಕೂ ಚೂರ್ಣ ಪ್ರಾಶನ ಮಾಡಿಸುವುದು ನಮ್ಮ ಕನ್ನಡ ಪಂಡಿತರಿಗೆ ಕ್ಲಾಸು ಪ್ರಾರಂಭಿಸುವುದಕ್ಕೆ ಉಪಕ್ರಮಣಿಕೆಯಾಗಿರುತ್ತಿತ್ತು. ಅವರ ಕೈ ಸುಂದರವಾಗಿತ್ತು. ನಶ್ಯ ಎಳೆಯುವ ಅವರ ಭಂಗಿಯೇ ಅಭಿನಯಪೂರ್ಣವಾಗಿರುತ್ತಿತ್ತು. ಅನಂತರ ಅವರು ತಮ್ಮ ನಶ್ಯವರ್ಣದ ಕರವಸ್ತ್ರವನ್ನು ಕೋಟಿನ ಜೇಬಿನಿಂದ ಹೊರಗೆಳೆದು ಅರಳಿಸಿ ಕರವಸ್ತ್ರದೊಳಗೇ ಘನವಾಗಿ ಒಂದು ಶೀನು ಸ್ಫೋಟಿಸಿ ಮೂಗೊರಸಿಕೊಳ್ಳುತ್ತಿದ್ದರು ಆಮೇಲೆ ರನ್ನನನ್ನೋ ಕುಮಾರವ್ಯಾಸನನ್ನೋ ತೆಗೆದುಕೊಂಡು ಪಾಠ ಪ್ರಾರಂಭಿಸಿದರೆ ಕಲಿಯುಗ ದ್ವಾಪರವಾಗುತ್ತಿತ್ತು. ಭೀಮ, ದುರ್ಯೋಧನ, ಕರ್ಣ ನಮ್ಮ

ಕಣ್ಮುಂದೆ ಕುಣಿಯುತ್ತಿದ್ದರು. ಆಕಸ್ಮಾತ್ತಾಗಿ ನಶ್ಯದ ಡಬ್ಬಿಯನ್ನು ಮರೆತು ಬಂದಿದ್ದರೆ ಆವೊತ್ತು ಅವರ ಜ್ಞಾನಕವಾಟ, ರಸಮಂಜೂಷೆ ತೆರೆಯುತ್ತಲೇ ಇರಲಿಲ್ಲ. ನಶ್ಯ ಅವರ ವಾಕ್-ತಿಜೋರಿಯ ಬೀಗದ ಕೈಯಾಗಿತ್ತು, ಜ್ಞಾನದ ಅಣೆಕಟ್ಟಿನ ಸ್ಪಿಲ್‌ವೇ ಅಥವಾ ದಕ್ಷಿಣ ಕನ್ನಡದ ಮಾತಿನಲ್ಲಿ “ಮಾದು” ಆಗಿತ್ತು. ಅದು ಅವರಿಗೆ ಮನಸ್ಸಿನ ಜೇಡರಬಲೆಯನ್ನು ಗುಡಿಸುವ ಕಸಬರಿಗೆ ಯಾಗಿತ್ತು.

ನಶ್ಯ ನಿಮ್ಮ ಸ್ವಭಾವಕ್ಕೊಂದು ಕೈಪಿಡಿಯಾಗಬಲ್ಲದೆಂದು ಹೇಳಿದರೆ ನೀವು ಅತಿಶಯೋಕ್ತಿ ಎನ್ನಬಹುದು. ನಶ್ಯರಸಿಕರಾಗಿಯೂ ನಮ್ಮ ಪಂಡಿತರ ಹಾಗೆ ನೀವು ನಾಜೂಕುತನ ಉಳಿಸಿಕೊಂಡರೆ ನಿಮಗೆ ನಾನು ನಮೋ ಎನ್ನುತ್ತೇನೆ. ನೀವು ನಿಜವಾದ ನಾಜೂಕಯ್ಯ ಆಗಿರದಿದ್ದರೆ ನಶ್ಯ ನಿಮ್ಮ ಕೋಟಿನ ಮೇಲೆ, ನಿಮ್ಮ ಮೂಗಿನ ತುದಿಯಲ್ಲಿ, ನಿಮ್ಮ ಮೀಸೆಯಲ್ಲಿ ತನ್ನ ಕುರುಹು ತೋರಿಸಿ ನಿಮ್ಮ ಅಸಡ್ಡಾಳತನವನ್ನು ಜಗಜ್ಜಾಹೀರು ಮಾಡುತ್ತದೆ. ನಿಮ್ಮ ದುಂದು ಗಾರಿಕೆಗೂ ಅದು ಸಾಕ್ಷಿಯಾಗಬಲ್ಲದು. ನಿಮ್ಮ ಅಂಗಿಯ ಮೇಲೆ, ಮೀಸೆ ಯಲ್ಲಿ ನಶ್ಯ ಸಿಂಚನವಾಗಿದ್ದರೆ, ನೀವು ನಿಮ್ಮ ಮೂಗಿನ ಹೊರಳೆಗಳನ್ನು ನಾಲಿಗೆಗಳೆಂದೆಣಿಸದೆ ಪೀಪಾಯಿಗಳೆಂದು ಭಾವಿಸಿದ್ದೀರಿ ಎಂದು ಅರ್ಥವಾಗು ತ್ತದೆ. ನಿಜವಾದ ರಸಿಕನ ಜ್ಞಾನಮುದ್ರೆಯಲ್ಲಿ ತನ್ನ ಮೂಗಿನ ಕೆಪೇಸಿಟಿಗೆ ತಕ್ಕಷ್ಟು ಮಾತ್ರವೇ ನಶ್ಯವಿರುತ್ತದೆ—ಹೆಚ್ಚೂ ಅಲ್ಲ; ಕಮ್ಮಿಯೂ ಅಲ್ಲ. ಇದು ನಶ್ಯವಿವೇಕ. ಡಾ. ಜಾನ್‌ಸನ್ ಬಹಳ ದೊಡ್ಡ ಸಾಹಿತ್ಯವಿವೇಕಿ; ಆದರೆ ನಶ್ಯದಲ್ಲಿ ಆತ ಮಹಾ ಅವಿವೇಕಿಯಾಗಿದ್ದ. ಅವನ ಮೂಗಿನಿಂದ ಜೇಬಿನತನಕ ಎಲ್ಲೆಲ್ಲಿಯೂ ನಶ್ಯ ಚೆಲ್ಲಾಡಿರುತ್ತಿತ್ತು. ಬಹುಶಃ ಅವನ ಮೂಗಿನ ಗವಿಗಳಲ್ಲಿ ನಾಲ್ಕಾರು ಜನರಿಗೆ ಸಾಲುವಷ್ಟು ನಶ್ಯ ಯಾವಾಗಲೂ ಸ್ಟಾಕ್ ಇರುತ್ತಿತ್ತು ಅಂತ ಊಹಿಸಬಹುದು.

ಒಬ್ಬ ಸಂಸ್ಕೃತ ಕವಿಯ ಅಭಿಪ್ರಾಯದಲ್ಲಿ, ಕೃತಯುಗದಲ್ಲಿ ಬ್ರಹ್ಮನು ನಿರ್ಮಿಸಿದ ಚಾತುರ್ವರ್ಣ್ಯವನ್ನು ಕಲಿಯುಗದಲ್ಲಿ ಒಂದುಮಾಡುವ ಜಾತ್ಯತೀತ ಕಾರ್ಯಕ್ಕಾಗಿಯೇ ನಶ್ಯದ ಸೃಷ್ಟಿಯಾಯಿತು. ವ್ಯಕ್ತಿವ್ಯಕ್ತಿಗಳಲ್ಲಿ ಹೇಗೋ ಹಾಗೆ ಜಾತಿಜಾತಿಗಳಲ್ಲಿ ಮನೋಮೇಳವನ್ನು ಸ್ಥಾಪಿಸುವುದಕ್ಕೆ ನಶ್ಯ ಮಾಧ್ಯಮವಾಗಬಲ್ಲದು. ನಿಜ, ಈಗಿನ ಕಾಲದಲ್ಲಿ ಸಿಗರೇಟು ಅಥವಾ ಬೀಡಿ

ಜಾತ್ಯತೀತ ಭಾವೈಕ್ಯದ ಸಂಕೇತವಾಗುತ್ತಾ ಇದೆ. ಆದರೆ ನಿಮ್ಮ ಡಬ್ಬಿಯಿಂದ ನಾನು, ನನ್ನದರಿಂದ ನೀವು ಒಂದೊಂದು ಚಿಟಿಕೆ ನಶ್ಯವನ್ನು ಎತ್ತಿಕೊಂಡು ನಂನಮ್ಮ ಮೂಗಿನ ಮೂಲಕ ಬ್ರಹ್ಮನ ಸ್ಥಾನವಾದ ಬ್ರಹ್ಮರಂಧ್ರದವರೆಗೆ ಎಳೆದುಕೊಳ್ಳುವುದರಲ್ಲಿ ಎಷ್ಟು ಆಳವಾದ ಭಾವೈಕ್ಯ ಹುಟ್ಟಬಲ್ಲದೋ ಅಷ್ಟು ಬೀಡಿ ಸಿಗರೇಟಿನ ವಿನಿಮಯದಿಂದ ಹುಟ್ಟಲಾರದು. ಅದು ಎಷ್ಟೆಂದರೂ ಹೊಗೆ; ಹೊಗೆ ಹಿತವಾದ ಸಂಕೇತ ಆಗಲಾರದು.

ನಶ್ಯದ ಡಬ್ಬಿ ಎಂದೊಡನೆ ನೆನಪಾಯಿತು. ಅದಕ್ಕೂ ಭೂಗೋಲ ಶಾಸ್ತ್ರಕ್ಕೂ ನಿಕಟಸಂಬಂಧವಿದೆ. ಭೂಗೋಲ ಮಾಸ್ತರರೊಬ್ಬರು ಸೋಮ ವಾರದಿಂದ ಶುಕ್ರವಾರದ ವರೆಗೆ ಗೋಲಾಕಾರದ ನಶ್ಯಡಬ್ಬಿಯನ್ನೂ ಶನಿವಾರ ದಿನ ಚೌಕ ಡಬ್ಬಿಯನ್ನೂ ಉಪಯೋಗಿಸುತ್ತಿದ್ದದ್ದರಿಂದ ಭೂಮಿಯ ಆಕಾರ ಶನಿವಾರಗಳಲ್ಲಿ ಚಚ್ಚೌಕವಾಗುತ್ತಾ ಇದ್ದದ್ದನ್ನು ನೀವು ಕೇಳಿರಲೇಬೇಕು. ನಶ್ಯದ ಡಬ್ಬಿಗೆ ಭೂಮಿಯ ಆಕಾರವನ್ನೇ ಬದಲಿಸುವ ಶಕ್ತಿ ಇದ್ದಮೇಲೆ ಅದಕ್ಕೆ ನಿಮ್ಮ ತಲೆಯೊಳಗಿನ ವಿಚಾರಗಳ ಸ್ವರೂಪವನ್ನು ಬದಲಿಸುವ ಶಕ್ತಿ ಇಲ್ಲದೆ ಇದ್ದೀತೆ?

ಮನುಷ್ಯನ ಅಂತರಂಗಕ್ಕೆ ಇಷ್ಟು ಸಮೀಪವಾಗಿರುವ ಯಾವೊಂದು ಪದಾರ್ಥವಾದರೂ ಅವನ ಕಲಾಪ್ರತಿಭೆಯನ್ನು ಪ್ರಚೋದಿಸದೆ ಇರಲಾರದು. ನಶ್ಯದ ಡಬ್ಬಿಗಳ ನಿರ್ಮಾಣದಲ್ಲಿ ಅಕ್ಕಸಾಲಿಗರು ಅಸಾಮಾನ್ಯ ಕಲ್ಪನಾಶಕ್ತಿ ಯನ್ನು ಮೆರೆದಿದ್ದಾರೆ. ಬಂಗಾರದಿಂದ ಯಾರಾದರೂ ನಶ್ಯಮಂಜೂಷೆಯನ್ನು ಮಾಡಿಸಿದ್ದಾರೋ ಇಲ್ಲವೊ ನಾ ಕಾಣೆ. ಬೆಳ್ಳಿಯಂತೂ ಖಂಡಿತ ನಶ್ಯವನ್ನು ಧರಿಸುವುದರಲ್ಲಿ ಹೆಮ್ಮೆ ಪ್ರದರ್ಶಿಸಿದೆ. ನಾನು ಚೌಕ ಡಬ್ಬಿಗಳನ್ನು ಕಂಡಿ ದ್ದೇನೆ, ಆಯತ ಡಬ್ಬಿಗಳನ್ನು ಕಂಡಿದ್ದೇನೆ, ಗೋಲ ಡಬ್ಬಿಗಳನ್ನು ಕಂಡಿದ್ದೇನೆ, ಪರವಲಯಾಕೃತಿಯ ಡಬ್ಬಿಗಳನ್ನು ಕಂಡಿದ್ದೇನೆ, ಅಲ್ಲಾವುದ್ದೀನನ ಗುಹೆಯ ಹಾಗೆ ಮಂತ್ರದಿಂದೆಂಬಂತೆ ಚಂಗನೆ ಬಾಯಿ ತೆರೆಯುವ ಡಬ್ಬಿಗಳನ್ನು ಕಂಡಿ ದ್ದೇನೆ. ನಾನಾ ಲೋಹಗಳಿಂದ ಕುಸುರಿ ಚಿತ್ತಾರ ಕೆಲಸದೊಡನೆ ವಿರಾಜ ಮಾನವಾದ ಡಬ್ಬಿಗಳನ್ನು ಕಂಡಿದ್ದೇನೆ. ಬೇರೆ ಬೇರೆ ಮರಗಳಿಂದ ರೂಪಿಸಿ ದವುಗಳನ್ನೂ ನಾನು ಗಮನಿಸಿದ್ದೇನೆ. ಆದರೆ ಭಿಕ್ಷಾಪಾತ್ರೆಯೆನಿಸಿದ ತೆಂಗಿನ ಚಿಪ್ಪಿಗೆ ಬೆಳ್ಳಿಯ ಟೊಪ್ಪಿಗೆಯನ್ನು ದೊರಕಿಸಿ ಕೊಟ್ಟ ಪುಣ್ಯವನ್ನು ನಶ್ಯ

ವೊಂದೇ ಸಾಧಿಸಿದೆಯೆಂದು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಬರಡು ತೆಂಗಿನಕಾಯೊಳಗಿನ ಅಂಗುಲ ಗಾತ್ರದ ಚಿಪ್ಪನ್ನು ನಯವಾಗಿ ಪಾಲೀಸು ಮಾಡಿ ಅದಕ್ಕೆ ಬೆಳ್ಳಿಯ ಅಲಂಕರಣಗಳನ್ನು ಜೋಡಿಸಿ ನಶ್ಯಡಬ್ಬಿಯನ್ನು ತಯಾರಿಸಿದ ಕೀರ್ತಿ ಭಾರತೀಯರಿಗೇ ಮೀಸಲಾದದ್ದೆಂದು ನನ್ನ ನಂಬಿಕೆ. ಇದಕ್ಕಿಂತ ಸಾಮ್ಯವಾದಿ ಮತ್ತೇನಿರಬಲ್ಲದು ?

ನಶ್ಯಭಕ್ತಿ ಜಾತ್ಯತೀತವಾದದ್ದೆಂದು ಈಚೆಗೆ ಪ್ರಕಟವಾದ ವರದಿಯೊಂದು ತಿಳಿಸುತ್ತದೆ. ಬ್ರಾಹ್ಮಣರಿಂದ ಬೆಸ್ತರವರೆಗೆ ನಶ್ಯಪ್ರಿಯರಿದ್ದಾರೆ. ಪುರಾಣಿಕರು, ಹರಿಕಥೆದಾಸರು, ಪೂಜಾರಿಗಳು, ಸ್ವಾಮಿಗಳು ತಮ್ಮ ಮಡಿಗೆ, ಗಾಂಭೀರ್ಯಕ್ಕೆ ಏನೂ ಭಂಗವಿಲ್ಲದೇನೆ ನಶ್ಯಾರಾಧನೆ ಮಾಡಬಲ್ಲರು. ಹರಿಕಥೆ ಮಾಡುವಾಗ ಸಿಗರೇಟು ಎಳೆಯುವುದನ್ನು ನೀವು ಕಲ್ಪಿಸಿಕೊಳ್ಳಬಲ್ಲಿರಾ ? ಶುದ್ಧ ಅಬ್ರಹ್ಮಣ್ಯ ಎನ್ನುವಿರಿ. ಆದರೆ ಹೇಳೋದು ಶಾಸ್ತ್ರ ಸೇದೋದು ನಶ್ಯ ಅಂತ ಯಾರೂ ಗಾದೆ ಮಾಡಿಲ್ಲ. ಶಾಸ್ತ್ರ ಕೇಳುತ್ತೀರಾ ? ಸಿಗರೇಟು ಸೇದಿದರೆ ಎಂಜಲಾಗುತ್ತದೆ ; ವೀಳ್ಯ ತಿಂದರೆ ಮೈಲಿಗೆ ಆಗುತ್ತದೆ. ಬಾಯಿಯ ಮೂಲಕ ಹೋದದ್ದು ಬಂದದ್ದು ಎಲ್ಲವೂ ಮೈಲಿಗೆ ಅಂತ ಶಾಸ್ತ್ರ ಹೇಳುತ್ತದೆ. ಆದರೆ ಮೂಗಿನ ಮೂಲಕ ಹೋದದ್ದು ಬಂದದ್ದು ನಿಮ್ಮ ಮಡಿಯನ್ನು ಕೆಡಿಸುವುದಿಲ್ಲ. ಆದ್ದರಿಂದ ನಶ್ಯ ಶಾಸ್ತ್ರಸಮ್ಮತ. ನಶ್ಯ ಸೇದಿ ನರಕಕ್ಕೆ ಹೋದ ಅನ್ನುವುದನ್ನು ನಾನಂತೂ ಕೇಳಿಲ್ಲ. ನಶ್ಯ ಸೇದಿದರೆ ವೈದಿಕರದೇ ಏಕೆ, ಹೆಂಗಸರ ಗೌರವ ಕೂಡ ಕಮ್ಮಿಯಾಗುವುದಿಲ್ಲ.

೪೦ ವರ್ಷಗಳ ಹಿಂದೆ ಮದ್ರಾಸಿನಲ್ಲಿ ಹತ್ತೋ ಹನ್ನೆರಡೋ ನಶ್ಯ ತಯಾರಕರಿದ್ದರಂತೆ ; ಈಗ ೧೦೦ ಮಿಕ್ಕಿದೆಯಂತೆ ಅವರ ಬಳಗ. ಪರವಾಗಿಲ್ಲ. ನಮ್ಮ ಜನಸಂಖ್ಯೆ ಏರಿದ್ದಕ್ಕಿಂತಲೂ ನಶ್ಯ ತಯಾರಕರ ಸಂಖ್ಯಾಭಿವೃದ್ಧಿ ಮೇಲ್ಮಟ್ಟದಲ್ಲಿದೆಯೆಂದಮೇಲೆ ನಶ್ಯ ಜನಪ್ರಿಯತೆ ಕಳೆದುಕೊಳ್ಳುತ್ತ ಇಲ್ಲ ಎಂದಹಾಗಾಯಿತು. ಸುಗಂಧ ನಶ್ಯಗಳಿವೆ, ಆಫೀಸರ್ ನಶ್ಯಗಳಿವೆ, ಜನತಾ ನಶ್ಯಗಳೂ ಇವೆ.

ಆದರೂ ಈ ನಶ್ಯಾಭಿವೃದ್ಧಿಯಲ್ಲಿ ನನಗೆ ಅಷ್ಟು ಇಷ್ಟವೆನಿಸದ ಒಂದಂಶ ಇದೆ. ನಾವು ಸಣ್ಣವರಿದ್ದಾಗ ಮನೆಮನೆಯಲ್ಲಿ ನಶ್ಯೋತ್ಪಾದನೆ ಆಗುತ್ತಿತ್ತು. ಒಳ್ಳೆಯ ಹರವಾದ, ಒಳಗೂ ಹೊರಗೂ ನಯವಾಗಿ ಪಾಲಿಶ್ ಮಾಡಲ್ಪಟ್ಟ

ಒಂದು ತೆಂಗಿನ ಚಿಪ್ಪು, ಅಷ್ಟೇ ನಯವಾಗಿ ಪಾಲಿಶ್ ಮಾಡಿದ ಗುಂಡು ತಲೆಯ ಒಂದು ದೊಣ್ಣೆ, ಒಂದು ಮೂಲೆಯಲ್ಲಿ ಸದಾ ಜಾಗೃತವಾಗಿ ಕುಳಿತಿರಬೇಕು. ಒಳಗೆ ಪೆಟ್ಟಿಗೆಯಲ್ಲಿ ಭದ್ರವಾಗಿ, ಚುನಾಯಿಸಿದ, ಸ್ವರ್ಣವರ್ಣದ ಎಂಟೋ ಹತ್ತೋ ಹೊಗೆಸೊಪ್ಪಿನ ನೀಳವಾದ ಎಲೆಗಳು ಇರಬೇಕು. ಯಜಮಾನನಿಗೆ ಸ್ಫೂರ್ತಿ ಬಂದಾಗ ಆತ ಹಂಚಿನಲ್ಲಿ ನಿಗಿನಿಗಿ ಕೆಂಡವನ್ನು ತರಿಸಿ ತಂಬಾಕಿನ ಎರಡೋ ಮೂರೋ ಎಲೆಗಳನ್ನು ತೆಗೆದು ಹದವಾಗಿ ಸ್ವಹಸ್ತದಿಂದ ಕಾಯಿಸಿ ಅದನ್ನು ಗರಿಗರಿಯಾಗಿ ಮಾಡಬೇಕು. ಅನಂತರ ಅದನ್ನು ದಂಟು ತೆಗೆದು ನುರಿಸಿ ಚಿಪ್ಪಿನೊಳಗೆ ತುರುಕಿ, ಮಿತವಾಗಿ ಶುದ್ಧ ಸುಣ್ಣ, ಹಿತವಾಗಿ ಮನೆಯಲ್ಲೇ ಕಾಸಿದ ಗಮಗಮ ಆಕಳ ತುಪ್ಪ ಬೆರೆಸಿ ದೊಣ್ಣೆಯಿಂದ ತೀಡಬೇಕು. ಈ ಬಗೆಯಿಂದ ಸಿದ್ಧವಾಗುವ ಮೈದಾಹಿಟ್ಟಿನಷ್ಟು ನಯವಾದ ನಶ್ಯದಿಂದ ಇಡುಗುವ ವಾಸನೆ ದಿವ್ಯವಾಗಿರುತ್ತಿತ್ತು. ಒಮ್ಮೆಗೆ ತಯಾರಾಗುತ್ತಿದ್ದುದು ಎರಡು ತೊಲೆಯೋ ನಾಲ್ಕು ತೊಲೆಯೋ ಮಾತ್ರ. ಅದನ್ನು ವಾತಸ್ತಂಭಕವಾದ ಪಿಂಗಾಣಿ ಭರಣಿಯಲ್ಲಿ ಹಾಕಿಟ್ಟು ಬೇಕು ಬೇಕಾದಂತೆ ಒಂದು ದಿನದ ಪೂರೈಕೆಯಷ್ಟನ್ನು ನಶ್ಯದ ಡಬ್ಬಿಯೊಳಗೆ ತುಂಬಿಕೊಳ್ಳುವುದೂ ಒಂದು ವಿಶೇಷ ವಿಧಿಯೇ. ಎಡಗೈಯ ಹೆಬ್ಬೆರಳು ತೋರು ಬೆರಳುಗಳ ನಡುವೆ ಡಬ್ಬಿಯ ಕೊರಳನ್ನು ಬಿಗಿಯಾಗಿ ಹಿಡಿದು, ಅಂಗೈಯ ಪುಟದಲ್ಲಿ ಗಮಗಮ ನಶ್ಯವನ್ನು ಸುರುವಿಕೊಂಡು, ಡಬ್ಬಿಯ ಬುಡವನ್ನು ಮೃದುವಾಗಿ ಬಡಿಬಡಿದು ಅದರ ಕಂಬುಕಂಠದ ಮೂಲಕ ಪುಡಿಯನ್ನು ಡಬ್ಬಿಗೆ ತಿನ್ನಿಸಬೇಕು. ಒಂದು ಸಲಕ್ಕೆ ಒಂದು ದಿನದ ಅಗತ್ಯಕ್ಕಿಂತ ಹೆಚ್ಚನ್ನು ನಶ್ಯದ ಬುರುಡೆಯಲ್ಲಿ ತುಂಬುವಂತಿಲ್ಲ.

ದುರ್ದೈವದಿಂದ ಇಂದು ನಶ್ಯೋತ್ಪಾದನೆ ಕೂಡ ವಾಣಿಜ್ಯವಾಗಿಬಿಟ್ಟಿದೆ. ಯಾರೂ ತಮಗೆ ಬೇಕಾದ ನಶ್ಯವನ್ನು ತಾವೇ ತಯಾರಿಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ವೈಯಕ್ತಿಕ ಅಭಿರುಚಿಗನುಸಾರವಾಗಿ ಸಿದ್ಧವಾದ ವೈವಿಧ್ಯಮಯ ನಶ್ಯ ಈಗಿಲ್ಲ. ಆದ್ದರಿಂದ ನಶ್ಯ ವಿನಿಮಯದಲ್ಲಿ ಮುಂಚಿನಂಥ ಆತ್ಮೀಯತೆಯ ವಿನಿಮಯ ಈಗಿಲ್ಲ. ಎಂದೋ ಮಂಗಳೂರಲ್ಲೋ ಮದ್ರಾಸಿನಲ್ಲೋ ಕಾರಖಾನೆ ಮಟ್ಟದಲ್ಲಿ ಸ್ಟಾಂಡರ್ಡ್ ಪ್ರಮಾಣದ ಮಿಶ್ರಣವಾಗಿ ಅದು ತಯಾರಾಗುತ್ತದೆ. ನಿಮ್ಮ ಡಬ್ಬಿಯಲ್ಲಿರುವುದೂ ಅದೇ. ನನ್ನದರಲ್ಲಿರು

ವುದೂ ಅದೇ. ಅದಕ್ಕೆ ಆಕಳ ತುಪ್ಪ ಹಾಕಿದ್ದಾರೋ ಎಮ್ಮೆ ತುಪ್ಪವೋ ವನಸ್ಪತಿಯೋ–ದೇವರೇ ಬಲ್ಲ. ರೆಡೀಮೇಡ್ ಚಪ್ಪಲಿ, ರೆಡೀಮೇಡ್ ಅಂಗಿ, ರೆಡೀಮೇಡ್ ನಶ್ಯ. ಆತ್ಮೀಯತೆ ಹೋಗಿಬಿಟ್ಟದೆ; ಚಟಗಳು ಮಾತ್ರ ಉಳಿದಿವೆ; ಅವು ಸಾರ್ವಜನಿಕವಾಗಿವೆ. ವೈಯಕ್ತಿಕವೇನೂ ಉಳಿದಿಲ್ಲ. ಮೂಗುಗಳಾದರೂ ನಮ್ಮವಾಗಿಯೇ ಉಳಿದಿವೆಯಲ್ಲ, ಅದೇ ಪುಣ್ಯ. (೧೯೭೬)

## ಕ್ಯೂ ವಿಚಾರಲಹರಿ

"ಇಲ್ಲಿ ಕ್ಯೂ ನಿಲ್ಲಿರಿ" ಎಂಬ ಬೋರ್ಡಿನ ಕೆಳಗೆ ಈಗೊಂದು ಗಂಟೆಯಿಂದ ನಿಂತಿದ್ದೇನೆ. ನನ್ನ ಮುಂದೆ ಒಂದರ್ಧ ಫರ್ಲಾಂಗು, ನನ್ನ ಹಿಂದೆ ಬಹುಶಃ ಒಂದು ಫರ್ಲಾಂಗುದ್ದಕ್ಕೆ ಈ ಕ್ಯೂ "ಊ" ಆಕಾರದಲ್ಲಿ ಸಾಲು ಹಿಡಿದಿದೆ. ಭಾರತದಲ್ಲಿ ಎಲ್ಲದರ ಹಾಗೆ ಈ ಕ್ಯೂ ಕೂಡ ವೈವಿಧ್ಯಪೂರ್ಣವಾಗಿದೆ. ಮಿಲಿಟರಿ ಭಾಷೆಯಲ್ಲಿ ಹೇಳುವುದಾದರೆ, ಇದರಲ್ಲಿ ಸಿಂಗಲ್ ಫೈಲ್, ಡಬಲ್ ಫೈಲ್, ಟ್ರಿಪಲ್ ಫೈಲ್ ಎಲ್ಲಾ ಇದೆ. ಬ್ರಹ್ಮನ ಹಾಗೆ ಇದು ಚತುರ್ಮುಖವಾಗಿದೆ. ಯಾಕೆಂದರೆ ಕೆಲವರು ಮುಖಾಮುಖಿಯಾಗಿ, ಕೆಲವರು ತಿಕಾತಿಕಿಯಾಗಿ, ಕೆಲವರು ಪಕ್ಕಾಪಕ್ಕಿಯಾಗಿ ನಿಂತಿದ್ದಾರೆ.

ಈ ಒಂದು ಗಂಟೆಯಲ್ಲಿ ನಾನು ಸುಮಾರು ಒಂದು ಅಡಿಯಷ್ಟು ಪ್ರಗತಿ ಸಾಧಿಸಿದ್ದೇನೆ. ಇದರರ್ಥ ಕ್ಯೂ ಮುಂದೆ ಸರಿಯುತ್ತಿದೆಯೆಂದಲ್ಲ. ಹಿಂದೆ ನಿಂತವರು ಒತ್ತುತ್ತಿದ್ದಾರೆಂದು ನಾನು ಮುಂದುವರಿದಿದ್ದೇನೆ. ಒತ್ತಡದ ಸ್ಥಿತಿಯಲ್ಲಿ ನನ್ನ ವಿಚಾರಲಹರಿ ಯಾವಾಗಲೂ ಬಿಡುಗಡೆ ಹೊಂದುತ್ತದೆ. ನಾವು ಪ್ರಗತಿ, ಪ್ರಗತಿ ಎಂದು ಹೇಳಿಕೊಳ್ಳುವುದೆಲ್ಲ ಹೀಗೇ ಅಲ್ಲವೆ? ಹಿಂದಿನವರ ಒತ್ತಡದಿಂದ ನಾವು ಮುಂದೆ ತಳ್ಳಲ್ಪಡುತ್ತೇವೆ. ಈ ಅನೈಚ್ಛಿಕ ಚಲನೆಯನ್ನೇ ನಾವು ಪ್ರಗತಿ ಎಂದು ಬೆನ್ನುಚಪ್ಪರಿಸಿಕೊಳ್ಳುತ್ತೇವೆ, ಮತ್ತು ಕೆಲವರು ಇದರ ಕೀರ್ತಿಯನ್ನು ತಮ್ಮ ಲೆಕ್ಕಕ್ಕೆ ಜಮಾ ಹಿಡಿಯುತ್ತಾರೆ. ಇವರೇ ಪ್ರಗತಿಪರ ಮುಂದಾಳುಗಳು. ವಾಸ್ತವಿಕವಾಗಿ ನಮ್ಮ ಗುರಿಗೆ ನಾವು ಎಷ್ಟು ಹತ್ತಿರವಾಗಿದ್ದೇವೆ? ಎಷ್ಟೂ ಇಲ್ಲ. ನಮ್ಮನ್ನು ಒಯ್ಯಬೇಕಾದ ಬಸ್ಸು

ಇನ್ನೂ ಬಂದಿಲ್ಲ. ಬರುತ್ತದೆ ಎನ್ನುವ ಭರವಸೆಯನ್ನು ನಮಗೆ ಕೊಡಲಾಗಿದೆ. ಈ ಭರವಸೆಗಾಗಿ ನಾವು ನುಗ್ಗಾಡುತ್ತಿದ್ದೇವೆ. ಬಸ್ಸು ಬಾರದೆಯೇ ಇರಬಹುದು. ಅಥವಾ ಗ್ಯಾರೇಜಿನಲ್ಲಿ ಕೆಟ್ಟು ನಿಂತಿರಬಹುದು, ಅಥವಾ ಬಸ್ಸೇ ಇಲ್ಲದಿರಬಹುದು.

ನನ್ನ ಆಲೋಚನೆ ಹರಿಗಡಿಯುತ್ತದೆ. ನನ್ನ ಪಕ್ಕದಲ್ಲಿರುವ 'ಊ'ವಿನ ಬಾಹುವಿನಲ್ಲಿ ನಿಂತವರೊಬ್ಬರು ಬಾಯಲ್ಲಿ ತಾಂಬೂಲ ಹಾಕಿಕೊಂಡು ಇನ್ನೊಬ್ಬರೊಡನೆ ಉತ್ತೇಜಿತ ಸಂಭಾಷಣೆಯಲ್ಲಿ ಮಗ್ನರಾಗಿದ್ದಾರಲ್ಲ, ಅವರ ಬಾಯಿಂದ ಸಿಡಿದ ಅಮೃತಬಿಂದುಗಳು ಬಂದು ನನ್ನ ಕಪೋಲವನ್ನು ಪವಿತ್ರಗೊಳಿಸುತ್ತವೆ. ನಾನು ಅವರನ್ನು ಆಪಾದನಾದೃಷ್ಟಿಯಿಂದ ನೋಡುತ್ತ ಗಲ್ಲ ತಿಕ್ಕಿಕೊಳ್ಳುತ್ತೇನೆ. ಅವರ ಅಮೃತ ತುಷಾರಗಳ ಮಾರ್ಗದಲ್ಲಿ ನನ್ನ ಕದಪನ್ನು ಇರಿಸಿದ್ದು ನನ್ನ ತಪ್ಪೆಂಬ, ಅಥವಾ ಆ ರಕ್ತಾವೃತ ಬಿಂದುಗಳು— ನನ್ನ ಮುಖವನ್ನು ಪವಿತ್ರಗೊಳಿಸಿದ್ದಕ್ಕೆ ನಾನು ಅವರಿಗೆ ಥ್ಯಾಂಕ್ಸ್ ಹೇಳಬೇಕಾಗಿತ್ತೆಂಬ ಭಾವದಿಂದ ಅವರು ನನ್ನನ್ನು ನೋಡಿ ಮಾತು ಮುಂದುವರಿಸುತ್ತಾರೆ. ನಾನು ಅವರೊಡನೆ ಜಗಳ ತೆಗೆಯಬಾರದೆಂದು ನಿರ್ಧರಿಸುತ್ತೇನೆ. ಬದಲಿಗೆ ನನ್ನ ಕಪೋಲದ ಮೇಲೆ ಆಡಿಸಿದ ಕೈಗೆ ಮುಳ್ಳುಮುಳ್ಳು ಅನಿಸಲಿಲ್ಲವೇ ಎಂದುಕೊಳ್ಳುತ್ತೇನೆ. ಈವೊತ್ತು ಮುಂಜಾನೆ ನಮ್ಮ ಅತ್ಯುತ್ಕೃಷ್ಟ ಸ್ವದೇಶೀ ಬ್ಲೇಡಿನಿಂದ ಗಡ್ಡ ಕೆರೆದುಕೊಂಡದ್ದು ನನಗೆ ನೆನಪಿದೆ. ಈ ಭದ್ರಂಕರಣದಲ್ಲಿ ಸ್ವಲ್ಪ ರಕ್ತಪಾತವಾಗಿತ್ತು ; ಮತ್ತು ನಮ್ಮೀ ಸ್ವದೇಶಕ್ಕಾಗಿ ನಾನು ಕೂಡ ನನ್ನದೇ ರಕ್ತ ಸುರಿಸಿದೆನಲ್ಲ ಎಂದು ಹೆಮ್ಮೆಪಟ್ಟುಕೊಂಡಿದ್ದೆ. ಇಷ್ಟು ಬೇಗ ನನ್ನ ಗಡ್ಡ ಇಷ್ಟು ಬೆಳೆಯಿತೇ ? ಅಥವಾ ಕ್ಯೂವಿನಲ್ಲಿ ನಿಂತಾಗ ಗಡ್ಡ ಬೇಗ ಬೇಗ ಬೆಳೆಯುತ್ತಿರಬಹುದೆ? ಅಮೇರಿಕದ ಯಾವುದೋ ವಿಶ್ವವಿದ್ಯಾನಿಲಯದ ಪ್ರೊಫೆಸರರೊಬ್ಬರು ಕ್ಷೌರಶಾಸ್ತ್ರದಲ್ಲಿ ಸಂಶೋಧನೆ ಮಾಡಿದ್ದಾರೆಂದು, ಒಂದು ಲೇಖನ ಓದಿದ್ದ ನೆನಪಾಯಿತು. ಗಡ್ಡ ಸರಾಸರಿ ದಿನಕ್ಕೆ ಅರ್ಧ ಮಿಲಿಮೀಟರಿನಷ್ಟೋ ಏನೋ ಬೆಳೆಯುತ್ತದೆಂದು ಅವರು ಕಂಡುಹಿಡಿದಿದ್ದರು. ಆತುರದಿಂದ ಯಾವುದಕ್ಕಾದರೂ ಕಾಯುತ್ತಿರುವಾಗ ಗಡ್ಡದ ಬೆಳವಣಿಗೆಯ ವೇಗ ಹೆಚ್ಚುತ್ತದೆಯೆಂದೇನಾದರೂ ಈ ಪ್ರೊಫೆಸರರ ಸಂಶೋಧನೆಯಿಂದ ತಿಳಿದುಬಂದಿದೆಯೆ? ಆ ಲೇಖನದ ಕಟಿಂಗ್ ಮಾಡಿ

ಇಟ್ಟಿದ್ದೆ. ಮನೆಗೆ ಹೋದಮೇಲೆ ನೋಡಬೇಕು. ನನ್ನ ಸಂಶಯ ಸ್ಥಿರಪಟ್ಟರೆ ಇನ್ನೊಮ್ಮೆ ಕ್ಯೂ ನಿಲ್ಲಲಿಕ್ಕೆ ಬರುವಾಗ ಸೇಫ್ಟಿ ರೇಜರ್ ತರಬೇಕು.

ಕ್ಯೂ ಎಂಬುದನ್ನು ಯಾರು ಮಾಡಿರಬಹುದು? ದೇವರಂತೂ ಖಂಡಿತ ಅಲ್ಲ. ಅಮೇರಿಕನ್ನರಿರಬಹುದೆ? ಯಾರೇ ಇದ್ದರೂ ಎರಡನೇ ಮಹಾ ಯುದ್ಧದ ಕಾಲದಲ್ಲಿ ಕ್ಯೂ ವಿಶ್ವವ್ಯಾಪ್ತಿಯಾಯಿತು. ಬ್ರಿಟಿಶ್ ಧೈರ್ಯ ಹೇಗೋ ಹಾಗೆ ಬ್ರಿಟಿಶ್ ಕ್ಯೂಗಳೂ ಪ್ರಸಿದ್ಧವಾಗಿದ್ದವು. ಒಮ್ಮೆ ರೇಶನ್ ಅಂಗಡಿಯ ಮುಂದೆ ಕ್ಯೂ ನಿಂತಿತ್ತಂತೆ. ಅಷ್ಟರಲ್ಲಿ ಜರ್ಮನ್ ಬಾಂಬರು ಗಳು ಆಕಾಶದಲ್ಲಿ ಪ್ರತ್ಯಕ್ಷವಾಗಿ ಭೋಂಗಂ ಒದರಿತು. ಕಟ್ಟಳೆ ಪ್ರಕಾರ ಕ್ಯೂ ನಿಂತವರೆಲ್ಲ ನೆಲದ ಮೇಲೆ ತಟ್ಟನೆ ಕವುಚಿ ಮಲಗಿದರಂತೆ. ಆಲ್ ಕ್ಲಿಯರ್ ಸಂಕೇತ ಬಂದಮೇಲೆ ಎಲ್ಲರೂ ಎದ್ದುನಿಂತು ಸಾಲು ಹಿಡಿದರು. ಆಗೊಬ್ಬ ಕ್ಯೂವಾಡಿಗ ತನ್ನ ಮುಂದೆ ನಿಂತ ಕ್ಯೂವಾಡಿಗಿತ್ತಿಯ ಹೆಗಲನ್ನು ಬೆರಳಿಂದ ತಟ್ಟಿ, "ಲೇಡೀ, ಸೈರನ್ ಆಗೋ ಮುಂಚೆ ನೀವು ನನ್ನ ಹಿಂದೆ ಇದ್ದಿರಿ" ಎಂದನಂತೆ. ಅವಳು, "ಹೌದೇ? ಕ್ಷಮಿಸಿ!" ಎಂದು ಅವನ ಹಿಂದೆ ಹೋಗಿ ನಿಂತಳಂತೆ. ಈ ಬ್ರಿಟಿಶ್ ಜನ ವಿಚಿತ್ರ ಜನ. ನಾವಾಗಿದ್ದರೆ....

ಅಷ್ಟರಲ್ಲಿ ನಮ್ಮೆದುರು ಒಂದು ಸಣ್ಣ ಕೋಲಾಹಲ ಏಳುತ್ತದೆ. ಏನು? ಅಂತ ನನ್ನ ಮುಂದಿರುವವರನ್ನು ಕೇಳುತ್ತೇನೆ. "ಏನೂ ಇಲ್ಲ, ಯಾರೋ ಒಬ್ಬರು ಕ್ಯೂವಿನ ಮಧ್ಯೆ ಬಂದು ನುಗ್ಗಿದರಂತೆ. ಅದಕ್ಕೆ ಅವರ ಹಿಂದಿದ್ದ ವರು ತಕರಾರು ಮಾಡುತ್ತಿದ್ದಾರೆ" ಎಂದರು. ಆಮೇಲೆ ದೊಡ್ಡ ದನಿಯಲ್ಲಿ ಒದರಾಟ ಕೇಳಿಸತೊಡಗುತ್ತದೆ.

"ಏನ್ರೀ, ನಾವಿಲ್ಲಿ ಎಷ್ಟು ಹೊತ್ತಿನಿಂದ ನಿಂತಿದ್ದೇವೆ. ನೀವು ಈಗ ಬಂದವರು ನಡುವೆ ನುಗ್ಗುತ್ತೀರಲ್ಲ."

"ಹೌದ್ರೀ, ನಮಗೆ ಸ್ವಲ್ಪ ಬೇಗ ಹೋಗಬೇಕಾಗಿತ್ತು."

"ನಮಗೂ ಬೇಗ ಹೋಗಬೇಕಾಗಿದೆ. ನಾವೇನು ಕತ್ತೆ ಕಾಯೋಕೆ ಇಲ್ಲಿ ನಿಂತಿದ್ದೀವಂತ ಮಾಡಿದ್ದೀರಾ?"

"ನೀವು ಏನು ಕಾಯೋಕೆ ನಿಂತಿದೀರಿ ಅಂತ ನಮಗೇನು ಗೊತ್ತು? ನಮಗೆ ಬೇಗ ಹೋಗಬೇಕಾಗಿತ್ತು."

"ಬೇಗ ಹೋಗಬೇಕಾಗಿದ್ದರೆ ನಮ್ಮ ಹಾಗೆ ಬೆಳಗಾತ ಬೇಗ ಹೊರಟು

ಬರಬೇಕಾಗಿತ್ತು. ಈಗ ನುಗ್ಗಿದರೆ?"

"ಹೋಗ್ರೀ, ಹೊರಡೋದು ನಾವು ನಿಮಗಿಂತ ಮುಂಚೇನೇ ಹೊರಟಿದ್ವಿ. ಬರೋಕೆ ತಡವಾಯಿತು. ಅಷ್ಟೇ. ನಾವು ಹೊರಟ ಲೆಕ್ಕಹಿಡಿದರೆ ನಾವು ಎಲ್ಲರಿಗಿಂತ ಮುಂದೆ ನಿಂತಿರಬೇಕಾಗಿತ್ತು" ಎಂದು ಆ ಧಡೂತಿ ಆಸಾಮಿ ಕ್ಯೂ ನಡುವೆ ಹೇಗೋ ತಮ್ಮನ್ನು ಹಿಸುಕಿಕೊಂಡರು.

ನನ್ನ ಹಾಗೆ ತುಸು ತೆಳ್ಳಗಾದ ತಕರಾರಿ ವ್ಯಕ್ತಿ, "ಇದೇನ್ರಿ ನ್ಯಾಯ ನಿಮ್ಮದು?" ಎಂದು ಪ್ರತಿಭಟಿಸಿತು.

"ನ್ಯಾಯ ಪಾಯ ಎಲ್ಯಂಟ್ರಿ ಈ ಜಗತ್ತಿನಲ್ಲಿ? ನಾವೂ-ಅವರೂ ಒಂದೇ ತಾರೀಖು ಹುಟ್ಟಿದ್ದು. ಅವರಿಗಿಂತ ಒಂದು ಗಳಿಗೆ ನಾನೇ ಮೊದಲು ಹುಟ್ಟಿದ್ದೆ. ಅವರು ಕಾರಲ್ಲಿ ತಿರುಗಾಡ್ತಾರೆ; ನಾನಿಲ್ಲಿ ಕ್ಯೂನಲ್ಲಿ ನಿಂತು ನಿಮ್ಮ ಕೈಲಿ ಕುಸ್ತಿ ಹಿಡೀಬೇಕಾಗಿದೆ. ಎಲ್ಯಂಟ್ರೀ ಕ್ಯೂ?"

ತೆಳ್ಳನ್ನ ಆಸಾಮಿಯ ಪಕ್ಷದಲ್ಲಿ ಯಾರೂ ದನಿಯೆತ್ತಲಿಲ್ಲ. "ಹೋಗ್ಲಿ ಬಿಡ್ರೀ, ಯಾಕೆ ಜಗಳಾಡ್ತೀರಿ? ಏನೋ ಅರ್ಜೆಂಟ್ ಕೆಲಸ ಇದ್ದಿರಬಹುದು" ಎಂದರು ಹಿರಿಯರೊಬ್ಬರು ಔದಾರ್ಯದಿಂದ.

ಈ ಗದ್ದಲದಲ್ಲಿ ನನ್ನ ಪ್ರಗತಿ ಒಂದಡಿ ಹಿಂದೆ ಸರಿದು ನಾನು ಮೊದಲಿದ್ದ ಸ್ಥಳದಲ್ಲೇ ಸರಿಯಾಗಿ ನಿಂತಿದ್ದೆ. ಆದರೆ ಧಡೂತಿ ಆಸಾಮಿಯ ತತ್ವಜ್ಞಾನ ನನ್ನ ವಿಚಾರಚಕ್ರವನ್ನು ತಿರುಗಿಸಿಬಿಟ್ಟಿತ್ತು. ಹೌದು, ಎಲ್ಲಿದೆ ಕ್ಯೂ? ದೇವರ ಜಗತ್ತಿನಲ್ಲಿ ಕ್ಯೂ ಉಂಟೇ? ಹುಟ್ಟು-ಸಾವಿನಲ್ಲಿ ಕ್ಯೂ ಉಂಟೆ?

ಹುಟ್ಟುವ ವಿಷಯ ನನಗೆ ಗೊತ್ತಿಲ್ಲ. ಆದರೆ ಹುಟ್ಟುವುದಕ್ಕೆ ಮಕ್ಕಳು ಕ್ಯೂ ಹಿಡಿದು ನಿಂತಿರುತ್ತಾರೆ ಅಂತ ಕುವೆಂಪು ಹೇಳುತ್ತಾರೆ. "ಯಾಕಿಲ್ಲಿ ಕ್ಯೂ ನಿಂತು ನುಗ್ಗುವಿರಿ?" ಅಂತಲೋ ಏನೋ ತಮ್ಮ ಕವಿತೆಯಲ್ಲಿ ಅವರು ವ್ಯಥಿಸಿದ್ದಾರೆ. ರವಿ ಕಾಣದ್ದು ಕವಿಗೆ ಕಾಣಿಸುತ್ತಂತೆ. ಆದ್ದರಿಂದ ಬಸ್ಸಿಗಾಗಿ ನಾವು ಇಲ್ಲಿ ಕ್ಯೂ ಹಿಡಿಯುವ ಹಾಗೆ, ಆ ಲೋಕದಲ್ಲಿ ಉಮೇದ್ವಾರ ಮಕ್ಕಳು ಸಾಲಾಗಿ ನಿತಿದ್ದಾರೆ ಅಂತ ಒಪ್ಪಿಕೊಳ್ಳೋಣ. ಆದರೆ ಹುಟ್ಟಿದನಂತರ ಇಲ್ಲಿ ಯಾವುದಾದರೂ ಕ್ಯೂ ಪ್ರಕಾರ ನಡೆಯುತ್ತೆಯೆ? ಪರೀಕ್ಷೆಗಳಲ್ಲಿ ಕ್ಯೂ ಪ್ರಕಾರ ಪಾಸುಮಾಡುತ್ತಾರೆಯೆ? ಎಂ.ಎಲ್.ಎ.ಗಳನ್ನು ಕ್ಯೂ ಪ್ರಕಾರ ಆರಿಸುತ್ತಾರೆಯೆ? ಮಂತ್ರಿಗಳನ್ನು? ಮುಖ್ಯಮಂತ್ರಿಗಳನ್ನು? ಪ್ರಧಾನಮಂತ್ರಿಗಳನ್ನು?

ಅಧ್ಯಕ್ಷರನ್ನು? ಅದೆಲ್ಲ ಹೋಗಲಿ, ಯಮುನಾದರೂ ಕ್ಯೂ ಪದ್ಧತಿಯನ್ನು ಅನುಸರಿಸುತ್ತಾನೆಯೆ? ಸಾಯುವವರಿಗೆ ಕ್ಯೂ ನಿಲ್ಲಿ ಎಂದು ಅವನೇನೂ ಹೇಳುವುದಿಲ್ಲವಲ್ಲ?

ಬಸ್ಸಿಗಾಗಿ ಕ್ಯೂ ನಿಂತಾಗೆಲ್ಲ ಕೆಲವರು ಸರ್ವಥಾ ಕ್ಯೂವಿನಲ್ಲಿ ನಿಲ್ಲಲು ಒಪ್ಪುವುದಿಲ್ಲ ಎಂದು ನಾನು ನೋಡುತ್ತಿದ್ದೇನೆ. ಅವರು ಕ್ಯೂವಿನಲ್ಲಲ್ಲ, ಬಸ್ ನಿಲ್ಲುವ ಸ್ಥಳದಲ್ಲಿ ಹೀಗೇ ಲೋಕಾಭಿರಾಮವಾಗಿ ನಿಂತಿರುತ್ತಾರೆ. ಕಂಡಕ್ಟರನ ಹತ್ತಿರ ಜಾನೇದೋಸ್ತರ ಹಾಗೆ ಮಾತಾಡುತ್ತಾರೆ. ಕ್ಯೂ ವ್ಯವಸ್ಥಾಪಕ, "ಹೋಗಿ ಕ್ಯೂನಲ್ಲಿ ನಿಲ್ಲಿ!" ಅಂತ ಅವರಿಗೆ ಕೇಳಿಕೊಳ್ಳುತ್ತಾನೆ. ಆದರೆ ಅವರು ಕದಲುವುದಿಲ್ಲ. ಕದಲಿದರೂ ನಾಲ್ಕು ಹೆಜ್ಜೆ ಚಲಿಸಿದ ಹಾಗೆ ಮಾಡಿ ಮತ್ತೆ ಅಲ್ಲಿಯೇ ಸಂದರ್ಶಕರ ಹಾಗೆ ನಿಲ್ಲುತ್ತಾರೆ. ಬಸ್ ಬಂದ ಕೂಡಲೆ ಅವರು ಕ್ಯೂವಿನಲ್ಲಿ ನಿಂತವರೊಡನೆ ಬಸ್ಸಿನಲ್ಲಿ ನುಸುಳಿಕೊಳ್ಳುತ್ತಾರೆ. ಇವರನ್ನು ಗಮನಿಸಿರಿ. ಇವರು ಪ್ರಯಾಣಿಕರಲ್ಲಿನ ರಾಜಕಾರಣಿಗಳು.

ಹಾಂ! ಬಸ್ ಬಂತು. ಕ್ಯೂ ಈಗ ಮುಂದೆ ಚಲಿಸಲಾರಂಭಿಸಿದೆ. ಒಂದೂವರೆ ಫರ್ಲಾಂಗಿನ ಕ್ಯೂ ಬಾಹುಗಳ ನಡವೆ ಅಡ್ಡಕ್ಕೆ ನುಸುಳುತ್ತ ತೆಳ್ಳನ್ನ ವ್ಯಕ್ತಿಯೊಬ್ಬ ಕ್ಯೂವಿನ ಬುಡದತ್ತ ರಭಸದ ಪ್ರಗತಿ ಮಾಡುತ್ತಿದ್ದಾನೆ. ಯಾರೋ ಪ್ರತಿಭಟಿಸುತ್ತಾರೆ. ಅವನು ಅಮಾಯಕ ನಗುವಿನೊಡನೆ, "ಇಲ್ಲಾರೀ, ನನಗೇನೂ ಬಸ್ಸಿನಲ್ಲಿ ಹೋಗಬೇಕಾಗಿಲ್ಲ. ಅಲ್ಲಿ ಕ್ಯೂ ಬುಡದಲ್ಲಿ ಒಬ್ಬರು ನಿಂತಿದ್ದಾರಲ್ಲ, ಕೆಂಪು ರುಮಾಲಿನವರು, ಅವರ ಹತ್ತಿರ ಅರ್ಜಂಟಾಗಿ ಮಾತಾಡೋದಿತ್ತು, ಅದಕ್ಕೇ ಹೋಗುತ್ತಿದ್ದೇನೆ" ಎನ್ನುತ್ತ ಗುರಿಯಿಟ್ಟ ಬಾಣದ ಹಾಗೆ ಸಾಗುತ್ತಿದ್ದಾನೆ. ನೋಡನೋಡುತ್ತ ಅವನು ಬಸ್ ಹತ್ತಿಯೇ ಬಿಟ್ಟ. ಅವನಿಗೇನೂ ಸ್ವಂತಕ್ಕಾಗಿ ಬಸ್ ಹತ್ತಬೇಕಾಗಿರಲಿಕ್ಕಿಲ್ಲ. ಪರೋಪಕಾರಕ್ಕಾಗಿ, ಬಸ್ ಹತ್ತಿದವರ ಕ್ಷೇಮಚಿಂತನೆಗಾಗಿ ಹತ್ತುತ್ತಿರಬಹುದು. ಕ್ಯೂನಲ್ಲಿರುವವರಲ್ಲಿ ಒಬ್ಬಿಬ್ಬರ ಹೊರತು ಉಳಿದವರು ಪ್ರತಿಭಟಿಸದೆ ಅವನನ್ನು ಮುಂದುವರಿಯಲು ಬಿಟ್ಟಿದ್ದರಿಂದ ಇವರೆಲ್ಲರೂ ತನ್ನನ್ನು ಪ್ರಚಂಡ ಬಹುಮತದಿಂದ ಬಸ್ಸೇರಲಿಕ್ಕೆ ಆರಿಸಿದ್ದಾರೆಂದೂ ಅವನು ವಾದಿಸಬಹುದು.

ನಾನು ನನ್ನ ಗುರಿಯ ಕಡೆ ಕೆಲ ಗಜ ಮುಂದುವರಿದಿದ್ದೇನೆ. ಮುಂದಿನ

ಅಥವಾ ಅದರ ಮುಂದಿನ ಬಸ್ಸಿನಲ್ಲಿ ನನಗೆ ಜಾಗ ಸಿಗಬಹುದು, ಬಸ್ಸು ಬಂದರೆ.

ಆದರೆ ನನಗೆ ರೋಷ ಬರುವುದಿಲ್ಲ. ನಾನು ಆ ವ್ಯಕ್ತಿಯನ್ನೇ ಕುರಿತು ಚಿಂತಿಸುತ್ತಿದ್ದೇನೆ. ಅವನನ್ನು ಗಮನಿಸಬೇಕು, ಅವನಿಗಾಗಿ ಭವ್ಯ ಭವಿಷ್ಯತ್ತು ಕಾದಿದೆಯೆಂದು ನನಗೆ ಅನಿಸುತ್ತದೆ. ಅವನಲ್ಲಿ ಶ್ರೇಷ್ಠ ಮುಂದಾಳಾಗುವ ಎಲ್ಲ ಲಕ್ಷಣಗಳು ಇವೆ. ಗುರಿಯ ಕಡೆಗೆ ಅವನ ಏಕಾಗ್ರನಿಷ್ಠೆ, ಪ್ರತಿಭಟನೆಯನ್ನು ನಿರಾಯುಧವಾಗಿ ಮಾಡುವ ಆ ಸು-ಅಭ್ಯಸ್ತ ಆಮಾಯಕತೆ, ಆ ಮೋಹಕ ನಸುನಗೆ....

ನಾನು ಗಲ್ಲದ ಮೇಲೆ ಕೈಯಾಡಿಸಿ ಮುಂದಿನ ಅಥವಾ ಅದರ ಮುಂದಿನ ಬಸ್ಸು ಬರುವಾಗ ನನ್ನ ಗಡ್ಡ ಇನ್ನೆಷ್ಟು ಬೆಳೆದಿರಬಹುದೆಂದು ಊಹಾಪೋಹ ಮಾಡುತ್ತೇನೆ. (೧೯೭೬)

# ದೇವಚರ್ಚೆ

"ದೇವರು ಇದ್ದಾನೆಯೆ?"

"ಇಲ್ಲ."

"ದೇವರು ಇದ್ದಾಳೆಯೆ?"

"ಇಲ್ಲ."

"ದೇವರು ಇದೆಯೆ?"

"ಇಲ್ಲ."

"ದೇವರು ಇಲ್ಲ ಅಂತ ನೀವು ಖಂಡಿತ ನಂಬುತ್ತೀರಾ?"

"ಖಂಡಿತ."

"ಹೇಗೆ ನಂಬಲಿ?"

"ನಂಬುವುದಿಲ್ಲ? ದೇವರಾಣೆ ಹಾಕಿ ಹೇಳುತ್ತೇನೆ, ದೇವರು ಇಲ್ಲ ಅಂತ. ಆಯಿತೆ?"

ನನಗೆ ಸಮಾಧಾನವಾಯಿತು. ಈಗ ಅವರು ಮರುಸವಾಲು ಆರಂಭಿಸಿದರು.

"ದೇವರು ಇದ್ದಾನೆಯೆ?"

"ಇದ್ದಾನೆ."

"ದೇವರು ಇದ್ದಾಳೆಯೆ?"

"ಇದ್ದಾಳೆ."

"ದೇವರು ಇದೆಯೆ?"

"ಇದೆ."

"ಹಾಂ! ಈಗ ಸಿಕ್ಕಿಬಿದ್ದಿರಿ. ದೇವರು ಇದ್ದಾನೆ, ಇದ್ದಾಳೆ, ಇದೆ ಅಂತ ಏಕಕಾಲದಲ್ಲಿ ಹೇಳುತ್ತೀರಿ. ಅಂದಮೇಲೆ ದೇವರಿಲ್ಲ ಅಂತಲೇ ಆಗಲಿಲ್ಲವೆ?"

"ಹೇಗೆ?"

"ದೇವರು ಮೂರೂ ಲಿಂಗಗಳಲ್ಲಿ ಇರುವುದು ಹೇಗೆ ಸಾಧ್ಯ?"

"ನೀವು ಪೇಪರು ಓದುತ್ತೀರಾ?"

"ಓಹೋ! ದಿನಾ."

"ಮೊನ್ನೆ ಪೇಪರಿನಲ್ಲಿ ಬಂದಿತ್ತಲ್ಲ."

"ಏನಂತ? ದೇವರಿದ್ದಾನೆ ಅಂತಲೇ?"

"ಹಾಗಲ್ಲ. ಗಂಡು ಹೆಣ್ಣು ಎರಡೂ ಲಕ್ಷಣಗಳು ಇರುವ ಒಂದು ಆಡು ಇದೆ. ಅದನ್ನು ನಮ್ಮ ವಿಜ್ಞಾನಿಗಳು ಸಾಕುತ್ತಾ ಇದ್ದಾರೆ ಅಂತ. ದ್ವಿಲಿಂಗ ಆಡು ಇರಬಹುದಾದರೆ ತ್ರಿಲಿಂಗ ದೇವರು ಯಾಕೆ ಇರಬಾರದು?"

ಯಾಕೆ ಇರಬಾರದು ಅಂತ ಅವರಿಗೆ ಗೊತ್ತಿರಲಿಲ್ಲ. ಆದರೆ ಅವರು ಮರು ಸವಾಲಿನ ಮರುಸವಾಲು ಆರಂಭಿಸಿದರು:

"ನೀವು ದೇವರಾ?"

"ಅಲ್ಲ. ನಾನು ದೇವರಲ್ಲ—" ನಾನು ಒಪ್ಪಿಕೊಂಡೆ.

"ಹೌದು, ನೀವು ದೇವರಲ್ಲ ಅಂತ ನಾನೂ ಒಪ್ಪುತ್ತೇನೆ."

"ಅದರಿಂದ ಏನೀಗ?"

"ನಾನು ದೇವರು ಅಂತ ನಾನು ಹೇಳುತ್ತೇನೆ."

"ಛೇ ಛೇ! ಸಾಧ್ಯವೇ ಇಲ್ಲ."

"ಹಾಗಾದರೆ ಹೇಳಿ. ನಿಮಗೆ ಪ್ರಜಾಸತ್ತೆಯಲ್ಲಿ ವಿಶ್ವಾಸ ಇದೆಯೇ?"

"ಹೌದು, ಪ್ರಜಾಸತ್ತೆಯಲ್ಲಿ ನನಗೆ ಪೂರ್ಣ ವಿಶ್ವಾಸ ಇದೆ ಅಂತ ಹೇಳುತ್ತೇನೆ."

"ಈಗ ಹೇಳಿ, ಪ್ರಜಾಸತ್ತೆ ಅಂದರೆ ಬಹುಮತದ ಆಳಿಕೆ ಅಲ್ಲವೆ ?"

"ಖಂಡಿತವಾಗಿ."

"ಅಲ್ಲವೆ ? ಹಾಗಾದರೆ ನೀವು ದೇವರಲ್ಲ ಅಂತ ನೀವೂ ಒಪ್ಪುತ್ತೀರಿ, ನಾನೂ ಒಪ್ಪುತ್ತೇನೆ. ಆದ್ದರಿಂದ ನಿಮಗೆ ದೊರೆತ ಮತಗಳು—ಸೊನ್ನೆ. ಆದರೆ ನಾನು ದೇವರು ಅಂತ ನಾನು ಹೇಳುತ್ತೇನೆ, ನೀವು ಒಪ್ಪುವುದಿಲ್ಲ. ಆದ್ದರಿಂದ ನನಗೆ ದೊರೆತ ಮತ—ಒಂದು. ಶೂನ್ಯಕ್ಕಿಂತ ಒಂದು ಜಾಸ್ತಿ. ಅಂದರೆ ನಿಮಗಿಂತ ನನಗೆ ಮತ ಹೆಚ್ಚು ಬಿತ್ತು. ಆದ್ದರಿಂದ ನಾನು ದೇವರು ಅಂತ ಸಿದ್ಧವಾಗಲಿಲ್ಲವೇ ?"

ನಾನು ಒಪ್ಪಲೇಬೇಕಾಯಿತು. ಅವರಿಗೆ ಬಹುಮತ ಇತ್ತು. ನಾನು ಮತ್ತೆ ಪ್ರಾರಂಭಿಸಿದೆ :

"ದೇವರು ಉಂಟೆ ?"

"ಭೇಷ್, ಸುಧಾರಿಸಿದಿರಿ. ಮೂರೂ ಲಿಂಗ ಸೇರಿಸಿ ಒಂದೇ ಕ್ರಿಯಾಪದ ಉಪಯೋಗಿಸಿರಿ."

"ಮುಖಸ್ತುತಿ ಬೇಡ. ದೇವರು ಉಂಟೇ, ಹೇಳಿ ?"

"ಇಲ್ಲ–ಇಲ್ಲ–ಇಲ್ಲ."

"ನಿಮಗೆ ಹೇಗೆ ಗೊತ್ತು ?"

"ದೇವರು ಇದ್ದರೆ ನಮಗೆ ಕಾಣಿಸಬೇಕಿತ್ತು ಅಥವಾ ಕೇಳಿಸಬೇಕಿತ್ತು ಅಥವಾ ಮುಟ್ಟಲಿಕ್ಕೆ ಸಿಕ್ಕಬೇಕಿತ್ತು."

"ಅಥವಾ ನೆಕ್ಕಿದರೆ ರುಚಿ ಸಿಕ್ಕಬೇಕಿತ್ತು."

"ಹೌದು."

"ಆಗಲಿ, ನಾನು ಹೇಳುತ್ತೇನೆ, ಸರಕಾರ ಇಲ್ಲ."

"ಯಾಕೆ ?"

"ನನಗೆ ಕಾಣಿಸುವುದಿಲ್ಲ, ಕೇಳಿಸುವುದಿಲ್ಲ, ಮುಟ್ಟಿಸಿಕೊಳ್ಳುವುದಿಲ್ಲ, ನಾಲಿಗೆಗೆ ರುಚಿ ಹತ್ತುವುದಿಲ್ಲ...."

"ಸುಳ್ಳು. ರಾಷ್ಟ್ರಾಧ್ಯಕ್ಷರನ್ನ ನಿನ್ನೆ ತಾನೇ ನಾನು ನೋಡಿದ್ದೇನೆ."

"ಅವರು ಫಕ್ರುದ್ದೀನ್ ಅಲಿ ಅಹಮದ ಹೊರತು ಭಾರತ ಸರಕಾರ ಅಲ್ಲ."

"ಪ್ರಧಾನಮಂತ್ರಿಗಳ ಭಾಷಣ ನಿನ್ನೆತಾನೆ ರೇಡಿಯೋನಲ್ಲಿ ಕೇಳಿದ್ದೇನೆ."

"ಅವರು ಮನುಷ್ಯರು. ಅವರನ್ನ ಪುಲ್ಲಿಂಗ ಅಥವಾ ಸ್ತ್ರೀಲಿಂಗದಲ್ಲಿ ಹೆಸರಿಸುತ್ತೇವೆ. ಭಾರತ ಸರಕಾರವನ್ನ ನಪುಂಸಕದಲ್ಲಿ ಹೆಸರಿಸಲಾಗುತ್ತೆ. ಆದ್ದರಿಂದ ಅವರು ಭಾರತ ಸರಕಾರವಲ್ಲ."

"ಆದರೆ ಅವರೇ ಭಾರತ ಸರಕಾರದ ಎಲ್ಲ ನಿರ್ಣಯ ಮಾಡುತ್ತಾರೆ."

"ನಮ್ಮ ಬನಶಂಕರಿ ದೇವಸ್ಥಾನದ ಶಂಕರದಾಸಭಟ್ಟರು ದೇವರ ಪರವಾಗಿ ಆಜ್ಞೆಗಳನ್ನು ಹೊರಡಿಸುತ್ತಾರೆ ಮತ್ತು ಕಾಣಿಕೆ ತೆಗೆದುಕೊಳ್ಳುತ್ತಾರೆ. ಅವರು ಬನಶಂಕರಿ ದೇವರಾಗುತ್ತಾರೆಯೇ ?"

"ಇಲ್ಲ. ಆದರೆ ನಮ್ಮ ಪೋಲೀಸ್ ರಾಘಪ್ಪ ಇದ್ದಾನೆ. ಮೊನ್ನೆ ಅವನು ನಮ್ಮ ಸಾಹುಕಾರ ಕುಬೇರಮಲ್ಲರನ್ನ ಅರೆಸ್ಟ್‌ಮಾಡಿ ಒದ್ದು ಕರೆದುಕೊಂಡು ಹೋದದ್ದು ಕಂಡೆ."

ನನಗೆ ಸ್ವಲ್ಪ ಸಂಶಯವಾಯಿತು. ನಮ್ಮ ಕುಬೇರಮಲ್ ಕಾಂಚನ ಮಲ್ ರೂಪಾಯಿಯಾ ಅವರನ್ನ ಆರೆಸ್ಟ್ ಮಾಡಬೇಕಾದರೆ ಪೋಲೀಸ್ ರಾಘಪ್ಪನೇ ಭಾರತ ಸರಕಾರ ಆಗಿರಲಿಕ್ಕಿಲ್ಲವೆ ? ಆದರೆ ನನಗೆ ಆಗ ಥಕ್ಕನೆ ನೆನಪಾಯಿತು.

"ವಾಃ! ಆದರೆ ನಿನ್ನೆ ಪೋಲೀಸ್ ರಾಘಪ್ಪನನ್ನ ಸಬ್ ಇನ್‌ಸ್ಪೆಕ್ಟರ್ ದುಂಡಪ್ಪನವರು ಸುವರ್, ಭಾಂಚೋದ್, ಭಡವಾ ಇತ್ಯಾದಿಯಾಗಿ ಪೋಲೀಸ್ ಇಲಾಖೆಯ ಅಧಿಕೃತ ತಾಂತ್ರಿಕ ಶಬ್ದಗಳಿಂದ ಉಪಚಾರ ಮಾಡಿದ್ದು ಕೇಳಿದೆ. ರಾಘಪ್ಪ ಬಾಲ ಮುಡಚಿಕೊಂಡು ನಿಂತಿದ್ದ. ಅವನು ಹೇಗೆ ಭಾರತ ಸರಕಾರ ಆದಾನು ?"

ನಾನು ಹೇಳಿದ್ದರಲ್ಲಿ ಪಾಯಿಂಟ್ ಇದೆ ಅಂತ ಅವರಿಗೆ ಅನಿಸಿರಬೇಕು. ನಾನು ನನ್ನ ವಾದವನ್ನ ಮುಂದೊತ್ತಿ "ದೇವರೂ ಇಲ್ಲ. ಭಾರತ ಸರಕಾರವೂ ಇಲ್ಲ" ಅಂದೆ.

ಅವರು ದಿಕ್ಕು ಬದಲಾಯಿಸಿದರು.

"ದೇವರು ಇದ್ದರೆ ಅವನು ಸೃಷ್ಟಿಸಿ ನಡೆಸುವ ಈ ಲೋಕದಲ್ಲಿ ಇಷ್ಟು ಅವ್ಯವಸ್ಥೆ ಯಾಕೆ ? ಉದಾಹರಣೆಗೆ ಈ ವರ್ಷ ಬರಗಾಲ ಬಂತು, ಇಂಥಲ್ಲಿ ಮಳೆ ಬೀಳಲಿಲ್ಲ ಅಂತ ಅವನಿಗೆ ತಿಳಿಯಲಿಲ್ಲವೆ ?"

"ತಿಳಿದಿದೆ. ಆದರೆ ಅವನು ಮಳೆ ಕೊಡಲಿಲ್ಲ."

"ಯಾಕೆ ?"

"ಶುಂಡಾಲಂ ಕಂಪನಿಗೆ ನಿಮ್ಮ ಮಗ ಅರ್ಜಿ ಹಾಕಿ ಟೆಸ್ಟ್‌ನಲ್ಲಿ ಪಾಸಾದರೂ ಅವನಿಗೆ ಕೆಲಸದ ಆರ್ಡರ್ ಬರಲಿಲ್ಲ ಅಂತ ಹೇಳಿದಿರಲ್ಲ ಆ ದಿವಸ ?"

"ಹೌದು. ಆದರೆ ನಾನು ಹೋಗಿ ಮೆನೇಜಿಂಗ್ ಡೈರೆಕ್ಟರಿಗೆ ಹೇಳಿಕೊಂಡಮೇಲೆ ಆರ್ಡರ್ ಬಂತು."

"ಯಾಕೆ ಹಾಗಾಯಿತು ?"

"ಅವರು ಸ್ವಲ್ಪ ಹಾಗೇನೇ. ಜನ ಬಂದು ತಮ್ಮನ್ನ ಓಲೈಸಬೇಕು ಅಂತ. ಆದರೆ ಮನುಷ್ಯ ಒಳ್ಳೆಯವರು."

"ದೇವರೂ ಹಾಗೆಯೇ. ಸ್ವಲ್ಪ ಬಿಸಿ ಹಚ್ಚಿದರೆ ದೇವರ ನೆನಪಾಗುತ್ತೆ. ಹೋದ ವರ್ಷ ನೋಡಿ, ಮಳೆ ಚೆನ್ನಾಗಿ ಆಯಿತು. ಯಾರೂ ದೇವರ ಸುದ್ದಿ ಎತ್ತಲಿಲ್ಲ. ಈ ವರ್ಷ ಸರಕಾರದವರೇ ಎಲ್ಲಾ ದೇವರಿಗೆ ಪೂಜೆ ಪ್ರಾರ್ಥನೆ ಮಾಡಿಸಿದರು."

"ಆದರೆ ಎಷ್ಟು ಪ್ರಾರ್ಥನೆ ಮಾಡಿಸಿದರೂ ಕೆಲವು ಕಡೆ ಮಳೆಯೇ ಆಗಲಿಲ್ಲವಲ್ಲ."

"ಎಷ್ಟು ಓಲೈಸಿದರೂ ಶುಂಡಾಲಂ ಕಂಪನಿಯಲ್ಲಿ ಶುಂಠೀರಾಯರ ಮಗನಿಗೆ ನೌಕರಿ ಕೊಡಲೇ ಇಲ್ಲ."

"ಆದರೆ ದೇವರಿದ್ದರೆ ಈ ಪ್ರಪಂಚದಲ್ಲಿ ಇಷ್ಟೆಲ್ಲ ಯುದ್ಧ ಮತಭೇದ ಹೇಗೆ ಉಂಟಾಯಿತು ?"

"ಈಗ ನಿಮ್ಮಾಫೀಸಿನಲ್ಲಿ ನಿಮ್ಮ ಇಬ್ಬರು ಕ್ಲಾರ್ಕುಗಳಲ್ಲಿ ಜಗಳ ಆಗಿ ಕೆಲಸಕ್ಕೆ ಹರ್ಕತ್ತು ಆಗುತ್ತಂತಲ್ಲ ! ನೀವು ಯಾಕೆ ಈ ಜಗಳವನ್ನು ಟಾಲರೇಟ್ ಮಾಡುತ್ತೀರಿ ?"

"ಅವರವರೊಳಗೆ ಜಗಳ ಇದ್ದರೆ ನನ್ನ ಕಡೆ ತೀರ್ಮಾನಕ್ಕೆ ಬರುತ್ತಾರೆ. ಅವರ ಮೇಲೆ ಕಂಟ್ರೋಲ್ ಇಡಲಿಕ್ಕೆ ಸುಲಭವಾಗುತ್ತೆ. ಇಬ್ಬರೂ ಸೇರಿದರೆ ಕದೀಮರು ನನ್ನನ್ನೇ ಎತ್ತಿಹಾಕಿಬಿಟ್ಟಾರು" ಅಂದರು ಅವರು.

"ನೋ ಕಮೆಂಟ್ !" ಅಂದೆ ನಾನು.

"ಹಾಗಾದರೆ ದೇವರೂ ಮನುಷ್ಯರ ಹಾಗೆಯೇ ಅಂದಂತಾಯಿತಲ್ಲ."

"ಹೌದು. ಮನುಷ್ಯರ ದೇವರು ಮನುಷ್ಯರ ಹಾಗೆ. ದೇವತೆಗಳ ದೇವರು

ದೇವತೆಗಳ ಹಾಗೆ."

"ಅಲ್ಲರೀ, ದೇವರು ಸರ್ವಶಕ್ತ ಅಂತೀರಿ. ಹಾಗಾದರೆ ಈ ಲೋಕವನ್ನ ಪರ್ಫೆಕ್ಟಾಗಿ, ಏನೂ ಕಲಹಕೋಲಾಹಲ ಕಷ್ಟಕಿತಾಪತಿ ಇಲ್ಲದ ಹಾಗೆ ವ್ಯವಸ್ಥೆ ಮಾಡಲಿಕ್ಕೆ ಯಾಕೆ ಅವನಿಂದಾಗಲಿಲ್ಲ ?"

"ನೀವು ಹೇಳೋ ಪರ್ಫೆಕ್ಟ್ ಪ್ರಪಂಚದಲ್ಲಿ ಹಸಿವೆ ಇರಬೇಕೇ ಬಾರದೆ ?"

"ಇರಬಾರದು. ಹಸಿವೆಯಿಂದ ಅನೇಕ ಅನ್ಯಾಯಗಳಾಗುತ್ತವೆ."

"ರೈಟ್. ನೀರಡಿಕೆ ಇರಬೇಕೇ ಬಾರದೆ ?"

ಅವರು ಸ್ವಲ್ಪ ಸಂಶಯಕ್ಕೆ ಬಿದ್ದರು. ಯಾಕಂದರೆ ಸಾಯಂಕಾಲದ ನೀರಡಿಕೆಗೆ ಎರಡು ಪೆಗ್ ಹಾಕುವ ಅಭ್ಯಾಸ ಅವರಿಗೆ ಬಹಳ ಪ್ರಿಯವಾಗಿತ್ತು.

"ಹೋಗಲಿ ಬಿಡಿ, ಕಾಮ ಇರಬೇಕೇ ಬೇಡವೆ ?"

ಅವರು ಇನ್ನೂ ಗೊಂದಲಕ್ಕೆ ಬಿದ್ದರು. ಯಾಕಂದರೆ ಅವರ ವಿವಾಹ ಬಾಹ್ಯ ವ್ಯಾಪಾರವೇ ಅವರನ್ನ ಮುಖ್ಯವಾಗಿ ಹುರಿಕಟ್ಟಿನಲ್ಲಿಡುವ ಸಂಗತಿ ಯಾಗಿತ್ತೆಂದು ನನಗೆ ಗೊತ್ತಿತ್ತು.

"ಈಗ ಹೇಳಿ, ಹಸಿವು, ನೀರಡಿಕೆ, ಕಾಮ ಇವು ಇಲ್ಲದೇ ಇದ್ದ ಪ್ರಪಂಚ ದಲ್ಲಿ ನೀವು ಇರಬಯಸುತ್ತೀರಾ ?"

"ಇಲ್ಲ. ಬಹಳ ಬೋರು ಹೊಡೆಯುತ್ತಿತ್ತು."

"ಹಾಗಾದರೆ ದೇವರ ಜಗತ್ತಿನ ಹತ್ತಿರ ನಿಮ್ಮ ಜಗಳ ಯಾಕೆ ?"

"ಆದರೂ ದೇವರು ಇದ್ದರೆ ಅವನು ಸರ್ವಶಕ್ತ ಅಂತ ನಾನು ಒಪ್ಪಲಾರೆ" ಅಂದರವರು.

"ಯಾಕೆ ?"

"ಅವನಿಗೆ ಸಾಯುವ ಶಕ್ತಿ ಇದೆಯೆ ಹೇಳಿ ?"

ಈಗ ಮಾತ್ರ ನನ್ನ ಬಾಯಿ ಮುಚ್ಚಿತು.

"ಇಲ್ಲ" ಎಂದೆ.

"ಪಾಪ ! ಅಲ್ಲವೆ ?" ಅಂದರು. (೧೯೭೭)

# ರಾಜಕೀಯ ಜಾಡ್ಯಗಳು

## ಇನ್‌ಫ್ಲುಯೆಂಸಾ

ಭಾರತೀಯ ಹೆಸರು : ವಶೀಲಿಕಾ. ಜಗತ್ತಿನಲ್ಲೆಲ್ಲಾ ವ್ಯಾಪಿಸಿದ ಒಂದು ಸಾಮಾಜಿಕ ರಾಜಕೀಯ ರೋಗ. ವಿಶೇಷವಾಗಿ ಈಚೆಗೆ ಸ್ವತಂತ್ರವಾದ ಏಶಿಯ-ಆಫ್ರಿಕ ದೇಶಗಳಲ್ಲಿ ದಟ್ಟವಾಗಿ ವ್ಯಾಪಿಸಿದೆ. ವೈರಸ್ ರೋಗವೆಂದು ಊಹಿಸಲ್ಪಟ್ಟಿದೆ. ಮಂತ್ರಿಗಳೇ ಮೊದಲಾದ ಅಧಿಕಾರಸ್ಥಾನದಲ್ಲಿರುವವರಿಗೆ ಬಹಳ ಬೇಗ ಅಂಟಿಕೊಳ್ಳುತ್ತದೆ. ರೋಗಕ್ಕೆ ಬಾಹ್ಯಲಕ್ಷಣಗಳೇನೂ ಇಲ್ಲವಾದ್ದರಿಂದ ತೀರ ಉಲ್ಬಣಿಸುವವರೆಗೂ ಪತ್ತೆಯೇ ಆಗುವುದಿಲ್ಲ. ರೋಗಸ್ಪರ್ಶವು ಬೆಂಬಲಿಗರು, ಬಾಲಬಡಕರು ಮೊದಲಾದವರ ಮೂಲಕ ಆಗುತ್ತದೆ. ಒಮ್ಮೆ ವೈರಸ್ಸು ಶರೀರದಲ್ಲಿ ಪ್ರವೇಶಿಸಿದಮೇಲೆ ಯಾರ ಮೂಲಕವಾದರೂ "ಒಂದು ಮಾತು ಹೇಳಿಸದೆ" ರೋಗಿಯಿಂದ ಅತ್ಯಂತ ಸಾಮಾನ್ಯ ಕೆಲಸವನ್ನು ಕೂಡ ಮಾಡಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ.

ಇನ್‌ಫ್ಲುಯೆಂಸಾ ವೈರಸ್ಸು ಕರಪ್ಶನ್ ಅಥವಾ ಪ್ರಲಂಚಿಕಾ ರೋಗ ವೈರಸ್ಸಿನದೇ ಒಂದು ರೂಪವೆಂದು ಕೆಲ ತಜ್ಞರು ಅಭಿಪ್ರಾಯಪಡುತ್ತಾರೆ. ಇತರರು ಇದು ಬೇರೆಯೇ ಗಣಕ್ಕೆ ಸೇರಿದ ವೈರಸ್ಸೆಂದು ಭಾವಿಸುತ್ತಾರೆ. ಈ ಭಿನ್ನಾಭಿಪ್ರಾಯಕ್ಕೆ ಮುಖ್ಯ ಕಾರಣವೆಂದರೆ ಪ್ರಕಾಶನ ಸ್ಥಾನದ ಭೇದವೇ. ಪ್ರಲಂಚಿಕಾ ರೋಗ ಹಸ್ತದ ಮೂಲಕ ವ್ಯಕ್ತವಾಗುತ್ತದೆ. ಅಂಗೈಯಲ್ಲಿ ತೀವ್ರವಾದ ನವೆ ಉತ್ಪನ್ನವಾಗಿ ನೋಟುಗಳ ಮೂಲಕ ಹೊರತು ಆ ನವೆ ಸರ್ವಥಾ ಕಡಿಮೆಯಾಗುವುದಿಲ್ಲ. ವಶೀಲಿಕಾ ರೋಗದ ಸ್ಥಾನ ಮುಖ್ಯವಾಗಿ ಕಿವಿ. ಆದರೆ ಎರಡರ ಪರಿಣಾಮವೂ ಸಾಮಾನ್ಯವಾಗಿ ಒಂದೇ. ರೋಗಗ್ರಸ್ತನ ಮೂಲಕ ನೇರ ದಾರಿಯಿಂದ ನ್ಯಾಯ ದೊರಕಿಸುವುದು ಅಸಾಧ್ಯವಾಗುತ್ತದೆ.

ವಶೀಲಿಕಾ ರೋಗಕ್ಕೆ ಯಾವ ಗೊತ್ತಿದ್ದ ಚಿಕಿತ್ಸೆಯೂ ಪೂರ್ಣ ಫಲಕಾರಿಯಾಗಿಲ್ಲ. ರೋಗಿಗೆ ರೋಗ ಗುಣವಾಗಬೇಕೆಂಬ ಅಪೇಕ್ಷೆ ಇಲ್ಲದಿರುವುದೇ ವೈದ್ಯನಿಗೆ ಎಲ್ಲಕ್ಕೂ ದೊಡ್ಡ ಸಮಸ್ಯೆಯಾಗಿದೆ. ರಾಜಕಾರಣವೆಂಬುದೇ

ವಶೀಲಿಕಾ ರೋಗದ ವಿಸ್ತರಣದ ಕಾರಣವೆಂದೂ ರಾಜಕಾರಣವಿದ್ದಷ್ಟು ದಿನ ಅದರಿಂದ ನಿವೃತ್ತಿ ಇಲ್ಲವೆಂದೂ ಕೆಲ ಸಂಶೋಧಕರು ಹೇಳುತ್ತಾರೆ. ರೋಗವನ್ನು ಖಚಿತವಾಗಿ ಗುಣಪಡಿಸುವ ಏಕಮಾತ್ರ ಉಪಾಯವೆಂದರೆ ರೋಗಿಯನ್ನು ಕೊಲ್ಲುವುದು. ಆದರೆ ಇದು ತೀರ ತೀವ್ರ ಉಪಾಯವಾಯಿತೆಂದು ಹೆಚ್ಚಿನವರ ಮತ. ಮನುಷ್ಯರಲ್ಲಿ ಹೆಚ್ಚಿನವರು ಯಾವಾಗಲೂ ಈ ರೋಗಕ್ಕೆ ಸ್ವೇಚ್ಛೆಯಿಂದಲೇ ಬಲಿಯಾಗುವವರಾದ್ದರಿಂದ ರೋಗವನ್ನು ಪೂರ್ತಿ ನಿರ್ನಾಮ ಮಾಡುವುದಕ್ಕೆ ಮನುಷ್ಯಜಾತಿಯನ್ನೇ ನಾಶಮಾಡಬೇಕಾದೀತು. ಹೀಗಾಗುವುದು ಜಗತ್ತಿಗೆ ಅಂಥ ದೊಡ್ಡ ಅನಿಷ್ಟವಲ್ಲದಿದ್ದರೂ ಮನುಷ್ಯರೇ ಇದನ್ನು ಸಾಧಿಸಬೇಕಾಗಿರುವುದರಿಂದ ಅವರನ್ನು ಈ ಪರಿಹಾರಕ್ಕೆ ಒಪ್ಪಿಸುವುದು ಕಷ್ಟ.

## ಮಯೋಪಿಯ

ಭಾರತೀಯ ಹೆಸರು: ಮಂದನೇತ್ರಿಕಾ. ಇದು ಜಗದ್ವ್ಯಾಪಿಯಾದ ರೋಗ. ಆದರೆ ಭಾರತದಲ್ಲಿ ಮೊದಲಿಂದಲೂ ಇದರ ಹಾವಳಿ ಹೆಚ್ಚು. ರಾಜಕೀಯ ಅಧಿಕಾರಸ್ಥಾನದಲ್ಲಿರುವವರನ್ನು ಅಧಿಕವಾಗಿ ಪೀಡಿಸುತ್ತದೆ. ಕೆಲಕಾಲ ಅಧಿಕಾರದಲ್ಲಿದ್ದನಂತರ ವಸ್ತುಸ್ಥಿತಿ ಮೂಗಿಗೆ ತಾಗುವಷ್ಟು ಹತ್ತಿರವಾಗಿದ್ದರೂ ಅದರ ಗಂಧವನ್ನಾಗಲಿ ರೂಪವನ್ನಾಗಲಿ ಗ್ರಹಿಸುವುದಕ್ಕೆ ರೋಗಿ ಅಶಕ್ತನಾಗುತ್ತಾನೆ. ಕಣ್ಣುಮೂಗುಗಳ ಕ್ರಿಯೆ ದುರ್ಬಲಗೊಳ್ಳುವುದು ಇದರ ಮುಖ್ಯ ಬಾಹ್ಯಲಕ್ಷಣವಾಗಿದ್ದರೂ ಅದರ ನಿಜವಾದ ಸ್ಥಾನ ಮಿದುಳಿನಲ್ಲೇ ಇದೆಯೆಂದು ತಜ್ಞರು ಭಾವಿಸುತ್ತಾರೆ. ರೋಗ ಸಾವಕಾಶವಾಗಿ ಹಬ್ಬುತ್ತದೆ. ಪ್ರಥಮತಃ ರೋಗಿ ತನ್ನ ಸುತ್ತಮುತ್ತಲಿನವರು ತನಗೆ ವಿಧೇಯರಾಗಿರಬೇಕೆಂದು ನಿರೀಕ್ಷಿಸುತ್ತಾನೆ. ಇದರಲ್ಲಿ ತಪ್ಪೇನೂ ಇರದಿದ್ದರೂ ಕೆಲಕಾಲದಲ್ಲೇ ಅವನು ವಿಧೇಯತೆಗೂ ಬಾಲಬಡಿಕತನಕ್ಕೂ ಅಂತರವನ್ನು ಕಾಣಲು ಅಸಮರ್ಥನಾಗುವುದರಿಂದ ಅಪಾಯಕ್ಕೆ ಆಮಂತ್ರಣವಿತ್ತಂತಾಗುತ್ತದೆ. ತನ್ನನ್ನು ಹೊಂದಿದವರು ತನಗೆ ತೀರ ವಿಧೇಯರಾಗುವುದನ್ನು ಕಂಡು ಕಂಡು ಅವನು ಮನುಷ್ಯರಲ್ಲದೆ ಘಟನೆಗಳೂ ತನಗೆ ವಿಧೇಯವಾಗುವವೆಂದು ಭ್ರಮಿಸತೊಡಗುತ್ತಾನೆ. ಇಷ್ಟಾದನಂತರ ಘಟನೆಗಳು ತನ್ನ ಲೆಕ್ಕಾಚಾರ

ವನ್ನು ಅನುಸರಿಸದಿದ್ದರೆ ಕೂಡ ಅವನಿಗೆ ಕಾಣುವುದಿಲ್ಲ. ಎಲ್ಲವೂ ತನ್ನಂತೆ ನಡೆದಿದೆಯೆಂದು ಸಾಧಿಸುತ್ತಾನೆ ಮತ್ತು ಹಾಗೆ ನಂಬುತ್ತಾನೆ. ಇತರರು ಹಾಗಿಲ್ಲವೆಂದರೆ ರೇಗುತ್ತಾನೆ. ಹೆಚ್ಚಾಗಿ ಮಯೋಪಿಯ ಬರುವುದಕ್ಕೆ ಮಿದುಳು ಹೊಸದಾಗಿ ಕೆಲಸ ಮಾಡಲು ಒಪ್ಪದಿರುವುದು ಕಾರಣವಾಗಿರುತ್ತದೆ.

ಈ ರೋಗವನ್ನು ಗುಣಪಡಿಸುವುದಕ್ಕೆ ರೋಗಿಯನ್ನು ಕೊಲ್ಲುವ ಅಗತ್ಯ ವಿಲ್ಲ. ಅಧಿಕಾರದ ಗದ್ದುಗೆಯಿಂದ ಇಳಿಸಿದರೆ ಸಾಕು. ಕೂಡಲೇ ಆತನ ಕಣ್ಣು ಮೂಗು ಎರಡೂ ಪೂರ್ವವತ್ ಶಕ್ತಿಸಂಪನ್ನವಾಗುತ್ತವೆ. ಆದರೆ ದುರ್ದೈವದಿಂದ ಈ ದೇಶದಲ್ಲಿ ಯಾರನ್ನಾದರೂ ಕೊಲ್ಲದೆ ಅವರನ್ನು ಗದ್ದುಗೆ ಯಿಂದಿಳಿಸುವುದು ಬಲು ಕಷ್ಟ.

## ಹೈಡ್ರೊಫೋಬಿಯ

ಭಾರತೀಯ ಹೆಸರು : ಜಲಭೀತಿ. ಇದು ಕೇವಲ ರಾಜಕಾರಣಿಗಳನ್ನಷ್ಟೇ ಪೀಡಿಸುವ ರೋಗವಲ್ಲದಿದ್ದರೂ ಈಚೀಚೆಗೆ ಅವರನ್ನು ಹೆಚ್ಚುಹೆಚ್ಚಾಗಿ ಆಕ್ರಮಿಸುತ್ತಿದೆ. ಈ ರೋಗಕ್ಕೆ ತುತ್ತಾದವನು ನೀರನ್ನು ದ್ವೇಷಿಸತೊಡಗು ತ್ತಾನೆ. ಆದ್ದರಿಂದ ನೀರಡಿಕೆಯಾದಾಗ ನೀರಿಗಿಂತ ಬಲವಾದದ್ದನ್ನು ಸೇವಿಸ ತೊಡಗುತ್ತಾನೆ. ಇದು ಈ ನೀರಡಿಕೆಯನ್ನಲ್ಲದೆ ಇನ್ನೂ ಅನೇಕ ತರಹದ ನೀರಡಿಕೆಗಳನ್ನು ಪ್ರಚೋದಿಸುತ್ತದೆ. ಈಚೆಗೆ ಭಾರತದ ಕೆಲ ರಾಜ್ಯಗಳಲ್ಲಿ ಮದ್ಯಪಾನ ನಿರೋಧವನ್ನು ತೆಗೆದುಹಾಕುವುದಕ್ಕೆ ರಾಜಕಾರಣಿಗಳಲ್ಲಿ ಹೈಡ್ರೋಫೋಬಿಯ ಹೆಚ್ಚಾಗಿದ್ದೇ ಕಾರಣವೆಂದು ನಂಬಲಾಗಿದೆ.

## ಲಿಂಗುನೈಟಿಸ್

ಭಾರತೀಯ ಹೆಸರು : ಜಿಹ್ವಾಕಂಡೂತಿ. ಜಗತ್ತಿನಲ್ಲೆಲ್ಲಾ ಈ ರೋಗದ ವ್ಯಾಪ್ತಿ ಇದ್ದರೂ ಭಾರತದ ಹೊರಗೆ ಹೆಚ್ಚಾಗಿ ಅದು ಹೆಂಗಸರಲ್ಲಿ ಮತ್ತು ಪ್ರೊಫೆಸರರಲ್ಲಿ ಇರುತ್ತದೆ. ಭಾರತದಲ್ಲಿ ಮಾತ್ರ ಅದು ಎಲ್ಲ ತರಹದ ರಾಜ ಕಾರಣಿಗಳ ಮುಖ್ಯ ರೋಗವಾಗಿದೆ. ರಾಜಕಾರಣಿಗಳು ಈ ರೋಗಗ್ರಸ್ತರಾದರೆ ಹೆಂಗಸರ ಹಾಗೆ ಬರೇ ಖಾಸಗೀ ಸಂಭಾಷಣೆಯಲ್ಲಿ ತೊಡಗದೆ ನೂರಾರು ಜನರು ನೆರೆದಲ್ಲಿ, ಎತ್ತರದ ಸ್ಥಾನದಲ್ಲಿ, ನಿಂತು ಕೊರಳಲ್ಲಿ ಮಾಲೆಗಳನ್ನು

ಧರಿಸಿ ಮಾತಾಡಬಯಸುತ್ತಾರೆ. ಈ ದೇಶದಲ್ಲಿ ಹೆಚ್ಚುಕಡಿಮೆ ಎಲ್ಲ ರಾಜಕಾರಣಿಗಳಿಗೂ ಈ ರೋಗ ಇದೆ. ಅವರಿಂದ ಸಾಮಾನ್ಯವಾಗಿ ಮೂಕರೆಂದೆಣಿಸಲ್ಪಟ್ಟಿದ್ದ ಸರಕಾರಿ ನೌಕರರಿಗೂ ಅದು ದಾಟಿದೆ. ಸಾಮಾನ್ಯ ಜನರ ಮಾತಿನಲ್ಲಿ ಇದಕ್ಕೆ ಭಾಷಣರೋಗವೆಂದು ಹೆಸರು.

ಜಿಹ್ವಾಕಂಡೂತಿ ರೋಗ ಖಾಲಿ ಬುರುಡೆ ಮತ್ತು ಅಧಿಕಾರ ಅಥವಾ ಅಧಿಕಾರದಾಹ ಒಂದೆಡೆ ಸೇರಿದಲ್ಲಿ ಹೆಚ್ಚು ಹುಲುಸಾದ ಹೊಲವನ್ನು ಪಡೆಯುವುದಾಗಿ ಕಂಡುಬಂದಿದೆ. ಹೇಳುವುದು ಕಡಿಮೆ ಇದ್ದಷ್ಟೂ ಭಾಷಣಗಳ ಉದ್ದ ಅಧಿಕವಾಗಿರುತ್ತದೆ. ಮಂತ್ರಿಗಳಲ್ಲಂತೂ ಈ ರೋಗ ಎಷ್ಟು ಉಲ್ಬಣಾವಸ್ಥೆಯನ್ನು ತಲುಪಿರುತ್ತದೆಂದರೆ ದಿನಕ್ಕೆ ಒಂದು ಗಂಟೆಯಾದರೂ ಭಾಷಣ ಮಾಡದಿದ್ದರೆ ಅವರ ನಾಲಗೆ ತೀಟೆ ತಾಳಲಾರದವರಾಗಿ ಸ್ಯಾಂಡ್-ಪೇಪರಿನಿಂದ ನಾಲಿಗೆ ಉಜ್ಜಿಸಿಕೊಳ್ಳುವುದು ಅವರಿಗೆ ಅಗತ್ಯವಾಗುತ್ತದಂತೆ.

ಈ ರೋಗಕ್ಕೆ ಉತ್ತಮ ಚಿಕಿತ್ಸೆಯೆಂದರೆ ರೋಗಿಯನ್ನು ಭಾಷಣಕ್ಕೆ ಕರೆಯದಿರುವುದು ಮತ್ತು ಭಾಷಣಕ್ಕೆ ಯಾರೂ ಕೇಳಲು ಬಾರದಿರುವುದು. ಆದರೆ ಅಧಿಕಾರದಲ್ಲಿ ಇರುವವರು ಭಾಷಣಮಾಡುವಾಗ ಜನ ಕೂಡದಂತೆ ಮಾಡುವುದು ಈ ದೇಶದಲ್ಲಿ ಅಸಾಧ್ಯವೆಂದು ಪರಿಗಣಿಸಲ್ಪಡುತ್ತದೆ. ಈ ಭಾಷಣಗಳಿಗೆ ತಪ್ಪದೆ ಹಾಜರಿರುವವರ ಬುರುಡೆಗಳೂ ಖಾಲಿಯೇ ಆಗಿರುವುದು ಸಾಮಾನ್ಯವಾದ್ದರಿಂದ ಈ ರೋಗದಿಂದ ಸಮಯ ಹೊರತು ಮತ್ತೇನೂ ನಷ್ಟವಾಗುವುದಿಲ್ಲ. ಮಾತ್ರವಲ್ಲ ಈ ರೋಗವನ್ನು ಸಂಪೂರ್ಣ ನಿರ್ನಾಮ ಮಾಡಿದರೆ ಇದಕ್ಕಿಂತ ಗಂಭೀರವಾದ ರೋಗಗಳಲ್ಲಿ ಪರ್ಯವಸಾನವಾದೀತೆಂದು ಭಯಪಡಲಾಗುತ್ತಿದೆ. (೧೯೭೦)

# ಬೆಳಗ್ಗೆ ಏಳುವುದು

ಬೊಂಬಾಯಿಗೆ ಹೋಗುವುದು ಅಂದರೆ ನನಗೆ ನಾಯೀನ ಒಯ್ದು ನೀರಿಗೆ ತಳ್ಳಿದ ಹಾಗಾಗುತ್ತದೆ. ಮದ್ರಾಸಿಗೆ ಕೂಡ. ನಾನು ಹುಟ್ಟಿದ್ದು ಕನ್ನಡ ಜಿಲ್ಲೆಯಲ್ಲಿಯೇ ಆದರೂ ನನ್ನ ಪ್ರಿಯವಾದ ಪಡುವ ಕಡಲಿನ ನಾಡಿಗೆ

ಹೋಗುವುದು ಅಂದರೂ ನನಗೆ ಸ್ವಲ್ಪ ಜ್ವರ ಬರುತ್ತದೆ. ದೀಪಾವಳಿ ಹಬ್ಬ ಕೂಡ ನನಗೆ ಅಷ್ಟಕ್ಕಷ್ಟೇ. ತದ್ವಿರುದ್ಧವಾಗಿ ಶಿವಮೊಗ್ಗವೋ ಶಿರಸಿಯೋ ನನಗೆ ಹುಮ್ಮಸ ತರುತ್ತದೆ. ಧಾರವಾಡ ಕೂಡ ಪರವಾಗಿಲ್ಲ.

ನೀವು ಬೊಂಬಾಯಿಗೆ ಹೋಗಿ ಯಾವುದಾದರೂ ಹೋಟೆಲ್ಲಿನಲ್ಲಿ ಬಿಡಾರ ಹೂಡಿ ನೋಡಿ. ಬೆಳಗಿನ ಜಾವದ ನಾಲ್ಕೂವರೆಗೇ ಕುಂಭಕರ್ಣನನ್ನು ಎಚ್ಚರಗೊಳಿಸುವಷ್ಟು ಸಪ್ಪಳ ಪ್ರಾರಂಭವಾಗುತ್ತದೆ. ಬಸ್ಸುಗಳ ಗುರುಗುರು ನಿಮ್ಮ ಕೋಣೆಗೋಡೆಗಳನ್ನು ನೀವು ಮಲಗಿದ ಮಂಚವನ್ನು ಕುಲುಕುತ್ತವೆ. ಹಾರ್ನುಗಳು ಸಪ್ತಸ್ವರದಿಂದ ಅರಚುತ್ತವೆ. ಬೆಳಗ್ಗೆ ಆರು ಅನ್ನುವುದರೊಳಗೆ ಇಡೀ ಪಟ್ಟಣ ನರಕದಷ್ಟು ಚಟುವಟಿಕೆಯಲ್ಲಿ ತೊಡಗಿಬಿಡುತ್ತದೆ. ಆರಕ್ಕೆ ನೀವಿನ್ನೂ ಏಳದೆ ಇದ್ದರೆ ಹೋಟೆಲ್ ಮಾಣಿ ನಿಮ್ಮ ಕೋಣೆಯ ಬಾಗಿಲ ಸಂದಿಯಿಂದ ಹಣಕಿ ನೀವು ಜಂತೆಯಿಂದ ತೂಗಾಡುತ್ತಿದ್ದೀರಾ ಅಥವಾ ನಿದ್ರೆ ಯಲ್ಲಿ ಹೃದಯಸ್ತಂಭನವಾಗಿ ಮರಗಟ್ಟಿದ್ದೀರಾ ಅಥವಾ ಯಾವುದಾದರೂ ರಹಸ್ಯಪೂರ್ಣ ರೀತಿಯಲ್ಲಿ ನಿಮ್ಮ ಕೊಲೆ ಆಗಿದೆಯಾ ಅಂತ ಪರೀಕ್ಷಿಸುತ್ತಾನೆ. ಮದ್ರಾಸು ಬೊಂಬಾಯಿಗಿಂತ ಬೇರೆ ಅಲ್ಲ, ಅಲ್ಲಿ ಬೊಂಬಾಯಿಗಿಂತ ನಾಲ್ಕೋ ಆರೋ ನಿಮಿಷ ಮುಂಚೆಯೇ ಸೂರ್ಯ ಹುಟ್ಟಿರುತ್ತಾನೆ—ಅಂತಷ್ಟೇ ಹೆಚ್ಚು ಕಮ್ಮಿ—ಹೆಚ್ಚು ಕಮ್ಮಿ ಏನು ಹೆಚ್ಚೇ. ಉಡುಪಿಗೋ ಕೋಟಕ್ಕೋ ಹೋದರೆ ಮನುಷ್ಯರು ನಿಮ್ಮನ್ನು ಎಬ್ಬಿಸದಿರಬಹುದು. ಆದರೆ ಕಾಗೆಗಳ ವೃಂದಗಾನಕ್ಕೆ ನೀವು ಸತ್ತಿದ್ದರೂ ಎಚ್ಚರಗೊಳ್ಳುತ್ತೀರಿ.

ಒಂದು ಮಾತಿನಲ್ಲಿ ಹೇಳಬೇಕಾದರೆ ನನಗೆ ಬೆಳಗ್ಗೆ ಬೇಗ ಏಳುವುದೆಂದರೆ ಆಗದು. ಕರಾವಳಿಯಲ್ಲೇ ಹುಟ್ಟಿದ್ದರೂ ನನಗೆ ಬೆಳಗ್ಗೆ ಏಳುವುದು ಯಾಕೆ ವಿರುದ್ಧ ಆಗಿದೆ ಅಂತ ನನಗೇ ಗೊತ್ತಿಲ್ಲ. ಬಹುಶಃ ಚಿಕ್ಕಂದಿನಲ್ಲಿ ನನ್ನ ಹಿರಿಯರು ನಾಲ್ಕೂವರೆ ಗಂಟೆಗೇ ನನ್ನ ಕಿವಿಹಿಡಿದು ಎಬ್ಬಿಸಿ "ಬ್ರಾಹ್ಮೇ ಮುಹೂರ್ತ ಚೋತ್ಥಾಯ" ಅಂತ ಶ್ಲೋಕ ಹೇಳಿಕೊಡಲು ಯತ್ನಿಸಿದ್ದರಿಂದ ನನ್ನ ಮನಸ್ಸು ಬೆಳಗ್ಗೆ ಬೇಗ ಏಳುವುದರ ವಿರುದ್ಧ ಶಾಶ್ವತವಾಗಿ ಬಂಡಾಯ ಪ್ರವೃತ್ತಿ ಯನ್ನು ಬೆಳಸಿಕೊಂಡಿರಬೇಕು. ಬೆಳಗಿನ ಜಾವಕ್ಕೆ ಬ್ರಾಹ್ಮ ಮುಹೂರ್ತ ಯಾವಾತ ಹೆಸರಿಟ್ಟದಾನೊ? ಆದರಂಥ ಅಬ್ರಾಹ್ಮಮುಹೂರ್ತ ನಾನು ಕಾಣೆ.

ನನ್ನ ಬ್ರಹ್ಮಮುಹೂರ್ತ ಬಹಳ ಬೇಗ. ಅಂದರೆ ಏಳು ಗಂಟೆಗೆ ಸುರು

ವಾಗುತ್ತದೆ. ಅಂದರೆ ಅಷ್ಟು ಹೊತ್ತಿಗೆ ನಾನು ಏಳುತ್ತೇನೆ ಅಂತಲ್ಲ. ಅಷ್ಟು ಹೊತ್ತಿಗೆ ನಾನು ಹಾಸಿಗೆಯಲ್ಲಿ ಸ್ವಲ್ಪ ಹೊರಳಾಡಲು ಆರಂಭಿಸುತ್ತೇನೆ. ಆಮೇಲೆ ಹೊದಿಕೆಯನ್ನು ಸ್ವಲ್ಪ ಗಟ್ಟಿಯಾಗಿ ಸೆಳೆದುಕೊಂಡು ಮಗ್ಗಲು ಬದಲಿಸಿ ಮಲಗುತ್ತೇನೆ. ಇದು ನನ್ನ ದೇಹ ಸಾವಕಾಶವಾಗಿ ಏಳುವ ಎತ್ತುಗಡೆ ನಡೆಸುತ್ತಿರುವ ಲಕ್ಷಣ. ನನ್ನ ದೇಹ ಅಂದೆ, ಆತ್ಮವಲ್ಲ. ನನ್ನ ಆತ್ಮ ಯಾವಾಗಲೂ ದೇಹಧರ್ಮದ ವಿರುದ್ಧ ಬಂಡಾಯವೇಳುತ್ತಲೇ ಇರುತ್ತದೆ. ಅದು ಇನ್ನೂ ಎಚ್ಚರಗೊಳ್ಳುವುದಕ್ಕೆ ಸಿದ್ಧವಿಲ್ಲ. ಹೆಚ್ಚು ವೇಳೆ ನನ್ನ ಆತ್ಮ ನನ್ನ ದೇಹದ ವಿರುದ್ಧ ಜಯ ಸಂಪಾದಿಸಿ ತನ್ನ ಮೂಲ ಸ್ಥಿತಿ—ಅಂದರೆ ಯೋಗನಿದ್ರಾವಸ್ಥೆಗೆ ಮರಳುತ್ತದೆ. ನನ್ನ ಮಿದುಳು ಹಗುರು ನಿದ್ರಾವಸ್ಥೆ ಯಿಂದ ಪುನಃ ಆಳಕ್ಕೆ—ಅಂದರೆ REM—Rapid Eye Movement ತೀವ್ರದೃಷ್ಟಿ ಚಲನಾನಿದ್ರೆಗೆ-ಇಳಿಯುತ್ತದೆ. ಈ ಅವಸ್ಥೆಯಲ್ಲಿ ನಾವು ಕನಸು ಕಾಣುತ್ತಿರುತ್ತೇವೆ ಅಂತ ನಿದ್ರಾವಿಜ್ಞಾನಿಗಳು ಹೇಳುತ್ತಾರೆ. ಈ ಹೊತ್ತಿನ ಕನಸುಗಳು ಸಾಮಾನ್ಯವಾಗಿ ಸವಿಯಾಗಿಯೇ ಇರುತ್ತವೆ. (ನನಗೆ ದುಃಸ್ವಪ್ನ ಗಳು ಬೀಳುವುದು ಹೆಚ್ಚಾಗಿ ಮಧ್ಯರಾತ್ರಿ ಕಳೆದ ಬಹಳ ನಂತರ) ಆಗ ನಲ್ಲಿ ಯಲ್ಲಿ ನೀರು ಬರುವ ಸಪ್ಪಳ ಅಡಿಗೆಮನೆಯಿಂದ ನನ್ನ ರೂಮಿನ ತನಕ ತಲುಪಿದರೆ, ನನ್ನ ಕನಸು ಅದನ್ನು ಚೌಡಯ್ಯನವರ ಪಿಟೀಲು ಕಚೇರಿಯ ನ್ನಾಗಿ ತನ್ನಲ್ಲಿ ಅಳವಡಿಸಿಕೊಂಡುಬಿಡುತ್ತದೆ. ಒಳಗೆ ನನ್ನ ಹೆಂಡತಿಯ ಕೈಯಿಂದ ಜಾರಿ ಯಾವುದಾದರೂ ಪಾತ್ರೆ ಕೆಳಗೆ ಬಿದ್ದು ಠಂ ಠಂ ಸಪ್ಪಳ ವಾದರೆ ಅದು ಸಾಯೀಭಜನೆಯ ತಾಳವಾಗಿ ಮಾರ್ಪಡುತ್ತದೆ.

ಈ REM ನಿದ್ರಾವಸ್ಥೆ ಸುಮಾರಾಗಿ ಇಪ್ಪತ್ತು ನಿಮಿಷ ಸಾಗುತ್ತದೆಂದು ನಿದ್ರಾವಿಜ್ಞಾನದ ಅಭಿಪ್ರಾಯ. ಅದರ ನಂತರ ನಾನು ಗಾಢ, ಸ್ವಪ್ನರಹಿತ ನಿದ್ರೆಯ ಸ್ಥಿತಿಗೆ ಇಳಿಯುತ್ತೇನೆ—ಅಥವಾ ಇಳಿಯುತ್ತಿರಬೇಕು. ಯಾಕೆಂದರೆ ಆಗ ಬಾಹ್ಯಪ್ರಪಂಚದ ಚಿಲ್ಲರೆ ಸಪ್ಪಳಗಳು ಯಾವ ರೀತಿಯಲ್ಲೂ ನನ್ನ ಮೇಲೆ ಪ್ರಭಾವ ಬೀರುವುದಿಲ್ಲ. ಈ ಸ್ಥಿತಿಗೆ ಅರ್ಧಗಂಟೆಯ ಗಡುವನ್ನು ವಿಜ್ಞಾನ ಗೊತ್ತುಮಾಡಿದೆ. ಆಮೇಲೆ ನನ್ನ ಮಿದುಳು, ಕಾಲುಗಳನ್ನು ಅರಳಿಸಿ ಹಗುರಾಗಿ ನಿದ್ರಾತಳದಿಂದ ಮೇಲೇರಿ ಹಗುರುನಿದ್ರಾಸ್ಥಿತಿಗೆ ಬರುತ್ತದೆ. ನನ್ನ ಶರೀರದಲ್ಲಿ ಪುನಃ ಜೀವಂತತನ ಲಕ್ಷಣಗಳು ತೋರಿಬರುತ್ತವೆಂದು ನನ್ನ ಹೆಂಡತಿ ಹೇಳು

ತ್ತಾಳೆ. ಸುಮಾರು ಎಂಟು ಗಂಟೆ ಹೊಡೆಯುವಾಗ ನನ್ನ ಆತ್ಮ ನನ್ನ ದೇಹಕ್ಕೆ ರಿಯಾಯಿತಿ ಕೊಡಲು ಸಿದ್ಧತೆಯನ್ನು ಪ್ರದರ್ಶಿಸುತ್ತದೆ. ಇಷ್ಟು ಹೊತ್ತಿಗೆ ಒಳಗಿಂದ "ಏನು, ಏಳೋದಿಲ್ವೇ ಈವೊತ್ತು? ಕಾಫಿ ಆರುತ್ತಾ ಇದೆ!" ಅನ್ನುವ ದನಿ ಕೇಳಿಸಿದರೆ ನನ್ನ ಆತ್ಮ ಸ್ವಲ್ಪ ಚಂಚಲವಾಗುತ್ತದೆ. ನಾನು ಕಣ್ಣು ತೆರೆದು ಆಕಳಿಸಿ ಬಾಯಿಯ ಸುತ್ತ ಚಿಟಿಕೆ ಹಾಕುತ್ತೇನೆ. 'ಆಹ್!' ಎನ್ನುತ್ತೇನೆ. ಆದರೆ ಇನ್ನೂ ಎದ್ದು ಕೂರುವುದಿಲ್ಲ. ಸೊಳ್ಳೆಪರದೆಯೊಳಗಿಂದ ತೋರುವ ಕಿಂಡಿಕಿಂಡಿಯಾದ ರೂಮಿನ ಬಾಹ್ಯ ಪ್ರಪಂಚವನ್ನು ಮಂಜುಗಣ್ಣುಗಳಿಂದ ನನ್ನೊಳಗೆ ಸ್ವೀಕರಿಸಲು ಪ್ರಾರಂಭಿಸುತ್ತೇನಷ್ಟೇ. ಏಳಲೋ ಬೇಡವೋ ಎಂದು ನನ್ನ ಚಿತ್ತ ಡೋಲಾಯಮಾನವಾಗುತ್ತಿದೆ. ನನ್ನ ಹೆಂಡತಿ ಸುಳ್ಳು ಹೇಳುತ್ತಿರುವ ಸಂಭವ ಇದ್ದೇ ಇದೆ. ಅಥವಾ ಅತಿಶಯೋಕ್ತಿ ಮಾಡುತ್ತಿರಬಹುದು. ಅವಳು ಸ್ಟೌ ಹಚ್ಚಿ ಇನ್ನೂ ಕಾಫಿಗೆ ಎಸರು ಇಟ್ಟಿರಬಹುದಷ್ಟೇ. ಪುಡಿಯ ಮೇಲೆ ನೀರು ಹೊಯ್ದಿದ್ದರೆ ಕಾಫಿಯ ಸುವಾಸನೆ ನನ್ನ ಮೂಗಿನವರೆಗೆ ಬಂದಿರುತ್ತಿತ್ತು. ಅವಳು ಕಾಫಿ ಆರುತ್ತಾ ಇದೆ ಅಂದಳೋ ಆಗುತ್ತಾ ಇದೆ ಅಂದಳೋ? ಸಂಶಯದ ಲಾಭ ತೆಗೆದುಕೊಂಡು ನಾನು ಮತ್ತೆ ಕಣ್ಣು ಮುಚ್ಚಿಕೊಂಡು ಧ್ಯಾನಾಸಕ್ತನಾಗುತ್ತೇನೆ. ಈವೊತ್ತು ಇಷ್ಟು ಬೇಗ ಏಳುವ ಅಗತ್ಯ ನಿಜವಾಗಿ ಉಂಟೇ? ಯಾರಿಗಾದರೂ ಅಪಾಯಿಂಟ್‌ಮೆಂಟ್ ಕೊಟ್ಟಿದ್ದೇನೆಯೆ? ಅಥವಾ ತೆಗೆದುಕೊಂಡಿದ್ದೇನೆಯೆ? ಈವೊತ್ತು ಆದಿತ್ಯವಾರವಾಗಿರುವ ಸಂಭವ ಇದೆಯೆ? ಮಾರ್ಕೆಟ್ ರಜಾ ದಿನವಾಗಿರಬಹುದೆ? ನನಗೆ ಜ್ವರ ಬಂದಿಲ್ಲವೇ? ಎಂದು ಮೈ ಮುಟ್ಟಿಕೊಳ್ಳುತ್ತೇನೆ. ಜ್ವರ ಬಂದಿದ್ದರೆ ರಜಾ ಅರ್ಜಿ ಕಳಿಸಿಬಿಡಬಹುದು. ಆದರೆ ಇಲ್ಲ. ಸುಳ್ಳು ರಜಾ ಅರ್ಜಿ ಕಳಿಸುವುದು ಸರಿಯಲ್ಲ. ಸುಳ್ಳು ದಕ್ಕಿಸಿಕೊಳ್ಳುವ ಚಾಕಚಕ್ಯತೆ ನನಗೆ ಇಲ್ಲ. ಅಡಿಗೆಮನೆಯಿಂದ ಜಬರ್ದಸ್ತಾದ ಇನ್ನೊಂದು ಎಚ್ಚರಿಕೆ ಬಂದಮೇಲೆ ಇನ್ನು ಮಲಗಿರುವುದಕ್ಕೆ ಯಾವುದೇ ನೆಪ ಇಲ್ಲ ಎಂದು ಖಚಿತಪಟ್ಟನಂತರ ನಾನು ಹೆದವಾಗಿ ಮೈಮುರಿದು ಎದ್ದು ಕೂರುತ್ತೇನೆ.

ದೀಪಾವಳಿ ಹಬ್ಬ ನನಗೆ ಇಷ್ಟವಾಗದಿರುವುದಕ್ಕೆ ಕಾರಣ ನನ್ನ ಮೇಲ್ಕಾಣಿಸಿದ ಶೆಡ್ಯೂಲಿಗೆ ಅದು ವ್ಯತಿರಿಕ್ತವಾಗಿರುವುದು. ದೀಪಾವಳಿ ಶರತ್ಕಾಲದ ಉತ್ಸವವಂತೆ. ಶರತ್ಕಾಲದ್ದು ಅಂದರೆ ರಾತ್ರಿಯ ಉತ್ಸವ. ಅದಕ್ಕೇ ದೀಪಾವಳಿ

ಯಲ್ಲಿ ದೀಪಗಳ ಗಲಾಟೆ. ಆದರೆ ಅದರ ಪ್ರಾರಂಭವನ್ನು ಚತುರ್ದಶೀ ದಿನ ಬೆಳಗಿನ ಜಾವಕ್ಕೆ ಮಾಡಬೇಕು ಅಂತ ಯಾವ ಮೂರ್ಖ ಕಟ್ಟಳೆ ಮಾಡಿದನೋ, ನಾಲ್ಕು ಗಂಟೆಗೆ ಎದ್ದು ಎಣ್ಣೆ ತೀಡಿಸಿಕೊಂಡು ಬಿಸಿನೀರು ಹಾಕಿಸಿಕೊಳ್ಳುವ ಪ್ರಥಮ ಚಿಕಿತ್ಸೆ ಹಬ್ಬದ ಆನಂದವನ್ನೆಲ್ಲ ಕೆಡಿಸಿಬಿಡುತ್ತದೆ, ನನ್ನ ಪಾಲಿಗೆ. ದ್ವಾಪರಯುಗದ ಈ ಹಬ್ಬದಲ್ಲಿ ಈ ಯುಗಕ್ಕೆ ತಕ್ಕ ಅಮೆಂಡ್‌ಮೆಂಟುಗಳು ಆಗದಿದ್ದರೆ ನನ್ನಂಥವರಿಗೆ ಅಸಾಧ್ಯ ಹಿಂಸೆಯಾಗುತ್ತದೆ.

ದೇವರು ಹಗಲಿನಲ್ಲಿ ಸೂರ್ಯನನ್ನು ಮೂಡಿಸಿ ರಾತ್ರಿಯಲ್ಲಿ ಕತ್ತಲನ್ನು ಕೊಟ್ಟಿದ್ದರಿಂದ ಮನುಷ್ಯ ರಾತ್ರಿಯಲ್ಲಿ ಮಲಗಿ ಹಗಲಲ್ಲಿ ಎದ್ದು ಓಡಾಡುವ ಕಾರ್ಯಕ್ರಮ ಹಾಕಿಕೊಂಡ. ಆದರೆ ಕಾಲ ಇಂದು ಪೂರ್ಣ ಬದಲಾದರೂ ರಾತ್ರಿ ನಿದ್ದೆಮಾಡುವುದು ಒಂದು ಧಾರ್ಮಿಕ ಆಚಾರ ಅಂತ ಮನುಷ್ಯ ತಿಳಿದುಕೊಂಡಿದ್ದಾನೆ. ರಾತ್ರಿಯನ್ನು ಹಗಲು ಮಾಡುವಷ್ಟು ಬೆಳಕನ್ನು ಮನುಷ್ಯ ಸೃಷ್ಟಿಸಿರುವಾಗ ಮತ್ತು ಹಗಲನ್ನು ರಾತ್ರಿ ಮಾಡುವಷ್ಟು ಕತ್ತಲು ಕೋಣೆಗಳನ್ನು ಮಾಡಿಕೊಳ್ಳುವುದು ಸಾಧ್ಯವಿರುವಾಗ ಇನ್ನೂ ಓಬೀರಾಯನ ಕಾಲದ ವಿಧಾನಕ್ಕೆ ಅಂಟಿಕೊಂಡಿರುವುದು ಕಂದಾಚಾರ; ಪ್ರತಿಗಾಮಿತನ ಅಂದರೂ ತಪ್ಪಾಗದು. ಮನುಷ್ಯನಿಗೆ ನಿದ್ರಾಸ್ವಾತಂತ್ರ್ಯ ಇರಲೇಬೇಕು. ಅದು ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ ಸೇರುವ ವರೆಗೆ ಮನುಷ್ಯ ನಿಜವಾಗಿ ಸ್ವತಂತ್ರ ಅನಿಸಲಾರ.

ನನ್ನ ಮಿತ್ರನೊಬ್ಬ ಉಷಃಕಾಲದಲ್ಲಿ ಏಳುವುದನ್ನು ತನ್ನ ನಿತ್ಯವಿಧಿಯಾಗಿ ಮಾಡಿಕೊಂಡಿದ್ದಾನೆ. ಅವನು ರಾತ್ರಿ ಒಂಬತ್ತೂವರೆಗಾಗಲೆ ಹಾಸಿಗೆಯ ಆಳವನ್ನು ಸೇರಿರುತ್ತಾನೆ. ಮತ್ತು ನಾಲ್ಕು ಹೊಡೆಯುತ್ತಲೇ ಎದ್ದು ಕುಳಿತು ಓದಲಾರಂಭಿಸುತ್ತಾನೆ. ಐದೂವರೆ ಗಂಟೆಗೆ ಎದ್ದು ನಿರ್ಜನ ರಸ್ತೆಗಳಲ್ಲಿ ಭೂತದ ಹಾಗೆ ಸಂಚಾರ ಪ್ರಾರಂಭಿಸುತ್ತಾನೆ. ತನ್ನ ಈ ದುರಭ್ಯಾಸದ ಗುಣಗಾನ ಮಾಡಿದಷ್ಟೂ ಅವನಿಗೆ ತೃಪ್ತಿ ಇಲ್ಲ. ಉಷಃಕಾಲದ ಆಕಾಶದ ಸೌಂದರ್ಯವನ್ನು ನೀನೆಂದಾದರೂ ನೋಡಿದ್ದೀಯಾ? "ಮೂಡಲ ಮನೆಯಾ ಮುತ್ತಿನ ನೀರಿನೆರಕಾವ ಹೊಯ್ದು" ಅನ್ನುವ ಬೇಂದ್ರೆ-ಮಾತಿನ ಪ್ರತ್ಯಕ್ಷಾನುಭವ ಆಗಬೇಕಾದರೆ ಅದನ್ನು ನೋಡಬೇಕು ಅಂತ ಒಮ್ಮೆ ನನ್ನನ್ನು ಅಪಾರ ಪ್ರಯತ್ನದಿಂದ ಎಬ್ಬಿಸಿ ಎಳೆದುಕೊಂಡು ಹೋದ. ನಾಲ್ಕೂವರೆಯಿಂದ ಆರರವರೆಗೆ

ನಾನು ಕೆಲ ಡಜನ್ ಆಕಳಿಕೆಗಳ ಸಂಗಡ ಬೇಂದ್ರೆ-ಪ್ರಣೀತ ಮೂಡಲ ಮನೆ ಯನ್ನು ಅವಲೋಕಿಸಿದೆ. ಅವನು ಕಿವಿಯಲ್ಲಿ ಗಾಳಿ ಹೊಕ್ಕ ಎಳೆಗರುವಿನ ಹಾಗೆ ಕುಣಿದಾಡಿದ. ಕಡೆಗೆ ಹೇಗಿದೆಯೋ ಈ ಪ್ರಭಾತಸೌಂದರ್ಯ? ಎಂದು ಆಶಾಭರಿತನಾಗಿ ಕೇಳಿದ. ನಾನು "ಅಲ್ಲವೋ ಪದ್ಮಾಪಾ! ಇಷ್ಟ ಕ್ಕೋಸ್ಕರ ನನ್ನನ್ನ ಹಾಸಿಗೆಯಿಂದ ಎಳತಂದೆಯಾ? ಈ ಉಷಃಕಾಲ ಅನ್ನೋದು ಸಂಧ್ಯಾಕಾಲದ ರಿವರ್ಸ್ ಅಲ್ಲದೆ ಅದರಲ್ಲಿ ಮತ್ತೇನು ಮಹಾ ಇದೆ ಅಂತ ಇಷ್ಟು ಕುಣಿದಾಡುತ್ತಿ?" ಎಂದು ಪ್ರಶ್ನಿಸಿದೆ. ಅವನು ಕೋಗಿಲೆಯ ಹಾಡಿನ ವರ್ಣನೆ ಮಾಡಿ ನನ್ನಲ್ಲಿ ಪ್ರಲೋಭನ ಹುಟ್ಟಿಸುವುದಕ್ಕೆ ಯತ್ನಿಸಿದ. ನಾನು ಜಪ್ಪೆನ್ನಲಿಲ್ಲ. ಇಂದಿನ ಬೀಟಲ್ ಸಂಗೀತ, ಜಸ್ ಸಂಗೀತ, ಸ್ಯಾಕ್ಸಾ ಫೋನ್, ಇಲೆಕ್ಟ್ರಿಕ್ ಗಿಟಾರ್‌ಗಳ ಯುಗದಲ್ಲಿ ಕೋಗಿಲೆಯ ಮೂರೋ ನಾಲ್ಕೋ ಬಹಳವಾದರೆ ಐದೋ ಶ್ರುತಿಯ ಪ್ರಿಮಿಟಿವ್ ಗಾನಕ್ಕೋಸ್ಕರ ಅಮಾನುಷ ಗಳಿಗೆಯಲ್ಲಿ ಏಳಲು ನಾನೇನು ಅನಾಗರಿಕ ಅಲ್ಲ ಅಂತ ಕಡ್ಡಿ ಮುರಿದ ಹಾಗೆ ಅವನಿಗೆ ಹೇಳಿಬಿಟ್ಟೆ. ಬೆಳಗಿನ ಹೊತ್ತು ಅಮೃತಪ್ರಾಯವಾದ ಓಜೋನ್ ಗಾಳಿಯಲ್ಲಿರುತ್ತೆ—ಅಂತ ಅವನು ನನಗೆ ಆಸೆ ತೋರಿಸಿದ. "ಎಲ್ಲಾ ಓಜೋನ್ ನೀನೇ ಸೇದಿಕೋ, ಮಹಾರಾಯಾ" ಎಂದೆ. ಈಗ ವಾತಾವರಣ ಮಾಲಿನ್ಯದಿಂದ ಓಜೋನ್ ನಾಶವಾಗುತ್ತಿದೆ ಅಂತ ಆವರಣಶಾಸ್ತ್ರಿಗಳು ಎಚ್ಚರಿಕೆ ಕೊಡುತ್ತಿದ್ದಾರೆ. ಪೀಡೆ ಹೋಯಿತು! ಎಲ್ಲ ಓಜೋನ್ ನಿರ್ನಾಮ ವಾದರೆ ಬೆಳಗ್ಗೆ ಬೇಗ ಏಳುವುದಕ್ಕಿರುವ ಒಂದು ಪ್ರಲೋಭನ ಕಮ್ಮಿ ಆದೀತು —ಅಂತ ಮೊನ್ನೆ ನನ್ನ ಮಿತ್ರನಿಗೆ ಪತ್ರ ಬರೆದೆ.

ನಾನು ಬೆಳಗ್ಗೆ ಬೇಗ ಏಳುವುದಿಲ್ಲ ಅಂದಾಕ್ಷಣ ನನಗೆ ನಿದ್ರೆ ಹೆಚ್ಚು ಅಂತ ಮಾತ್ರ ತಿಳಿದುಕೊಳ್ಳಬೇಡಿ. ನನಗೆ ಬೆಳಗ್ಗೆ ಏಳುವುದಕ್ಕೆ ಎಷ್ಟು ಅನಿಚ್ಛೆಯೋ ಅಷ್ಟೇ ಅನಿಚ್ಛೆ ರಾತ್ರಿ ಮಲಗುವುದಕ್ಕೂ ಇದೆ. ನಿಮ್ಮೆಲ್ಲರ ಘನವಾದ ಗೊರಕೆ ಗರಗಸ ಪ್ರಾರಂಭವಾದನಂತರ ನನ್ನ ಮಿದುಳು ಚುರುಕಾಗುತ್ತದೆ. ನಾನು ಪುಸ್ತಕ ತೆಗೆದುಕೊಂಡು ಅದರಲ್ಲಿ ಮುಳುಗುತ್ತೇನೆ. ಅಥವಾ ಎದ್ದು ಶರ್ಟು ಸಿಕ್ಕಿಸಿಕೊಂಡು ಪಟ್ಟಣದ ಗಸ್ತಿ ಪ್ರಾರಂಭಿಸುತ್ತೇನೆ. ಬೆಳಗಿನ ಜಾವದ ಪ್ರಶಾಂತ ವಾತಾವರಣದ ಉತ್ಸಾಹಕರ ಗುಣವನ್ನು ನೀವು ಭಕ್ಷಿಸುತ್ತೀರಲ್ಲ; ನಾನು ಸಿನೆಮಗಳೆಲ್ಲ ಬಿಟ್ಟು ಬೀದಿಗಳೆಲ್ಲ ನಿರ್ಜನವಾದಾಗಿನ ಶಾಂತತೆಯಿಂದ

ಉತ್ತೇಜಿತನಾಗುತ್ತೇನೆ. ಮನೆಗೆ ನಾನು ಮರಳುವಾಗ ಗಸ್ತಿ ಪೋಲೀಸನ ಪೀಪಿ, ಕಾವಲು ಗೂರ್ಖನ ಬಡಿಗೆ ಸಪ್ಪಳ ಮತ್ತು 'ಜಾಗ್‌ತೇ ರಹೋ!' ಕರೆಯ ಮೊದಲ ಸುತ್ತು ಪ್ರಾರಂಭವಾಗಿರುತ್ತದೆ. ಹೌದು, ಜಾಗ್ತೇ ರಹೋ! ಎಚ್ಚರವಾಗಿರಿ. ನನಗೆ ಭಗವದ್ಗೀತೆ ನೆನಪಾಗುತ್ತದೆ. 'ಯಾ ನಿಶಾ ಸರ್ವ ಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ.' ಜಗತ್ತೆಲ್ಲ ನಿದ್ರಿಸಿದಾಗ ಯೋಗಿ ಎಚ್ಚರಗೊಳ್ಳುತ್ತಾನೆ. ನಾನು ಜಗತ್ತಿನ ಮೇಲೆ ಕಾವಲು ನಿಂತ ರಕ್ಷಕ ಅನಿಸುತ್ತದೆ.

ನಾನು ಹಾಸಿಗೆಯ ಮೇಲೆ ನನ್ನನ್ನು ಇಟ್ಟುಕೊಳ್ಳುತ್ತೇನೆ. ಸುತ್ತಲೂ ನಿಶ್ಚಿಂತೆಯಿಂದ ನಿದ್ರಿಸುವವರ ಲಯಬದ್ಧವಾದ ಗೊರಕೆಗಳನ್ನು ಆಲಿಸುತ್ತೇನೆ. ನನ್ನ ಹೆಂಡತಿ, ನನ್ನ ಮಕ್ಕಳು ಹೊಡೆಯುವ ಗೊರಕೆಗಳಲ್ಲಿ ಒಂದು ಸಮ ಶ್ರುತಿಯನ್ನು ಅರಸುತ್ತೇನೆ. ನನ್ನ ಹೆಂಡತಿ ಮಂದ್ರ'ಪ'ದಲ್ಲಿ ಗೊರೆಯುತ್ತಿದ್ದರೆ ನನ್ನ ಕೊನೆಯ ಮಗ ಮಧ್ಯ 'ಪ'ದಲ್ಲಿ ಗೊರೆಯುತ್ತಿದ್ದಾನೆ. ನನ್ನ ಎರಡನೇ ಮಗನದ್ದು ಮಧ್ಯ ಸಪ್ತಕದ ಷಡ್ಜಕ್ಕೆ ತುಸು ತಪ್ಪಿ ಷಡ್ಜರಿ ಪಭಗಳ ನಡುವೆ ಎಲ್ಲಿಯೊ ಅಲೆಯುತ್ತಿಲ್ಲವೆ? ಒಂದು ಕುಟುಂಬದ ಸದಸ್ಯರೆಲ್ಲರೂ ಒಂದೇ ಶ್ರುತಿಗೆ ಸಂವಾದಿಯಾಗಿ ಗೊರೆಯುತ್ತಿದ್ದರೆ ಆ ಕುಟುಂಬದಲ್ಲಿ ಐಕಮತ್ಯ ಇದೆಯೆಂದು ಅರ್ಥವಾಗುವುದಿಲ್ಲವೆ? ಎಂದು ಊಹಾಪೋಹ ಮಾಡುತ್ತೇನೆ. ಜಾತಕ ನೋಡಿ ಮದುವೆಯಾಗುವ ಬದಲು ಗೊರಕೆಗಳನ್ನು ಟೇಪ್‌ರಿಕಾರ್ಡ್ ಮಾಡಿ ಸಂವಾದಿ ಸ್ವರಗಳಲ್ಲಿ ಗೊರೆಯುತ್ತಾರೆಂದು ಖಚಿತಪಟ್ಟವರ ಮದುವೆ ಕೂಡಿಸಿದರೆ ಅವರದು ಹಿತ ದಾಂಪತ್ಯವಾದೀತು, ಅಲ್ಲವೆ? ಈ ದಾರಿಯಲ್ಲಿ ಸಂಶೋಧನ ಅಗತ್ಯ ಎಂದುಕೊಳ್ಳುತ್ತೇನೆ. ಅಷ್ಟರಲ್ಲಿ ಆಕಳಿಕೆ ಬರುತ್ತದೆ. ನಾನು ಯಾವ ಕ್ಷಣ ನಿದ್ರಾಲೋಕಕ್ಕೆ ಟ್ರಾನ್ಸ್‌ಪೋರ್ಟ್ ಆಗುತ್ತೇನೋ ತಿಳಿಯುವುದಿಲ್ಲ.

ಚಳಿಗಾಲ ಅಂದರೆ ನಿಮಗೆಲ್ಲ ನಡುಕವಾದರೆ ಅದು ನನಗೆ ಪರಮಪ್ರಿಯ ವಾದ ಋತು. ಸೂರ್ಯ ತಡವಾಗಿ ಮೂಡಿ ನನಗೂ ತಡವಾಗಿ ಏಳುವುದಕ್ಕೆ ನೆವ ಒದಗಿಸುತ್ತಾನೆ. ಚಳಿಯ ಉಬ್ಬರ ಸೂರ್ಯನನ್ನು ಒಳಗೆ ಬಿಡದಂತೆ ಕಿಡಕಿಯನ್ನು ಬಿಗಿಯಾಗಿ ಮುಚ್ಚುವುದಕ್ಕೆ ಅವಕಾಶ ಕೊಡುತ್ತದೆ. ನಿಮ್ಮ ಹತ್ತಿರ ಒಳ್ಳೇ ರಗ್ಗು ಮಫ್ಲರು ಇದ್ದರೆ ಚಳಿಗಾಲದ ಬೆಳಗಿನ ನಿದ್ರೆಯಷ್ಟು

ಮಧುರವಾದದ್ದು ಇನ್ನೊಂದಿಲ್ಲ. ಆಗ ನಾನು ಒಂದು ಕಪ್ ಕಾಫಿ ಗುಟುಕರಿಸಿ ಮತ್ತೆ ಕೌದಿಯ ಮೊರೆಹೊಗುತ್ತೇನೆ.

ಶಿರಸಿಗೋ ಶಿವಮೊಗ್ಗೆಗೋ ಹೋದರೆ ನನಗೆ ಬಲು ಆನಂದ. ಅಲ್ಲಿ ಬೇಗ ಎದ್ದು ಏನು ಪ್ರಯೋಜನವೇ ಇಲ್ಲ. ಎದ್ದು ಹೊರಗೆ ಹಣಕಿದರೆ ಮಂಜಿನ ಕೌದಿ ಹೊದ್ದು ಇಡೀ ಜಗತ್ತು ನಿಮ್ಮಿಂದ ಮರೆಯಾಗಿದ್ದಂತೆ ಅನಿಸುತ್ತದೆ. ಪ್ರಪಂಚಕ್ಕೆ ನಿಮಗೆ ಮುಖ ತೋರಿಸುವುದು ಬೇಕಾಗಿರುವಾಗ ನೀವು ಅದಕ್ಕೆ ಮುಖ ತೋರಿಸುವ ಹಟ ಮಾಡಬೇಕಾಗಿಲ್ಲ. ನನಗೆ ಅತ್ಯಂತ ಇಷ್ಟವಾದ ಪ್ರಭಾತದ ನೆನಪು ಶಿರಸಿ ತಾಲೂಕಿನ ಒಂದು ಹಳ್ಳಿಯದು. ಪೂರ್ವದಲ್ಲಿ ಎತ್ತರವಾದ ಗುಡ್ಡ. ಅದರ ಓರೆಯಲ್ಲಿ ಹಳ್ಳಿ. ಅಲ್ಲಿ ಬೆಳಗಾದ್ದು ಗೊತ್ತೇ ಆಗುವುದಿಲ್ಲ. ಎಂಟು ಗಂಟೆಗೆ ಹೇಗಾದರೂ ಮಾಡಿ ಏರುತ್ತ ಗುಡ್ಡ ಹತ್ತಿ ಸೂರ್ಯ ಮುಖ ತೋರಿಸಲು ಯತ್ನಿಸುತ್ತಾನೆ. ಯತ್ನಿಸುತ್ತಾನೆ, ಅಂದೆ. ಅವನು ಮಂಜಿನ ತೆರೆಯನ್ನು ಹರಿಯುವುದಕ್ಕೆ ಇನ್ನು ಒಂದು ಗಂಟೆ ಶ್ರಮ ಪಡಬೇಕಾಗುತ್ತದೆ. ಪ್ರಾತಃಕಾಲ ಇದಕ್ಕಿಂತ ಆದರ್ಶವಾಗಿರುವುದು ಬೇರೆಲ್ಲಿ ಸಾಧ್ಯ?

ಹುಬ್ಬಳ್ಳಿ–ಧಾರವಾಡ ಪರವಾಗಿಲ್ಲ ಅಂದೆನಲ್ಲ ಮೊದಲಲ್ಲಿ. ಇಲ್ಲಿ ಕಾಗೆಗಳು ಕಮ್ಮಿ. ಇದ್ದ ಕಾಗೆಗಳೂ ನಿಮ್ಮನ್ನು ಐದು ಗಂಟೆಗೇ ಎಬ್ಬಿಸುವುದಿಲ್ಲ. ಕರಾವಳಿ ಕಾಗೆಗಳಿಗಿಂತ ಅವು ಹೆಚ್ಚು ಮಾನವೀಯವಾಗಿವೆ. ಮರಗಿಡಗಳು ಕಮ್ಮಿಯಾದ್ದರಿಂದ ಕೋಗಿಲೆಗಳ ಹಾವಳಿಯೂ ಇಲ್ಲ. ಧಾರವಾಡದಲ್ಲಂತೂ ಊರು ಒಂಬತ್ತು ಗಂಟೆಗೆ ಅಲುಗಾಡಲು ಪ್ರಾರಂಭಿಸುತ್ತದೆ. ಪೇಟೆ ಹತ್ತು ಗಂಟೆಗೆ ಆಕಳಿಸಿ ಮೈಮುರಿಯತೊಡಗುತ್ತದೆ. ಆದರೆ ಹುಬ್ಬಳ್ಳಿ ಭಾಗದ ಒಂದು ಚಾಳಿ ಮಾತ್ರ ನನಗೆ ಅಸ್ವಾಭಾವಿಕವಾಗಿದೆ. ಅಲ್ಲಿ ಶಾಲೆ, ಕಾಲೇಜುಗಳನ್ನು ಏಳೂವರೆ ಗಂಟೆಗೇ ಪ್ರಾರಂಭಿಸುತ್ತಾರೆ. ತೂಕಡಿಸುತ್ತ ಶಾಲೆಗೆ ಹೋಗುವ ಮಕ್ಕಳ ತಲೆಯಲ್ಲಿ ಎಷ್ಟು ಜ್ಞಾನ ಹೊಕ್ಕೀತು. ಆಕಳಿಸುತ್ತ ಪಾಠ ಮಾಡುವ ಮಾಸ್ತರ್ ಮಂದಿ ಏನು ಕಲಿಸಿಯಾರು—ನನಗೆ ಅರ್ಥವಾಗುವುದಿಲ್ಲ. ಶಾಲೆ ಪ್ರಾರಂಭಿಸುವುದಕ್ಕೆ ಅತಿಬೇಗ ಎಂದರೆ ಹತ್ತೂವರೆ ಗಂಟೆ ಸಹ್ಯ; ಮಧ್ಯಾಹ್ನದ ಒಂದು ಗಂಟೆ ಆದರ್ಶ ಎಂದು ನನ್ನ ಮತ.

ನಮ್ಮ ಅನೇಕ ಧಾರ್ಮಿಕ ವಿಧಿಗಳು ನಾವು ಬೆಳಗ್ಗೆ ಬೇಗ ಏಳಬೇಕೆಂದು

ಹೇಳುತ್ತವೆ. ಆದರೆ ಕೋಳಿ ಕೂಗುವಾಗ ಏಳುವುದು ಎಷ್ಟು ಅಪಾಯಕಾರಿ ಎಂಬುದಕ್ಕೆ ರಾಮಾಯಣದಲ್ಲಿ ಪ್ರಮಾಣ ಸಿಗುತ್ತದೆ. ವಿಶೇಷವಾಗಿ ಗಂಡಸರಿಗೆ ಅಹಲ್ಯೆಯ ಕಥೆ ನೀವು ಕೇಳಿಲ್ಲವೆ? ಗೌತಮ ಮಹರ್ಷಿ ಬ್ರಾಹ್ಮ ಮುಹೂರ್ತಕ್ಕೆ ಎದ್ದು ನದಿ ಕಡೆ ಹೋದ. ಆ ಸಮಯದಲ್ಲಿ ಇಂದ್ರ ಬಂದು ಅಹಲ್ಯೆಯ ಮೈ ಬಿಸಿ ಮಾಡಿದ. ಮುಂದೆ ಏನೇನು ಅನಾಹುತ ಆಯಿತು ನಮಗೆ ಗೊತ್ತು. ಗೌತಮ ನನ್ನ ಹಾಗೆ ಏಳುವವನಾಗಿದ್ದಿದ್ದರೆ ಇಂದ್ರನಿಗೆ ಚಾನ್ಸೇ ಸಿಗುತ್ತಿರಲಿಲ್ಲ. ಗಂಡಂದಿರಿಗೆ ಇದು ಒಂದು ಜಾಗ್ರತೆ!

ಈಚೆಗೆ ನಾನು ಒಂದು ಬಾಡಿಗೆ ಮನೆ ಹಿಡಿದೆ. ಅದರಲ್ಲಿ ಬೆಡ್‌ರೂಮು ಪೂರ್ವದಿಕ್ಕಿಗಿದೆ. ಬೆಳಗಾಗುವ ಪುರಸೊತ್ತಿಲ್ಲ. ಸೂರ್ಯ ಕಿಡಕಿಯಲ್ಲಿ ನುಗ್ಗುತ್ತಾನೆ. ಕಿಡಕಿಯ ಮೇಲ್ಭಾಗಕ್ಕೆ ಕನ್ನಡಿ ಹಾಕುವುದರಿಂದ ಅವನ ವಿರುದ್ಧ ನನಗೆ ರಕ್ಷಣೆಯೇ ಇಲ್ಲದಂತಾಗಿದೆ. ಈವೊತ್ತು ಮುಂಜಾನೆ ಬಾಡಿಗೆ ವಸೂಲಿಗೆ ಬಂದಾಗ ಅವನಿಗೆ ಜಳಜಳ ಹೇಳಿಬಿಟ್ಟಿದ್ದೇನೆ. ಕಿಡಕಿಯ ಮೇಲ್ಭಾಗದ ಕನ್ನಡಿಗಳನ್ನು ತೆಗೆದು ಮರದ ಹಲಗೆ ಫಿಕ್ಸ್ ಮಾಡಿಕೊಡುವವರೆಗೆ ಬಾಡಿಗೆ ಕೊಡುವುದಿಲ್ಲ, ಅಂತ.

(೧೯೭೬)

## ಮದುವೆಯಾದರೂ ಸುಖಪಡುವುದು ಹೇಗೆ?

ಇರಬೇಕೋ ಇರಬಾರದೋ? ಅದೀಗ ಪ್ರಶ್ನೆ—ಅಂತ ಹ್ಯಾಂಲೆಟ್ ತಲೆ ಕೆರೆದುಕೊಂಡ. ಈವೊತ್ತು ಹೆಚ್ಚು ಜನ ತರುಣರಿಗೆ ಇಷ್ಟು ಗೂಢಪ್ರಶ್ನೆ ಎದುರಾಗುವುದಿಲ್ಲ. ದೇವರ ತಪ್ಪಿನಿಂದಲೋ ತಂದೆತಾಯಿಗಳ ಬೆಪ್ಪಿನಿಂದಲೋ ನಾವು ಇಲ್ಲಿ ತಂದು ಇರಿಸಲ್ಪಟ್ಟಿದ್ದೇವೆ. ಆದ್ದರಿಂದ ಬಹಳ ತಲೆ ಕೆಡಿಸಿಕೊಳ್ಳದೆ ಇದ್ದು ಬಿಡುತ್ತೇವೆ. ಆದರೆ ಪ್ರತಿ ತರುಣನನ್ನು ಕಾಡುವ ಇನ್ನೊಂದು ಪ್ರಶ್ನೆ ಹ್ಯಾಂಲೆಟ್ಟನ ಪ್ರಶ್ನೆಯಷ್ಟು ಗೂಢವಲ್ಲದಿದ್ದರೂ ಅದಕ್ಕಿಂತ ಕಡಿಮೆ ಗಾಢವಾದದ್ದಲ್ಲ. ಮದುವೆ ಮಾಡಿಕೊಳ್ಳಬೇಕೋ ಮಾಡಿಕೊಳ್ಳಬಾರದೋ ಅನ್ನುವುದೇ ಆ ಪ್ರಶ್ನೆ. ಆದರೆ ಅದು ಆಲೋಚನೆ ಮಾಡಿ ಬಗೆಹರಿಯುವ ಪ್ರಶ್ನೆ ಅಲ್ಲ. ಕ್ರಿಸ್ತಪೂರ್ವ ನಾಲ್ಕನೇ ಶತಮಾನದ ಗ್ರೀಕ್ ನಾಟಕಕಾರ ಮಿನಾಂದರ್

ನಮಗಾಗಿ ನಿರ್ಣಯ ಮಾಡಿಬಿಟ್ಟಿದ್ದಾನೆ: "ನಿಜ ಕೇಳಿದರೆ ಮದುವೆ ಅಂಬೋದು ಒಂದು ಕೇಡು; ಆದರೆ ಅಗತ್ಯವಾದ ಕೇಡು"—ಅಂತ.

ಮದುವೆ ಆಗುವುದೇ ಅಂತಾದಮೇಲೆ, ಮುಂದಿನ ಪ್ರಶ್ನೆ, ಆದ ಮದುವೆಯನ್ನು ನಿಭಾಯಿಸಿಕೊಂಡು ಹೋಗುವುದು ಹೇಗೆ? ಅನ್ನುವುದು. How to be happy though married. ಈ ಪ್ರಶ್ನೆ ಹಿಂದೆಂದಿಗಿಂತ ಈ ಕಾಲದಲ್ಲಿ ಬಿಗಿಯಾಗಿದೆ. ಹಿಂದಿನ ಕಾಲದಲ್ಲಾದರೆ ನಿಮಗೆ ಮದುವೆಮಾಡಿದವರು ಮಾಡಿದ ಮದುವೆಯನ್ನು ನಿಭಾಯಿಸುವುದಕ್ಕೆ ಸಹಾಯ ಮಾಡುತ್ತಾ ಇದ್ದರು. ಈಗ ಹಾಗಲ್ಲ. ನೀವು ಮಾಡಿಕೊಂಡ ಮದುವೆಯನ್ನು ನೀವೇ ನಿಭಾಯಿಸಬೇಕು—ಅಂದರೆ ಅನುಭವಿಸಬೇಕು.

ಅನಾದಿಕಾಲದಿಂದ ಮದುವೆಯಾದರೂ ಹೇಗೆ ಸುಖಪಡಬೇಕು ಅನ್ನುವ ಬಗ್ಗೆ ಮನುಷ್ಯ—ಅಂದರೆ ಗಂಡಸು ಪ್ರಯೋಗಗಳನ್ನು ಮಾಡಿದ್ದಾನೆ. ಬಹು-ಪತ್ನೀವಿವಾಹ, ಏಕಪತ್ನೀವಿವಾಹ, ಅಂಶಪತ್ನೀವಿವಾಹ ಇತ್ಯಾದಿ. ಬಹು-ಪತ್ನಿಯರನ್ನು ಮಾಡಿಕೊಂಡರೆ, ಅವರು ತಂತಮ್ಮೊಳಗೆ ಕಚ್ಚಾಡಿಕೊಂಡು ಗಂಡನನ್ನು ತಣ್ಣಗೆ ಬಿಡಬಹುದು, ಮತ್ತು ಅವನು ಬುದ್ಧಿವಂತ ಅಥವಾ ಅದೃಷ್ಟವಂತ ಆಗಿದ್ದರೆ ಅವನನ್ನು ಮೆಚ್ಚಿಸುವುದಕ್ಕೆ ಅವರೊಳಗೆ ಸ್ಪರ್ಧೆ ಎದ್ದು, ಅವನನ್ನು ಎಲ್ಲರೂ ಓಲೈಸಬಹುದು ಅನ್ನುವ ಆಶಾವಾದಿ ಕಲ್ಪನೆ ಕೆಲವರಿಗೆ ಇತ್ತು. ಈ ಆಶಾವಾದಿಗಳಿಗೆ ಏನಾಯಿತು ಅನ್ನುವುದನ್ನು ದಶರಥ ಮಹಾರಾಜನ ಉದಾಹರಣೆಯಿಂದ ನಾವು ಕಂಡಿದ್ದೇವೆ. ಆಗ ಏಕಪತ್ನೀ ವ್ರತವೇ ತಾರಕ ಅನ್ನುವ ವಾದ ತಲೆ ಎತ್ತಿತ್ತು. ಈ ವಾದದ ಪುರಸ್ಕರ್ತನಾದ ದಶರಥನ ಮಗನಿಗೆ ಏನಾಯಿತು ಅನ್ನುವುದೂ ಕೂಡ ನಮಗೆ ಗೊತ್ತಿದೆ. ಒಂದಕ್ಕಿಂತ ಕಮ್ಮಿ ಹೆಂಡತಿಯನ್ನು ಮಾಡಿಕೊಂಡರೆ ಹೇಗೆ? ಅಂತ ದ್ವಾಪರ ಯುಗದಲ್ಲಿ ಪಾಂಡವರು ಪ್ರಯೋಗ ಮಾಡಿ ನೋಡಿದರು. ಅದಕ್ಕಾದರೂ ಏನು ಗತಿ ಆಯಿತು? "ಗಂಡರೋ ನೀವ್ ಷಂಡರೋ?" ಅಂತ ದ್ರೌಪದಿ ಅವರಿಗೆ ಸವಾಲು ಹಾಕಿದಳು. ಇಲ್ಲಾ ಸ್ವಾಮಿ, ಹೆಂಡಂದಿರ ಸಂಖ್ಯೆಯಿಂದ ವೈವಾಹಿಕ ಸುಖ ನಿರ್ಧಾರ ಆಗುವುದಿಲ್ಲ ಅಂತ ಇತಿಹಾಸ ಕಲಿಸಿವೆ. ಆದ್ದರಿಂದ One wife at a time and that kept well–ಒಮ್ಮೆಗೆ ಒಂದು ಹೆಂಡತಿ, ಅವಳನು ಚೆನ್ನಾಗಿ ಇಟ್ಟುಕೋ ಅನ್ನುವ ತತ್ತ್ವಕ್ಕೆ ಬಂದಿದ್ದೇವೆ. ಹೌದು,

ಕಾನೂನು ಈಗ ಡೈವ್ರೋರ್ಸಿಗೆ ಅನುಮತಿ ಕೊಡುತ್ತದೆ. ನೀವು ನಿಮ್ಮ ಹಳೇ ಹೆಂಡತಿಯನ್ನು ಸಾಗಹಾಕಿ ಹೊಸ ಹೆಂಡತಿಯ ಮೂಲಕ ಸುಖಾನ್ವೇಷಣೆ ಮಾಡಬಹುದು. ಥಿಯರಿಯೇನೋ ಸರಿ. ಆದರೆ ಈ ಹೊಸಬಳು ನಿಮಗೆ ಹೊಸದೇ ಪಾಠ ಕಲಿಸಬಹುದು. ಅ–ಆ–ಇ–ಈ ಅಂಕಲಿಪಿ ಕಷ್ಟ ಅಂತ ABCDಗೆ ಹೋಗೋದು, ಆಮೇಲೆ Alpha Beta Thita Lamdaಕ್ಕೆ, ಅನಂತರ ಅಲೀಫ್, ಬೇ, ತೇಗೆ, ಹೀಗೆ ಬದಲು ಮಾಡುತ್ತಾ ಮಾಡುತ್ತಾ ಕಡೆಗೆ ನೀವು ಹರಪ್ಪಾ ಲಿಪಿಗೆ ಬಂದು ತಲಪಬಹುದು. ಹರಪ್ಪಾ ಲಿಪಿಯನ್ನು ಓದುವುದು ಇನ್ನೂ ಯಾರಿಗೂ ಸಾಧ್ಯವಾಗಿಲ್ಲ. ಜಾಣರಾದವರು ಸಿಕ್ಕಿದ ಹೆಂಡತಿಯ ಸಂಗಾತವೇ ಹೇಗಾದರೂ ಪುದುವಾಳುವುದಕ್ಕೆ ಕಲಿಯುತ್ತಾರೆ.

ನಾನು ಈಗ ಸುಮಾರು ನಾಲ್ವತ್ತು ವರ್ಷಗಳಿಂದ ಒಬ್ಬಳೇ ಹೆಂಡತಿಯ ಸಂಗಡ, ಆತ್ಮಹತ್ಯೆಮಾಡಿಕೊಳ್ಳದೆ ಅಥವಾ ಅವಳನ್ನೂ ಆತ್ಮಹತ್ಯೆಗೆ ತಳ್ಳದೆ, ಬಾಳುತ್ತಾ ಇದ್ದೇನೆ ಅನ್ನೋದರಿಂದ ಹೆಂಡತಿಯನ್ನು ಒಲಿಸಿಕೊಂಡು ಇರುವುದು ಹೇಗೆ ಅನ್ನುವ ಬಗ್ಗೆ ನಾನು ಒಬ್ಬ ಎಕ್ಸ್‌ಪರ್ಟ್–ಅನುಭವಸ್ಥ–ಅಂತ ನೀವು ಭಾವಿಸಬಹುದು. ಆದರೆ ಅನುಭವ ಅನ್ನೋದು ನಮ್ಮ ತಪ್ಪುಗಳಿಗೆ ನಾವು ಕೊಡುವ ಹೆಸರು ಅಂತ ಆಸ್ಕರ್‌ವೈಲ್ಡ್ ಹೇಳಿರುವುದನ್ನು ಮರೆಯಬೇಡಿ. ಮಡದಿಯರನ್ನು ಒಲಿಸಿಕೊಂಡು ಇರುವುದರಲ್ಲಿ ಅನೇಕ ಗುಳಿಗುಂಪು ಇದೆ. ಯಾಕೆ ಅಂದರೆ, ಹೆಂಡಂದಿರು ನಾನಾಗಾತ್ರಗಳಲ್ಲಿ, ನಾನಾ ಆಕಾರಗಳಲ್ಲಿ, ನಾನಾ ರೂಪಗಳಲ್ಲಿ ಮತ್ತು ನಾನಾ ಮನೋವೃತ್ತಿಗಳಲ್ಲಿ ಬರುತ್ತಾರೆ. ನಿಮಗೆ ಸಿಕ್ಕಿದ್ದು ಯಾವ ತರಹದ ಸರಕು, ಅದು ಯಾವ ತರಹದಲ್ಲಿ ರೂಪಾಂತರ ಹೊಂದುತ್ತಾ ಇದೆ ಅಂತ ಊಹಿಸಿ ಎಲ್ಲಾ ಸಂಭಾವ್ಯತೆಗಳಿಗೂ ತಕ್ಕ ಉಪಾಯ ಹೇಳುವುದು ಬ್ರಹ್ಮನಿಗೂ ಸಾಧ್ಯವಿಲ್ಲ. ಬ್ರಹ್ಮ ಹೆಣ್ಣನ್ನು ಸೃಷ್ಟಿಮಾಡಿದ, ಆದರೆ ಅರ್ಥಮಾಡಿಕೊಂಡ ಅನ್ನುವ ಭರವಸೆ ನನಗಿಲ್ಲ.

ಇಷ್ಟು ಮುನ್ನೆಚ್ಚರಿಕೆ ಕೊಟ್ಟು, ಮಡದಿಯನ್ನು ಒಲಿಸಿಕೊಂಡಿರಬೇಕಾದರೆ ಏನು ಮಾಡಬೇಕು ಅಂತ ಹೇಳುತ್ತೇನೆ. ಮಡದಿಯನ್ನು ಒಲಿಸಿಕೊಂಡಿರಬೇಕಾದರೆ ಪ್ರೇಮ, ಕಾಮ, ಸರಳತನ, ಧೂರ್ತತನ, ಕಲ್ಪನಾಶಕ್ತಿ, ಅಮಾಯಕತನ, ಧೈರ್ಯ, ದೈನ್ಯ, ಶೌರ್ಯ, ಹೇಡಿತನ, ಮೊಂಡತನ, ದೊರೆತನ, ಆಳ್ತನ–ಇವೆಲ್ಲ ನಿಮ್ಮಲ್ಲಿರಬೇಕು ಮತ್ತು ಅವನ್ನೆಲ್ಲ ಸಂದರ್ಭ ನೋಡಿ ನಿಮ್ಮ

ಚೀಲದಿಂದ ಹೊರತೆಗೆದು ಪ್ರಯೋಗಿಸುವ ಮರ್ಮಜ್ಞತನ ನಿಮ್ಮಲ್ಲಿ ಇರಬೇಕು. ನೀವು ಒತ್ತಿದರೆ ಸರಿಯಪ್ಪ ಆಗಿರಬೇಕು, ಸರಿದರೆ ಒತ್ತಪ್ಪನೂ ಆಗಿರಬೇಕು.

ಪ್ರಥಮತಃ ನೀವು ಒಬ್ಬಾಕೆಯ ಕೈಹಿಡಿದು ನಿಮ್ಮ ಮನೆಗೆ ಕರೆತಂದ ಮೇಲೆ, ಮೊದಲು ಅವಳನ್ನು ಸೂಕ್ಷ್ಮವಾದ ನಿರೀಕ್ಷಣೆಯಲ್ಲಿ ಇಡಿ. ನಿಮ್ಮ ಕೈಯನ್ನು ಅವಳ ಕೈಲಿ ಕೊಟ್ಟರೂ, ನಿಮ್ಮ ಹೃದಯವನ್ನು ಅವಳಿಗೆ ಅರ್ಪಿಸಿ ಬಿಟ್ಟರೂ ಅನಕಾತ ನಿಮ್ಮ ತಲೆಯನ್ನು ಅವಳ ಕೈಲಿ ಒಪ್ಪಿಸಿಬಿಡಬೇಡಿ. ಯಾಕೆಂದರೆ ಹೋರಾಟ ಇಲ್ಲದೆ ಹೃದಯವನ್ನು ಸರೆಂಡರ್ ಮಾಡುವ ಹೆಣ್ಣನ್ನು ಗಂಡಸು ಮೆಚ್ಚುವುದಿಲ್ಲ; ಹೋರಾಟವಿಲ್ಲದೆ ತಲೆಯನ್ನು ಅರ್ಪಿಸಿ ಬಿಡುವ ಗಂಡಸನ್ನು ಹೆಂಗಸು ಮೆಚ್ಚುವುದಿಲ್ಲ. ಅವಳೇ ಪ್ರಯತ್ನಿಸಿ ಕಾಲಾಂತರ ದಲ್ಲಿ ನಿಮ್ಮ ತಲೆಯನ್ನು ವಶಪಡಿಸಿಕೊಳ್ಳಲಿ. ಅಂತೂ ನಿಮ್ಮ ತಲೆಯನ್ನು ಆದಷ್ಟು ಕಾಲ ನಿಮ್ಮ ಹೆಗಲ ಮೇಲೆ ಉಳಿಸಿಕೊಂಡು, ಅವಳ ಇಷ್ಟಾನಿಷ್ಟ ಗಳು ಏನು, ಅವಳ ಕಣ್ಣುಗಳ ಭಾಷೆಯ ಲಿಪಿ ಯಾವುದು, ಅವಳ ಅಂತರಂಗದ ಭಾಷೆಯ ಶಬ್ದಗಳಿಗೆ ಅವಳ ಬಹಿರಂಗದ ಭಾಷೆಯಲ್ಲಿನ ಪರ್ಯಾಯ ಪದಗಳು ಯಾವವು, ಅವಳ ಹುಸಿಕೋಪಕ್ಕೂ ಹಸಿಕೋಪಕ್ಕೂ ಅವಳ ಹಣೆ, ಹುಬ್ಬು, ಕಣ್ಣು, ತುಟಿ, ಗಲ್ಲಗಳ ಮೋಡಿಗಳಲ್ಲಿ ಏನೇನು ವ್ಯತ್ಯಾಸಗಳು ಬರುತ್ತವೆ, ಅವಳ ದೌರ್ಬಲ್ಯಗಳೇನು ಎಂದೆಲ್ಲಾ ಅಧ್ಯಯನ ಮಾಡುತ್ತ, ಸಾಧ್ಯವಿದ್ದರೆ ಒಂದು ದಿನಚರಿಯನ್ನು ಬರೆದಿಡಿ. ಇದರಿಂದ ಕೆಲ ತಿಂಗಳಲ್ಲಿ ನಿಮ್ಮ ಸ್ವಂತ ಉಪಯೋಗಕ್ಕಾಗಿ A Guide to My Wife 'ನನ್ನ ಮಡದಿಯ ಕೈಪಿಡಿ' ಯನ್ನು ತಯಾರಿಸಬಲ್ಲಿರಿ. ಇದು ಚಾಣಕ್ಯನೀತಿ ಅಥವಾ ಮೆಕಿಯವಿಲಿಯ Princeನಂಥ ಗನ್ನಗತಕತನದ ಸಂಹಿತೆ ಆಗಲಿಕ್ಕಿಲ್ಲವೇ—ಅಂತ ಕೇಳಿದರೆ, ಹೌದು ಅನ್ನುತ್ತೇನೆ. ಆದರೆ ಇದರಲ್ಲಿ ದುರುದ್ದೇಶವೇನೂ ನಿಮಗೆ ಇಲ್ಲವಲ್ಲ. ಮಡದಿಯನ್ನು ಒಲಿಸಿಕೊಂಡಿರುವುದು ತಾನೆ ನಿಮ್ಮ ಧ್ಯೇಯ? ಮತ್ತೆ ಅವಳಾದರೂ ನಿಮ್ಮ ಬಗ್ಗೆ ಒಂದು ಕೌಟಿಲ್ಯಸಂಹಿತೆಯನ್ನು ತಯಾರಿಸುತ್ತ ಇರುತ್ತಾಳೆ ಅನ್ನುವುದನ್ನು ನೀವು ಮರೆಯಬೇಡಿ. ದಾಂಪತ್ಯ ಅನ್ನುವುದು ಒಂದು ತರಹದ ಹುಸಿ ಯುದ್ಧ.

ಮಡದಿಯಾದವಳು ತನ್ನ ಮಾರಾಯನಿಂದ ಮುಖ್ಯವಾಗಿ ಎರಡು ಸಂಗತಿ ಗಳನ್ನು ನಿರೀಕ್ಷಿಸುತ್ತಾಳೆ. ಒಂದು ಪ್ರಶಂಸೆ; ಎರಡು ಇಂಗಿತಗ್ರಹಣ.

ಹೊಗಳಿಕೆಯನ್ನು ಮೆಚ್ಚದ ಹೆಂಗಸನ್ನು ನಾನು ಇನ್ನೂ ಕಾಣಬೇಕಾಗಿದೆ. ಅದು ಮಿಥ್ಯಾಪ್ರಶಂಸೆ ಆಗಿದ್ದರೂ ಸೈಯೆ. ಹೊಗಳಿಕೆಯ ಹೊನ್ನಶೂಲಕ್ಕೆ ಮಡದಿಯರು ಸಂತೋಷದಿಂದ ಏರುತ್ತಾರೆ. ಆದರೆ ಇದರಲ್ಲಿ ಎಚ್ಚರಿಕೆ ಬೇಕು. ಪರ ಹೆಂಗಸರ ಮೇಲೆ ಮಿಥ್ಯಾಪ್ರಶಂಸೆಯ ಅಸ್ತ್ರ ಉಪಯೋಗಿಸಿದರೆ ಅಡ್ಡಿ ಇಲ್ಲ; ಸ್ವಂತ ಹೆಂಡತಿಯ ಮೇಲೆ ಪ್ರಯೋಗಿಸಿದರೆ ಅದು ನಿಮ್ಮ ಮೇಲೆ ಬೂಮರಾಂಗಿಸಬಹುದು. ನನ್ನ ಮಿತ್ರನ ಅನುಭವ ಹೇಳುತ್ತೇನೆ. ಮಡದಿಯನ್ನು ಖುಶಿ ಮಾಡಬೇಕು ಅಂತ ಆತ, “ನಿನ್ನ ಕಂಠ ತುಂಬಾ ಚೆನ್ನಾಗಿದೆ. ನಿಮ್ಮ ತಂದೆ ನಿನಗೆ ಸಂಗೀತ ಕಲಿಸದೆ ಇರಬಾರದಿತ್ತು” ಅಂತ ಒಂದು ಬುರುಡೆ ಬಿಟ್ಟ. ಅವಳು ತತ್‌ಕ್ಷಣ “ಓ ಅದಕ್ಕೇನಂತೆ! ಒಬ್ಬ ಸಂಗೀತ ಮಾಸ್ತರನ್ನು ಗೊತ್ತುಮಾಡಿಬಿಡಿ!” ಅಂತ ಗಂಟುಬಿದ್ದಳು. ಬಡಪಾಯಿ ತನ್ನ ಬಲೆಯಲ್ಲಿ ತಾನೇ ಸಿಕ್ಕಿಕೊಂಡ. ಸಂಕ್ಷೇಪದಲ್ಲಿ ಹೇಳುವುದಾದರೆ, ಈಗ ಅವಳು ಗರಗಸದನಿಯಲ್ಲಿ ಹಾಡುವ “ಶೋಭಿಲ್ಲು ಸಪ್ತಸ್ವರಾ!”ವನ್ನ ದಿನಾ ಸಂಜೆ ಅವನು ಸಹಿಸಿಕೊಳ್ಳಬೇಕಾಗಿದೆ.

ನಿಮ್ಮಿಂದ ನಿಮ್ಮ ಮಡದಿ ನಿರೀಕ್ಷಿಸುವ ಇನ್ನೊಂದು ಸಂಗತಿ ಇಂಗಿತಜ್ಞತೆ ಅಂದೆನಲ್ಲ. ಇಂಗಿತಜ್ಞತೆ ಅಂದರೆ ಅವಳು ಬಿಡಿಸಿ ಹೇಳದೆ ನೀವು ಅವಳ ಅಂತ-ರಂಗ ತಿಳಿದುಕೊಳ್ಳುವುದು. ಇದು ಸುಮಾರಾಗಿ ನವ್ಯ ಕವಿತೆಯನ್ನು ಅರ್ಥ ಮಾಡಿಕೊಳ್ಳುವಷ್ಟೇ ಸುಲಭದ ಕೆಲಸ. ಅಥವಾ ಚಕ್ರಬಂಧ ಒಗಟು ಬಿಡಿಸಿದ ಹಾಗನ್ನಿ. ನೀವು ಅವಳ ಹೊರಗಿನ ಮಾತಿಗೆ ಶಬ್ದಕೋಶದಲ್ಲಿ ಅರ್ಥ ನೋಡಿ ಅನುಸರಿಸಿದರೆ ಕೆಟ್ಟಿರಿ. ನೀವು ಅವಳ ಒಳಗಿನ ಒಳದನಿಯನ್ನು ಆಲಿಸಲಿಕ್ಕೆ ಕಲಿಯಬೇಕು. ಒಂದು ಉದಾಹರಣೆ ತೆಗೆದುಕೊಳ್ಳಿ. ಒಂದು ದಿನ ನೀವು ಆಫೀಸಿಗೆ ಹೊರಡುವಾಗ ನಿಮ್ಮ ನವವಿವಾಹಿತೆ ಮಡದಿ ನಸುನಕ್ಕು ಹೀಗೆ ಹೇಳುತ್ತಾಳೆ: “ನೋಡಿ, ಆಚೇಮನೆಯೋರು ಏನು ನಾಚಿಕೆಗೇಡಿಗಳು ಅಂತ! ವರ್ಷ ನಲುವತ್ತಕ್ಕೆ ಬಂದಿರಬೇಕು, ಇನ್ನೂ ಗಂಡ ಆಫೀಸಿಗೆ ಹೊರಡುವಾಗ ಬಾಗಿಲಲ್ಲೇ ಹೆಂಡತೀ ಕೆನ್ನೆ ಹಿಂಡಿ ಬೈ ಬೈ ಹೇಳಿ ಹೋಗ್ತಾನೆ! ಯಾರಾದರೂ ನೋಡಿಯಾರು ಅನ್ನೋ ಯೋಚನೆ ಆದರೂ ಬೇಡವೇ?” ಈಗ ನೀವು ಈ ವಸ್ತುನಿಷ್ಠ ವರದಿಗೆ ಏನು ಅರ್ಥ ಮಾಡುತ್ತೀರಿ? ನಿಮ್ಮ ಮಡದಿಗೆ ಇಂಥಾ ಲಂಪಟತನ ಸೇರುವುದಿಲ್ಲ ಅಂತನೋ? ಅಥವಾ, “ನಿಮಗೆ ಇನ್ನೂ ಬರೇ

ಇಪ್ಪತ್ತೇಳು ವರ್ಷ. ಹೊಸದಾಗಿ ಮದುವೆ ಮಾಡಿಕೊಂಡಿದ್ದೀರಿ. ಆದರೂ ಆಫೀಸಿಗೆ ಹೋಗುವಾಗ ಹೆಂಡತೀ ಕೆನ್ನೆ ಹಿಂಡಬೇಕು ಅನ್ನೋ ಆಸೆ ಆಗುವುದಿಲ್ಲವೆ ? ಎಂಥ ಅರಸಿಕರು ನೀವು !" ಅಂತಲೋ ? ಈ ಒಗಟನ್ನು ನೀವೇ ಬಿಡಿಸಬೇಕು. ಇದಕ್ಕೆ ನೀವು ಸಂಗ್ರಹಿಸಿರುವ ಮಡದಿಸಂಹಿತೆ ಸಹಾಯ ಮಾಡಬಹುದು. ಅಥವಾ ನೆರೆಮನೆಯವರ ಈ ವರದಿ ಕೊಡುವಾಗ ನಿಮ್ಮವಳ ಕೆನ್ನೆ ಕೆಂಪೇರಿದೆಯೋ ಅಥವಾ ಕಣ್ಣು ಮಿಟುಕುತ್ತದೆಯೋ ಇತ್ಯಾದಿ ಸಂಕೇತಗಳನ್ನು ನೋಡಬೇಕಾದೀತು.

ನೆರೆಮನೆ–ಅಂದೆನಲ್ಲ. ಅದೊಂದು ಸಮಸ್ಯೆ. ನೀವು ನಿಮ್ಮ ಮಡದಿ ಇಬ್ಬರೇ ಈ ಪ್ರಪಂಚದಲ್ಲಿ ಇರುವುದಾದರೆ ಅವಳನ್ನ ಒಲಿಸಿಕೊಂಡಿರುವುದು ಅಷ್ಟು ಕಷ್ಟವಾಗಲಿಕ್ಕಿಲ್ಲ. ಆದರೆ ನಿಮ್ಮ ನೆರೆಮನೆಯವಳಿಗೆ ಒಂದು ಹೊಸ ಸೀರೆಯೋ ಬಂಗಾರವೋ ಬಂದರೆ ಸಾಕು, ನಿಮ್ಮ ಮನೆಯಲ್ಲಿ ವಿದ್ಯುತ್ಕಾಂತಾ—ಅಂದರೆ ನಿಮ್ಮ ಕಾಂತೆಯ ವಿದ್ಯುತ್ ಅಲ್ಲೋಲಕಲ್ಲೋಲ ಆರಂಭವಾಗುತ್ತದೆ. ನೀವು ಬುದ್ಧಿವಂತರಾದರೆ ಈ ಕಲ್ಲೋಲ ಉಲ್ಬಣಿಸುವುದಕ್ಕೆ ಮೊದಲೇ ನಿಮ್ಮವಳ ಇಂಗಿತ ತಿಳಿದು ಜಾರ್ಜೆಟ್ ಸೀರೆಯನ್ನೋ ಲೇಟೆಸ್ಟ್ ನೆಕ್ಲೇಸನ್ನೋ ಒದಗಿಸುವ ಯೋಚನೆಮಾಡಿ. ಆದರೆ ನಿಮ್ಮ ಜೇಬು ಇದಕ್ಕೆ ಅನುಮತಿ ಕೊಡದಿದ್ದರೆ ಏನು ಮಾಡುವಿರಿ ? ಹಣಕಾಸಿನ ಶಾಸ್ತ್ರವನ್ನು ನಿಮ್ಮ ಮಡದಿಗೆ ವಿವರಿಸುವ ಪ್ರಯತ್ನ ಮಾಡುತ್ತೀರಾ ? ಅದು ವ್ಯರ್ಥ. ನೀವು ಮಾಡುವ ದುಂದುಗಾರಿಕೆಯ ಒಂದು ಪಟ್ಟಿಯಿಂದ ಅವಳು ನಿಮ್ಮ ಮೇಲೆ ಪ್ರತಿಧಾಳಿ ಆರಂಭಿಸುತ್ತಾಳೆ. ಹೀಗಾದಾಗ ಗೃಹಶಾಂತಿ ಉಳಿಸಿಕೊಳ್ಳುವುದಕ್ಕೆ ಏನು ಮಾಡುತ್ತೀರಿ ? ನಿಮ್ಮ ಸಂಬಳದ ಪಾಕೀಟನ್ನು ಇದ್ದಕ್ಕಿದ್ದಹಾಗೆ ನಿಮ್ಮವಳ ಕೈಗೆ ಹಾಕಿ, ಬೇಕಾದರೆ ನಿನ್ನ ಮೈಗೊಂದು ಬಂಗಾರದ ಕವಚ ಮಾಡಿಸಿಕೋ ಅನ್ನುವುದು ಕ್ಷೇಮ. ಆದರೆ ಎಲ್ಲಾ ಮಡದಿಯರೂ ಈ ಉಪಾಯಕ್ಕೆ ಒಪ್ಪುವುದಿಲ್ಲ. ಒಪ್ಪಿದರೂ ತಿಂಗಳೊಪ್ಪತ್ತಿನಲ್ಲಿ ರಾಜೀನಾಮೆ ಕೊಡುತ್ತಾರೆ. ನನ್ನವಳು ನನ್ನ ಹಣಕಾಸಿನ ಮಂತ್ರಿಯಾಗುವುದಕ್ಕೆ ಸುತರಾಂ ಒಲ್ಲೆ ಅಂದಿದ್ದಾಳೆ. "ಮನೆ ಕೆಲಸ ಬೇರೆ ಮಾಡಿಕೊಂಡು ಈ ರಗಳೇನೂ ನನ್ನ ಸೆರಗಿಗೆ ಯಾಕೆ ಕಟ್ಟಿಕೊಳ್ಳಲಿ ?" ಅನ್ನುತ್ತಾಳೆ. ಇಂಥಾ ಪ್ರಸಂಗಗಳಲ್ಲಿ ಏನಾದರೂ diversionary tactics–ಅಡ್ಡ ಉಪಾಯ ಹೂಡಬೇಕಾಗುತ್ತದೆ. ಪ್ರಸಂಗ

ಬಹಳ ಇಕ್ಕಟ್ಟಾದರೆ ನಾನು ಅಸ್ವಸ್ಥ ನಟಿಸುವ ಮೂಲಕ ಪಾರಾಗುತ್ತೇನೆ. ಆದರೆ ಇದರಲ್ಲಿ ಅಪಾಯವುಂಟು. ನಿಮ್ಮಾವಳು ನಿಮ್ಮನ್ನು ಡಾಕ್ಟರ ಬಳಿಗೆ ಕಳಿಸುವುದರಿಂದ ತೃಪ್ತಳಾಗದೆ ತಾನೇ ನಿಮ್ಮನ್ನು ಎಳೆದುಕೊಂಡು ಹೋಗ ಬಹುದು! ಕೊನೆಯ ಉಪಾಯ ಅಂದರೆ ನಿಮಗೆ ಯಾರಾದರೂ ಸಾಲ ಕೊಡುವ ಹಾಗಿದ್ದರೆ ಸಾಲ ಮಾಡುವುದು.

ನಿಮ್ಮಾಕೆಯನ್ನು ಒಲಿಸಿಕೊಂಡಿರಬೇಕು ಅಂದಾಕ್ಷಣ ಯಾವಾಗಲೂ ಅವಳ ಸೇವಕರಾಗಿರಬೇಕಂತ ತಿಳಿದುಕೊಳ್ಳಬೇಡಿ. ಮನೆಗೆಲಸದಲ್ಲಿ ಸಿಂಹ ಪಾಲು ನೀವೇ ವಹಿಸಿಕೊಂಡರೆ ನಿಮ್ಮವಳ ಒಲುಮೆ ಬೆಳೆಯುತ್ತದೆಂತಲೂ ನಿಶ್ಚಯವಾಗಿ ಹೇಳಲಾರೆ. ಮೊನ್ನೆ ಪೇಪರಿನಲ್ಲಿ ಬಂದಿತ್ತು : ಇಂಗ್ಲಂಡಿನಲ್ಲಿ ಒಬ್ಬಾಕೆ ತನ್ನ ಗಂಡ ಉತ್ತಮವಾಗಿ ಅಡಿಗೆ ಮಾಡುತ್ತಾನೆ ಅಂತ ದೂರು ಹೇಳಿ ಕೋರ್ಟಿನಲ್ಲಿ ಡೈವೋರ್ಸ್ ದಾವೆ ತಂದಳಂತೆ. ನೀವು ಅಡಿಗೆ ಮಾಡು ವುದಕ್ಕೆ ನೆರವು ಕೊಟ್ಟರೆ ಅದು ತನ್ನ ಅಡಿಗೆ ಪಾಂಡಿತ್ಯದ ಟೀಕೆ ಅಂತ ಅವಳು ತಿಳಿದುಕೊಳ್ಳಬಹುದು.

ನಿಮ್ಮವಳನ್ನು ಒಲಿಸಿಕೊಂಡಿರುವ ಹವ್ಯಾಸದಲ್ಲಿ ನೀವು ದಾಸ್ಯಭಾವ ತೋರಿಸಬೇಡಿ. ಹೆಂಗಸರು ತಮ್ಮ ಗಂಡಂದಿರಿಂದ ಒಂದಿಷ್ಟು ಗಂಡಸ್ತನ ಅಪೇಕ್ಷಿಸುತ್ತಾರೆ—ಅಂದರೆ ನಾಲ್ಕು ಜನರ ಮುಂದೆ, ಖಾಸಗಿಯಲ್ಲಿ ಅಲ್ಲ. ನಾಲ್ಕು ಜನರ ಮುಂದೆ ನೀವು ಹೆಂಡತೀನ ಆಳುವವರ ಹಾಗೇ ತೋರಿಸಿಕೊಳ್ಳ ಬೇಕು. ಬಹಿರಂಗದಲ್ಲಿ ಒಂದಿಷ್ಟು ಕೋಪತಾಪ ತೋರಿಸಿದರೂ ಒಳ್ಳೇದೇ. ನಮ್ಮ ನೆರೆಯಲ್ಲಿ ಒಬ್ಬ ಅಮ್ಮಾವ್ರ ಗಂಡ ಇದ್ದಾರೆ. ಅವರ ಮಡದಿ ನನ್ನವಳ ಹತ್ತಿರ ಹೆಮ್ಮೆಯಿಂದ ತಮ್ಮ ಗಂಡನ ಕೋಪತಾಪ ಬಣ್ಣಿಸೋದನ್ನ ಮೊನ್ನೆ ಕೇಳಿದೆ. "ನಮ್ಮನೇವರು ಏನಂತೀರಾ! ಮೂಗಿನ ತುದೀಲೇ ಸಿಟ್ಟು. ಅಡಿಗೇಲಿ ಉಪ್ಪು ಬೆಲ್ಲ ಏನಾದರೂ ಹೆಚ್ಚುಕಡಿಮೆ ಆದರೆ ಎಂಥಾ ಸೀನ್ ಕ್ರಿಯೇಟ್ ಮಾಡ್ತಾರೆ ಗೊತ್ತಾ? ತಟ್ಟೇನ ಒದ್ದು ಬಿಟ್ಟರೂ ಬಿಟ್ಟರು. ಶುದ್ಧ ದೂರ್ವಾಸ!" ಅವರ ಮನೆಯಲ್ಲಿ ನಾನು ಉಂಡು ಬಲ್ಲೆ. ಪಾಪ, ಆ ಅಮ್ಮಾವ್ರ ಗಂಡ ಶಂಭುಮಹಾರಾಜ! ಉಪ್ಪು, ಹುಳಿ, ಖಾರ, ಹೆಂಚಕ್ಕಿ, ಏನೇ ಆದರೂ ಕ್ಯೆಂ ಅನ್ನದೆ ನುಂಗಿ ಹೋಗುತ್ತಾರೆ. ಆದರೆ ಅಮ್ಮಾವ್ರಿಗೆ ತಮ್ಮ ಯಜಮಾನರೂ ಕೋಪದಲ್ಲಿ ಇತರರಿಗೆ ಕೊರೆ ಅಲ್ಲ ಅಂತ ಹೇಳಿಕೊಳ್ಳುವುದರಲ್ಲಿ ಇಷ್ಟ. ಗಂಡನ

ದಾಸ್ಯವನ್ನು ಅವರು ತಮ್ಮಿಬ್ಬರೊಳಗಿನ ಪ್ರೈವೇಟ್ ಅರೇಂಜ್‌ಮೆಂಟ್– ಖಾಸಗಿ ವ್ಯವಹಾರವಾಗಿ ಇರಿಸಬಯಸುತ್ತಾರೆ!

ಆದರೆ ನಿಮ್ಮ ಅಮ್ಮಾವ್ರ ಅನುಗ್ರಹ ನಿಮಗೆ ಬೇಕಾಗಿದ್ದರೆ, ಇನ್ನೊಬ್ಬ ಹೆಣ್ಣನ್ನ ಅವರ ಮುಂದೆ ಹೊಗಳುವ ತಪ್ಪನ್ನ ಎಂದೂ ಮಾಡಬೇಡಿ. ಇನ್ನೊಬ್ಬಳ ಪ್ರಶಂಸೆಯನ್ನು ಕೇಳುವುದೆಂದರೆ ಯಾವ ಹೆಣ್ಣಿಗೂ "ಪಿರಿದೆನಿಸುವ ಕರ್ಣಶೂಲೆಯಂ ಪುಟ್ಟಿಸುಗುಂ." ಹೆಂಗಸು ಮದುವೆಯಾಗುವ ಕಷ್ಟವನ್ನು ಯಾಕೆ ತೆಗೆದುಕೊಳ್ಳುತ್ತಾರೆ ಅಂತೀರಿ? ಒಬ್ಬ ಗಂಡಸನ್ನ ಇಡಿಯಾಗಿ ಹಿಡಿದು ಕೊಂಡಿರುವುದಕ್ಕೆ. ಪ್ರತಿಯೊಬ್ಬ ಪರ ಹೆಂಗಸನ್ನೂ ಅವಳು ತನ್ನ ಪ್ರತಿಸ್ಪರ್ಧಿ ಅಂತ ಭಾವಿಸುತ್ತಾಳೆ. ಹೆಂಗಸರ ಹೆಚ್ಚಿನ ಸಮಯ ಇತರ ಹೆಂಗಸರನ್ನು ತುಚ್ಛೀಕರಿಸುವುದರಲ್ಲಿ ಕಳೆಯುತ್ತದೆ. ನೀವು ಚಾಣಕ್ಯರಾದರೆ ಈ ದೌರ್ಬಲ್ಯ ವನ್ನು ನಿಮ್ಮ ಅನುಕೂಲಕ್ಕೂ ಉಪಯೋಗಿಸಿಕೊಳ್ಳಬಹುದು. ಬೇರೆ ಯಾವಳೋ ಹೆಣ್ಣಿನಲ್ಲಿ ನೀವು ಆಸಕ್ತಿ ವಹಿಸುತ್ತಾ ಇದ್ದೀರಿ ಅನ್ನುವ ನಸು ಸಂಶಯ ನಿಮ್ಮವಳಲ್ಲಿ ಹುಟ್ಟುವ ಹಾಗೆ ನೀವು ನಡೆದುಕೊಂಡರೆ ಅದರ ತಳ ಶೋಧಿಸುವುದಕ್ಕೆ ನಿಮ್ಮ ಮಡದಿ ಆಕಾಶ ಪಾತಾಳ ಒಂದುಮಾಡುತ್ತಾಳೆ. ಎಲ್ಲಾ ಡಿಟೆಕ್ಟಿವ್ ಕೆಲಸ ಮುಗಿದು ನೀವು ನಿರಪರಾಧಿಗಳು ಅಂತ ಸಿದ್ಧವಾದರೆ ನಿಮ್ಮ ಮಡದಿಗೆ ಒಮ್ಮೆಲೇ ಎಷ್ಟು ಖುಷಿ ಆಗುತ್ತದೆ ಅಂದರೆ ನಿಮ್ಮ ಮೇಲೆ ಅವಳ ಒಲವು ಇಮ್ಮಡಿ ಆಗುತ್ತದೆ! ಆದರೆ ಇದು ತುಂಬಾ ಅಪಾಯ, ಜಟಿಲ ವಾದ ಆಟ. ಜಾಗ್ರತೆ!

ಎಲ್ಲಾ ಹೇಳಿ, ಮಡದಿಯರ ಮನಸ್ಸು ಅತ್ಯಂತ ದುರೂಹ್ಯವಾದದ್ದಂತ ನಿಮಗೆ ಎಚ್ಚರಿಕೆಕೊಡದೆ ನಿರ್ವಾಹವಿಲ್ಲ. ನಾನು ಓದಿದ ಒಂದು ಇಟಾಲಿಯನ್ ಕತೆ ನೆನಪಾಗುತ್ತದೆ. ನೆರೆಮನೆಯವನು ಆಗಾಗ ರಾತ್ರಿ ಕುಡಿದು ಮನೆಗೆ ಬಂದು ಹೆಂಡತಿಯನ್ನು ಹೊಡೆದು ಬಡಿದು ಗಲಾಟೆ ಮಾಡುತ್ತಾ ಇದ್ದ. ತಲೆಗೆ ಏರಿದ್ದು ಇಳಿದಮೇಲೆ ಇಂಗು ತಿಂದ ಮಂಗನ ಹಾಗೆ ಪೆಚ್ಚಾಗಿ ಅವಳನ್ನು ಒಲೈಸುತ್ತಿದ್ದ. ಮೈಗೆ ಮುಲಾಮು ಹಚ್ಚುತ್ತಿದ್ದ. ಈಚೆ ಮನೆಯವಳ ಗಂಡ ಪಾಪ, ತುಂಬಾ ಸಾಧುಪ್ರಾಣಿ. ಆದರೆ ಕೆಲವು ದಿನಗಳನಂತರ ತನ್ನವಳು ವಿಚಿತ್ರವಾಗಿ ವರ್ತಿಸೋದನ್ನ ಕಂಡು ಅವನಿಗೆ ಆಶ್ಚರ್ಯವಾಯಿತು. ಸುಳ್ಳು ಸುಳ್ಳೇ ಅವಳು ಜಗಳ ತೆಗೆದು ರೌದ್ರಾವತಾರ ತೋರಿಸುತ್ತಿದ್ದಳು. ಸಹಿಸೀ

ಸಹಿಸೀ ಕಡೆಗೊಂದು ದಿವಸ ಆತ ಅವಳನ್ನು ಹಿಡಿದು ನಾಲ್ಕು ಜಡಿದ. ಆಮೇಲೆ ಪಶ್ಚಾತ್ತಾಪಪಟ್ಟು ಅವಳನ್ನು ಸಿನಿಮಾಕ್ಕೆ ಕರೆದೊಯ್ದು ಬಹಳ ಮುದ್ದು ಮಾಡಿದ. ಅವಳಿಗೆ ಅದೇ ಬೇಕಾಗಿತ್ತು. ನೆರೆಮನೆಯವಳಿಗೆ ರಾದ್ಧಾಂತದನಂತರ ಸಿಗುತ್ತಾ ಇದ್ದ ಲಲ್ಲೆ ನೋಡಿ ಇವಳಿಗೂ ಅದರ ಆಸೆ ಹುಟ್ಟಿತ್ತು!

ಸಾರಾಂಶ ಇಷ್ಟೇ: ಒಲಿಸಿಕೊಂಡಿರುವುದಕ್ಕೆ ಒಂದು ರೂಲ್-ಆಫ್-ದಿ ಥಂಬ್ ಅನ್ನುವುದು ಇಲ್ಲ. ಪ್ರತಿ ಮಡದಿಗೂ ಅವಳದೆ ಕಾನೂನುಗಳು ಇರುತ್ತವೆ. ಅವುಗಳನ್ನು ಅರಿತುಕೊಳ್ಳುವುದರಲ್ಲಿ ಅರ್ಧಾಯುಷ್ಯ ಹೋಗಬಹುದು. ಅಷ್ಟರಲ್ಲಿ ಅವಳ ಕಾನೂನುಗಳೇ ಬದಲಾಗಿರಬಹುದು. ಹೆಂಡತಿಯನ್ನು ಒಲಿಸಿಕೊಂಡಿರುವುದು ಸುಮಾರು ಮಟ್ಟಿಗೆ ನಿಮ್ಮ ಅದೃಷ್ಟದ ವಿಷಯವೂ ಹೌದು. ಎಲ್ಲಾ ಮಾಡಿಯೂ ನಿಮ್ಮ ಮಡದಿ ಸೆಟೆದುಕೊಂಡೇ ಇದ್ದರೆ ಹರ್ಮನ್ ಕೆಸರ್‌ಲಿಂಗನ ತತ್ತ್ವಜ್ಞಾನದಿಂದ ನೀವು ಸಮಾಧಾನ ತಾಳಬೇಕಷ್ಟೇ. "ಹೆಚ್ಚು ಜನ ಮಹಾಪುರುಷರು ಸುಖಹೀನ ದಾಂಪತ್ಯಕ್ಕೆ ಹುಟ್ಟಿದವರು" ಅಂತ ಆತ ಹೇಳುತ್ತಾನೆ. ನೀವು ಸುಖಿ ಗಂಡ ಆಗದಿದ್ದರೆ ಮಹಾಪುರುಷನ ತಂದೆ ಆಗುವ ಚಾನ್ಸ್ ಇದೆ! (೧೯೭೭)



## ಪಾಡಿಗಾರು ವೆಂಕಟರಮಣ ಆಚಾರ್ಯ

ಲಾಂಗೂಲಾಚಾರ್ಯ ಎಂಬ ಕಾವ್ಯನಾಮದಿಂದ ಕನ್ನಡಿಗರಿಗೆ ಪರಿಚಿತರಾಗಿರುವ ಪಾ. ವೆಂ. ಆಚಾರ್ಯರು ೧೯೧೫ರಲ್ಲಿ ಉಡುಪಿಯಲ್ಲಿ ಜನಿಸಿದರು. ಹುಟ್ಟಿದ್ದು ವೈದಿಕ ಮನೆತನ, ಸೇರಿದ್ದು ಇಂಗ್ಲಿಷ್‌ಶಾಲೆ. ಎಸ್.ಎಸ್. ಎಲ್.ಸಿ. ವರೆವಿಗೆ ಶಾಲಾ ವ್ಯಾಸಂಗ. ಬಡತನದಿಂದಾಗಿ ಉಚ್ಚ ಶಿಕ್ಷಣದ ಪ್ರಯತ್ನ ವಿಫಲ. ಜೀವನ ವಿಶ್ವವಿದ್ಯಾನಿಲಯದಲ್ಲಿ ತರಪೇತಿ, ಬಹುಮುಖ ಸಂವೇಷನೆ. ಶಾಲಾಮಾಸ್ತರು, ಅಂಗಡಿ ಗುಮಾಸ್ತೆ, ಪ್ರೆಸ್ ಮೇನೇಜರ್, ಹೋಟೆಲ್ ಬಿಲ್ ರೈಟರ್ ಮುಂತಾದ ಉದ್ಯೋಗಗಳು. ೧೯೪೨ರಲ್ಲಿ ಸಂಯುಕ್ತ ಕರ್ನಾಟಕ ಸಂಸ್ಥೆಯಲ್ಲಿ 'ಕರ್ಮವೀರ'ದ ಉಪಸಂಪಾದಕರಾಗಿ ಪತ್ರಿಕಾ ವ್ಯವಸಾಯ ಆರಂಭ. ೧೯೫೬ರಿಂದ 'ಕಸ್ತೂರಿ' ಸಹಸಂಪಾದಕರಾಗಿ ೧೯೭೫ರಲ್ಲಿ ನಿವೃತ್ತಿ.

ಹನ್ನೊಂದನೆಯ ವಯಸ್ಸಿನಿಂದಲೇ ಬರವಣಿಗೆ ಆರಂಭ. ಕವಿತೆ ಕಥೆ, ರಾಜಕೀಯ ಚರ್ಚೆ, ಹರಟೆ, ಜೀವನಚರಿತ್ರೆ, ವಿಡಂಬನ, ಲಘು ವೈಜ್ಞಾನಿಕ ಲೇಖನಗಳು ಮುಂತಾದ ಬಹುಮುಖ ಸಾಹಿತ್ಯಸೃಷ್ಟಿ.

ಲಾಂಗೂಲಾಚಾರ್ಯ ಎಂಬ ಹೆಸರಿನಲ್ಲಿ ಒಂದು ಸಾವಿರಕ್ಕೂ ಮೇಲ್ಪಟ್ಟ ಹರಟೆಗಳನ್ನು 'ಕರ್ಮವೀರ', 'ಕಸ್ತೂರಿ' ಮತ್ತು ಈಚೆಗೆ 'ತುಷಾರ' ಪತ್ರಿಕೆಗಳಲ್ಲಿ ಬರೆದಿದ್ದಾರೆ. ಹಾಸ್ಯ, ವಿಚಾರ, ವಿಡಂಬನ, ಮಾನವೀಯತೆ ಹಾಸುಹೊಕ್ಕಾಗಿರುವ ಇವರ ಲೇಖನಗಳು ವಿಶಿಷ್ಟ ಸಂಪ್ರದಾಯದಲ್ಲಿ ಬೆಳೆದು ವಿಚಾರವಂತರ ಹೃನ್ಮನಗಳನ್ನು ಸೂರೆಗೊಂಡಿವೆ.

ಮುಖಚಿತ್ರ : ವೆಂಕಟೇಶ್

---

ಡಿ.ವಿ.ಕೆ. ಮೂರ್ತಿ : : ಪ್ರಕಾಶಕರು : : ಮೈಸೂರು-೪